# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ “ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯ (ಐಪಿಡಿಎಸ್) ಅನುಷ್ಠಾನದ ಮೇಲಿನ” ವರದಿ

**ಕರ್ನಾಟಕ ಸರ್ಕಾರ**

**2025ನೇ ಸಾಲಿನ ವರದಿ ಸಂಖ್ಯೆ – 9**

**ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ – ವಾಣಿಜ್ಯ**

## ಪರಿವಿಡಿ


| ಕಂಡಿಕೆ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| | ಮುನ್ನುಡಿ | v |
| | ಸ್ಥೂಲನೋಟ | vii |
| | **ಅಧ್ಯಾಯ – I** | |
| | **ಪೀಠಿಕೆ** | **1** |
| 1.1 | ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆ (ಐಪಿಡಿಎಸ್) | 1 |
| 1.2 | ಯೋಜನೆಗೆ ಹಣಕಾಸನ್ನು ಒದಗಿಸುವಿಕೆ | 2 |
| 1.3 | ಸಾಂಸ್ಥಿಕ ರಚನೆ | 3 |
| 1.4 | ಲೆಕ್ಕಪರಿಶೋಧನೆಯ ಉದ್ದೇಶಗಳು | 3 |
| 1.5 | ಲೆಕ್ಕಪರಿಶೋಧನಾ ಮಾನದಂಡ | 4 |
| 1.6 | ಲೆಕ್ಕಪರಿಶೋಧನೆಯ ವ್ಯಾಪ್ತಿ ಮತ್ತು ವಿಧಾನ | 4 |
| 1.7 | ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳು | 5 |
| 1.8 | ಕೃತಜ್ಞತೆಗಳು | 6 |
| | **ಅಧ್ಯಾಯ – II** | |
| | **ಹಣಕಾಸು ನಿರ್ವಹಣೆ** | **7** |
| 2.1 | ಪೀಠಿಕೆ | 7 |
| 2.2 | ಯೋಜನೆಗೆ ಹಣಕಾಸು ಹೂಡಿಕೆಯ ವಿಭಜನೆ | 8 |
| 2.3 | ಹಣಕಾಸು ಹೂಡಿಕೆಯ ಮಾದರಿ | 9 |
| 2.4 | ಸಾಲಗಳಿಗೆ ಸಂಬಂಧಿತ ಅಂಶಗಳು | 9 |
| 2.5 | ಅನುದಾನಗಳಿಗೆ ಸಂಬಂಧಿತ ಅಂಶಗಳು | 12 |
| 2.6 | ಅನುದಾನದ ಅಂತಿಮ ಕಂತನ್ನು ಸ್ವೀಕರಿಸುವಲ್ಲಿನ ವಿಳಂಬ | 15 |
| 2.7 | ಬಿಟ್ಟುಕೊಡಲಾಗಿದ್ದ ಹೆಚ್ಚುವರಿ ಅನುದಾನ | 17 |
| 2.8 | ವಿತ್ತೀಯ ವಿವೇಚನೆಗೆ ಸಂಬಂಧಿತ ಅಂಶಗಳು | 20 |
| | **ಅಧ್ಯಾಯ – III** | |
| | **ಯೋಜನೆಯ ಪೂರ್ವಭಾವಿ ಯೋಜನೆ ಮತ್ತು ಅನುಷ್ಠಾನ** | **23** |
| 3.1 | ಪೀಠಿಕೆ | 24 |
| 3.2 | ಯೋಜನೆಯನ್ನು ಕಾರ್ಯಗತಗೊಳಿಸುವ ವಿಧಾನ | 25 |
| 3.3 | ವ್ಯವಸ್ಥೆ ಬಲಪಡಿಸುವಿಕೆ | 26 |
| 3.4 | ಯೋಜನೆಯಡಿಯಲ್ಲಿ ವ್ಯವಸ್ಥೆ ಬಲಪಡಿಸುವಿಕೆ ಕಾರ್ಯಗಳ ಸ್ಥಿತಿ | 31 |
| 3.5 | ಕೆಟಿಟಿಪಿ ಅಧಿನಿಯಮ ಮತ್ತು ನಿಯಮಗಳನ್ನು ಉಲ್ಲಂಘಿಸಿ ಗುತ್ತಿಗೆಗಳನ್ನು ನೀಡಿದ್ದುದು | 35 |
| 3.6 | ಜಿಐಎಸ್ ಸ್ಟೇಷನ್ನು ಸ್ಥಾಪನೆ | 37 |

| ಕಂಡಿಕೆ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| 3.7 | ಸಂಪರ್ಕ ಕಡಿತಗೊಳಿಸಲಾಗಿದ್ದಂತಹ ಭೂಗತ ಕೇಬಲ್ಲುಗಳು | 38 |
| 3.8 | ಮೀಟರು ಅಳವಡಿಸುವಿಕೆ | 38 |
| 3.9 | ಸೌರ ಪ್ಯಾನೆಲ್ಲುಗಳ ಭಾಗ | 41 |
| 3.10 | ಐಪಿಡಿಎಸ್ ಅಡಿಯಲ್ಲಿ ಮಾಹಿತಿ ತಂತ್ರಜ್ಞಾನ ಅನ್ವಯಗಳು ಮತ್ತು ಉದ್ದಿಮೆ ಸಂಪನ್ಮೂಲಗಳ ಪೂರ್ವಭಾವಿ ಯೋಜನೆ | 46 |
| 3.11 | ಮಾಹಿತಿ ತಂತ್ರಜ್ಞಾನ – ಹಂತ – II | 50 |
| 3.12 | ಗುಣಮಟ್ಟ ಭರವಸೆ ವ್ಯವಸ್ಥೆಯಲ್ಲಿನ ಕುಂದುಕೊರತೆಗಳು / ಲೋಪದೋಷಗಳು | 57 |
| **ಅಧ್ಯಾಯ – IV** | | |
| **ಮೇಲ್ವಿಚಾರಣೆ** | | 59 |
| 4.1 | ಮೇಲ್ವಿಚಾರಣೆ | 59 |
| 4.2 | ರಾಜ್ಯ ಮಟ್ಟದಲ್ಲಿ ಮೇಲ್ವಿಚಾರಣಾ ಸಮಿತಿಗಳು | 59 |
| 4.3 | ರಾಜ್ಯ ಮಟ್ಟದ ವಿತರಣಾ ಸುಧಾರಣಾ ಸಮಿತಿ (ಎಸ್‌ಎಲ್‌ಡಿಆರ್‌ಸಿ) ಯ ಕಾರ್ಯವೈಖರಿ | 60 |
| 4.4 | ಡಿಐಎಸ್‌ಎಚ್‌ಎ (ದಿಶಾ) ಕಾರ್ಯವೈಖರಿ | 61 |
| 4.5 | ಯೋಜನಾ ನಿರ್ವಹಣಾ ಸಂಸ್ಥೆಯ (ಪಿಎಂಎ) ಕಾರ್ಯವೈಖರಿ | 62 |
| **ಅನುಬಂಧಗಳು** | | **65** |

| ಸಂಖ್ಯೆ | ವಿವರಗಳು | ಕಂಡಿಕೆಯ ಉಲ್ಲೇಖ | ಪುಟ ಸಂಖ್ಯೆ |
|---|---|---|---|
| 1 | ಐಪಿಡಿಎಸ್ ಸ್ವತ್ತುಗಳ ವಿವರವಾದ ಲೆಕ್ಕಪರಿಶೋಧನೆ ಮತ್ತು ಭೌತಿಕ ಪರಿಶೀಲನೆಗಾಗಿ ಆಯ್ಕೆ ಮಾಡಲಾದ ವಿಭಾಗಗಳ ಪಟ್ಟಿ | 1.6 | 65 |
| 2 | ಬಿಡುಗಡೆಯಾದ ಸಾಲದ ವಿವರಗಳು, ಬಡ್ಡಿದರ ಮತ್ತು ಆರ್ ಇ ಸಿಯಿಂದ ಮರುಹೊಂದಿಸಲಾದ ಬಡ್ಡಿ | 2.4.1 | 66 |
| 3 | ಎಸ್ಕಾಮ್‌ವಾರು, ಘಟಕವಾರು ಅನುಷ್ಠಾನ ವಿಳಂಬದ ವಿವರಗಳು | 3.3.2 ಮತ್ತು 4.3 | 67 |
| 4 | ಐಪಿಡಿಎಸ್ ಅಡಿಯಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ನೀಡಿದ ಟೆಂಡರ್‌ಗಳು ಮತ್ತು ವಿಸ್ತೃತ ಕಾಮಗಾರಿ ಒಪ್ಪಂದಗಳ ವಿವರಗಳು | 3.3.3 | 70 |
| 5 | ನಿಗದಿತ ಪೂರ್ಣಗೊಳಿಸುವ ದಿನಾಂಕದ ನಂತರ, ಅಂದರೆ ಮಾರ್ಚ್ 31, 2019 ರ ನಂತರ ನೀಡಲಾದ ಕೆಲಸದ ಆದೇಶಗಳ ವಿವರಗಳು. | 3.3.4 | 74 |
| 6 | ಕಾರ್ಯಗತಗೊಳಿಸಿದ ಪ್ರಮಾಣದಲ್ಲಿನ ವ್ಯತ್ಯಾಸವನ್ನು ತೋರಿಸುವ ರೇಖಾಚಿತ್ರ | 3.4.1 | 78 |
| 7 | ಯೋಜಿತ ಕೆಲಸಗಳನ್ನು ಕೈಬಿಟ್ಟ ಸಂದರ್ಭಗಳು | 3.4.2 ಮತ್ತು 4.3 | 79 |
| 8 | ವಿಸಕಂಗಳಲ್ಲಿ ವ್ಯವಸ್ಥೆ ಬಲಪಡಿಸುವ ಕಾಮಗಾರಿಗಳ ಪ್ರಶಸ್ತಿಗೆ ಪಾವತಿಸಲಾದ ಟೆಂಡರ್ ಪ್ರೀಮಿಯಂ ವಿವರಗಳು | 3.5.2 | 81 |
| 9 | ಜೆಸ್ಕಾಂ ಮತ್ತು ಹೆಸ್ಕಾಂನಲ್ಲಿ ಕಂಡುಬಂದ ವ್ಯತ್ಯಾಸಗಳ ವಿವರಗಳು | 3.9.4 | 84 |

| ಕಂಡಿಕೆ ಸಂಖ್ಯೆ | ವಿವರಗಳು | | ಪುಟ ಸಂಖ್ಯೆ |
|---|---|---|---|
| 10 | ಪ್ರಮಾಣಿತ ಬಿಡ್ ದಾಖಲೆಗಳ ನಿಯತಾಂಕಗಳನ್ನು ಅನುಸರಿಸದಿರುವ ವಿವರಗಳು | 3.9.5 | 85 |
| 11 | ಮೆ. ಆರ್‌ಇಸಿಪಿಡಿಸಿಎಲ್ ಅವರಿಂದ ಕೆಲಸದ ವ್ಯಾಪ್ತಿ ಮತ್ತು ಅದರ ನಿರ್ವಹಣೆಯ ಕೊರತೆಯ ವಿವರಗಳು. | 4.5 | 87 |

## ಮುನ್ನುಡಿ

1. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳ) ಅಧಿನಿಯಮ, 1971ರ ಪರಿಚ್ಛೇದ 19ಎ – ಇದರ ಅನುವುಗಳ ಅಡಿಯಲ್ಲಿ ಕರ್ನಾಟಕದ ರಾಜ್ಯ ಶಾಸಕಾಂಗದ ಮುಂದೆ ಮಂಡಿಸುವ ಸಲುವಾಗಿ ಸರ್ಕಾರಕ್ಕೆ ಸಲ್ಲಿಸಲು ಸಿದ್ಧಪಡಿಸಲಾಗಿದೆ
2. ಈ ವರದಿಯು 2014–15 ರಿಂದ 2022–23ರ ಅವಧಿಯನ್ನು ಒಳಗೊಂಡ ಕರ್ನಾಟಕ ರಾಜ್ಯದಲ್ಲಿ ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯ (ಐಪಿಡಿಎಸ್) ಅನುಷ್ಠಾನದ ಮೇಲೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಒಳಗೊಂಡಿರುವುದು..
3. ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧರು ನೀಡಿರುವ ಲೆಕ್ಕಪರಿಶೋಧನೆಯ ಮಾನದಂಡಗಳ ಅನುಸಾರ ನಡೆಸಲಾಗಿರುವುದು.
4. ಕನ್ನಡ ಭಾಷಾಂತರ ಆವೃತ್ತಿಯ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

# ಸ್ಥೂಲನೋಟ

# ಸ್ಥೂಲನೋಟ

## ನಾವು ಈ ವಿಷಯವನ್ನು ಏತಕ್ಕಾಗಿ ಆಯ್ಕೆ ಮಾಡಿಕೊಂಡೆವು?

ಭಾರತ ಸರ್ಕಾರದ (ಜಿಓಐ) ಇಂಧನ ಮಂತ್ರಾಲಯವು (ಎಂಓಪಿ) ಸೌರ ಪ್ಯಾನೆಲ್ಲುಗಳಿಗೆ ಅನುವು ಮಾಡುವುದು, ವಿತರಣಾ ಟ್ರಾನ್ಸ್‌ಫಾರ್ಮರುಗಳಿಗೆ/ಫೀಡರುಗಳಿಗೆ/ನಗರ ಪ್ರದೇಶಗಳಲ್ಲಿನ ಗ್ರಾಹಕರುಗಳಿಗೆ ಮೀಟರು ಅಳವಡಿಸುವಿಕೆ, ಇವುಗಳನ್ನು ಒಳಗೊಂಡಂತೆ ನಗರ ಪ್ರದೇಶಗಳಲ್ಲಿ ಉಪ-ಪ್ರಸರಣ ಮತ್ತು ವಿತರಣಾ ಜಾಲವನ್ನು ಬಲಪಡಿಸುವುದು ಹಾಗೂ ಈ ಹಿಂದಿನ ಪುನರ್-ರಚಿಸಲ್ಪಟ್ಟಿರುವ ತ್ವರಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣೆಗಳ ಕಾರ್ಯಕ್ರಮದ (ಆರ್‌ಎಪಿಡಿಆರ್‌ಪಿ) ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಗುರಿಗಳನ್ನು ತಲುಪುವ ಸಲುವಾಗಿ ಈ ಯೋಜನೆಗೆ ಅನುಮೋದಿತಗೊಂಡಿದ್ದಂತಹ ಹಣಕಾಸನ್ನು ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಗೆ (ಐಪಿಡಿಎಸ್) ವರ್ಗಾಯಿಸುವ ಮೂಲಕ ವಿತರಣಾ ವಲಯದ ಮಾಹಿತಿ ತಂತ್ರಜ್ಞಾನ ಅನುಕೂಲತೆಯನ್ನು ಕಲ್ಪಿಸುವುದು ಹಾಗೂ ವಿತರಣಾ ಜಾಲವನ್ನು ಬಲಪಡಿಸುವ ಸಲುವಾಗಿ ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯನ್ನು (ಐಪಿಡಿಎಸ್) ಪ್ರಾರಂಭಿಸಿತು (ಡಿಸೆಂಬರ್ 2014).

ಕಾಮಗಾರಿಯ ವ್ಯಾಪ್ತಿಯು ಸಂಬಂಧಿತ 66ಕಿkV/33kV/11kV ಮಾರ್ಗಗಳ ಜೊತೆಯಲ್ಲಿ ಹೊಸ ಉಪ-ಸ್ಟೇಷನ್ನುಗಳ ನಿರ್ಮಾಣ, ಪ್ರಸ್ತುತ ಇರುವಂತಹ ಉಪ-ಸ್ಟೇಷನ್ನುಗಳ ಸಂಖ್ಯೆಯನ್ನು ಹೆಚ್ಚಳಗೊಳಿಸುವಿಕೆ, ಪ್ರಸಕ್ತ ಇರುವಂತಹ ಮಾರ್ಗಗಳನ್ನು ಹಾಗೂ ಟ್ರಾನ್ಸ್‌ಫಾರ್ಮರುಗಳನ್ನು ಪುನರ್-ಅಭಿಮುಖಗೊಳಿಸುವುದು/ ಪುನರ್-ಸರಿಹೊಂದಿಕೆ/ ಹೆಚ್ಚಳಗೊಳಿಸುವಿಕೆ ಅಥವಾ ವೃದ್ಧಿಗೊಳಿಸುವಿಕೆಯನ್ನೂ ಒಳಗೊಂಡಂತೆ ಹೈ-ಟೆನ್ಷನ್ ವಿದ್ಯುತ್ ಮಾರ್ಗಗಳ ನಿರ್ಮಾಣ, ಅಧಿಕ ಪ್ರಮಾಣದಲ್ಲಿ ಕಳ್ಳತನಗಳು ಆಗುತ್ತಿರುವಂತಹ ಪ್ರದೇಶಗಳಿಗೆ ಏರಿಯಲ್ ಬಂಚ್ಡ್ ಕೇಬಲ್ಲು ಅಳವಡಿಕೆ ಹಾಗೂ ವಿತರಣಾ ಟ್ರಾನ್ಸ್‌ಫಾರ್ಮರುಗಳಿಗೆ ಮತ್ತು ಎಲ್ಲಾ ಮಾದರಿಯ ಗ್ರಾಹಕರುಗಳಿಗೆ ಸೂಕ್ತ ಸ್ಥಾಯಿ (ಸ್ಟಾಟಿಕ್) ಮೀಟರುಗಳ ಅಳವಡಿಕೆ, ಇವುಗಳನ್ನು ವ್ಯಾಪಿಸಿದ್ದಿತು. ಮಾಹಿತಿ ತಂತ್ರಜ್ಞಾನ ಅನುಕೂಲತೆಯನ್ನು ಕಲ್ಪಿಸುವ ಭಾಗವು ಉದ್ದಿಮೆ ಸಂಪನ್ಮೂಲ ಯೋಜನೆಯ (ಇಆರ್‌ಪಿ) ಕಾರ್ಯಗತಗೊಳಿಸುವಿಕೆಯನ್ನು ಚಿಂತಿಸಿದ್ದಿತು ಹಾಗೂ ಐಪಿಡಿಎಸ್ ಅಡಿಯಲ್ಲಿ ಹೊಸದಾಗಿ ಸೇರ್ಪಡೆಗೊಳಿಸಲಾಗಿರುವಂತಹ ಆರ್‌ಎಪಿಡಿಆರ್‌ಪಿ ಭಾಗ – ಎ ಪಟ್ಟಣಗಳ ಮಾಹಿತಿ ತಂತ್ರಜ್ಞಾನ ಸಂಪನ್ಮೂಲಗಳನ್ನು ಹೆಚ್ಚಳಗೊಳಿಸುವ ಸಲುವಾಗಿ ವೆಚ್ಚಗಳಿಗೆ ಅನುವು ಮಾಡಿದ್ದಿತು. ಯೋಜನೆಯು ಅದರ ಕಾರ್ಯಾಚರಣೆಗಳಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಇಂಧನ ಹಣಕಾಸು ನಿಗಮವನ್ನು (ಪಿಎಫ್‌ಸಿ) ಸಂಪರ್ಕ-ಸೇತು (ನೋಡಲ್) ಸಂಸ್ಥೆಯನ್ನಾಗಿ ಯೋಜಿಸಿದ್ದಿತು. ರಾಜ್ಯದಲ್ಲಿನ ಎಲ್ಲಾ ವಿಸಕಂಗಳು ಯೋಜನೆಯನ್ನು ಕಾರ್ಯಗತಗೊಳಿಸಿರುವವು.

ಐಪಿಡಿಎಸ್ ಮಾರ್ಗಸೂಚಿಗಳು ಸವಿವರ ಯೋಜನಾ ವರದಿಯ (ಡಿಪಿಆರ್) ವೆಚ್ಚದ ಶೇಕಡ 60ರಷ್ಟನ್ನು ಭಾರತ ಸರ್ಕಾರದಿಂದ ಬಂಡವಾಳ ಅನುದಾನದ ಮೂಲಕ, ಶೇಕಡ 30ರಷ್ಟನ್ನು ಹಣಕಾಸು ಸಂಸ್ಥೆಗಳಿಂದ ಪಡೆಯಲಾಗುವ ಸಾಲಗಳಿಂದ ಹಾಗೂ ಉಳಿಕೆ ಶೇಕಡಾ 10ರಷ್ಟನ್ನು ಸ್ವಂತ ಹಣಕಾಸಿನಿಂದ ಒದಗಿಸುವಂತೆ ನಿರ್ದಿಷ್ಟಪಡಿಸಿದ್ದವು. ಯೋಜನೆಯನ್ನು ಸಮಯೋಚಿತವಾಗಿ ಪೂರ್ಣಗೊಳಿಸಿರುವುದು, ಯೋಜನೆಯ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ವಿಕ್ಷೇಪಪಥದ (ಟ್ರಜೆಕ್ಟರಿ) ಅನುಸಾರ ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟಗಳಲ್ಲಿನ ಇಳಿಕೆ ಹಾಗೂ ಅಳವಡಿಸಲಾಗಿರುವ ಮೀಟರಿನ ಅನುಸಾರದ ವಿದ್ಯುತ್ ಬಳಕೆ ಆಧಾರದ ಮೇರೆಗೆ ರಾಜ್ಯ ಸರ್ಕಾರದಿಂದ ಅರ್ಹತೆಯಿರುವ ವರಮಾನ ಸಹಾಯಧನದ ರೂಪದಲ್ಲಿ ಮುಂಗಡ ಹಣಕಾಸಿನ ಬಿಡುಗಡೆ ಮುಂತಾದ ನಿರ್ದಿಷ್ಟ ಮೈಲಿಗಲ್ಲುಗಳ ಸಾಧನೆಯ ಆಧಾರದ ಮೇರೆಗೆ ಸಾಲದ ಮೊತ್ತದ ಶೇಕಡ 50ರಷ್ಟನ್ನು (ಅಂದರೆ ಸವಿವರ ಯೋಜನಾ ವರದಿಯ ವೆಚ್ಚದ ಶೇಕಡ 15ರಷ್ಟು) ಹೆಚ್ಚುವರಿ ಅನುದಾನವನ್ನು ಸಹ ಸ್ವೀಕರಿಸಬಹುದಾಗಿದ್ದಿತು ಮುಂದುವರೆದು, ವಿಸಕಂಗಳು ಯೋಜನೆ ನಿರ್ವಹಣಾ ಸಂಸ್ಥೆಗೆ ಸಂಬಂಧಿತ ವೆಚ್ಚಗಳ ಕಡೆಗೆ ಅನುಮೋದಿತ ಯೋಜನಾ ವೆಚ್ಚದ ಶೇಕಡಾ 0.50ರವರೆವಿಗೂ ಅನುದಾನಕ್ಕೆ ಅರ್ಹತೆಯನ್ನು ಹೊಂದಿದ್ದವು.

ಯೋಜನೆಯ ಭಾಗಗಳನ್ನು ಮಾರ್ಗಸೂಚಿಗಳ ಅನುಸಾರ ಪರಿಣಾಮಕಾರಿತ್ವದಿಂದ ಪೂರ್ವಭಾವಿಯಾಗಿ ಯೋಜಿಸಲಾಗಿದ್ದಿತೆ, ಕಾಮಗಾರಿಗಳ ಅನುಷ್ಠಾನ ಮತ್ತು ಕಾರ್ಯಗತಗೊಳಿಸುವಿಕೆಯು

ಮಿತವ್ಯಯತೆಯಿಂದ, ಪರಿಣಾಮಕಾರಿತ್ವದಿಂದ ಕೂಡಿದ್ದವೆ ಹಾಗೂ ಸಮಯೋಚಿತವಾಗಿದ್ದವೆ ಎಂಬುದನ್ನು ನಿರ್ಧಾರಣೆ ಮಾಡುವ ಸಲುವಾಗಿ ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು. ಅಲ್ಲದೆಯೇ, ಲೆಕ್ಕಪರಿಶೋಧನೆಯು ಯೋಜನೆಯ ಹಣಕಾಸು ನಿರ್ವಹಣೆಯನ್ನು ಮಿತವ್ಯಯತೆಯಿಂದ ನಿರ್ವಹಿಸಲಾಗಿದ್ದಿತೆ ಹಾಗೂ ಯೋಜನೆಯನ್ನು ಅದರ ಉದ್ದೇಶಗಳನ್ನು ಸಾಧಿಸಿಕೊಳ್ಳುವ ಸಲುವಾಗಿ ಪರಿಣಾಮಕಾರಿತ್ವದಿಂದ ಮೇಲ್ವಿಚಾರಣೆ ಮಾಡಲಾಗಿದ್ದಿತೆ ಎಂಬುದನ್ನು ಸಹ ನಿರ್ಧಾರಣೆ ಮಾಡಿತು.

2014–15ರಿಂದ 2022–23 ಸಾಲುಗಳಲ್ಲಿ ಐಪಿಡಿಎಸ್ ಸಂಬಂಧಿತ ವ್ಯವಹಾರಗಳನ್ನು ವ್ಯಾಪಿಸಿದಂತೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಕರ್ನಾಟಕದ ಎಲ್ಲಾ ಐದು ವಿಸಕಂಗಳಲ್ಲಿ ಅಂದರೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ), ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್), ಗುಲಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಜೆಸ್ಕಾಂ), ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹೆಸ್ಕಾಂ) ಹಾಗೂ ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಮೆಸ್ಕಾಂ), ಇವುಗಳಲ್ಲಿ ನಡೆಸಲಾಯಿತು. ಕರ್ನಾಟಕ ಸರ್ಕಾರವು ಲೆಕ್ಕಪರಿಶೋಧನೆಯ ಎಲ್ಲಾ ಶಿಫಾರಸುಗಳನ್ನು ಒಪ್ಪಿಕೊಂಡಿತು ಹಾಗೂ ಎಲ್ಲೆಲ್ಲಿ ಅಗತ್ಯತೆಯಿರುವುದೋ ಅಂತಹ ಕಡೆಗಳಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಭರವಸೆ ನೀಡಿತು.

## ನಾವು ಏನನ್ನು ಗಮನಿಸಿರುವೆವು ಹಾಗೂ ಶಿಫಾರಸು ಮಾಡಿರುವೆವು?

**ಹಣಕಾಸು ನಿರ್ವಹಣೆ**

ಐಪಿಡಿಎಸ್ ಅನುಮೋದಿತ ಯೋಜನಾ ವೆಚ್ಚವು (₹ 6.87 ಕೋಟಿ ಮೊತ್ತದಷ್ಟು ಪಿಎಂಎ ವೆಚ್ಚಗಳನ್ನು ಒಳಗೊಂಡಂತೆ) ₹ 1,378.44 ಕೋಟಿ ಆಗಿದ್ದಿತು ಹಾಗೂ ಗುತ್ತಿಗೆದಾರರುಗಳಿಗೆ ನೀಡಲಾಗಿದ್ದ ಕಾಮಗಾರಿಗಳ ವೆಚ್ಚವು ₹ 1,721.19 ಕೋಟಿ ಆಗಿದ್ದಿತು. ಇದಕ್ಕೆ ಪ್ರತಿಯಾಗಿ ವಿಸಕಂಗಳು ₹ 1,489.33 ಕೋಟಿ ಮೊತ್ತದಷ್ಟು ವಾಸ್ತವಿಕ ವೆಚ್ಚಗಳನ್ನು ಭರಿಸಿದ್ದವು, (31 ಮಾರ್ಚ್ 2023ರಲ್ಲಿದ್ದಂತೆ) ಅಂದರೆ, ವಿಸಕಂಗಳು ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಅನುಮೋದಿತ ವೆಚ್ಚಕ್ಕಿಂತ ₹ 110.89 ಕೋಟಿ ಮೊತ್ತದಷ್ಟು ಅಧಿಕ ವೆಚ್ಚವನ್ನು ಭರಿಸಿದ್ದವು. ಈ ವೆಚ್ಚವು ಇಂಧನ ಮಂತ್ರಾಲಯವು ಕಂಡುಕೊಂಡಿದ್ದಂತಹ ಕೇಂದ್ರ ಖರೀದಿ ದರಗಳಲ್ಲಿ ಸರಕುಸಾಮಗ್ರಿಗಳನ್ನು ಖರೀದಿಸದಿದ್ದ ಕಾರಣ ₹ 38.52 ಕೋಟಿ ಮೊತ್ತದಷ್ಟರ ಮಟ್ಟಿಗೆ ಹೆಚ್ಚುವರಿ/ಅಧಿಕ ವೆಚ್ಚವನ್ನು ಒಳಗೊಂಡಿರುವುದು. ದಾಖಲೆಗಳನ್ನು ಸಲ್ಲಿಸುವಲ್ಲಿನ ವಿಳಂಬವು ಸಾಲಗಳನ್ನಾಗಿ ಪಡೆಯಲಾಗಿದ್ದ ಹಣಕಾಸಿನ ಮೇಲೆ ₹ 5.45 ಕೋಟಿ ಮೊತ್ತದಷ್ಟರ ಮಟ್ಟಿಗೆ ಹೆಚ್ಚುವರಿ ಬಡ್ಡಿ ಹೊರೆಯನ್ನು ಭರಿಸುವಲ್ಲಿ ಪರಿಣಮಿಸಿದ್ದಿತು. ಕವಿಪ್ರನಿನಿವು ಫೀಡರುಗಳಿಗೆ ಮೀಟರುಗಳನ್ನು ಅಳವಡಿಸುವ ಕಾಮಗಾರಿಗಾಗಿ ಟೆಂಡರುಗಳನ್ನು ಅಂತಿಮರೂಪಕ್ಕೆ ತರುವಲ್ಲಿನ ವಿಳಂಬ, ಡಿಟಿಸಿ ಮೀಟರು ಅಳವಡಿಕೆ ಕಾಮಗಾರಿಗಾಗಿ ಟೆಂಡರಿಗೆ ಇಡುವಿಕೆಯು ಸಾಧ್ಯವಾಗದಿದ್ದುದು ಹಾಗೂ ಗುತ್ತಿಗೆದಾರರುಗಳಿಗೆ ನೀಡದಿದ್ದುದು ಹಾಗೂ ಬೆಸ್ಕಾಂನಲ್ಲಿ ಸೌರ ವಿದ್ಯುತ್ ಭಾಗವನ್ನು ಪೂರ್ಣಗೊಳಿಸದಿದ್ದುದು ಬೆಸ್ಕಾಂ ಮತ್ತು ಮೆಸ್ಕಾಂನಲ್ಲಿ ₹ 12.80 ಕೋಟಿ ಮೊತ್ತದಷ್ಟು ಅನುದಾನಗಳನ್ನು ಬಿಟ್ಟುಕೊಡುವಲ್ಲಿ ಪರಿಣಮಿಸಿದ್ದಿತು. ಅಲ್ಲದೆಯೇ, ಹೆಚ್ಚುವರಿ ಅನುದಾನಗಳನ್ನು ಪಡೆದುಕೊಳ್ಳುವ ಸಲುವಾಗಿ ವಿವಿಧ ಅಗತ್ಯತೆಗಳನ್ನು ಪೂರೈಸದಿದ್ದುದು ಯೋಜನಾ ವೆಚ್ಚದ ಶೇಕಡಾ 15ರಷ್ಟು ಹೆಚ್ಚುವರಿ ಅನುದಾನವನ್ನು ಸ್ವೀಕರಿಸುವ ಅವಕಾಶವನ್ನು ಕಳೆದುಕೊಳ್ಳುವಲ್ಲಿ ಪರಿಣಮಿಸಿದ್ದಿತು.

ವಿಸಕಂಗಳ ಪಾವತಿಗಾಗಿ ಬಿಲ್ಲುಗಳನ್ನು ನೀಡುವಿಕೆಯ ದಕ್ಷತೆಯನ್ನು ಮಾರಾಟ ಮಾಡಲಾದ ನಿವ್ವಳ ವಿದ್ಯುತ್ತು ಹಾಗೂ ವಿದ್ಯುತ್ತಿನ ನಿವ್ವಳ ಒಳಹರಿವು, ಇವುಗಳ ಅನುಪಾತದ ಆಧಾರದ ಮೇರೆಗೆ ಲೆಕ್ಕಹಾಕಿರುವುದು, ಅಂತಹ ದಕ್ಷತೆಯು ಯೋಜನಾ ಅವಧಿಯಲ್ಲಿ ಸಾಮಾನ್ಯವಾಗಿ ಸುಧಾರಣೆ ಕಂಡಿರುವುದು, ಇದು ಬಿಲ್ಲುಗಳನ್ನು ನೀಡುವಿಕೆಯಲ್ಲಿನ ನಷ್ಟಗಳನ್ನು ತಗ್ಗಿಸುವತ್ತ ಕಾಣಿಕೆಯನ್ನು ನೀಡಿರುವುದು. ಆದಾಗ್ಯೂ, ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟಗಳಲ್ಲಿ ಇಳಿಕೆಯು ಇಂಧನ ಮಂತ್ರಾಲಯವು ಅಂತಿಮರೂಪಕ್ಕೆ ತಂದಿರುವಂತಹ ವಿಕ್ಷೇಪಪಥವನ್ನು (ಟ್ರಜೆಕ್ಟರಿ) ತಲುಪಿರುವುದಿಲ್ಲ. ***ವಿಸಕಂಗಳು ಐಪಿಡಿಎಸ್‌ಗಾಗಿ ಇಂಧನ ಮಂತ್ರಾಲಯವು ನಿಗದಿಪಡಿಸಿರುವಂತಹ ವಿಕ್ಷೇಪಪಥದ (ಟ್ರಜೆಕ್ಟರಿ) ಅನುಸಾರ ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟಗಳನ್ನು ತಗ್ಗಿಸುವುದನ್ನು, ಕರ್ನಾಟಕ ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು***

***ಶಿಫಾರಸು ಮಾಡುತ್ತಿರುವುದು. ನೀರಾವರಿ ಪಂಪು ಸೆಟ್ಟುಗಳಿಗೆ ಮೀಟರುಗಳ ಆಧಾರದ ಮೇರೆಗೆ ಬಳಕೆಯ ಅನುಸಾರ ಸಹಾಯಧನವನ್ನು ಸಮಯೋಚಿತವಾಗಿ ಬಿಡುಗಡೆಗೊಳಿಸುವುದನ್ನೂ ಸಹ ಖಚಿತಪಡಿಸಿಕೊಳ್ಳಬೇಕು.***

***(ಅಧ್ಯಾಯ II)***

**ಯೋಜನೆಯ ಬಗ್ಗೆ ಪೂರ್ವಭಾವಿಯಾಗಿ ಯೋಜನೆಯ ತಯಾರಿಕೆ ಹಾಗೂ ಕಾರ್ಯಗತಗೊಳಿಸುವಿಕೆ**

ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯ (ಐಪಿಡಿಎಸ್) ಅಡಿಯಲ್ಲಿ ಕಾಮಗಾರಿಗಳ ವ್ಯಾಪ್ತಿಯು ಈ ಕೆಳಗಿನ ಭಾಗಗಳನ್ನು ಒಳಗೊಂಡಿದ್ದವು: (i) ಉಪ-ಪ್ರಸರಣ ಮತ್ತು ವಿತರಣಾ ಜಾಲವನ್ನು ಬಲಪಡಿಸುವುದು (ii) ಫೀಡರುಗಳು / ವಿತರಣಾ ಟ್ರಾನ್ಸ್‌ಫಾರ್ಮರುಗಳು/ಗ್ರಾಹಕರುಗಳು, ಇತ್ಯಾದಿಗಳಿಗೆ ಮೀಟರು ಅಳವಡಿಕೆ, (iii) ವಿತರಣಾ ವಲಯಕ್ಕೆ ಸಂಬಂಧಿಸಿದಂತೆ ಮಾಹಿತಿ ತಂತ್ರಜ್ಞಾನ ಸಾಧ್ಯತೆಗೊಳಿಸುವುದು, (iv) ನಿವ್ವಳ ಮೀಟರು ಅಳವಡಿಕೆ, ಮೂಲಕ ಸರ್ಕಾರಿ ಕಟ್ಟಡಗಳ ಮೇಲೆ ಸೌರ ವಿದ್ಯುತ್ ಪ್ಯಾನೆಲ್ಲುಗಳನ್ನು ಅನುವು ಮಾಡುವುದು ಇತ್ಯಾದಿ.

ರಾಜ್ಯದಲ್ಲಿ ₹ 1,138.75 ಕೋಟಿ ಮೌಲ್ಯದಲ್ಲಿ ಎಲ್ಲಾ ಐದು ವಿಸಕಂಗಳಲ್ಲಿ ಐಪಿಡಿಎಸ್ ಕಾರ್ಯಗತಗೊಳಿಸುವಿಕೆಗಾಗಿ ಡಿಪಿಆರ್‌ಗಳಿಗೆ ಆಗಸ್ಟ್ 2015ರಲ್ಲಿ ತಾತ್ವಿಕ ಅನುಮೋದನೆಯನ್ನು ನೀಡಲಾಯಿತು. ಸಂಪರ್ಕ–ಸೇತು ಸಂಸ್ಥೆಯಾದ (ನೋಡಲ್ ಏಜನ್ಸಿ) ಪವರ್ ಫೈನಾನ್ಸ್ ಕಾರ್ಪೊರೇಷನ್ (ಪಿಎಫ್‌ಸಿ) ಅನುಮೋದನೆಯನ್ನು ತಿಳಿಸಲು ಏಳು ತಿಂಗಳುಗಳನ್ನು ತೆಗೆದುಕೊಂಡಿತು (ಮಾರ್ಚ್ 2016). ಯೋಜನೆಯ ಮಾರ್ಗಸೂಚಿಗಳ ಅನುಸಾರ ಅನುಮೋದನೆಯನ್ನು ತಿಳಿಸಲಾದ ದಿನಾಂಕದಿಂದ ಆರು ತಿಂಗಳುಗಳ ಒಳಗೆ ಅಂದರೆ ಸೆಪ್ಟಂಬರ್ 2016ರ ವೇಳೆಗೆ ಕಾಮಗಾರಿಗಳನ್ನು ಗುತ್ತಿಗೆದಾರರುಗಳಿಗೆ ನೀಡಬೇಕಿದ್ದಿತು ಹಾಗೂ ಗುತ್ತಿಗೆದಾರರುಗಳಿಗೆ ಆ ರೀತಿ ಕಾಮಗಾರಿಗಳನ್ನು ನೀಡಲಾದ ದಿನಾಂಕದಿಂದ 24 ತಿಂಗಳುಗಳ ಒಳಗೆ ಅಂದರೆ ಸೆಪ್ಟಂಬರ್ 2018ರ ವೇಳೆಗೆ ಪೂರ್ಣಗೊಳಿಸಬೇಕಿದ್ದಿತು. ಆದಾಗ್ಯೂ, ನಿರ್ದಿಷ್ಟಪಡಿಸಲಾಗಿದ್ದಂಥ ಆರು ತಿಂಗಳುಗಳಿಗೆ ಪ್ರತಿಯಾಗಿ ವಿಸಕಂಗಳು ಕಾಮಗಾರಿಗಳನ್ನು ಗುತ್ತಿಗೆದಾರರುಗಳಿಗೆ ನೀಡಲು 11ರಿಂದ 27 ತಿಂಗಳುಗಳನ್ನು ತೆಗೆದುಕೊಂಡವು. ಅದರಿಂದಾಗಿ, ಸೆಪ್ಟಂಬರ್ 2018ರ ವೇಳೆಗೆ ಪೂರ್ಣಗೊಳಿಸಬೇಕಿದ್ದಂತ ಕಾಮಗಾರಿಗಳನ್ನು ಡಿಸೆಂಬರ್ 2019ರಲ್ಲಿಯಷ್ಟೇ ಪೂರ್ಣಗೊಳಿಸಲಾಗಿದ್ದಿತು. ಕಾಮಗಾರಿಗಳನ್ನು ಗುತ್ತಿಗೆದಾರರುಗಳಿಗೆ ನೀಡುವಲ್ಲಿ/ಅವುಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬಕ್ಕೆ ಪ್ರಮುಖ ಕಾರಣವೆಂದರೆ, ಯೋಜನೆಯನ್ನು ಕಾರ್ಯಗತಗೊಳಿಸಬೇಕಾದ ರೀತಿ ಅಂದರೆ ಪಿಎಫ್‌ಸಿಯಿಂದ ಭಾಗಶಃ ಟರ್ನ್‌ಕೀ/ಒಟ್ಟಾರೆ ಟರ್ನ್‌ಕೀ, ಇದರ ಬಗ್ಗೆ ಪಿಎಫ್‌ಸಿಯಿಂದ ಅಂತಿಮ ತೀರ್ಮಾನಕ್ಕೆ ಬರುವಲ್ಲಿನ ವಿಳಂಬ (12 ತಿಂಗಳುಗಳು).

ವ್ಯವಸ್ಥೆಯನ್ನು ಬಲಗೊಳಿಸುವ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯಲ್ಲಿ ಯೋಜಿತ ಕಾಮಗಾರಿಗಳಲ್ಲಿ ಗಮನಾರ್ಹ ವ್ಯತ್ಯಯಗಳನ್ನು ಗಮನಿಸಲಾಯಿತು. ವಿಸಕಂಗಳು ಕೆಲವು ಪರಿಮಾಣಗಳನ್ನು ಸವಿವರ ಯೋಜನಾ ವರದಿಗಳಲ್ಲಿ ಸೇರಿಸಿರಲಿಲ್ಲ ಅಥವಾ ಸೇರಿಸಲಾಗಿದ್ದಂತಹ ಪರಿಮಾಣಗಳು ಅವುಗಳಲ್ಲಿ ಅಗತ್ಯತೆಯನ್ನು ಹೊಂದಿರಲಿಲ್ಲ, ಇದು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ವೇಳೆಯಲ್ಲಿ ಕಾಮಗಾರಿಗಳ ವ್ಯಾಪ್ತಿಯನ್ನು ಬದಲಾವಣೆಗೊಳಿಸುವ ಅಗತ್ಯತೆಯನ್ನುಂಟು ಮಾಡಿದ್ದಿತು. ಬೆಸ್ಕಾಂ (₹ 13.90 ಕೋಟಿ) ಹಾಗೂ ಮೆಸ್ಕಾಂ (₹ 10.69 ಕೋಟಿ) ಇವುಗಳಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದ್ದ ವಿಭಾಗಗಳಲ್ಲಿ ಅಗತ್ಯ ಅನುಮತಿಗಳನ್ನು ಸ್ವೀಕರಿಸದಿರುವುದು, ದಾರಿಯ ಹಕ್ಕು ಸಮಸ್ಯೆಗಳು ಹಾಗೂ ಇತರೆ ಯೋಜನೆಗಳ ಅಡಿಯಲ್ಲಿ ಕಾಮಗಾರಿಗಳು ವ್ಯಾಪಿಸಿರುವುದು, ಇವೇ ಮುಂತಾದ ಕಾರಣಗಳನ್ನು ತಿಳಿಸುವ ಮೂಲಕ ವ್ಯವಸ್ಥೆಯ ಬಲಪಡಿಸುವ ಭಾಗದ ಅಡಿಯಲ್ಲಿ ಹದಿನಾಲ್ಕು ಕಾಮಗಾರಿ ಆದೇಶಗಳನ್ನು ಕಾಮಗಾರಿಗಳನ್ನು ಗುತ್ತಿಗೆದಾರರುಗಳಿಗೆ ನೀಡಿದ ಬಳಿಕ ಕೈಬಿಡಲಾಗಿದ್ದಿತು.

ವ್ಯವಸ್ಥೆ ಬಲಪಡಿಸುವ ಭಾಗದ ಅಡಿಯಲ್ಲಿ ಅನುಮೋದಿತ ಪರಿಮಾಣಕ್ಕೆ ಪ್ರತಿಯಾಗಿ ಶೇಕಡಾವಾರು ಕಾರ್ಯಗತಗೊಳಿಸುವಿಕೆಯು ಶೇಕಡಾ ಸೊನ್ನೆಯಿಂದ ಶೇಕಡಾ 4,890ರಷ್ಟು (ರಿಂಗ್ ಮೈನ್ ಯೂನಿಟ್ಟುಗಳು – ಆರ್‌ಎಂಯು) ಆಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕರ್ನಾಟಕ ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆಯುವಲ್ಲಿ ಪಾರದರ್ಶಕತೆ ಅಧಿನಿಯಮ ಹಾಗೂ ಅವುಗಳ ಅಡಿಯಲ್ಲಿ ರೂಪಿಸಿರುವ ನಿಯಮಗಳನ್ನು ಉಲ್ಲಂಘಿಸಿ ವಿಸಕಂಗಳು ಟೆಂಡರುಗಳನ್ನು

ಕನಿಷ್ಟ 60 ದಿನಗಳ ನಿರ್ದಿಷ್ಟ ಕನಿಷ್ಠ ಕಾಲಾವಕಾಶಕ್ಕೆ ಪ್ರತಿಯಾಗಿ 15ರಿಂದ 54 ದಿನಗಳ ಕಾಲಾವಕಾಶದೊಂದಿಗೆ ಟೆಂಡರುಗಳನ್ನು ಸಲ್ಲಿಸಲು ಕಡಿಮೆ ದಿನಗಳ ಅವಕಾಶ ನೀಡುವ ಮೂಲಕ ಹಾಗೂ ಅಂದಾಜು ವೆಚ್ಚಕ್ಕಿಂತ ಶೇಕಡಾ 5ರಿಂದ ಶೇಕಡಾ 34ರಷ್ಟು ಅಧಿಕ ಟೆಂಡರು ಪ್ರೀಮಿಯಂಗಳಲ್ಲಿ ಕಾಮಗಾರಿಗಳನ್ನು ನೀಡುವ ಮೂಲಕ ಗುತ್ತಿಗೆಗಳನ್ನು ನೀಡಿದ್ದವು. ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗಿದ್ದಿತು ಹಾಗೂ ಸವಿವರ ಕಾಮಗಾರಿ ನೀಡಿಕೆ ಆದೇಶವನ್ನು ನೀಡಿದ ದಿನಾಂಕದಿಂದ ಮೂರು ವರ್ಷಗಳು ಕಳೆದನಂತರವೂ ಚಿಂತಿಸಲಾಗಿದ್ದಂತಹ ಉದ್ದೇಶವು ಈಡೇರಿರಲಿಲ್ಲ. ಡಿಸಿ/ಡಿಆರ್‌ಸಿ ಕಾಮಗಾರಿಗಳು ಕಾಲಮಿತಿಯೊಳಗೆ ಪೂರ್ಣಗೊಳ್ಳದಿದ್ದುದು ಸಹ–ಹೋಸ್ಟಿಂಗ್ ಶುಲ್ಕಗಳ ಮೇಲಿನ ಹೆಚ್ಚುವರಿ ವೆಚ್ಚಗಳನ್ನು ನೀಡುವಲ್ಲಿ ಹಾಗೂ ವಿಸಕಂಗಳು ಖರೀದಿಸಿದ್ದಂತಹ ಜಿಐಎಸ್ ಮಾಹಿತಿಯನ್ನು ಉಪಯೋಗಿಸಿಕೊಳ್ಳದಿರುವಲ್ಲಿ ಪರಿಣಮಿಸಿದ್ದಿತು. ₹ 42.04 ಕೋಟಿ ಮೊತ್ತವನ್ನು ಭರಿಸಿದ್ದ ಹೊರತಾಗಿಯೂ ಬೆಸ್ಕಾಂ ಉದ್ದಗಲಕ್ಕೂ ಹೆಚ್ಚಳಗೊಳಿಸಬಹುದಾದಂತಹ ಹಾಗೂ ವ್ಯವಹಾರ ಪ್ರಕ್ರಿಯೆಗಳಿಗಾಗಿ ಪ್ರಮಾಣಕಗೊಳಿಸಲ್ಪಟ್ಟಂತಹ ತನ್ನ ಬ್ಯಾಕ್–ಆಫೀಸ್ ಕಾರ್ಯಾಚರಣೆಗಳಿಗಾಗಿ ಇಆರ್‌ಪಿ ವ್ಯವಸ್ಥೆಯ ಕಾರ್ಯಗತಗೊಳಿಸುವಿಕೆಯನ್ನು ಸಾಧಿಸಲಾಗಿರಲಿಲ್ಲ.

ಬೆಸ್ಕಾಂ ಆಯ್ಕೆ ಮಾಡಿಕೊಳ್ಳಲಾಗಿದ್ದ ಎಂಟು ವಿಭಾಗಗಳ ಪೈಕಿ ಐದರಲ್ಲಿ ಸ್ಥಿರ ಮೀಟರುಗಳನ್ನು ಮತ್ತು ಜಿಪಿಆರ್‌ಎಸ್ ಮೋಡೆಮ್‌ಗಳನ್ನು ಅಳವಡಿಸಿದನಂತರವೂ ಸ್ವಯಂಚಾಲಿತ ಮೀಟರು ಓದುವಿಕೆಯನ್ನು ಸಂಪೂರ್ಣವಾಗಿ ಮಾಡಿರಲಿಲ್ಲ, ವಿಸಕಂಗಳು ಸಮರ್ಪಕ ಪೂರ್ವಭಾವಿ ಯೋಜನೆಗಳನ್ನು ತಯಾರಿಸದೆಯೇ ಹಾಗೂ ಸೌರ ವಿದ್ಯುತ್ ಸ್ಥಾವರಗಳ ಸ್ಥಾಪನೆಗಾಗಿ ಕಟ್ಟಡಗಳನ್ನು ಗುರುತಿಸದೆಯೇ ಸವಿವರ ಕಾಮಗಾರಿ ಆದೇಶಗಳನ್ನು (ಡಿಡಬ್ಲ್ಯುಎಸ್) ನೀಡಿದ್ದವು, ಇದು ಕಾಮಗಾರಿಗಳು ವಿಳಂಬಗೊಳ್ಳುವಲ್ಲಿ ಹಾಗೂ ಧ್ಯೇಯೋದ್ದೇಶಗಳು ಈಡೇರದಿರುವಲ್ಲಿ ಪರಿಣಮಿಸಿದ್ದಿತು. ವಿಸಕಂಗಳು ಸಮಗ್ರ ಗುಣಮಟ್ಟ ಭರವಸೆಗೆ ಸಂಬಂಧಿಸಿದಂತೆ ಪೂರ್ವಭಾವಿ ಯೋಜನೆಯನ್ನು ತಯಾರಿಸಿರಲಿಲ್ಲ ಹಾಗೂ ಸಾಮಗ್ರಿಗಳ ನಿರ್ದಿಷ್ಟ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲಾಗಿರಲಿಲ್ಲ. ಕಡ್ಡಾಯವಾಗಿ ಮಾಡಬೇಕಿದ್ದಂತಹ ಪರೀಕ್ಷಣೆಗಳನ್ನು ಮಾಡದಿದ್ದುದು ಸೆಸ್ಕ್‌ನಿಂದ ಸೌರ ಯೋಜನೆಯಲ್ಲಿ ನಿಕೃಷ್ಟ ಗುಣಮಟ್ಟದ ಸಾಮಗ್ರಿಗಳನ್ನು ಉಪಯೋಗಿಸುವಲ್ಲಿ ಹಾಗೂ ತತ್ಪರಿಣಾಮವಾಗಿ ಸೌರ ಪ್ಯಾನೆಲ್ಲುಗಳು ಕಡಿಮೆ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದಿಸುವಲ್ಲಿ ಪರಿಣಮಿಸಿದ್ದಿತು. ಸೌರ ಪ್ಯಾನೆಲ್ಲುಗಳನ್ನು ನಿರ್ವಹಿಸಿಕೊಂಡು ಹೋಗಿರದಿದ್ದುದು ಅವುಗಳ ನಿಕೃಷ್ಟಮಟ್ಟದ ಕಾರ್ಯನಿರ್ವಹಣೆಯಲ್ಲಿ ಪರಿಣಮಿಸಿದ್ದವು. ***ವಿಸಕಂಗಳು ಟೆಂಡರುಗಳನ್ನು ಸಕಾಲದಲ್ಲಿ ನೀಡಲು ಒಂದು ಸೂಕ್ತ ವ್ಯವಸ್ಥೆಯನ್ನು ರೂಪಿಸುವುದನ್ನು, ಕಾಮಗಾರಿಯನ್ನು ವಿಳಂಬವಿಲ್ಲದೆಯೇ ಕೈಗೆತ್ತಿಕೊಳ್ಳುವುದನ್ನು, ಹಾಗೂ ಚಿಂತಿಸಲಾಗಿರುವ ಧ್ಯೇಯೋದ್ದೇಶಗಳನ್ನು ಸಾಧಿಸುವ ಸಲುವಾಗಿ ಕಾಮಗಾರಿಗಳು ಸಕಾಲದಲ್ಲಿ ಪೂರ್ಣಗೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಒಂದು ವ್ಯವಸ್ಥೆಯನ್ನು ರೂಪಿಸುವುದನ್ನು, ಕರ್ನಾಟಕ ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಶಿಫಾರಸು ಮಾಡುತ್ತಿರುವುದು. ಮುಂದುವರೆದು, ವಿಸಕಂಗಳು ಸಮರ್ಪಕವಾದಂತಹ ಸ್ಪರ್ಧಾತ್ಮಕತೆಯನ್ನು ಹಾಗೂ ಅತ್ಯಂತ ಮಿತವ್ಯಯತೆಯಿಂದ ಕೂಡಿದ ದರಗಳನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆಯುವಲ್ಲಿ ಪಾರದರ್ಶಕತೆ ಅಧಿನಿಯಮ, 1999 ಹಾಗೂ ಅವುಗಳ ಅಡಿಯಲ್ಲಿ ರೂಪಿಸಿರುವ ನಿಯಮಗಳು. 2000, ಇವುಗಳ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಕಾಲಮಿತಿಗಳನ್ನು ಅನುಸರಿಸಬೇಕು. ವಿಸಕಂಗಳು ಯೋಜನೆಯನ್ನು ಕಾರ್ಯಗತಗೊಳಿಸುವ ಮೊದಲು ಸಮಗ್ರ ಕಾರ್ಯಸಾಧ್ಯತೆ ಸಮೀಕ್ಷೆಗಳನ್ನು ನಡೆಸಬೇಕು ಹಾಗೂ ಬಿಡ್ಡುಗಳನ್ನು ಆಹ್ವಾನಿಸುವಲ್ಲಿ ಪ್ರಮಾಣಕ ಬಿಡ್ಡು ದಾಖಲೆಗಳಲ್ಲಿನ ಷರತ್ತುಗಳನ್ನು ಸೇರ್ಪಡೆಗೊಳಿಸಬೇಕು ಹಾಗೂ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ವೇಳೆಯಲ್ಲಿ ಅವುಗಳಿಗೆ ಬದ್ಧತೆಯಿಂದ ಕೂಡಿರುವುದನ್ನು ಖಚಿತಪಡಿಸಿಕೊಳ್ಳಬೇಕು.***

***(ಅಧ್ಯಾಯ III)***

**ಮೇಲ್ವಿಚಾರಣೆ**

ವಿವಿಧ ಅಡಚಣೆಗಳ ಕಾರಣ ವಿಳಂಬಗೊಂಡಂತಹ ಕಾಮಗಾರಿಗಳ ಬಗ್ಗೆ ಅವುಗಳ ತ್ವರಿತ ಪರಿಹಾರಕ್ಕಾಗಿ ರಾಜ್ಯ ಮಟ್ಟದ ವಿತರಣಾ ಸುಧಾರಣೆಗಳ ಸಮಿತಿಯ (ಎಸ್‌ಎಲ್‌ಡಿಆರ್‌ಸಿ) ಗಮನಕ್ಕೆ ತರಲಾಗಿರಲಿಲ್ಲ. ರಾಜ್ಯ ಮಟ್ಟದ ಜಿಲ್ಲಾ ಪ್ರಗತಿ ಸಮನ್ವಯ ಮತ್ತು ಮೇಲ್ವಿಚಾರಣಾ ಸಮಿತಿಗಾಗಿ (ಡಿಐಎಸ್‌ಹೆಚ್‌ಎ–ದಿಶಾ) ಮಾರ್ಗಸೂಚಿಗಳನ್ನು ಜೂನ್ 2018ರಲ್ಲಿ ನೀಡಲಾಗಿದ್ದಿತಾದರೂ, ಸಮಿತಿಯನ್ನು ಜನವರಿ

2020ರಲ್ಲಿಯಷ್ಟೇ ರಚಿಸಲಾಗಿದ್ದಿತು. ಮಾರ್ಗಸೂಚಿಗಳ ಅನುಸಾರ, ದಿಶಾ ಜಿಲ್ಲಾ ಮಟ್ಟದಲ್ಲಿ ಪ್ರತೀ ತ್ರೈಮಾಸಿಕದಲ್ಲಿ ಒಂದು ಸಲ ಸಭೆ ಸೇರಬೇಕಿದ್ದಿತು ಹಾಗೂ ರಾಜ್ಯ ಮಟ್ಟದಲ್ಲಿ ಆರು ತಿಂಗಳಿಗೆ ಒಂದು ಸಭೆ ಸೇರಬೇಕಿದ್ದಿತು. ರಾಜ್ಯ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದ ದಿಶಾ ಸಮಿತಿಗಳಲ್ಲಿ ಚರ್ಚಿಸಬೇಕಿದ್ದಂತಹ ಯೋಜನೆಗಳ ಪೈಕಿ ಐಪಿಡಿಎಸ್ ಒಂದಾಗಿದ್ದಿತು. ಆದಾಗ್ಯೂ, ಕೇವಲ ಆಗಸ್ಟ್ 2022ರಲ್ಲಿ ಅಂದರೆ ಐಪಿಡಿಎಸ್ ಮುಕ್ತಾಯಗೊಂಡನಂತರ ಮೊದಲ ಸಭೆಯನ್ನು ನಡೆಸಲಾಗಿದ್ದಿತು. ಅದರಿಂದಾಗಿ ರಾಜ್ಯ ಮಟ್ಟದ ದಿಶಾ ರಚನೆಯು ಐಪಿಡಿಎಸ್ ಕಾರ್ಯಗತಗೊಳಿಸುವುದರ ಮೇಲೆ ಯಾವುದೇ ಜವಾಬ್ದಾರಿಯನ್ನೂ / ಪ್ರಭಾವವನ್ನೂ ಹೊಂದಿರಲಿಲ್ಲ.

***(ಅಧ್ಯಾಯ IV)***

# ಅಧ್ಯಾಯ – I

## ಪೀಠಿಕೆ

# ಅಧ್ಯಾಯ - I

## ಪೀಠಿಕೆ

### *1.1 ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆ (ಐಪಿಡಿಎಸ್)*

ಭಾರತ ಸರ್ಕಾರದ (ಜಿಒಐ) ಇಂಧನ ಮಂತ್ರಾಲಯವು (ಎಂಒಪಿ) ಸೌರ ಪ್ಯಾನೆಲ್ಲುಗಳಿಗೆ ಅನುವು ಮಾಡುವುದು, ವಿತರಣಾ ಟ್ರಾನ್ಸ್‌ಫಾರ್ಮರುಗಳಿಗೆ/ಫೀಡರುಗಳಿಗೆ/ನಗರ ಪ್ರದೇಶಗಳಲ್ಲಿನ ಗ್ರಾಹಕರುಗಳಿಗೆ ಮೀಟರು ಅಳವಡಿಸುವಿಕೆ, ಇವುಗಳನ್ನು ಒಳಗೊಂಡಂತೆ ನಗರ ಪ್ರದೇಶಗಳಲ್ಲಿ[1]ಉಪ–ಪ್ರಸರಣ ಮತ್ತು ವಿತರಣಾ ಜಾಲವನ್ನು ಬಲಪಡಿಸುವುದು ಹಾಗೂ ಈ ಹಿಂದಿನ ಪುನರ್–ರಚಿಸಲ್ಪಟ್ಟಿರುವ ತ್ವರಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣೆಗಳ ಕಾರ್ಯಕ್ರಮದ (ಆರ್‌ಎಪಿಡಿಆರ್‌ಪಿ) ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಗುರಿಗಳನ್ನು ತಲುಪುವ ಸಲುವಾಗಿ ಈ ಯೋಜನೆಗೆ ಅನುಮೋದಿತಗೊಂಡಿದ್ದಂತಹ ಹಣಕಾಸನ್ನು ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಗೆ (ಐಪಿಡಿಎಸ್) ವರ್ಗಾಯಿಸುವ ಮೂಲಕ ವಿತರಣಾ ವಲಯದ ಮಾಹಿತಿ ತಂತ್ರಜ್ಞಾನ ಅನುಕೂಲತೆಯನ್ನು ಕಲ್ಪಿಸುವುದು ಹಾಗೂ ವಿತರಣಾ ಜಾಲವನ್ನು ಬಲಪಡಿಸುವ ಸಲುವಾಗಿ ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯನ್ನು (ಐಪಿಡಿಎಸ್) ಪ್ರಾರಂಭಿಸಿತು (ಡಿಸೆಂಬರ್ 2014).

ಕಾಮಗಾರಿಯ ವ್ಯಾಪ್ತಿಯು ಸಂಬಂಧಿತ 66ಕಿವ್ಯಾ/33ಕಿವ್ಯಾ/11ಕಿವ್ಯಾ ಮಾರ್ಗಗಳ ಜೊತೆಯಲ್ಲಿ ಹೊಸ ಉಪ–ಸ್ಟೇಷನ್ನುಗಳ ನಿರ್ಮಾಣ, ಪ್ರಸ್ತುತ ಇರುವಂತಹ ಉಪ–ಸ್ಟೇಷನ್ನುಗಳ ಸಂಖ್ಯೆಯನ್ನು ಹೆಚ್ಚಳಗೊಳಿಸುವಿಕೆ, ಪ್ರಸಕ್ತ ಇರುವಂತಹ ಮಾರ್ಗಗಳನ್ನು ಹಾಗೂ ಟ್ರಾನ್ಸ್‌ಫಾರ್ಮರುಗಳನ್ನು ಪುನರ್–ಅಭಿಮುಖಗೊಳಿಸುವುದು /ಪುನರ್–ಸರಿಹೊಂದಿಕೆ /ಹೆಚ್ಚಳಗೊಳಿಸುವಿಕೆ ಅಥವಾ ವೃದ್ಧಿಗೊಳಿಸುವಿಕೆಯನ್ನೂ ಒಳಗೊಂಡಂತೆ ಹೈ–ಟೆನ್ಷನ್ ವಿದ್ಯುತ್ ಮಾರ್ಗಗಳ ನಿರ್ಮಾಣ, ಅಧಿಕ ಪ್ರಮಾಣದಲ್ಲಿ ಕಳ್ಳತನಗಳು ಆಗುತ್ತಿರುವಂತಹ ಪ್ರದೇಶಗಳಿಗೆ ಏರಿಯಲ್ ಬಂಚ್ಡ್ ಕೇಬಲ್ಲು ಅಳವಡಿಕೆ ಹಾಗೂ ವಿತರಣಾ ಟ್ರಾನ್ಸ್‌ಫಾರ್ಮರುಗಳಿಗೆ ಮತ್ತು ಎಲ್ಲಾ ಮಾದರಿಯ ಗ್ರಾಹಕರುಗಳಿಗೆ ಸೂಕ್ತ ಸ್ಥಾಯಿ (ಸ್ಟಾಟಿಕ್) ಮೀಟರುಗಳ ಅಳವಡಿಕೆ, ಇವುಗಳನ್ನು ವ್ಯಾಪಿಸಿದ್ದಿತು. ಮಾಹಿತಿ ತಂತ್ರಜ್ಞಾನ ಅನುಕೂಲತೆಯನ್ನು ಕಲ್ಪಿಸುವ ಭಾಗವು ಉದ್ದಿಮೆ ಸಂಪನ್ಮೂಲ ಯೋಜನೆಯ (ಇಆರ್‌ಪಿ) ಕಾರ್ಯಗತಗೊಳಿಸುವಿಕೆಯನ್ನು ಚಿಂತಿಸಿದ್ದಿತು ಹಾಗೂ ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯ (ಐಪಿಡಿಎಸ್) ಅಡಿಯಲ್ಲಿ ಹೊಸದಾಗಿ ಸೇರ್ಪಡೆಗೊಳಿಸಲಾಗಿರುವಂತಹ ಆರ್‌ಎಪಿಡಿಆರ್‌ಪಿ ಭಾಗ – ಎ ಪಟ್ಟಣಗಳ ಮಾಹಿತಿ ತಂತ್ರಜ್ಞಾನ ಸಂಪನ್ಮೂಲಗಳನ್ನು ಹೆಚ್ಚಳಗೊಳಿಸುವ ಸಲುವಾಗಿ ವೆಚ್ಚಗಳಿಗೆ ಅನುವು ಮಾಡಿದ್ದಿತು. ಯೋಜನೆಯು ಅದರ ಕಾರ್ಯಾಚರಣೆಗಳಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಇಂಧನ ಹಣಕಾಸು ನಿಗಮವನ್ನು (ಪಿಎಫ್‌ಸಿ) ಸಂಪರ್ಕ–ಸೇತು (ನೋಡಲ್) ಸಂಸ್ಥೆಯನ್ನಾಗಿ ಯೋಜಿಸಿದ್ದಿತು. ರಾಜ್ಯದಲ್ಲಿನ ಎಲ್ಲಾ ಐದು ವಿಸಕಂಗಳು[2] ಯೋಜನೆಯನ್ನು ಕಾರ್ಯಗತಗೊಳಿಸಿರುವವು.

ಯೋಜನೆಯನ್ನು ಒಟ್ಟಾರೆ ಟರ್ನ್‌ಕೀ ಆಧಾರದ ಮೇರೆಗೆ ಕಾರ್ಯಗತಗೊಳಿಸುವಿಕೆಯನ್ನು ಯೋಜನೆಯ ಮಾರ್ಗಸೂಚಿಗಳು ನಿರ್ದಿಷ್ಟಪಡಿಸಿದ್ದವು ಹಾಗೂ ಮೇಲ್ವಿಚಾರಣಾ ಸಮಿತಿಯ ಅನುಮೋದನೆಯೊಂದಿಗೆ ಅಸಾಧಾರಣ ಸಂದರ್ಭಗಳಲ್ಲಿ ಭಾಗಶ: ಟರ್ನ್‌ಕೀ/ ಇಲಾಖೆಯಿಂದ ಕಾರ್ಯಗತಗೊಳಿಸುವಿಕೆಗೆ ಅನುವು ಮಾಡಿದ್ದವು.

ಯೋಜನೆಯು ಕಾರ್ಯದರ್ಶಿಯವರು (ಇಂಧನ), ಭಾರತ ಸರ್ಕಾರ, ಇವರ ಅಧ್ಯಕ್ಷತೆಯಲ್ಲಿ ಇಂಧನ ಮಂತ್ರಾಲಯ, ಹಣಕಾಸು ಮಂತ್ರಾಲಯ, ನಗರಾಭಿವೃದ್ಧಿ ಮಂತ್ರಾಲಯ, ವಸತಿ ಮತ್ತು ನಗರ ಬಡತನ ನಿವಾರಣಾ ಮಂತ್ರಾಲಯ, ನವೀನ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ, ಕೇಂದ್ರ ವಿದ್ಯುತ್ ಪ್ರಾಧಿಕಾರ ಮತ್ತು ಯೋಜನಾ ಆಯೋಗದ ಪ್ರತಿನಿಧಿಗಳೊಂದಿಗೆ ಒಂದು ಮೇಲ್ವಿಚಾರಣಾ ಸಮಿತಿಯನ್ನು ರಚಿಸುವುದನ್ನು ಚಿಂತಿಸಿದ್ದಿತು. ಈ ಸಮಿತಿಗೆ ಸಂಪರ್ಕ–ಸೇತು ಸಂಸ್ಥೆಯು ತಯಾರಿಸಿರುವ

---

[1] 2011ರ ಜನಗಣತಿಯ ಅನುಸಾರ 15,000ದಿಂದ 5,000 ಜನಸಂಖ್ಯೆ ಇರುವ ಪಟ್ಟಣಗಳು.

[2] ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ), ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಮೆಸ್ಕಾಂ), ಗುಲಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಜೆಸ್ಕಾಂ) ಮತ್ತು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹೆಸ್ಕಾಂ).

ಕಾರ್ಯಾಚರಣೆಗಳ ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವ ಹಾಗೂ ಯೋಜನೆಯ ಕಾರ್ಯಗತಗೊಳಿಸುವಿಕೆಯನ್ನು ಮೇಲ್ವಿಚಾರಣೆ ಮಾಡುವ ಅಧಿಕಾರವನ್ನು ನೀಡಲಾಗಿದ್ದಿತು. ಯೋಜನೆಯ ಕಾರ್ಯಗತಗೊಳಿಸುವಿಕೆಗಾಗಿ ತ್ರಿಪಕ್ಷೀಯ ಒಡಂಬಡಿಕೆಗಳನ್ನು ಕರ್ನಾಟಕ ಸರ್ಕಾರ, ಪಿಎಫ್‌ಸಿ (ಭಾರತ ಸರ್ಕಾರದ ಪರವಾಗಿ) ಹಾಗೂ ವಿಸಕಂಗಳ ನಡುವೆ ಅಕ್ಟೋಬರ್ 2015 ಮತ್ತು ಫೆಬ್ರವರಿ 2016ರ[3] ನಡುವೆ ಮಾಡಿಕೊಳ್ಳಲಾಗಿದ್ದಿತು. ಯೋಜನೆಯನ್ನು 2019ರಲ್ಲಿ ಮುಕ್ತಾಯಗೊಳಿಸಲಾಯಿತು[4].

### *1.2 ಯೋಜನೆಗೆ ಹಣಕಾಸನ್ನು ಒದಗಿಸುವಿಕೆ:*

ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯ (ಐಪಿಡಿಎಸ್) ಮಾರ್ಗಸೂಚಿಗಳು ಸವಿವರ ಯೋಜನಾ ವರದಿಯ (ಡಿಪಿಆರ್) ವೆಚ್ಚದ ಶೇಕಡ 60ರಷ್ಟನ್ನು ಭಾರತ ಸರ್ಕಾರದಿಂದ ಬಂಡವಾಳ ಅನುದಾನದ ಮೂಲಕ, ಶೇಕಡ 30ರಷ್ಟನ್ನು ಹಣಕಾಸು ಸಂಸ್ಥೆಗಳಿಂದ ಪಡೆಯಲಾಗುವ ಸಾಲಗಳಿಂದ ಹಾಗೂ ಉಳಿಕೆ ಶೇಕಡಾ 10ರಷ್ಟನ್ನು ಸ್ವಂತ ಹಣಕಾಸಿನಿಂದ ಒದಗಿಸುವಂತೆ ನಿರ್ದಿಷ್ಟಪಡಿಸಿದ್ದವು. ಯೋಜನೆಯನ್ನು ಸಮಯೋಚಿತವಾಗಿ ಪೂರ್ಣಗೊಳಿಸಿರುವುದು, ಯೋಜನೆಯ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ವಿಕ್ಷೇಪಪಥದ (ಟ್ರಜೆಕ್ಟರಿ) ಅನುಸಾರ ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟಗಳಲ್ಲಿನ ಇಳಿಕೆ ಹಾಗೂ ಅಳವಡಿಸಲಾಗಿರುವ ಮೀಟರಿನ ಅನುಸಾರದ ವಿದ್ಯುತ್ ಬಳಕೆ ಆಧಾರದ ಮೇರೆಗೆ ರಾಜ್ಯ ಸರ್ಕಾರದಿಂದ ಅರ್ಹತೆಯಿರುವ ವರಮಾನ ಸಹಾಯಧನದ ರೂಪದಲ್ಲಿ ಮುಂಗಡ ಹಣಕಾಸಿನ ಬಿಡುಗಡೆ ಮುಂತಾದ ನಿರ್ದಿಷ್ಟ ಮೈಲಿಗಲ್ಲುಗಳ ಸಾಧನೆಯ ಆಧಾರದ ಮೇರೆಗೆ ಸಾಲದ ಮೊತ್ತದ ಶೇಕಡ 50ರಷ್ಟನ್ನು (ಅಂದರೆ ಸವಿವರ ಯೋಜನಾ ವರದಿಯ ವೆಚ್ಚದ ಶೇಕಡ 15ರಷ್ಟು) ಹೆಚ್ಚುವರಿ ಅನುದಾನವನ್ನು ಸಹ ಸ್ವೀಕರಿಸಬಹುದಾಗಿದ್ದಿತು. ಮುಂದುವರೆದು, ವಿಸಕಂಗಳು ಯೋಜನೆ ನಿರ್ವಹಣಾ ಸಂಸ್ಥೆಗೆ ಸಂಬಂಧಿತ ವೆಚ್ಚಗಳ ಕಡೆಗೆ ಅನುಮೋದಿತ ಯೋಜನಾ ವೆಚ್ಚದ ಶೇಕಡಾ 0.50ರವರೆವಿಗೂ ಅನುದಾನಕ್ಕೆ ಅರ್ಹತೆಯನ್ನು ಹೊಂದಿದ್ದವು.

ವಿಸಕಂವಾರು ಯೋಜನಾ ವೆಚ್ಚ, ಸ್ವೀಕರಿಸಲಾಗಿದ್ದ ಅನುದಾನ, ಪಡೆದುಕೊಳ್ಳಲಾಗಿದ್ದ ಸಾಲ ಹಾಗೂ ಐಪಿಡಿಎಸ್ ಕಾರ್ಯಗತಗೊಳಿಸುವಿಕೆ ಕಡೆಗೆ ಭರಿಸಲಾಗಿದ್ದ ಸ್ವಂತ ಹಣಕಾಸಿನ ವಿವರಗಳನ್ನು ಈ ಕೆಳಗೆ ಕೋಷ್ಟಕದ ರೂಪದಲ್ಲಿ ನೀಡಲಾಗಿರುವುದು:

**ಕೋಷ್ಟಕ ಸಂಖ್ಯೆ 1.1: ವಿಸಕಂವಾರು ಯೋಜನಾ ವೆಚ್ಚ, ಸ್ವೀಕರಿಸಲಾಗಿದ್ದ ಅನುದಾನ, ಪಡೆದುಕೊಳ್ಳಲಾಗಿದ್ದ ಸಾಲ ಹಾಗೂ ಕಾರ್ಯಗತಗೊಳಿಸುವಿಕೆ ವೆಚ್ಚದ ವಿವರಗಳನ್ನು ತೋರಿಸುವ ತಃಖ್ತೆ**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ವಿಸಕಂ | ಮಂಜೂರಾಗಿದ್ದ ಯೋಜನಾ ವೆಚ್ಚ | ಯೋಜನೆಯ ಕಾರ್ಯಗತಗೊಳಿಸಲು ಭರಿಸಲಾದ ವೆಚ್ಚ | ಸ್ವೀಕರಿಸಲಾಗಿದ್ದ ಅನುದಾನ | ಪಡೆದುಕೊಳ್ಳಲಾಗಿದ್ದ ಸಾಲ | ಭರಿಸಲಾಗಿದ್ದ ಸ್ವಂತ ಹಣಕಾಸು |
|---|---|---|---|---|---|---|
| 1 | ಬೆಸ್ಕಾಂ | 544.85 | 591.39 | 303.25 | 209.29 | 78.85 |
| 2 | ಸೆಸ್ಕ್ | 190.24 | 188.47 | 112.49 | 61.39 | 14.59 |
| 3 | ಮೆಸ್ಕಾಂ | 212.89 | 242.50 | 126.74 | 63.12 | 52.64 |
| 4 | ಜೆಸ್ಕಾಂ | 190.63 | 196.74 | 113.23 | 73.37 | 10.14 |
| 5 | ಹೆಸ್ಕಾಂ | 239.83 | 270.11 | 141.54 | 50.50 | 78.07 |
| | **ಒಟ್ಟು** | **1,378.44** | **1,489.21** | **797.25** | **457.67** | **234.29** |

*ಮೂಲ: ವಿಸಕಂಗಳು ಒದಗಿಸಿದ ಮಾಹಿತಿಯಂತೆ*

[3] ಅಕ್ಟೋಬರ್ 2015 ಬೆಸ್ಕಾಂನಿಂದ, ಸೆಸ್ಕ್‌ನಿಂದ ಮತ್ತು ಮೆಸ್ಕಾಂನಿಂದ, ನವಂಬರ್ 2015 ಜೆಸ್ಕಾಂನಿಂದ ಮತ್ತು ಫೆಬ್ರವರಿ 2016 ಹೆಸ್ಕಾಂನಿಂದ.

[4] ಬೆಸ್ಕಾಂ – ಮಾರ್ಚ್ 2019, ಮೆಸ್ಕಾಂ – ಜೂನ್ 2019 ಮತ್ತು ಸೆಸ್ಕ್, ಹೆಸ್ಕಾ ಮತ್ತು ಜೆಸ್ಕಾ – ಡಿಸೆಂಬರ್ 2019.

## 1.3 ಸಾಂಸ್ಥಿಕ ರಚನೆ

ಯೋಜನೆಯ ಕಾರ್ಯಗತಗೊಳಿಸುವಿಕೆಗಾಗಿ ಮತ್ತು ಕಾರ್ಯಾಚರಣೆಗೊಳಿಸುವ ಸಲುವಾಗಿನ ಸಾಂಸ್ಥಿಕ ರಚನೆಯನ್ನು ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಲಾಗಿರುವುದು:

**ರೇಖಾಚಿತ್ರ ಸಂಖ್ಯೆ 1.1: ಸಾಂಸ್ಥಿಕ ರಚನೆ**

| | |
|---|---|
| **ಇಂಧನ ಮಂತ್ರಾಲಯ, ಭಾರತ ಸರ್ಕಾರ** | ಯೋಜನೆಗೆ ಹಣಕಾಸನ್ನು ಒದಗಿಸಲು ಮತ್ತು ಅದರ ಕಾರ್ಯಾಚರಣೆಗೆ ಜವಾಬ್ದಾರಿಯುತವಾಗಿದ್ದ ಸಂಪರ್ಕ–ಸೇತು ಮಂತ್ರಾಲಯ. |
| **ಮೇಲ್ವಿಚಾರಣಾ ಸಮಿತಿ** | ▪ ಕಾರ್ಯದರ್ಶಿಯವರು (ಇಂಧನ), ಭಾರತ ಸರ್ಕಾರ, ಇವರ ಅಧ್ಯಕ್ಷತೆಯಲ್ಲಿ ಇತರೆ ಮಂತ್ರಾಲಯಗಳಿಂದ ಪ್ರತಿನಿಧಿಗಳೊಂದಿಗೆ ಸಮಿತಿ.<br>▪ ಕಾರ್ಯಾಚರಣೆಗಳ ಮಾರ್ಗಸೂಚಿಗಳಿಗೆ ಅನುಮೋದನೆ ನೀಡುವ ಹಾಗೂ ಯೋಜನೆಯ ಕಾರ್ಯಗತಗೊಳಿಸುವಿಕೆಯನ್ನು ಮೇಲ್ವಿಚಾರಣೆ ಮಾಡುವ ಅಧಿಕಾರವನ್ನು ಹೊಂದಿದ್ದಿತು<br>▪ ಸವಿವರ ಯೋಜನಾ ವರದಿಗಳಿಗೆ ಅನುಮೋದನೆ ಮತ್ತು ಯೋಜನೆಯ ಕಾರ್ಯಗತಗೊಳಿಸುವಿಕೆಯನ್ನು ಸಮೀಕ್ಷಿಸುವುದು<br>▪ ಪ್ರಕರಣಗಳ ಅರ್ಹತೆಯ ಆಧಾರದ ಮೇರೆಗೆ ಕಾಲಾವಧಿ ವಿಸ್ತರಣೆ ನೀಡುವಿಕೆ.<br>▪ ನಿರ್ದಿಷ್ಟ ಪ್ರತಿಫಲಗಳ ಸಾಧನೆಯ ಆಧಾರದ ಮೇರೆಗೆ ಹೆಚ್ಚುವರಿ ಅನುದಾನಕ್ಕೆ ಅನುಮೋದನೆ. |
| **ಇಂಧನ ಹಣಕಾಸು ನಿಗಮ (ಯೋಜನೆಯ ಕಾರ್ಯಗತಗೊಳಿಸುವಿಕೆಗೆ ಸಂಪರ್ಕಸೇತು ಸಂಸ್ಥೆ)** | ▪ ಅನುಮೋದನೆಗಾಗಿ ಮೇಲ್ವಿಚಾರಣಾ ಸಮಿತಿಗೆ ಶಿಫಾರಸು ಮಾಡುವ ಮೊದಲು ಯೋಜನೆಗಳನ್ನು ಮೌಲ್ಯಮಾಪನ ಮಾಡುವುದು.<br>▪ ಯೋಜನೆಯ ಕಾರ್ಯಗತಗೊಳಿಸುವಿಕೆಗಾಗಿ ಮಾರ್ಗಸೂಚಿಗಳು, ನಮೂನೆಗಳು, ಸಲಹೆಗಳು, ಇತ್ಯಾದಿಗಳನ್ನು ನೀಡುತ್ತದೆ.<br>▪ ಮೇಲ್ವಿಚಾರಣಾ ಸಮಿತಿ ಸಭೆಗಳನ್ನು ನಡೆಸಲು ವಿವಿಧ ಸಹಭಾಗಿಗಳೊಂದಿಗೆ ಸಮನ್ವಯ ಕಾರ್ಯವನ್ನು ನಿರ್ವಹಿಸುತ್ತದೆ.<br>▪ ಸವಿವರ ಯೋಜನಾ ವರದಿಗಳ ಸಲ್ಲಿಕೆಗಾಗಿ ಜಾಲ ಪೋರ್ಟಲುಗಳ ಅಭಿವೃದ್ಧಿಪಡಿಸುವುದು ಹಾಗೂ ಎಂಐಎಸ್ ಮಾಹಿತಿಯನ್ನು ನಿರ್ವಹಿಸುವುದು ಹಾಗೂ ಯೋಜನೆಗಳನ್ನು ಮೇಲ್ವಿಚಾರಣೆ ಮಾಡುವುದು. |
| **ವಿತರಣಾ ಸುಧಾರಣೆಗಳ ಸಮಿತಿ (ಡಿಸ್ಟ್ರಿಬ್ಯೂಷನ್ ರಿಫಾರ್ಮ್ ಕಮಿಟಿ) (ರಾಜ್ಯ ಮಟ್ಟದಲ್ಲಿ)** | ▪ ಯೋಜನೆಗಳ ಅಡಿಯಲ್ಲಿ ವ್ಯಾಪಿಸಿರುವಂತಹ ಭೌತಿಕ ಕಾಮಗಾರಿಗಳು ಮತ್ತು ಉಪಯುಕ್ತತಾ ಸಂಸ್ಥೆಗಳು ಸಲ್ಲಿಸಿರುವ ಸವಿವರ ಯೋಜನಾ ವರದಿಗಳನ್ನು ಪರಿಶೀಲಿಸುವುದು ಹಾಗೂ ಉಪಯುಕ್ತತಾ ಸಂಸ್ಥೆಗಳು ಸಲ್ಲಿಸಿರುವ ಸವಿವರ ಯೋಜನಾ ವರದಿಗಳನ್ನು ಶಿಫಾರಸು ಮಾಡುವುದು.<br>▪ ಭಾರತ ಸರ್ಕಾರದ ಇತರೆ ಯೋಜನೆಗಳೊಂದಿಗೆ ಕಾಮಗಾರಿಗಳು ಒಂದಕ್ಕಿಂತ ಹೆಚ್ಚುಬಾರಿ ವ್ಯಾಪಿಸಿರುವುದಿಲ್ಲ/ಕಾರ್ಯಗತಗೊಂಡಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು.<br>▪ ಕಾಮಗಾರಿಗಳ ಪ್ರಗತಿಯನ್ನು ಗುಣಮಟ್ಟ ನಿಯಂತ್ರಣಗಳನ್ನು ಮೇಲ್ವಿಚಾರಣೆ ಮಾಡುವುದು ಹಾಗೂ ಅನುಮೋದಿತಗೊಂಡಿರುವ ಯೋಜನೆಗಳ ಕಾರ್ಯಗತಗೊಳಿಸುವಿಕೆಗೆ ಸಂಬಂಧಿತ ಸಮಸ್ಯೆಗಳನ್ನು ಬಗೆಹರಿಸುವುದು. |
| **ವಿಸಕಂಗಳು (ಉಪಯುಕ್ತತಾ ಸಂಸ್ಥೆಗಳು)** | ▪ ಸವಿವರ ಯೋಜನಾ ವರದಿಗಳನ್ನು ತಯಾರಿಸುತ್ತವೆ ಹಾಗೂ ವಿತರಣಾ ಸುಧಾರಣೆಗಳ ಸಮಿತಿಯ (ಡಿಸ್ಟ್ರಿಬ್ಯೂಷನ್ ರಿಫಾರ್ಮ್ ಕಮಿಟಿ)ಶಿಫಾರಸಿನ ನಂತರ ಅವುಗಳನ್ನು ಆನ್‌ಲೈನ್ ಮೂಲಕ ಸಂಪರ್ಕ–ಸೇತು ಸಂಸ್ಥೆಗೆ ಸಲ್ಲಿಸುವುದು.<br>▪ ಯೋಜನೆಗಳನ್ನು ಮಾರ್ಗಸೂಚಿಗಳ ಅನುಸಾರ ನಿಗದಿತ ದಿನಾಂಕಗಳ ಒಳಗೆ ಕಾರ್ಯಗತಗೊಳಿಸುವುದು.<br>▪ ಯೋಜನಾ ನಿರ್ವಹಣಾ ಸಂಸ್ಥೆಯನ್ನು ನೇಮಿಸುವುದು.<br>▪ ಇಂದಿನ ದಿನದನ್ನಾಗಿ ಮಾಡಲಾದ ಯೋಜನಾ ಪ್ರಗತಿಯನ್ನು ಸಂಪರ್ಕ–ಸೇತು ಸಂಸ್ಥೆಗೆ ಸಲ್ಲಿಸುವುದು, ಜಾಲ ಪೋರ್ಟಲನ್ನು ಇಂದಿನ ದಿನದನ್ನಾಗಿ ಮಾಡುವುದು, ಸಂಪರ್ಕ–ಸೇತು ಸಂಸ್ಥೆಯು ಕೋರಿರುವ ಮಾಹಿತಿಯನ್ನು ಒದಗಿಸುವುದು. |

## 1.4 ಲೆಕ್ಕಪರಿಶೋಧನೆಯ ಉದ್ದೇಶಗಳು

ಈ ಕೆಳಗಿನ ಅಂಶಗಳನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಕೈಗೆತ್ತಿಕೊಳ್ಳಲಾಯಿತು:

i. ಯೋಜನೆಯ ಹಣಕಾಸು ಹೂಡಿಕೆ ಮಾದರಿಗೆ ವಿಸಕಂಗಳು ಬದ್ಧವಾಗಿದ್ದವೆ ಹಾಗೂ ಮಿತವ್ಯಯ ರೀತಿಯಲ್ಲಿ ಹಣಕಾಸಿನ ನಿರ್ವಹಣೆ ಸಾಧ್ಯವಾಯಿತೆ;

ii. ಯೋಜನೆಯ ಭಾಗಗಳನ್ನು ಕ್ಷೇತ್ರದ ಅಗತ್ಯತೆಗಳ ಅನುಸಾರ ಹಾಗೂ ಯೋಜನೆಯ ಮಾರ್ಗಸೂಚಿಗಳ ಅನುಸಾರ ಪೂರ್ವಭಾವಿಯಾಗಿ ಯೋಜಿಸಲಾಗಿದ್ದಿತೆ;

iii. ಕಾಮಗಾರಿಗಳನ್ನು ಯೋಜನೆಯ ಉದ್ದೇಶಗಳನ್ನು ಸಾಧಿಸುವ ಸಲುವಾಗಿ ಸಮಯೋಚಿತ ರೀತಿಯಲ್ಲಿ ಕಾರ್ಯಗತಗೊಳಿಸಲಾಗಿದ್ದಿತೆ ಹಾಗೂ ತಕ್ಕುದಾದ ರೀತಿಯಲ್ಲಿ ಕಾರ್ಯತತ್ಪರತೆಯಿಂದ ಕಾರ್ಯಗತಗೊಳಿಸಲಾಗಿದ್ದಿತೆ;

iv. ಅದರ ಉದ್ದೇಶಗಳನ್ನು ಈಡೇರಿಸಿಕೊಳ್ಳುವ ಸಲುವಾಗಿ ಯೋಜನೆಯನ್ನು ನಿಯತವಾಗಿ ಮೇಲ್ವಿಚಾರಣೆ ಮಾಡಲಾಗಿದ್ದಿತೆ.

## 1.5 ಲೆಕ್ಕಪರಿಶೋಧನಾ ಮಾನದಂಡ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಾಗಿ ಲೆಕ್ಕಪರಿಶೋಧನಾ ಮಾನದಂಡಕ್ಕೆ ಈ ಕೆಳಗಿನವುಗಳು ಪ್ರಮುಖ ಮೂಲಗಳಾಗಿದ್ದವು:

- ಇಂಧನ ಮಂತ್ರಾಲಯ, ಭಾರತ ಸರ್ಕಾರ ಮತ್ತು ಪಿಎಫ್‌ಸಿ ನೀಡಿರುವ ಯೋಜನಾ ಮಾರ್ಗಸೂಚಿಗಳು;
- ಅನುಮೋದಿತ ಅಗತ್ಯತೆ ನಿರ್ಧಾರಣಾ ದಾಖಲೆ (ಎನ್‌ಎಡಿ) ಹಾಗೂ ಸವಿವರ ಯೋಜನಾ ವರದಿಗಳು (ಡಿಪಿಆರ್);
- ಪಿಎಫ್‌ಸಿ, ರಾಜ್ಯ ಸರ್ಕಾರ ಮತ್ತು ವಿಸಕಂಗಳ ನಡುವಿನ ತ್ರಿಪಕ್ಷೀಯ ಒಡಂಬಡಿಕೆ;
- ಯೋಜನೆಯ ಬಗ್ಗೆ ಇಂಧನ ಮಂತ್ರಾಲಯ, ಪಿಎಫ್‌ಸಿ, ಕರ್ನಾಟಕ ಸರ್ಕಾರ ಮತ್ತು ವಿಸಕಂಗಳು ನೀಡಿರುವ ನಿರ್ದೇಶನಗಳು/ ಸುತ್ತೋಲೆಗಳು/ ಆದೇಶಗಳು/ ಕೈಪಿಡಿಗಳು/ ಮಾರ್ಗಸೂಚಿಗಳು. ವಿಸಕಂಗಳ ತಾಂತ್ರಿಕ ಸಮಿತಿ ಮತ್ತು ನಿರ್ದೇಶಕರುಗಳ ಮಂಡಳಿ/ ಉಪ ಸಮಿತಿ ಸಭೆಗಳ ನಿರ್ಣಯಗಳು
- ಸಾಮಾನ್ಯ ಹಣಕಾಸು ನಿಯಮಗಳು (ಜಿಎಫ್‌ಆರ್), ಗುತ್ತಿಗೆ ಒಡಂಬಡಿಕೆಗಳು, ಪ್ರಮಾಣಕ ಬಿಡ್ಡು ದಾಖಲೆಗಳು ಮತ್ತು ಮಂಜೂರಾತಿ ಆದೇಶಗಳು ಮತ್ತು
- ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆಯುವಲ್ಲಿ ಪಾರದರ್ಶಕತೆ ಅಧಿನಿಯಮ (ಕೆಟಿಪಿಪಿ) 1999 ಮತ್ತು ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆಯುವಲ್ಲಿ ಪಾರದರ್ಶಕತೆ ನಿಯಮಗಳು (ಕೆಟಿಪಿಪಿ) 2000.

## 1.6 ಲೆಕ್ಕಪರಿಶೋಧನೆಯ ವ್ಯಾಪ್ತಿ ಮತ್ತು ವಿಧಾನ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು 2014–15ರಿಂದ 2022–23ರ ಅವಧಿಯಲ್ಲಿನ ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯ (ಐಪಿಡಿಎಸ್) ವ್ಯವಹಾರಗಳನ್ನು ವ್ಯಾಪಿಸಿದಂತೆ ಎಲ್ಲಾ ಐದು ವಿಸಕಂಗಳಲ್ಲಿ ನಡೆಸಲಾಯಿತು. ಲೆಕ್ಕಪರಿಶೋಧನೆಯು ಐಡಿಇಎ ತಂತ್ರಾಂಶ ಅನ್ವಯದ ಮೂಲಕ ಬದಲಾಯಿಸುವಿಕೆ ಮಾದರಿಯೊಂದಿಗೆ ಗಾತ್ರಕ್ಕೆ ಸಂಭಾವ್ಯತೆ ಅನುಗುಣ (ಪಿಪಿಎಸ್‌ಡಬ್ಲ್ಯುಒಆರ್) ವಿಧಾನವನ್ನು ಉಪಯೋಗಿಸಿಕೊಂಡು ಯೋಜನೆಯ ವ್ಯವಹಾರಗಳ ಶೇಕಡಾ 25ರಷ್ಟು ಮಾದರಿ ಆಯ್ಕೆ ಮಾಡಿಕೊಂಡಿತು. ಆಯ್ಕೆ ಮಾಡಿಕೊಳ್ಳಲಾದ ಮಾದರಿಯ ವಿವರಗಳನ್ನು ***ಅನುಬಂಧ–1*** ರಲ್ಲಿ ನೀಡಲಾಗಿರುವುದು. ಈ ಕೆಳಗಿನ ಕೋಷ್ಟಕವು ಮಾದರಿ ವಿಧಾನವನ್ನು ತೋರಿಸುತ್ತದೆ:

**ಕೋಷ್ಟಕ ಸಂಖ್ಯೆ 1.2: ಆಯ್ಕೆ ಮಾಡಿಕೊಳ್ಳಲಾಗಿರುವ ಮಾದರಿಯ ವಿವರಗಳು**

| ಕ್ರಮ ಸಂಖ್ಯೆ | ವಿಸಕಂ | ಪ್ರವರ್ಗ | ಮಾದರಿಯ ಗಾತ್ರ[5] |
|---|---|---|---|
| 1 | ಬೆಸ್ಕಾಂ | ವಿಭಾಗ/ ಪಟ್ಟಣ | 30ರ ಪೈಕಿ 10 ಪಟ್ಟಣಗಳನ್ನು ವ್ಯಾಪಿಸಿದಂತೆ 8 ವಿಭಾಗಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. |
| 2 | ಸೆಸ್ಕ್ |  | 18ರ ಪೈಕಿ 13 ಪಟ್ಟಣಗಳನ್ನು ವ್ಯಾಪಿಸಿದಂತೆ 5 ವಿಭಾಗಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. |
| 3 | ಮೆಸ್ಕಾಂ |  | 13ರ ಪೈಕಿ 6 ಪಟ್ಟಣಗಳನ್ನು ವ್ಯಾಪಿಸಿದಂತೆ 3 ವಿಭಾಗಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. |
| 4 | ಜೆಸ್ಕಾಂ |  | 16ರ ಪೈಕಿ 10 ಪಟ್ಟಣಗಳನ್ನು ವ್ಯಾಪಿಸಿದಂತೆ 4 ವಿಭಾಗಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. |
| 5 | ಹೆಸ್ಕಾಂ |  | 25ರ ಪೈಕಿ 22 ಪಟ್ಟಣಗಳನ್ನು ವ್ಯಾಪಿಸಿದಂತೆ 7 ವಿಭಾಗಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. |

ಲೆಕ್ಕಪರಿಶೋಧನೆಯು ಇಂಧನ ಇಲಾಖೆ, ಸಾಂಸ್ಥಿಕ ಕಚೇರಿಗಳು ಮತ್ತು ವಿಸಕಂಗಳ ಆಯ್ದ ವಿಭಾಗೀಯ/ಉಪ–ವಿಭಾಗೀಯ ಕಚೇರಿಗಳು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ (ಕೆಪಿಟಿಸಿಎಲ್) ಸಾಂಸ್ಥಿಕ ಕಛೇರಿಯಲ್ಲಿ ನಿರ್ವಹಿಸಲಾಗಿದ್ದಂತಹ ದಾಖಲೆಗಳನ್ನು ಪರಿಶೀಲಿಸಿತು. ಲೆಕ್ಕಪರಿಶೋಧನಾ ವಿಧಾನವು ಲೆಕ್ಕಪರಿಶೋಧನಾ ಕೋರಿಕೆಗಳು ಮತ್ತು ಲೆಕ್ಕಪರಿಶೋಧನಾ ಪ್ರಶ್ನಾವಳಿಗಳ ಮೂಲಕ ಮಾಹಿತಿ ಸಂಗ್ರಹಣೆಯನ್ನೂ ಒಳಗೊಂಡಿದ್ದಿತು, ಯೋಜನೆಯ ಅಡಿಯಲ್ಲಿ ಸೃಷ್ಟಸಲಾಗಿರುವ ಆಸ್ತಿಗಳನ್ನು ಆಯ್ದ ವಿಭಾಗಗಳಲ್ಲಿ ಮಾದರಿ ಆಯ್ಕೆ ಆಧಾರದಲ್ಲಿ ವಿಸಕಂಗಳ ಸಿಬ್ಬಂದಿಯೊಂದಿಗೆ ಭೌತಿಕ ಪರಿಶೀಲನೆಗಳನ್ನು ಮಾಡಲಾಯಿತು. ಆಸ್ತಿಗಳ ಭೌತಿಕ ಪರಿಶೀಲನೆಯಲ್ಲಿ ಹಾಗೂ ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟಗಳ ಸವಿವರ ಪರಿಶೀಲನೆಗಾಗಿ ತಾಂತ್ರಿಕ ಸಲಹೆಗಾರರ ಸೇವೆಗಳನ್ನು ಲೆಕ್ಕಪರಿಶೋಧನೆಯ ಸಹಾಯಕ್ಕಾಗಿ ಉಪಯೋಗಿಸಿಕೊಳ್ಳಲಾಯಿತು.

ಕರ್ನಾಟಕದಲ್ಲಿ ವಿಸಕಂಗಳಿಗೆ ಅನುದಾನಗಳ ಮಂಜೂರಾತಿ ಮತ್ತು ಬಿಡುಗಡೆಗೆ ಸಂಬಂಧಿಸಿದಂತೆ ಪಿಎಫ್‌ಸಿಯ ದಾಖಲೆಗಳನ್ನೂ ಸಹ ಪರಿಶೀಲಿಸಲಾಯಿತು.

ಒಂದು ಪ್ರವೇಶಮಟ್ಟದ ಸಭೆಯನ್ನು 22 ಜುಲೈ 2023ರಂದು ನಡೆಸಲಾಯಿತು, ಆ ಸಭೆಯಲ್ಲಿ ಲೆಕ್ಕಪರಿಶೋಧನೆಯ ಉದ್ದೇಶಗಳು, ಮಾನದಂಡ, ವ್ಯಾಪ್ತಿ ಮತ್ತು ಮಾದರಿ ಆಯ್ಕೆಗಳ ಬಗ್ಗೆ ಕರ್ನಾಟಕ ಸರ್ಕಾರದೊಂದಿಗೆ ಚರ್ಚಿಸಲಾಯಿತು. ಕರಡು ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಯನ್ನು ಸರ್ಕಾರಕ್ಕೆ / ಇಲಾಖೆಗೆ ಆಗಸ್ಟ್ 2024ರಲ್ಲಿ ನೀಡಲಾಯಿತು ಹಾಗೂ ಸರ್ಕಾರವು ಅಕ್ಟೋಬರ್ 2024ರಲ್ಲಿ ವಿಸಕಂಗಳು ಲೆಕ್ಕಪರಿಶೋಧನಾ ವರದಿಗೆ ನೀಡಿದ್ದಂತಹ ಉತ್ತರಗಳನ್ನು ಅನುಮೋದಿಸಿ ಕಳುಹಿಸಿದ್ದಿತು. ಎಲ್ಲೆಲ್ಲಿ ಅಗತ್ಯವಿದ್ದಿತೋ ಅಂತಹ ಕಡೆಗಳಲ್ಲಿ ಉತ್ತರಗಳನ್ನು ವರದಿಯಲ್ಲಿ ಸೂಕ್ತವಾಗಿ ಅಳವಡಿಸಿಕೊಳ್ಳಲಾಯಿತು. ನಿರ್ಗಮನ ಮಟ್ಟದ ಸಭೆಯನ್ನು 4 ನವಂಬರ್ 2024ರಂದು ನಡೆಸಲಾಯಿತು ಹಾಗೂ ಆ ಸಭೆಯಲ್ಲಿ ವರದಿಯ ಬಗ್ಗೆ ಚರ್ಚಿಸಲಾಯಿತು. ಸರ್ಕಾರವು ಲೆಕ್ಕಪರಿಶೋಧನೆಯ ಎಲ್ಲಾ ಶಿಫಾರಸುಗಳನ್ನು ಒಪ್ಪಿಕೊಂಡಿದ್ದಿತು.

## 1.7 ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳು

ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳನ್ನು ಈ ಕೆಳಗಿನ ಅಧ್ಯಾಯಗಳಲ್ಲಿ ಸಂಯೋಜನೆಗೊಳಿಸಲಾಗಿರುವುದು, ಅವೆಂದರೆ :

- ಅಧ್ಯಾಯ II: ಹಣಕಾಸು ನಿರ್ವಹಣೆ.
- ಅಧ್ಯಾಯ III: ಯೋಜನೆಯ ಪೂರ್ವಭಾವಿ ಯೋಜನೆ ಮತ್ತು ಅನುಷ್ಠಾನ.
- ಅಧ್ಯಾಯ IV: ಮೇಲ್ವಿಚಾರಣೆ.

[5] ಕಾಮಗಾರಿಗಳನ್ನು ವೃತ್ತವಾರು ನೀಡಲಾಗಿದ್ದಿತಾದ್ದರಿಂದ ಹಾಗೂ ಪ್ರತಿ ಕಾಮಗಾರಿ ಆದೇಶಗಳನ್ನು ವಿಭಾಗಗಳಿಂದ ನೀಡಲಾಗಿದ್ದಿತಾದ್ದರಿಂದ, ವಿಭಾಗಗಳು ಮಾದರಿ ಆಯ್ಕೆಗಾಗಿ ಪರಿಗಣಿಸಲಾದಂತಹ ಪ್ರಮುಖ ಘಟಕಗಳಾಗಿದ್ದವು.

## 1.8 ಕೃತಜ್ಞತೆಗಳು

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಲು ಅನುಕೂಲ ಕಲ್ಪಿಸುವಲ್ಲಿ ಕರ್ನಾಟಕ ಸರ್ಕಾರದ ಇಂಧನ ಇಲಾಖೆ, ವಿಸಕಂಗಳು ಮತ್ತು ಕವಿಪ್ರನಿನಿದ ಆಡಳಿತ ಮಂಡಳಿಗಳು ನೀಡಿದ ಸಹಕಾರ ಮತ್ತು ಸಹಾಯಕ್ಕಾಗಿ ಲೆಕ್ಕಪರಿಶೋಧನೆಯು ಈ ಮೂಲಕ ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿರುವುದು.

# ಅಧ್ಯಾಯ – II

# ಹಣಕಾಸು ನಿರ್ವಹಣೆ

## ಅಧ್ಯಾಯ II

### ಹಣಕಾಸು ನಿರ್ವಹಣೆ

*ವಿಸಕಂಗಳು ವೆಚ್ಚಗಳನ್ನು ಹೆಚ್ಚುವರಿಯಾಗಿ ಭರಿಸಿದ್ದವು, ಬಡ್ಡಿ ಅಧಿಕ ದರಗಳಲ್ಲಿ ಹಣಕಾಸಿನ ಸಾಲಗಳನ್ನು ಪಡೆದಿದ್ದವು ಹಾಗೂ ಭಾರತ ಸರ್ಕಾರವು ಮಂಜೂರು ಮಾಡಿದ್ದ ಎಲ್ಲಾ ಅನುದಾನಗಳನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ಅವುಗಳಿಗೆ ಸಾಧ್ಯವಾಗಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಿಸಕಂಗಳು ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಅನುಮೋದಿತ ವೆಚ್ಚಕ್ಕಿಂತ ₹ 110.89 ಕೋಟಿ ಮೊತ್ತದಷ್ಟು ಅಧಿಕ ವೆಚ್ಚವನ್ನು ಭರಿಸಿದ್ದವು, ಅದರ ಪೈಕಿ ₹ 38.52 ಕೋಟಿ ಮೊತ್ತವು ಮಾರ್ಗಸೂಚಿ ದರಗಳನ್ನು (ಇಂಧನ ಮಂತ್ರಾಲಯವು ನಿರ್ದಿಷ್ಟಪಡಿಸಿದ್ದಂತಹ ಕೇಂದ್ರ ಖರೀದಿ ದರಗಳು) ಮೀರಿದಂತೆ ಅಧಿಕ ದರಗಳಲ್ಲಿ ಖರೀದಿಸಿದ್ದ ಕಾರಣದಿಂದ ಆಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮುಂದುವರೆದು, ಅನುದಾನದ ಕಡೆಯ ಕಂತನ್ನು ಕೋರುವ ಸಲುವಾಗಿ ದಾಖಲೆಗಳನ್ನು ಸಲ್ಲಿಸುವಲ್ಲಿನ ವಿಳಂಬವು ಸಾಲಗಳನ್ನಾಗಿ ಪಡೆಯಲಾಗಿದ್ದ ಹಣಕಾಸಿನ ಮೇಲೆ ₹ 5.43 ಕೋಟಿ ಮೊತ್ತದಷ್ಟರ ಮಟ್ಟಿಗೆ ಹೆಚ್ಚುವರಿ ಬಡ್ಡಿ ಹೊರೆಯನ್ನು ಭರಿಸುವಲ್ಲಿ ಪರಿಣಮಿಸಿದ್ದಿತು. ಫೀಡರುಗಳಿಗೆ ಮೀಟರುಗಳನ್ನು ಅಳವಡಿಸುವ ಕಾಮಗಾರಿಗಾಗಿ ಟೆಂಡರುಗಳನ್ನು ಅಂತಿಮರೂಪಕ್ಕೆ ತರುವಲ್ಲಿನ ವಿಳಂಬ (ಕವಿಪ್ರನಿನಿದಿಂದ), ಡಿಟಿಸಿ ಮೀಟರಿಂಗ್ ಕೆಲಸವನ್ನು ಟೆಂಡರ್ ಮಾಡಲು ಮತ್ತು ನೀಡಲು ಅಸಮರ್ಥತೆ, ಹಾಗೂ ಗುತ್ತಿಗೆದಾರರುಗಳಿಗೆ ನೀಡದಿದ್ದುದು ಹಾಗೂ ಸೌರ ವಿದ್ಯುತ್ ಭಾಗವನ್ನು ಪೂರ್ಣಗೊಳಿಸದಿದ್ದುದು ಬೆಸ್ಕಾಂ ಮತ್ತು ಮೆಸ್ಕಾಂನಲ್ಲಿ ₹ 12.80 ಕೋಟಿ ಮೊತ್ತದಷ್ಟು ಅನುದಾನಗಳನ್ನು ಬಿಟ್ಟುಕೊಡುವಲ್ಲಿ ಪರಿಣಮಿಸಿದ್ದಿತು. ವಿಸಕಂಗಳ ಪಾವತಿಗಾಗಿ ಬಿಲ್ಲುಗಳನ್ನು ನೀಡುವಿಕೆಯ ದಕ್ಷತೆಯು (ಮಾರಾಟ ಮಾಡಲಾದ ನಿವ್ವಳ ವಿದ್ಯುತ್ತು ಹಾಗೂ ವಿದ್ಯುತ್ತಿನ ನಿವ್ವಳ ಒಳಹರಿವು, ಇವುಗಳ ಅನುಪಾತದ ಆಧಾರದ ಮೇರೆಗೆ ಲೆಕ್ಕಹಾಕಿರುವುದು), ಯೋಜನಾ ಅವಧಿಯಲ್ಲಿ ಸಾಮಾನ್ಯವಾಗಿ ಸುಧಾರಣೆ ಕಂಡಿರುವುದು, ಇದು ಬಿಲ್ಲುಗಳನ್ನು ನೀಡುವಿಕೆಯಲ್ಲಿನ ನಷ್ಟಗಳನ್ನು ತಗ್ಗಿಸುವತ್ತ ಕಾಣಿಕೆಯನ್ನು ನೀಡಿರುವುದು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು ಅಂದರೆ ಬಿಲ್ಲು ಮಾಡಲಾಗದ ವಿದ್ಯುತ್ತಿನ ಒಳಹರಿವು ತಗ್ಗುತ್ತಿತ್ತು.*

### *2.1 ಪೀಠಿಕೆ*

ಐಪಿಡಿಎಸ್‌ಗಾಗಿ ಚಿಂತಿಸಲಾಗಿದ್ದಂತಹ ಹಣಕಾಸು ಹೂಡಿಕೆ ಮಾದರಿಯು (i) ಸವಿವರ ಯೋಜನಾ ವರದಿಯ (ಡಿಪಿಆರ್) ವೆಚ್ಚದ ಶೇಕಡ 60ರಷ್ಟನ್ನು ಭಾರತ ಸರ್ಕಾರದಿಂದ ಬಂಡವಾಳ ಅನುದಾನದ ಮೂಲಕ, (ii) ಶೇಕಡ 30ರಷ್ಟನ್ನು ಹಣಕಾಸು ಸಂಸ್ಥೆಗಳಿಂದ/ಬ್ಯಾಂಕುಗಳಿಂದ ಪಡೆಯಲಾಗುವ ಸಾಲಗಳಿಂದ ಹಾಗೂ (iii) ಉಳಿಕೆ ಶೇಕಡಾ 10ರಷ್ಟನ್ನು ವಿಸಕಂಗಳು ಸ್ವಂತ ಹಣಕಾಸಿನಿಂದ ಒದಗಿಸುವುದನ್ನು ಒಳಗೊಂಡಿದ್ದಿತು. ವಿಸಕಂಗಳು ನಿರ್ದಿಷ್ಟ ಮೈಲಿಗಲ್ಲುಗಳ ಸಾಧನೆಯ ಆಧಾರದ ಮೇರೆಗೆ ಸಾಲದ ಮೊತ್ತದ ಶೇಕಡ 50ರಷ್ಟನ್ನು (ಅಂದರೆ ಸವಿವರ ಯೋಜನಾ ವರದಿಯ ವೆಚ್ಚದ ಶೇಕಡ 15ರಷ್ಟು) ಹೆಚ್ಚುವರಿ ಅನುದಾನವನ್ನು ಸಹ ಸ್ವೀಕರಿಸಬಹುದಾಗಿದ್ದಿತು. ಮುಂದುವರೆದು, ವಿಸಕಂಗಳು ಯೋಜನೆ ನಿರ್ವಹಣಾ ಸಂಸ್ಥೆಗೆ (ಪಿಎಂಎ) ಸಂಬಂಧಿತ ವೆಚ್ಚಗಳ ಕಡೆಗೆ ಅನುಮೋದಿತ ಯೋಜನಾ ವೆಚ್ಚದ ಶೇಕಡಾ 0.50ರವರೆವಿಗೂ ಅನುದಾನಕ್ಕೆ ಅರ್ಹತೆಯನ್ನು ಹೊಂದಿದ್ದವು.

ಯೋಜನೆಗೆ ಅನುಮೋದನೆ ನೀಡಿದನಂತರ ಯಾವುದೇ ಕಾರಣದಿಂದಲೇ ಆಗಿರಲಿ ನಿರ್ದಿಷ್ಟ ಮಿತಿಯನ್ನು ಮೀರಿದಂತೆ ಆಗಬಹುದಾದಂತಹ ಯಾವುದೇ ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಅನುದಾನಕ್ಕೆ ಅರ್ಹತೆಯಿರುವುದಿಲ್ಲ ಹಾಗೂ ಅಂತಹ ಮಿತಿ ಮೀರಿದ ವೆಚ್ಚಗಳನ್ನು ಉಪಯುಕ್ತತಾ ಸಂಸ್ಥೆಗಳು /ಸಂಬಂಧಿತ ರಾಜ್ಯ ಸರ್ಕಾರಗಳು ಭರಿಸತಕ್ಕದ್ದು' ಎಂಬುದನ್ನೂ ಸಹ ಯೋಜನೆಯ ಮಾರ್ಗಸೂಚಿಗಳು ನಿರ್ದಿಷ್ಟಪಡಿಸಿದ್ದವು.

## 2.2 ಯೋಜನೆಗೆ ಹಣಕಾಸು ಹೂಡಿಕೆಯ ವಿಭಜನೆ

ಯೋಜನೆಯ ವಿವಿಧ ಭಾಗಗಳ ಅಡಿಯಲ್ಲಿ ಅನುಮೋದಿತಗೊಂಡಿರುವಂತಹ ಮೌಲ್ಯ ಹಾಗೂ ಭರಿಸಲಾಗಿರುವಂತಹ ವಾಸ್ತವಿಕ ವೆಚ್ಚಗಳಿಗೆ ಸಂಬಂಧಿಸಿದಂತೆ ವಿಸಕಂವಾರು ವಿವರಗಳನ್ನು ಈ ಕೆಳಗೆ ಕೋಷ್ಟಕದ ರೂಪದಲ್ಲಿ ನೀಡಲಾಗಿರುವುದು.

**ಕೋಷ್ಟಕ ಸಂಖ್ಯೆ 2.1: ಅನುಮೋದಿತಗೊಂಡಿರುವಂತಹ ಮೌಲ್ಯ ಹಾಗೂ ಭರಿಸಲಾಗಿರುವಂತಹ ವಾಸ್ತವಿಕ ವೆಚ್ಚಗಳಿಗೆ ಸಂಬಂಧಿಸಿದಂತೆ ವಿಸಕಂವಾರು ವಿವರಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವಿಸಕಂ ಹೆಸರು | ಅನುಮೋದಿತ ಯೋಜನಾ ವೆಚ್ಚ (ಪಿಎಂಎ ಶುಲ್ಕಗಳನ್ನು ಒಳಗೊಂಡಂತೆ) | ಡಿಡಬ್ಲ್ಯುಎ ವೆಚ್ಚ (ಪಿಎಂಎ ಶುಲ್ಕಗಳನ್ನು ಒಳಗೊಂಡಂತೆ) | ವಾಸ್ತವಿಕ ವೆಚ್ಚ (31.03.2023 ರಂತೆ) | ಅಧಿಕ (–)/ ತಗ್ಗಿರುವುದು | ಅನುಮೋದಿತ ಯೋಜನಾ ವೆಚ್ಚವನ್ನು ಮೀರಿದಂತೆ ಕಾರ್ಯಗತ ಗೊಳಿಸುವಿಕೆಯಲ್ಲಿನ ಶೇಕಡಾವಾರು ಹೆಚ್ಚಳ (–) / ತಗ್ಗಿರುವುದು |
|---|---|---|---|---|---|---|
| | **ಬೆಸ್ಕಾಂ** | | | | | |
| 1 | ವ್ಯವಸ್ಥೆ ಬಲಪಡಿಸುವಿಕೆ | 459.45 | 509.03 | 488.86 | -29.41 | |
| 2 | ಐಟಿ ಹಂತ II | 85.4 | 257.53 | 102.53 | -17.13 | -8.54 |
| 3 | **ಒಟ್ಟು** | **544.85** | **766.56** | **591.39** | **-46.54** | |
| | **ಸೆಸ್ಕ್** | | | | | |
| 4 | ವ್ಯವಸ್ಥೆ ಬಲಪಡಿಸುವಿಕೆ | 179.06 | 193.4 | 179.08 | -0.02 | |
| 5 | ಐಟಿ ಹಂತ II | 11.18 | 13.53 | 9.39 | 1.79 | 0.93 |
| 6 | **ಒಟ್ಟು** | **190.24** | **206.93** | **188.47** | **1.77** | |
| | **ಜೆಸ್ಕಾಂ** | | | | | |
| 7 | ವ್ಯವಸ್ಥೆ ಬಲಪಡಿಸುವಿಕೆ | 184.33 | 200.43 | 194.3 | -9.97 | |
| 8 | ಐಟಿ ಹಂತ II | 6.3 | 4.21 | 2.44 | 3.86 | -3.21 |
| 9 | **ಒಟ್ಟು** | **190.63** | **204.64** | **196.74** | **-6.11** | |
| | **ಹೆಸ್ಕಾಂ** | | | | | |
| 10 | ವ್ಯವಸ್ಥೆ ಬಲಪಡಿಸುವಿಕೆ | 229.56 | 257.39 | 260.83 | -31.27 | |
| 11 | ಐಟಿ ಹಂತ II | 10.27 | 7.88 | 9.31 | 0.96 | -12.64 |
| 12 | **ಒಟ್ಟು** | **239.83** | **265.27** | **270.14** | **-30.31** | |
| | **ಮೆಸ್ಕಾಂ** | | | | | |
| 13 | ವ್ಯವಸ್ಥೆ ಬಲಪಡಿಸುವಿಕೆ | 208.11 | 272.39 | 239.21 | -31.1 | |
| 14 | ಐಟಿ ಹಂತ II | 4.78 | 5.4 | 3.38 | 1.4 | -13.95 |
| 15 | **ಒಟ್ಟು** | **212.89** | **277.79** | **242.59** | **-29.7** | |
| 16 | **ಒಟ್ಟು ಮೊತ್ತ** | **1,378.44** | **1,721.19** | **1,489.33** | **-110.89** | |

*ಮೂಲ : ವಿಸಕಂಗಳು ಒದಗಿಸಿದ ಮಾಹಿತಿಯಂತೆ*

ವಿಸಕಂಗಳು ಸಂಪರ್ಕ–ಸೇತು ಸಂಸ್ಥೆಯು (ಪಿಎಫ್‌ಸಿ) ಅನುಮೋದಿಸಿದ್ದಂತಹ ಯೋಜನಾ ವೆಚ್ಚಗಳನ್ನು ಮೀರಿದಂತೆ ₹ 110.89 ಕೋಟಿ ಮೊತ್ತದಷ್ಟು ಅಧಿಕ ವೆಚ್ಚವನ್ನು ಭರಿಸಿದ್ದವು. ಯೋಜನಾ ವೆಚ್ಚದಲ್ಲಿನ ಇಳಿಕೆಯನ್ನು ಕೇವಲ ಸೆಸ್ಕ್‌ನಲ್ಲಿ ಮಾತ್ರ (ಶೇಕಡಾ 0.93) ಗಮನಿಸಲಾಗಿದ್ದಿತು ಹಾಗೂ ಹೆಚ್ಚಳವು ಜೆಸ್ಕಾಂನಲ್ಲಿ ಶೇಕಡಾ 3.21ರಿಂದ ಇತರೆ ವಿಸಕಂಗಳಲ್ಲಿನ ಶೇಕಡಾ 13.95ರವರೆಗೆ ಆಗಿದ್ದಿತು.

ಯೋಜನಾ ವೆಚ್ಚದಲ್ಲಿನ ಹೆಚ್ಚಳವು ಇನ್ನಿತರವುಗಳ ಜೊತೆಗೆ ಈ ಕೆಳಗಿನ ಕಾರಣಗಳಿಂದ ಆಗಿದ್ದಿತು;

- ಸಾಮಗ್ರಿಗಳ ಖರೀದಿಗಳ ಮೇಲೆ ಆಗಿದ್ದಂತಹ ಅಧಿಕ ಪ್ರಮಾಣದ ವೆಚ್ಚವು ಕೇಂದ್ರ ಸರ್ಕಾರದಿಂದ ನಿರ್ದಿಷ್ಟಪಡಿಸಲಾಗಿದ್ದಂತಹ ಕೇಂದ್ರ ಖರೀದಿ ದರಗಳನ್ನು ಅಳವಡಿಸಿಕೊಳ್ಳದಿದ್ದ ಕಾರಣದಿಂದ ಆಗಿದ್ದಿತು (***ಕಂಡಿಕೆ 2.8.1***);

- ಕಾಮಗಾರಿಗಳನ್ನು ಗುತ್ತಿಗೆದಾರರುಗಳಿಗೆ ಅಧಿಕ ಟೆಂಡರು ಪ್ರೀಮಿಯಂನಲ್ಲಿ ನೀಡಿದ್ದುದು (***ಕಂಡಿಕೆ 3.5.2***).

ಮುಂದುವರೆದು, ₹ 110.89 ಕೋಟಿ ಮೊತ್ತದ ಈ ಹೆಚ್ಚುವರಿ ವೆಚ್ಚವನ್ನು ಸಾಲಗಳನ್ನು ಪಡೆಯುವುದರ ಮೂಲಕ ಅಥವಾ ವಿಸಕಂಗಳ ಸ್ವಂತ ಸಂಪನ್ಮೂಲಗಳಿಂದ ಭರಿಸಲಾಗಿದ್ದಿತು.

### *2.3 ಹಣಕಾಸು ಹೂಡಿಕೆಯ ಮಾದರಿ*

ಲೆಕ್ಕಪರಿಶೋಧನೆಯು, ವಿಸಕಂಗಳು ಭರಿಸಿದ್ದಂತಹ ವಾಸ್ತವಿಕ ವೆಚ್ಚಗಳ ಮಾದರಿಯನ್ನು ಚಿಂತಿಸಲಾಗಿದ್ದಂತಹ ಶೇಕಡಾ 60ರಷ್ಟು ಅನುದಾನಗಳಿಂದ, ಶೇಕಡಾ 30ರಷ್ಟು ಸಾಲಗಳನ್ನು ಪಡೆಯುವುದರ ಮೂಲಕ ಹಾಗೂ ಉಳಿಕೆ ಶೇಕಡಾ 10ರಷ್ಟನ್ನು ಸ್ವಂತ ಸಂಪನ್ಮೂಲಗಳಿಂದ ಭರಿಸಬೇಕಿದ್ದ ಮಾದರಿಗೆ ಪ್ರತಿಯಾಗಿ ವಿಶ್ಲೇಷಿಸಿತು. ಇದರ ಫಲಿತಾಂಶವನ್ನು ರೇಖಾಚಿತ್ರ ಸಂಖ್ಯೆ 2.1ರಲ್ಲಿ ತೋರಿಸಲಾಗಿರುವುದು.

**ರೇಖಾಚಿತ್ರ ಸಂಖ್ಯೆ 2.1: ಅನುದಾನಗಳು, ಸಾಲ ಮತ್ತು ಸ್ವಂತ ಹಣಕಾಸಿನ ಮೂಲಕ ಹಣಕಾಸು ಹೂಡಿಕೆಯ ವಿವರಗಳು**




| | ಬೆಸ್ಕಾಂ | ಸೆಸ್ಕ್ | ಮೆಸ್ಕಾಂ | ಜೆಸ್ಕಾಂ | ಹೆಸ್ಕಾಂ |
|---|---|---|---|---|---|
| ಸ್ವಂತ ಹಣಕಾಸು | 78.85 | 14.59 | 52.73 | 10.14 | 78.1 |
| ಸಾಲ | 209.29 | 61.39 | 63.12 | 73.37 | 50.5 |
| ಅನುದಾನ | 303.25 | 112.49 | 126.74 | 113.23 | 141.54 |

*ಮೂಲ: ವಿಸಕಂಗಳು ಒದಗಿಸಿದ ಮಾಹಿತಿಯಂತೆ*

ಎಲ್ಲಾ ವಿಸಕಂಗಳಲ್ಲಿಯೂ ಸ್ವೀಕರಿಸಲಾಗಿದ್ದಂತಹ ಅನುದಾನಗಳ ವಾಸ್ತವಿಕ ಮೊತ್ತವು ಶೇಕಡ 60ಕ್ಕಿಂತ ಕಡಿಮೆಯಾಗಿದ್ದಿತು ಹಾಗೂ ಶೇಕಡಾ 51.3ರಿಂದ (ಬೆಸ್ಕಾಂ) ಶೇಕಡಾ 59.7ರಷ್ಟು (ಸೆಸ್ಕ್) ಆಗಿದ್ದಿತು. ಕೊರತೆಯನ್ನು ಸಾಲಗಳನ್ನು ಪಡೆಯುವುದರ ಮೂಲಕ ಅಥವಾ ಸ್ವಂತ ಹಣಕಾಸಿನ ಮೂಲಕ ಭರಿಸಲಾಗಿದ್ದಿತು. ಬೆಸ್ಕಾಂ, ಸೆಸ್ಕ್ ಹಾಗೂ ಜೆಸ್ಕಾಂ ಇವುಗಳು ಚಿಂತಿಸಲಾಗಿದ್ದಂತಹ ಶೇಕಡಾ 30ಕ್ಕಿಂತ ಅಧಿಕವಾಗಿ ಸಾಲಗಳನ್ನು ಪಡೆದಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮುಂದುವರೆದು, ಬೆಸ್ಕಾಂ, ಮೆಸ್ಕಾಂ ಹಾಗೂ ಹೆಸ್ಕಾಂ ಇವುಗಳು ಯೋಜನೆಗೆ ಹಣಕಾಸನ್ನು ತೊಡಗಿಸುವ ಸಲುವಾಗಿ ಶೇಕಡಾ 10ಕ್ಕಿಂತ ಮಿಗಿಲಾಗಿ ತಮ್ಮ ಆಂತರಿಕ ಸಂಪನ್ಮೂಲಗಳಿಂದ ಭರಿಸಿದ್ದವು. ಸಮೀಕ್ಷೆಯ ಅಡಿಯಲ್ಲಿನ ಸಾಲುಗಳಲ್ಲಿ ವಿಸಕಂಗಳು ಬಹಳಷ್ಟಾಗಿ ನಷ್ಟಗಳನ್ನು[6] ಅನುಭವಿಸುತ್ತಿದ್ದವು.

## 2.4 *ಸಾಲಗಳಿಗೆ ಸಂಬಂಧಿತ ಅಂಶಗಳು*

ಯೋಜನಾ ಮಾರ್ಗಸೂಚಿಗಳ *ಅಧ್ಯಾಯ IVರ ಕಂಡಿಕೆ 1.2* ಪಿಎಫ್‌ಸಿ ಮತ್ತು ಇತರೆ ಹಣಕಾಸು ಸಂಸ್ಥೆಗಳು/ಬ್ಯಾಂಕುಗಳಿಂದ ಸಾಲಗಳನ್ನು ಉಪಯೋಗಿಸಿಕೊಳ್ಳುವುದನ್ನು ಚಿಂತಿಸಿದ್ದವು. ವಿಸಕಂಗಳು ಬಡ್ಡಿ ದರ ಮತ್ತು ಇತರೆ ಷರತ್ತುಗಳು ಮತ್ತು ನಿಬಂಧನೆಗಳನ್ನು ಪರಿಗಣಿಸಿದಂತೆ ಗ್ರಾಮೀಣ ವಿದ್ಯುದೀಕರಣ

[6] 2016–17 ರಿಂದ 2022–23ರ ಅವಧಿಗಳಿಗೆ.

ನಿಗಮ[7] (ಆರ್‌ಇಸಿ) ಮತ್ತು ಪಿಎಫ್‌ಸಿಯಿಂದ ಸಾಲಗಳನ್ನು ಉಪಯೋಗಿಸಿಕೊಂಡಿದ್ದವು. ವಿಸಕಂಗಳಿಗೆ ಮಂಜೂರಾಗಿದ್ದಂತಹ ಸಾಲಗಳು ಮತ್ತು ಅವುಗಳು ಉಪಯೋಗಿಸಿಕೊಂಡಿದ್ದಂತಹ ಸಾಲಗಳ ಪರಿಮಾಣಗಳನ್ನು ಈ ಕೆಳಗೆ ಕೋಷ್ಟಕದ ರೂಪದಲ್ಲಿ ನೀಡಲಾಗಿರುವುದು:

**ಕೋಷ್ಟಕ ಸಂಖ್ಯೆ 2.2ಐಪಿಡಿಎಸ್ ಕಾರ್ಯಗತಗೊಳಿಸುವ ಸಲುವಾಗಿ ವಿಸಕಂಗಳು ಉಪಯೋಗಿಸಿಕೊಂಡಿದ್ದಂತಹ ಸಾಲಗಳ ಪರಿಮಾಣ.**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | ಸಾಲವನ್ನು ಯಾವ ಸಂಸ್ಥೆಯಿಂದ ಪಡೆದು ಕೊಳ್ಳಲಾಯಿತು | ಅನುಮೋದಿತ ಗೊಂಡಿದ್ದ ಯೋಜನಾ ವೆಚ್ಚ | ಮಂಜೂರಾತಿ ಗೊಂಡಿದ್ದ ಸಾಲ | ಮಂಜೂರಾತಿ ಗೊಂಡಿದ್ದ ಯೋಜನಾ ವೆಚ್ಚದ ಶೇಕಡಾ 30 | ಉಪ ಯೋಗಿಸಿ ಕೊಳ್ಳ ಲಾಗಿದ್ದ ಸಾಲ | ಅಧಿಕ ಪ್ರಮಾಣದಲ್ಲಿ ಉಪಯೋಗಿಸಿ ಕೊಂಡಿದ್ದ ಸಾಲ | ಬಡ್ಡಿ ದರ (ಶೇಕಡಾವಾರು) |
|---|---|---|---|---|---|---|---|---|
| 1 | ಬೆಸ್ಕಾಂ | ಆರ್‌ಇಸಿ | 459.45 | 137.39 | 137.84 | 137.39 | ಅಧಿಕವಿಲ್ಲ | 9.75 |
| 2 | | ಆರ್‌ಇಸಿ | 85.40 | 96.00 | 25.62 | 71.90 | 46.28 | 9.5 ಮತ್ತು 9.75 |
| 3 | ಸೆಸ್ಕ್ | ಆರ್‌ಇಸಿ | 190.24 | 90.72 | 57.07 | 61.39 | 4.32 | 9.75 |
| 4 | ಮೆಸ್ಕಾಂ | ಆರ್‌ಇಸಿ | 212.89 | 63.12 | 63.87 | 63.12 | ಅಧಿಕವಿಲ್ಲ | 9.75 |
| 5 | ಜೆಸ್ಕಾಂ | ಆರ್‌ಇಸಿ | 190.63 | 73.37 | 57.19 | 73.37 | 16.18 | 9.75 |
| 6 | ಹೆಸ್ಕಾಂ | ಪಿಎಫ್‌ಸಿ | 239.83 | 51.10 | 71.95 | 50.50 | ಅಧಿಕವಿಲ್ಲ | 10 |
| | **ಒಟ್ಟು** | | **1,378.44** | **511.70** | **413.53** | **457.67** | | |

***ಮೂಲ: ವಿಸಕಂಗಳು ಒದಗಿಸಿದ ಮಾಹಿತಿಯಂತೆ***

ಅರ್ಹತೆ ಇದ್ದಂತಹ ₹ 413.53 ಕೋಟಿ (ಅನುಮೋದಿತ ಯೋಜನಾ ವೆಚ್ಚದ ಶೇಕಡಾ 30ರಷ್ಟು) ಮೊತ್ತದಷ್ಟು ಸಾಲಕ್ಕೆ ಪ್ರತಿಯಾಗಿ ಆರ್‌ಇಸಿ/ಪಿಎಫ್‌ಸಿ, ಇವುಗಳು ₹ 511.70 ಕೋಟಿ ಮೊತ್ತದಷ್ಟು ಸಾಲಗಳನ್ನು ಮಂಜೂರು ಮಾಡಿದ್ದವು ಹಾಗೂ ವಿಸಕಂಗಳು ಶೇಕಡಾ 9.5ರಿಂದ ಶೇಕಡಾ 10ರ ಬಡ್ಡಿ ದರಗಳಲ್ಲಿ ₹ 457.67 ಕೋಟಿ ಮೊತ್ತದಷ್ಟು ಸಾಲಗಳನ್ನು ಉಪಯೋಗಿಸಿಕೊಂಡಿದ್ದವು. ಬೆಸ್ಕಾಂ, ಸೆಸ್ಕ್ ಮತ್ತು ಜೆಸ್ಕಾಂ, ಇವುಗಳು ₹ 66.78 ಕೋಟಿ ಮೊತದಷ್ಟು ಸಾಲಗಳನ್ನು ಅಧಿಕ ಪ್ರಮಾಣದಲ್ಲಿ (ಮಂಜೂರಾತಿಗೊಂಡಿದ್ದ ಯೋಜನಾ ವೆಚ್ಚದ ಶೇಕಡಾ 30ರಷ್ಟನ್ನು ಮೀರಿದಂತೆ) ಉಪಯೋಗಿಸಿಕೊಂಡಿದ್ದವು. ಇಆರ್‌ಪಿ ಮತ್ತು ಮಾಹಿತಿ ತಂತ್ರಜ್ಞಾನ ಹಂತ IIರ ಸಲುವಾಗಿ ಬೆಸ್ಕಾಂಗೆ ಬಿಡುಗಡೆಗೊಳಿಸಲಾಗಿದ್ದ ಅನುದಾನದ ಪೈಕಿ ₹ 19.69 ಕೋಟಿ ಮೊತ್ತವನ್ನು ಆರ್‌ಎಪಿಡಿಆರ್‌ಪಿ ಸಾಲದ[8] ಮೇಲೆ ಪಾವತಿಸಬೇಕಾದ ಬಡ್ಡಿಯ ಕಡೆಗೆ ಹೊಂದಾಣಿಕೆ ಮಾಡಿಕೊಳ್ಳಲಾಗಿದ್ದಿತು. ಈ ಕಾರಣದಿಂದ ಕೊರತೆಯುಂಟಾದ ಹಣಕಾಸನ್ನು ಸರಿದೂಗಿಸುವ ಸಲುವಾಗಿ ಬೆಸ್ಕಾಂ ಆರ್‌ಇಸಿಯಿಂದ ಹೆಚ್ಚುವರಿ ಪ್ರಮಾಣದ ಸಾಲಗಳನ್ನು (₹ 46.28 ಕೋಟಿ) ಉಪಯೋಗಿಸಿಕೊಂಡಿತು. ಹೆಸ್ಕಾಂ ಮತ್ತು ಮೆಸ್ಕಾಂ, ಇವುಗಳು ತಮಗೆ ಅರ್ಹತೆಯಿದ್ದಂತಹ ಸಾಲದ ಮೊತ್ತವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡಿರಲಿಲ್ಲ.

[7] ಇಂಧನ ಮಂತ್ರಾಲಯದ ಅಡಿಯಲ್ಲಿನ ಒಂದು ಕೇಂದ್ರ ಸಾರ್ವಜನಿಕ ವಲಯದ ಉದ್ದಿಮೆ.

[8] ಆರ್‌ಎಪಿಡಿಆರ್‌ಪಿ ಭಾಗ ಎ ಯೋಜನೆಗೆ (2017ರಲ್ಲಿ ಮುಕ್ತಾಯಗೊಳಿಸಲಾಗಿರುವುದು) ಭಾರತ ಸರ್ಕಾರವು ಸಾಲದ ಮೂಲಕ ಸಂಪೂರ್ಣವಾಗಿ ಹಣಕಾಸನ್ನು ಒದಗಿಸಿದ್ದಿತು, ಅದನ್ನು ಬಡ್ಡಿಯೂ ಸೇರಿದಂತೆ ಅನುದಾನವನ್ನಾಗಿ ಪರಿವರ್ತಿಸಬೇಕಿದ್ದಿತು. ಸಾಲದ ಹಣಕಾಸನ್ನು ಪಿಎಫ್‌ಸಿ ಮೂಲಕ ಮುಂಗಡವಾಗಿ ಬಿಡುಗಡೆಗೊಳಿಸಲಾಗಿದ್ದಿತು. ಸಾಲಗಳನ್ನು ಅನುದಾನವನ್ನಾಗಿ ಪರಿವರ್ತಿಸುವ ಸಲುವಾಗಿ ಆರ್‌ಎಪಿಡಿಆರ್‌ಪಿ ಹಣಕಾಸನ್ನು ನಿರ್ಧಾರಣೆ ಮಾಡುವ ವೇಳೆಯಲ್ಲಿ, ಯೋಜನೆಯನ್ನು ಬಂಡವಾಳೀಕರಿಸುವ ದಿನಾಂಕವನ್ನು ಮೀರಿದಂತೆ ಬಡ್ಡಿ ಪಾವತಿಯು ಸಂಚಿತಗೊಂಡಿರುವುದಕ್ಕೆ ಹಾಗೂ ಬೆಸ್ಕಾಂ ಭಾರತ ಸರ್ಕಾರದ ಹಣಕಾಸನ್ನು ಭರಿಸುವ ಮೊದಲು ಗಳಿಸಿದ್ದ ಬಡ್ಡಿ ಸಂಬಂಧಿಸಿದಂತೆ ಬೆಸ್ಕಾಂನಿಂದ ₹ 35.92 ಕೋಟಿ ಮೊತ್ತವು ಬಾಕಿಯಿರುವುದನ್ನು ಕಂಡುಕೊಂಡಿತು.

### 2.4.1 ಅಧಿಕ ಬಡ್ಡಿ ದರಗಳಲ್ಲಿ ಸಾಲಗಳನ್ನು ತೆಗೆದುಕೊಂಡಿದ್ದುದು

ಬೆಸ್ಕಾಂ ಆರ್‌ಇಸಿಯಿಂದ 125 ಬಿಪಿಎಸ್‌ನ[9] ಬಡ್ಡಿ ರಿಯಾಯಿತಿಯೊಂದಿಗೆ ದರಸಂಧಾನ ಮಾಡಲ್ಪಟ್ಟಂತಹ ಶೇಕಡಾ 9.75 ಬಡ್ಡಿ ದರದೊಂದಿಗೆ ಹಾಗೂ ಸಾಲ ವಿತರಣಾ ದಿನಾಂಕದಿಂದ[10] ಪ್ರತೀ ಮೂರು ವರ್ಷಗಳ ನಂತರ ಪ್ರಚಲಿತ ಮಾರುಕಟ್ಟೆ ದರಗಳ ಅನುಸಾರ ಪರಿಷ್ಕರಿಸಬಹುದಾದ / ಸಂಯೋಜಿಸಬಹುದಾದ ಬಡ್ಡಿ ದರದ ಅನುಕೂಲತೆಯೊಂದಿಗೆ ಅವಧಿ ಸಾಲವನ್ನು[11] ಉಪಯೋಗಿಸಿಕೊಂಡಿತು. ಅನುಮೋದಿಸಲಾಗಿದ್ದ ಹಾಗೂ ಉಪಯೋಗಿಸಿಕೊಳ್ಳಲಾಗಿದ್ದ ಸಾಲದ ಮೊತ್ತವು ₹ 137.4 ಕೋಟಿ (ಜುಲೈ 2017ರಲ್ಲಿ ₹ 134.4 ಕೋಟಿ ಹಾಗೂ ಆಗಸ್ಟ್ 2017ರಲ್ಲಿ ₹ 3.00 ಕೋಟಿ) ಆಗಿದ್ದಿತು. ಬಿಡುಗಡೆ ಮಾಡಲಾಗಿದ್ದ ಸಾಲದ ಮೊತ್ತ, ವಿತರಣೆಯ ಸಮಯದಲ್ಲಿನ ಬಡ್ಡಿ ದರ ಹಾಗೂ ಮೂರು ವರ್ಷಗಳ ನಂತರ ಆರ್‌ಇಸಿ ಪ್ರಚಲಿತ ಮಾರುಕಟ್ಟೆ ದರಗಳ ಅನುಸಾರ ಪರಿಷ್ಕರಿಸಿದ / ಸಂಯೋಜಿಸಿದ ಬಡ್ಡಿ ದರಗಳ ವಿವರಗಳನ್ನು ***ಅನುಬಂಧ–2 ರಲ್ಲಿ*** ವಿವರವಾಗಿ ನೀಡಲಾಗಿರುವುದು.

ಸಾಲ ವಿತರಣಾ ದಿನಾಂಕದಿಂದ ಮೊದಲ ಮೂರು ವರ್ಷಗಳಿಗೆ ವಾಸ್ತವಿಕ ಬಡ್ಡಿ ದರಗಳು ಶೇಕಡಾ 9.25ರಿಂದ (ನವಂಬರ್ 2019) ಶೇಕಡಾ 10.11ರವರೆವಿಗೆ (ಮಾರ್ಚ್ 2019) ಆಗಿದ್ದವು ಹಾಗೂ ಸಾಲ ವಿತರಣಾ ದಿನಾಂಕದಿಂದ ಮೂರು ವರ್ಷಗಳು ಕಳೆದನಂತರ ಶೇಕಡಾ 9.25ರಿಂದ (ಮಾರ್ಚ್ 2022) ಶೇಕಡಾ 10.35ರವರೆವಿಗೆ (ಅಕ್ಟೋಬರ್ 2022) ಆಗಿದ್ದವು.

ಬೆಸ್ಕಾಂ 2019–20ರಿಂದ 2022–23ರ ಅವಧಿಯಲ್ಲಿ ಉಪಯೋಗಿಸಿಕೊಂಡಿದ್ದಂತಹ ದೀರ್ಘಾವಧಿ ಸಾಲಗಳ[12] ಮೇಲಿನ ಬಡ್ಡಿ ದರಗಳು ಶೇಕಡ 7.3ರಿಂದ ಶೇಕಡಾ 9.35ರವರೆಗೆ ಆಗಿದ್ದವು, ಈ ಬಡ್ಡಿ ದರಗಳು ಆರ್‌ಇಸಿ ವಿಧಿಸಿರುವ ಬಡ್ಡಿ ದರಕ್ಕಿಂತ ಕಡಿಮೆ ದರಗಳದ್ದಾಗಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಬೆಸ್ಕಾಂ ಐಪಿಡಿಎಸ್‌ಗಾಗಿ ಇತರೆ ಯಾವುದೇ ಬ್ಯಾಂಕುಗಳು / ಹಣಕಾಸು ಸಂಸ್ಥೆಗಳಿಂದ ಸಾಲಗಳನ್ನು ಉಪಯೋಗಿಸಿಕೊಳ್ಳುವ ಆಯ್ಕೆಯನ್ನು ಕಂಡುಕೊಂಡಿರಲಿಲ್ಲ ಹಾಗೂ ಆರ್‌ಇಸಿಯಿಂದ ಅಧಿಕ ದರದಲ್ಲಿ ಸಾಲವನ್ನು ಉಪಯೋಗಿಸಿಕೊಳ್ಳಲು ಮನಸೋಇಚ್ಛೆಯಿಂದ ತೀರ್ಮಾನಿಸಿತು. ಐಪಿಡಿಎಸ್‌ಗಾಗಿ ಆರ್‌ಇಸಿಯಿಂದ ಸಾಲವನ್ನು ಉಪಯೋಗಿಸಿಕೊಳ್ಳುವ ಸಲುವಾಗಿನ ಬೆಸ್ಕಾಂನ ತೀರ್ಮಾನವು 2019–20ರಿಂದ 2022–23ರ ಅವಧಿಗೆ ₹ 7.00 ಕೋಟಿ ಮೊತ್ತದಷ್ಟು ಹೆಚ್ಚುವರಿ ಬಡ್ಡಿ ಹೊರೆಯನ್ನು ಹೊರುವಲ್ಲಿ ಪರಿಣಮಿಸಿದ್ದಿತು. ಅಲ್ಲದೆಯೇ, ಬೆಸ್ಕಾಂ ತದನಂತರದ ಸಾಲುಗಳಿಗೂ ಕೂಡ ಹೆಚ್ಚುವರಿ ಬಡ್ಡಿ ಹೊರೆಯನ್ನು ಹೊರಬೇಕಾಗಿರುವುದು.

ಯೋಜನೆಯು ಪೂರ್ಣಗೊಳ್ಳುವವರೆವಿಗೂ ಸಾಲವನ್ನು ಭಾರತ ಸರ್ಕಾರದ ಸಂಪರ್ಕ–ಸೇತು ಸಂಸ್ಥೆಯೊಂದಿಗೆ ಉತ್ತಮ ಸಹಕಾರವನ್ನು ಹೊಂದಿರುವ ಸಲುವಾಗಿ ಸಾಲವನ್ನು ಉಪಯೋಗಿಸಿಕೊಳ್ಳಲಾಯಿತು ಹಾಗೂ ಅನುದಾನವನ್ನಾಗಿ ಪರಿವರ್ತಿಸಿಕೊಳ್ಳುವ ಸಲುವಾಗಿ, ಭಾರತ ಸರ್ಕಾರದ ಸಂಪರ್ಕ ಸೇತು ಸಂಸ್ಥೆಯಿಂದ ಸಾಲ ಪಡೆಯುವುದು ಪ್ರಯೋಜನಕಾರಿಯಾಗಿರುವುದು ಎಂಬುದಾಗಿ ಬೆಸ್ಕಾಂ ಉತ್ತರಿಸಿತು (ಅಕ್ಟೋಬರ್ 2024). ಐಪಿಡಿಎಸ್‌ಗೆ ಸಂಪರ್ಕ–ಸೇತು ಸಂಸ್ಥೆಯಾಗಿರದಿದ್ದ ಆರ್‌ಇಸಿಯಿಂದ ಬೆಸ್ಕಾಂ ಸಾಲವನ್ನು ಪಡೆದಿದ್ದಿತಾದ್ದರಿಂದ ಉತ್ತರವು ಒಪ್ಪುವಂತಿರುವುದಿಲ್ಲ. ಮುಂದುವರೆದು, ಯೋಜನೆಯ ಮಾರ್ಗಸೂಚಿಗಳು ಇತರೆ ಹಣಕಾಸು ಸಂಸ್ಥೆಗಳಿಂದ ಸಾಲಗಳನ್ನು ಪಡೆದುಕೊಳ್ಳಲು ಯಾವುದೇ ನಿರ್ಬಂಧವನ್ನು ಹೇರಿರುವುದಿಲ್ಲ ಹಾಗೂ ಬೆಸ್ಕಾಂ ಕೂಡ ಲಭ್ಯವಿರುವಂತಹ ಆರ್ಥಿಕವಾಗಿ ಅತ್ಯಂತ ಮಿತವ್ಯಯತೆಯಿಂದ ಕೂಡಿರುವ ಬಡ್ಡಿ ದರದಲ್ಲಿ ಸಾಲ ಪಡೆಯುವಿಕೆಯನ್ನು ಕಂಡುಕೊಳ್ಳಲಿಲ್ಲ. ಮುಂದುವರೆದು ಹೆಚ್ಚುವರಿ/ಅಧಿಕ ಪ್ರಮಾಣದ ಬಡ್ಡಿ ಪಾವತಿ ವೆಚ್ಚವನ್ನು ವಿದ್ಯುತ್ ದರಪಟ್ಟಿ (ಟಾರಿಫ್) ಮೂಲಕ ಗ್ರಾಹಕರುಗಳಿಗೆ ವರ್ಗಾಯಿಸಲಾಗುವುದು.

---

[9] ಬೇಸಿಸ್ ಪಾಯಿಂಟುಗಳು.

[10] ಆರ್‌ಇಸಿ ಪ್ರತಿಯೊಂದು ಸಾಲದ ಕಂತಿನ ವಿತರಣೆಯ ದಿನಾಂಕದಿಂದ ಮೂರು ವರ್ಷಗಳು ಕಳೆದ ಕೂಡಲೆಯೇ ಹಾಗೂ ತದನಂತರದಲ್ಲಿ ಪ್ರತೀ ಮೂರು ವರ್ಷಗಳು ಮುಕ್ತಾಯಗೊಂಡನಂತರ ಸಾಲವನ್ನು ಪೂರ್ತಿಯಾಗಿ ಮರುಪಾವತಿಸುವವರೆವಿಗೂ ಬಡ್ಡಿ ದರವನ್ನು ಪರಿಷ್ಕರಿಸುವ (ಸಾಲವನ್ನು ಪಡೆದಿರುವ ಸಂಸ್ಥೆಯು ಆಯ್ಕೆ ಮಾಡಿರುವಂತೆ) ಹಕ್ಕನ್ನು ಹೊಂದಿದ್ದಿತು.

[11] ಸಾಲ ಮರುಪಾವತಿ ಅವಧಿ 13 ವರ್ಷಗಳು, ಸಾಲ ಮರುಪಾವತಿಗೆ ತಾತ್ಕಾಲಿಕ ತಡೆ ಅವಧಿ 3 ವರ್ಷಗಳು.

[12] ₹ 266.77 ಕೋಟಿ ಮೊತ್ತವನ್ನು ಕೆನರಾ ಬ್ಯಾಂಕಿನಿಂದ 13 ವರ್ಷಗಳ ಅವಧಿಗೆ 2019–20ರಲ್ಲಿ ಮಂಜೂರು ಮಾಡಲಾಗಿದ್ದಿತು.

## 2.5 ಅನುದಾನಗಳಿಗೆ ಸಂಬಂಧಿತ ಅಂಶಗಳು

ವಿಸಕಂಗಳು ಅನುಮೋದಿತ ಸವಿವರ ಯೋಜನಾ ವರದಿ ಅನುಸಾರದ ವೆಚ್ಚದ ಶೇಕಡಾ 60ರಷ್ಟು ಮೊತ್ತದ ಅನುದಾನಕ್ಕೆ ಅರ್ಹತೆಯನ್ನು ಹೊಂದಿದ್ದವಾದರೂ, ಅವುಗಳು ಅನುಮೋದಿತಗೊಂಡಿದ್ದಂತಹ ಅನುದಾನದ ಸಂಪೂರ್ಣ ಮೊತ್ತವನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ವಿಸಕಂಗಳು ಯೋಜನಾ ನಿರ್ವಹಣಾ ಸಂಸ್ಥೆಯ (ಪಿಎಂಎ) ವೆಚ್ಚಗಳ ಕಡೆಗೆ ಅನುಮೋದಿತ ಯೋಜನಾ ವೆಚ್ಚದ ಶೇಕಡಾ 0.5ರಷ್ಟರವರೆವಿಗೂ ಅನುದಾನದ ಅರ್ಹತೆಯನ್ನು ಹೊಂದಿದ್ದವು.

ಸಂಪರ್ಕ–ಸೇತು ಸಂಸ್ಥೆಯು ಮಂಜೂರು ಮಾಡಿದ್ದಂತಹ ₹ 830.60 ಕೋಟಿ ಮೊತ್ತದ ಅನುದಾನಕ್ಕೆ ಪ್ರತಿಯಾಗಿ ವಿಸಕಂಗಳು ₹ 795.46 ಕೋಟಿ ಮೊತ್ತದಷ್ಟು ಅನುದಾನವನ್ನು ಸ್ವೀಕರಿಸಿದ್ದವು, ಇದು ₹ 35.14 ಕೋಟಿ ಮೊತ್ತದಷ್ಟು ಅನುದಾನವನ್ನು ಕಡಿಮೆ ಪ್ರಮಾಣದಲ್ಲಿ ಸ್ವೀಕರಿಸುವಲ್ಲಿ ಪರಿಣಮಿಸಿದ್ದಿತು. ಮುಂದುವರೆದು, ಇದನ್ನು ವಿಸಕಂಗಳು ಯೋಜನೆಯ ಅಡಿಯಲ್ಲಿ ಅನುಮೋದಿತ ಯೋಜನಾ ವರದಿಯ ಅನುಸಾರದ ವೆಚ್ಚಗಳಿಗಿಂತ ಅಧಿಕ ಪ್ರಮಾಣದಲ್ಲಿ ಭರಿಸಿದ್ದವು ಎಂಬ ವಾಸ್ತವಾಂಶದ ದೃಷ್ಟಿಯಿಂದ ಪರಿಗಣಿಸತಕ್ಕದ್ದು. ಯೋಜನೆಯ ಅಡಿಯಲ್ಲಿ ಅನುಮೋದಿತಗೊಂಡಿದ್ದ ಅನುದಾನಗಳು ಹಾಗೂ ವಿಸಕಂಗಳು ಸ್ವೀಕರಿಸಿದ್ದಂತಹ ಅನುದಾನಗಳ ವಿವರಗಳನ್ನು ಈ ಕೆಳಗೆ ಕೋಷ್ಟಕದ ರೂಪದಲ್ಲಿ ನೀಡಲಾಗಿರುವುದು.

**ಕೋಷ್ಟಕ ಸಂಖ್ಯೆ 2.3: ಐಪಿಡಿಎಸ್‌ಗಾಗಿ ಮಂಜೂರಾಗಿದ್ದ ಅನುದಾನಗಳು, ವಿಸಕಂಗಳು ಸ್ವೀಕರಿಸಿದ್ದಂತಹ ಅನುದಾನಗಳು ಹಾಗೂ ಬಿಟ್ಟುಕೊಡಲಾಗಿದ್ದ ಅನುದಾನಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವಿಸಕಂ ಹೆಸರು | ಅನುಮೋದಿತ ಯೋಜನಾ ವೆಚ್ಚ (ಪಿಎಂಎ ಶುಲ್ಕಗಳನ್ನು ಒಳಗೊಂಡಂತೆ) | ಅನುಮೋದಿತ ಅನುದಾನ | ಸ್ವೀಕರಿಸಲಾದ ಅನುದಾನ | ಬಿಟ್ಟುಕೊಡಲಾದ ಅನುದಾನ |
|---|---|---|---|---|---|
| | **ಬೆಸ್ಕಾಂ** | | | | |
| 1 | ವ್ಯವಸ್ಥೆ ಬಲಪಡಿಸುವಿಕೆ | 459.45 | 276.58 | 264.31 | 12.27 |
| 2 | ಐಟಿ ಹಂತ II | 34.09 | 20.52 | 20.52 | 0.00 |
| 3 | ಇಆರ್‌ಪಿ | 51.31 | 30.89 | 18.42 | 12.47 |
| | **ಒಟ್ಟು** | **544.85** | **327.99** | **303.25** | **24.74** |
| | **ಸೆಸ್ಕ್** | | | | |
| 4 | ವ್ಯವಸ್ಥೆ ಬಲಪಡಿಸುವಿಕೆ | 179.06 | 107.79 | 106.42 | 1.37 |
| 5 | ಇಆರ್‌ಪಿ | 4.35 | 2.62 | 2.58 | 0.04 |
| 6 | ಐಟಿ ಹಂತ II | 6.83 | 4.11 | 3.49 | 0.62 |
| | **ಒಟ್ಟು** | **190.24** | **114.52** | **112.49** | **2.03** |
| | **ಜೆಸ್ಕಾಂ** | | | | |
| 7 | ವ್ಯವಸ್ಥೆ ಬಲಪಡಿಸುವಿಕೆ | 184.33 | 110.96 | 110.96 | 0.00 |
| 8 | ಐಟಿ ಹಂತ II | 6.30 | 3.76 | 2.27 | 1.49 |
| | **ಒಟ್ಟು** | **190.63** | **114.72** | **113.23** | **1.49** |
| | **ಹೆಸ್ಕಾಂ** | | | | |
| 9 | ವ್ಯವಸ್ಥೆ ಬಲಪಡಿಸುವಿಕೆ | 206.38 | 124.24 | 124.24 | 0.00 |
| 10 | ಜಿಐಎಸ್ | 23.18 | 13.96 | 12.45 | 1.51 |
| 11 | ಐಟಿ ಹಂತ II | 10.27 | 6.18 | 4.85 | 1.33 |
| | **ಒಟ್ಟು** | **239.83** | **144.38** | **141.54** | **2.84** |
| | **ಮೆಸ್ಕಾಂ** | | | | |
| 12 | ವ್ಯವಸ್ಥೆ ಬಲಪಡಿಸುವಿಕೆ | 168.43 | 102.22 | 101.40 | 0.82 |
| 13 | ಜಿಐಎಸ್ | 39.68 | 23.89 | 22.78 | 1.11 |
| 14 | ಐಟಿ ಹಂತ II | 4.78 | 2.88 | 2.56 | 0.32 |
| | **ಒಟ್ಟು** | **212.89** | **128.99** | **126.74** | **2.25** |
| | **ಒಟ್ಟು ಮೊತ್ತ** | **1,378.44** | **830.60** | **797.25** | **33.86** |

*ಮೂಲ: ವಿಸಕಂಗಳು ಒದಗಿಸಿದ ಮಾಹಿತಿಯಂತೆ*

ಆದಾಗ್ಯೂ, ಐಪಿಡಿಎಸ್ ಅನುದಾನದ ಅಂತಿಮ ಕಂತನ್ನು ವಿಸಕಂಗಳಿಗೆ ಅವುಗಳ ಅರ್ಹತೆಯಿರುವ ಯೋಜನಾ ವೆಚ್ಚ ಅಂದರೆ ಮಂಜೂರಾಗಿದ್ದ ವೆಚ್ಚ ಗುತ್ತಿಗೆದಾರರಿಗೆ ನೀಡಲಾಗಿದ್ದ ಕಾಮಗಾರಿಗಳ ಮೌಲ್ಯ, ಮುಕ್ತಾಯಗೊಳಿಸುವ ವೇಳೆಯಲ್ಲಿನ ಮೌಲ್ಯ ಹಾಗೂ ಅಂತಿಮವಾಗಿ ಅರ್ಹತೆಯಿರುವ ಉಪಯುಕ್ತತೆ ಇವುಗಳ ಕನಿಷ್ಠ ಮೊತ್ತದ ಆಧಾರದ ಮೇರೆಗೆ ವಿತರಿಸಲಾಗಿರುವುದು ಹಾಗೂ ಸಂಪರ್ಕ–ಸೇತು ಸಂಸ್ಥೆಯಿಂದ (ಪಿಎಫ್‌ಸಿ) ಯಾವುದೇ ಅನುದಾನದ ಮೊತ್ತವನ್ನು ಕಡಿಮೆ ಪ್ರಮಾಣದಲ್ಲಿ ವಿತರಿಸಲಾಗಿರುವುದಿಲ್ಲ ಎಂಬುದಾಗಿ ಸಂಪರ್ಕ–ಸೇತು ಸಂಸ್ಥೆ ಪವರ್ ಫೈನಾನ್ಸ್ ಕಾರ್ಪೊರೇಷನ್ (ಪಿಎಫ್‌ಸಿ) ತಿಳಿಸಿತು.

ಆದಾಗ್ಯೂ, ಯೋಜನೆಯ ಅಡಿಯಲ್ಲಿ ಅನುಮೋದಿತ ಸವಿವರ ಯೋಜನಾ ವರದಿಯಲ್ಲಿ ನಿರ್ದಿಷ್ಟಪಡಿಸಲಾಗಿದ್ದಂತಹ ವೆಚ್ಚಕ್ಕಿಂತ ಅಧಿಕ ಪ್ರಮಾಣದಲ್ಲಿ ವೆಚ್ಚಗಳನ್ನು ಭರಿಸಿದ್ದಾಗ್ಯೂ, ಕಾಮಗಾರಿಗಳನ್ನು ಅಧಿಕ / ಹೆಚ್ಚುವರಿ ದರಗಳಲ್ಲಿ ಗುತ್ತಿಗೆದಾರರುಗಳಿಗೆ ನೀಡಲಾಗಿದ್ದಿತಾದ್ದರಿಂದ (***ಕಂಡಿಕೆ 2.8.1 ಮತ್ತು 3.5.2*** ಗಮನಿಸುವುದು) ಹಾಗೂ ಯೋಜನೆಯನ್ನು ಮುಕ್ತಾಯಗೊಳಿಸುವ ಮೊದಲು ಯೋಜನೆಯ ಅಡಿಯಲ್ಲಿ ಅನುಮೋದಿತಗೊಂಡಿದ್ದಂತಹ ಕಾಮಗಾರಿಗಳ ಎಲ್ಲಾ ಐಟಂಗಳನ್ನು ಕಾರ್ಯಗತಗೊಳಿಸಿರಲಿಲ್ಲವಾದ್ದರಿಂದ, ಅನುಮೋದಿತಗೊಂಡಿದ್ದಂತಹ ಸಂಪೂರ್ಣ ಅನುದಾನಗಳನ್ನು ಸ್ವೀಕರಿಸಲಾಗಿರಲಿಲ್ಲ. ಕೈಬಿಡಲಾಗಿದ್ದ ಕಾಮಗಾರಿಗಳು ಅಥವಾ ಯೋಜನೆಯ ಹೊರಗೆ ಕಾರ್ಯಗತಗೊಳಿಸಲಾಗಿದ್ದ ಕಾಮಗಾರಿಗಳ ಕೆಲವು ಪ್ರಕರಣಗಳನ್ನು ಈ ಕೆಳಗಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿರುವುದು.

### *2.5.1 ಮೀಟರು ಅಳವಡಿಸುವಿಕೆ*

ಬೆಸ್ಕಾಂ ಐಪಿಡಿಎಸ್ ಅಡಿಯಲ್ಲಿ ಮೀಟರು ಅಳವಡಿಸುವಿಕೆ ಭಾಗಗಳಿಗಾಗಿ ₹ 28.24 ಕೋಟಿ ಮೊತ್ತಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿತು, ಅದನ್ನು ಪಿಎಫ್‌ಸಿ ಅನುಮೋದಿಸಿದ್ದಿತು. ಈ ಕೆಳಗೆ ವಿವರಿಸಿರುವಂತೆ ಟೆಂಡರುಗಳನ್ನು ಅಂತಿಮ ರೂಪಕ್ಕೆ ತರುವಲ್ಲಿನ ವಿಳಂಬದ ಕಾರಣ ಬೆಸ್ಕಾಂ ₹ 15.00 ಕೋಟಿ[13] ಮೊತ್ತವನ್ನು ಉಪಯೋಗಿಸಿಕೊಳ್ಳಲಾಗಿರಲಿಲ್ಲ.

### *2.5.1.1 ಬೆಸ್ಕಾಂನಲ್ಲಿ ಫೀಡರುಗಳಿಗೆ ಮೀಟರುಗಳ ಅಳವಡಿಕೆ*

ವಿಸಕಂಗಳು ಕೈಗೆತ್ತಿಕೊಳ್ಳಬೇಕಿದ್ದಂಥ ಫೀಡರುಗಳ ಸ್ವಯಂಚಾಲಿತ ಮೀಟರು ಓದುವಿಕೆಗಾಗಿ ಅನುಕೂಲ ಕಲ್ಪಿಸುವ ಸಲುವಾಗಿ ಫೀಡರುಗಳಿಗೆ ಮೀಟರು ಅಳವಡಿಕೆ ಕಾಮಗಾರಿಯನ್ನು ಕರ್ನಾಟಕ ಸರ್ಕಾರವು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ[14] (ಕೆಪಿಟಿಸಿಎಲ್) ವಹಿಸಿದ್ದಿತು. ಕಾಮಗಾರಿಯನ್ನು ಐಪಿಡಿಎಸ್ ಅಡಿಯಲ್ಲಿ ಫೀಡರುಗಳಿಗೆ ಮೀಟರು ಅಳವಡಿಕೆಗಾಗಿ ಹಂಚಿಕೆ ಮಾಡಲಾಗಿದ್ದಂಥ ಆಯವ್ಯಯ ಹಣಕಾಸನ್ನು ಉಪಯೋಗಿಸಿಕೊಂಡು ಮಾಡಬೇಕಿದ್ದಿತು, ಅದನ್ನು ವಿಸಕಂಗಳು ಕೆಪಿಟಿಸಿಎಲ್‌ಗೆ ವರ್ಗಾಯಿಸಬೇಕಿದ್ದಿತು. ಬೆಸ್ಕಾಂ ಈ ಕಾಮಗಾರಿಯನ್ನು ಐಪಿಡಿಎಸ್ ಅಡಿಯಲ್ಲಿ ಸೇರಿಸಿದ್ದಿತು ಹಾಗೂ ₹ 5.31 ಕೋಟಿ ಮೊತ್ತದ ಸವಿವರ ಯೋಜನಾ ವರದಿಗೆ ಸಂಪರ್ಕ–ಸೇತು ಸಂಸ್ಥೆಯು ಅನುಮೋದನೆ ನೀಡಿದ್ದಿತು. ನವಂಬರ್ 2016 ಮತ್ತು ಏಪ್ರಿಲ್ 2017ರಲ್ಲಿ ಕೆಪಿಟಿಸಿಎಲ್ ಆಹ್ವಾನಿಸಿದ್ದಂತಹ ಮೊದಲ ಎರಡು ಟೆಂಡರುಗಳು ಬಿಡ್ಡರುಗಳ ಪೂರ್ವಾರ್ಹತೆಯನ್ನು ವಿವರಿಸಿರಲಿಲ್ಲ ಹಾಗೂ ಅವಕ್ಕೆ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿರಲಿಲ್ಲ ಕವಿಪ್ರನಿನಿವು ಎರಡನೆಯ ಬಿಡ್ಡನ್ನು, ಅದು ತಾಂತ್ರಿಕ–ವಾಣಿಜ್ಯಿಕವಾಗಿ ಪ್ರತಿಕ್ರಿಯಾತ್ಮಕವಾಗಿ ಇರುವುದಿಲ್ಲ ಎಂಬುದನ್ನು ಗಮನಿಸಿದನಂತರ ಅದನ್ನು ರದ್ದುಗೊಳಿಸಲು (ಜುಲೈ 2017) ಆರು ತಿಂಗಳುಗಳನ್ನು (ಜುಲೈ 2017ರಿಂದ ಜನವರಿ 2018) ತೆಗೆದುಕೊಂಡಿತು. ಅದರಿಂದಾಗಿ, ಮೂರನೇ ಟೆಂಡರಿನ ಆಹ್ವಾನವು ವಿಳಂಬಗೊಂಡಿದ್ದಿತು. ಮೂರನೇ ಟೆಂಡರನ್ನು ಕೇವಲ ಫೆಬ್ರವರಿ 2018ರಲ್ಲಿ ಆಹ್ವಾನಿಸಲಾಗಿದ್ದಿತು ಹಾಗೂ ಆಸಕ್ತಿಯ ಪತ್ರವನ್ನು (ಎಲ್‌ಒಐ) ಮಾರ್ಚ್ 2019ರಲ್ಲಿ ನೀಡಲಾಗಿದ್ದಿತು. ಐಪಿಡಿಎಸ್ 31 ಮಾರ್ಚ್ 2019ರ ವೇಳೆಗೆ ಮುಕ್ತಾಯಗೊಳಿಸಬೇಕಿದ್ದಿತಾದ್ದರಿಂದ, ಬೆಸ್ಕಾಂ ₹ 5.75 ಕೋಟಿ ಮೊತ್ತದಷ್ಟು ತನ್ನದೇ ಆದಂತಹ

[13] ₹ 5.31 ಕೋಟಿ + ₹ 9.69 ಕೋಟಿ.

[14] ರಾಜ್ಯದಲ್ಲಿ ವಿದ್ಯುತ್ ಪ್ರಸರಣದಲ್ಲಿ ವ್ಯವಹರಿಸುವ ಕರ್ನಾಟಕ ಸರ್ಕಾರದ ವಿದ್ಯುತ್ ಉಪಯುಕ್ತತಾ ಸಂಸ್ಥೆಯಾಗಿರುತ್ತದೆ.

ಹಣಕಾಸನ್ನು ಉಪಯೋಗಿಸಿಕೊಂಡು ಫೀಡರುಗಳಿಗೆ ಮೀಟರು ಅಳವಡಿಸುವಿಕೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ತೀರ್ಮಾನಿಸಿತು (ನವಂಬರ್ 2019).

ಈ ರೀತಿಯಾಗಿ ಕೆಪಿಟಿಸಿಎಲ್ ಟೆಂಡರುಗಳನ್ನು ಅಂತಿಮರೂಪಕ್ಕೆ ತರುವಲ್ಲಿನ ವಿಳಂಬವು ₹ 3.19 ಕೋಟಿ[15] ಮೊತ್ತದಷ್ಟು ಅನುದಾನವನ್ನು ಬಿಟ್ಟುಕೊಡುವಲ್ಲಿ ಪರಿಣಮಿಸಿದ್ದಿತು.

### *2.5.1.2 ಬೆಸ್ಕಾಂನಲ್ಲಿ ಡಿಟಿಸಿ ಮೀಟರುಗಳ ಅಳವಡಿಕೆ*

ಬೆಸ್ಕಾಂ 1,311 ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳ (ಡಿಟಿಸಿಸ್) ಮೀಟರು ಅಳವಡಿಕೆಗಾಗಿ ₹ 6.33 ಕೋಟಿ ಮೊತ್ತವನ್ನು ಉಪಯೋಗಿಸಿಕೊಳ್ಳಲು ತೀರ್ಮಾನಿಸಿತು (ಡಿಸೆಂಬರ್ 2017). ಕಂಪನಿಯು ಡಿಸೆಂಬರ್ 2017 ಮತ್ತು ಡಿಸೆಂಬರ್ 2018ರ ನಡುವೆ ಆರು ಟೆಂಡರುಗಳನ್ನು ಆಹ್ವಾನಿಸಿತು, ಅವುಗಳ ಪೈಕಿ ಮೊದಲ, ಎರಡನೆಯ ಮತ್ತು ನಾಲ್ಕನೆಯ ಟೆಂಡರುಗಳು ಯಾವುದೇ ಬಿಡ್‌ಗಳನ್ನು ಪಡೆಯುವಲ್ಲಿ ವಿಫಲವಾದವು. ಮೂರನೇ ಟೆಂಡರನ್ನು ಆಹ್ವಾನಿಸಿದನಂತರ ಟೆಂಡರು ಆಹ್ವಾನಿಸಿದ ಅಧಿಕಾರಿಯವರು ಬದಲಾವಣೆಗೊಂಡ ಕಾರಣ ತೆರೆಯಲಾಗಲಿಲ್ಲ ಹಾಗೂ ಏಕೈಕ ಬಿಡ್ಡರ್‌ರವರಿಂದ ಟೆಂಡರು ಷರತ್ತುಗಳನ್ನು ಪೂರೈಸಿರುವುದಿಲ್ಲ ಎಂಬ ಕಾರಣದಿಂದ ಐದನೇ ಟೆಂಡರನ್ನು ಪ್ರತಿಕ್ರಿಯಾತ್ಮಕವಾಗಿರುವುದಿಲ್ಲ ಎಂಬುದಾಗಿ ಪರಿಗಣಿಸಲಾಯಿತು. ಆರನೆಯ ಟೆಂಡರನ್ನು ಅಧಿಕ ದರಗಳ ಕಾರಣ ಹಾಗೂ ಮಾರ್ಚ್ 2019ರ ವೇಳೆಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಸಾಧ್ಯವಾಗುವುದಿಲ್ಲ ಎಂಬುದಾಗಿ ತಿಳಿಸಿದ್ದ ಕಾರಣ ರದ್ದುಗೊಳಿಸಲಾಯಿತು. ಈ ರೀತಿಯಾಗಿ ಬೆಸ್ಕಾಂ ₹ 9.69 ಕೋಟಿ ಮೊತ್ತವನ್ನು ಟೆಂಡರುಗಳನ್ನು ಸಮಯೋಚಿತವಾಗಿ ಅಂತಿಮ ರೂಪಕ್ಕೆ ತರದ ಕಾರಣ ಡಿಟಿಸಿಗಳ ಮೀಟರು ಅಳವಡಿಕೆಗಾಗಿ ಉಪಯೋಗಿಸಿಕೊಳ್ಳಲು ಸಾಧ್ಯವಾಗಲಿಲ್ಲ, ಇದು, ಯೋಜನೆಯ ಈ ಭಾಗಕ್ಕಾಗಿ ಇದ್ದಂತಹ ₹ 5.81 ಕೋಟಿ[16] ಮೊತ್ತದಷ್ಟು ಅನುದಾನವನ್ನು ಬಿಟ್ಟುಕೊಡುವಲ್ಲಿ ಪರಿಣಮಿಸಿದ್ದಿತು.

### *2.5.2 ಸೌರ ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದುದು*

ಐದು ವಿಸಕಂಗಳ ಪೈಕಿ ಬೆಸ್ಕಾಂ ಮತ್ತು ಮೆಸ್ಕಾಂ, ಇವುಗಳು ಯೋಜನೆಯ ಸೌರ ಭಾಗದ ಅಡಿಯಲ್ಲಿ ಹಂಚಿಕೆ ಮಾಡಲಾಗಿದ್ದ/ನೀಡಲಾಗಿದ್ದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಿರಲಿಲ್ಲ. ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದ ಕಾರಣ ಬಿಟ್ಟುಕೊಡಲಾದ ಅನುದಾನದ ವಿವರಗಳನ್ನು ಈ ಕೆಳಗೆ ನೀಡಲಾಗಿರುವುದು:

- ಬೆಸ್ಕಾಂ ₹ 7.91 ಕೋಟಿ ಮೊತ್ತದಲ್ಲಿ 1,125 kWp ಸೌರ ಪ್ಯಾನೆಲ್ಲುಗಳ ಸ್ಥಾಪನೆಗಾಗಿ ಕಾಮಗಾರಿಗಳ ಗುತ್ತಿಗೆಯನ್ನು ನೀಡಿತು (ಸೆಪ್ಟಂಬರ್ 2017). ಆದಾಗ್ಯೂ, ಗುತ್ತಿಗೆದಾರರು ₹ 4.08 ಕೋಟಿ ಮೌಲ್ಯದ 451.5 kWp ಸೌರ ಸಾಮರ್ಥ್ಯದ ಸ್ಥಾಪನೆಯನ್ನು ಪೂರ್ಣಗೊಳಿಸಲು ಸಾಧ್ಯವಾಗಿರಲಿಲ್ಲ, ಇದು ₹ 2.45 ಕೋಟಿ[17] ಮೊತ್ತದ ಅನುದಾನವನ್ನು ಪಡೆದುಕೊಳ್ಳುವ ಅವಕಾಶವನ್ನು ಕಳೆದುಕೊಳ್ಳುವಲ್ಲಿ ಪರಿಣಮಿಸಿದ್ದಿತು (***ಕಂಡಿಕೆ ಸಂಖ್ಯೆ 3.9.3ರಲ್ಲಿ*** ವಿವರಿಸಲಾಗಿರುವುದು).

- ಮೆಸ್ಕಾಂ ₹ 11.74 ಕೋಟಿ ಮೊತ್ತದಲ್ಲಿ 1,671 kWp ಸಾಮರ್ಥ್ಯದ ಸೌರ ಪ್ಯಾನೆಲ್ಲುಗಳ ಸ್ಥಾಪನೆಗಾಗಿ ಗುತ್ತಿಗೆಯನ್ನು ನೀಡಿತು (ಮೇ 2017), ಇದಕ್ಕೆ ಪ್ರತಿಯಾಗಿ ನಿವೇಶನ ಮಾಲೀಕರುಗಳಿಂದ ಅನುಮತಿ ದೊರೆಯದಿದ್ದ ಕಾರಣ, ಗುತ್ತಿಗೆದಾರರು ಕೇವಲ 1,351.44 kWp[18] ಸಾಮರ್ಥ್ಯವನ್ನು ಕಾರ್ಯಗತಗೊಳಿಸಲು ಸಾಧ್ಯವಾಗಿದ್ದಿತು. ₹ 2.25 ಕೋಟಿ ಮೌಲ್ಯದ 319.56 kWp ಸಾಮರ್ಥ್ಯವನ್ನು ಸ್ಥಾಪಿಸದಿದ್ದುದು ₹ 1.35 ಕೋಟಿ ಮೊತ್ತದಷ್ಟು

---

[15] ₹ 5.31 ಕೋಟಿ ಮೊತ್ತದ ಶೇಕಡಾ 60ರಷ್ಟು (ಸವಿವರ ಯೋಜನಾ ವರದಿಯಲ್ಲಿ ಸೇರಿಸಲಾಗಿದ್ದಂಥ ಮೊತ್ತ ಹಾಗೂ ಬೆಂವಿಸಕಂಯಿಂದ ಫೀಡರು ಮೀಟರುಗಳ ಅಳವಡಿಕೆಗಾಗಿ ಕವಿಪ್ರನಿನಿಕ್ಕೆ ವರ್ಗಾಯಿಸಿದ್ದುದು).

[16] ₹ 9.69 ಕೋಟಿ ಮೊತ್ತದ ಶೇಕಡ 60.

[17] ₹ 4.08 ಕೋಟಿ ಮೊತ್ತದ ಶೇಕಡಾ 60ರಷ್ಟು (ಪಿಪಿಇಎಲ್‌ಗೆ ಪಾವತಿಗಳನ್ನು ಮಾಡದಿದ್ದ ಕಾರಣ).

[18] 31 ಡಿಸೆಂಬರ್ 2018ರಿಂದ 30 ಜೂನ್ 2019.

ಅನುದಾನವನ್ನು ಸ್ವೀಕರಿಸುವ ಅವಕಾಶವನ್ನು ಬಿಟ್ಟುಕೊಡುವಲ್ಲಿ ಪರಿಣಮಿಸಿದ್ದಿತು ***(ಕಂಡಿಕೆ ಸಂಖ್ಯೆ 3.9.3ರಲ್ಲಿ*** ವಿವರಿಸಲಾಗಿರುವುದು).

ಈ ರೀತಿಯಾಗಿ ಐಪಿಡಿಎಸ್ ಅಡಿಯಲ್ಲಿ ಸೌರ ಭಾಗದ ಅಡಿಯಲ್ಲಿ ನೀಡಲಾಗಿದ್ದ ಕಾಮಗಾರಿಯನ್ನು ಪೂರ್ಣಗೊಳಿಸದಿದ್ದುದು ₹ 3.80 ಕೋಟಿ ಮೊತ್ತದ ಅನುದಾನವನ್ನು ಬಿಟ್ಟುಕೊಡುವಲ್ಲಿ ಪರಿಣಮಿಸಿದ್ದಿತು.

### *2.5.3 ಇಆರ್‌ಪಿ*

ಬೆಸ್ಕಾಂ ಯೋಜನೆಯನ್ನು ಪೂರ್ಣಗೊಳಿಸಲು ನಿಗದಿತಗೊಂಡಿದ್ದಂತಹ ದಿನಾಂಕದ ಒಳಗೆ (ಡಿಸೆಂಬರ್ 2021) ಇಆರ್‌ಪಿ ಕಾರ್ಯಗತಗೊಳಿಸುವ ಕಡೆಗೆ ಅನುಮೋದಿತಗೊಂಡಿದ್ದಂತಹ ₹ 51.31 ಕೋಟಿ ಯೋಜನಾ ವೆಚ್ಚದ ಪೈಕಿ ಕೇವಲ ₹ 30.89 ಕೋಟಿ ಮೊತ್ತವನ್ನು ಮಾತ್ರ ಭರಿಸಲು ಸಾಧ್ಯವಾಗಿದ್ದಿತು. ಇದಕ್ಕೆ ಪ್ರತಿಯಾಗಿ ಬೆಸ್ಕಾಂ ₹ 18.42 ಕೋಟಿ ಮೊತ್ತದಷ್ಟು ಅನುದಾನವನ್ನು ಸ್ವೀಕರಿಸಿದ್ದಿತು. ಕಾಮಗಾರಿಯನ್ನು ಪೂರ್ಣಗೊಳಿಸದಿದ್ದ ಕಾರಣ, ಕಂಪನಿಯು ಅನುಮೋದಿತ ಮೊತ್ತವನ್ನು ನಿಗದಿತ ಸಮಯದ ಒಳಗೆ ಸಂಪೂರ್ಣವಾಗಿ ಭರಿಸಲು ಸಾಧ್ಯವಾಗಿರಲಿಲ್ಲ ಹಾಗೂ ಇದು ₹ 12.47 ಕೋಟಿ ಮೊತ್ತದಷ್ಟು ಅನುದಾನವನ್ನು ಸ್ವೀಕರಿಸುವ ಅವಕಾಶವನ್ನು ಕಳೆದುಕೊಂಡಿದ್ದಿತು (***ಕಂಡಿಕೆ 3.10.ರಲ್ಲಿ*** ವಿವರಿಸಲಾಗಿರುವುದು).

ನಿರ್ಗಮನಮಟ್ಟದ ಸಭೆಯಲ್ಲಿ, ಐಪಿಡಿಎಸ್ ಅಡಿಯಲ್ಲಿ ಇಆರ್‌ಪಿ ಕಾರ್ಯಗತಗೊಳಿಸುವಿಕೆಗಾಗಿ ಕೇವಲ ಮೂರು ಮಾಡ್ಯೂಲುಗಳನ್ನು ಮಾತ್ರ ಪರಿಗಣಿಸಬೇಕಿದ್ದಿತು ಎಂಬುದಾಗಿ ಬೆಸ್ಕಾಂ ತಿಳಿಸಿತು. ಬೆಸ್ಕಾಂ ಏಳು ಮಾಡ್ಯೂಲುಗಳನ್ನು ಕಾರ್ಯಗತಗೊಳಿಸುತ್ತಿದೆ ಎಂಬುದಾಗಿಯೂ ತಿಳಿಸಿತು ಹಾಗೂ ಕೋವಿಡ್ ಕಾರಣದಿಂದಾಗಿ ಇಆರ್‌ಪಿಯನ್ನು ಊಹಿಸಿದಂತೆ ಕಾರ್ಯಗತಗೊಳಿಸಲು ಸಾಧ್ಯವಾಗಲಿಲ್ಲ ಎಂಬುದಾಗಿಯೂ ತಿಳಿಸಿತು.

ಅನುಮೋದನೆಯಿಂದ (ಫೆಬ್ರವರಿ 2018) ಡಿಡಬ್ಲ್ಯುಎ ನೀಡ್ಕಲು (ಮಾರ್ಚ್ 2020) ಅದು ಎರಡು ವರ್ಷಗಳನ್ನು ತೆಗೆದುಕೊಂಡಿದ್ದಿತಾದ್ದರಿಂದ ಉತ್ತರವು ಒಪ್ಪುವಂತಿರಲಿಲ್ಲ, ಮಾರ್ಗಸೂಚಿಗಳು ಆರು ತಿಂಗಳುಗಳ ಒಳಗೆ ಕಾಮಗಾರಿಯನ್ನು ನೀಡಲು ನಿರ್ದಿಷ್ಟಪಡಿಸಿದ್ದವು. ಕಾರ್ಯಗತಗೊಳಿಸುವಿಕೆಯ ಅವಧಿಯು ಕೋವಿಡ್ ಅವಧಿಯ ಮೇಲೆ ಹಾಸುಹೋಗಿದ್ದಿತಾದರೂ, 18 ತಿಂಗಳುಗಳ ಒಟ್ಟಾರೆ ವಿಳಂಬವು ಕಂಪನಿಯು ಅದರ ಅಗತ್ಯತೆಗಳನ್ನು (ಮಾಡ್ಯೂಲುಗಳು) ಅಂತಿಮ ಗೂಳಿಸಲು ಹಾಗೂ ಸಮಯೋಚಿತವಾಗಿ ಕಾಮಗಾರಿಯನ್ನು ನೀಡಲು ಸಾಧ್ಯವಾಗಿರದಿದ್ದ ಕಾರಣದಿಂದ ಆಗಿದ್ದಿತು.

### *2.6 ಅನುದಾನದ ಅಂತಿಮ ಕಂತನ್ನು ಸ್ವೀಕರಿಸುವಲ್ಲಿನ ವಿಳಂಬ*

ಐಪಿಡಿಎಸ್ ಮಾರ್ಗಸೂಚಿಗಳ ಅನುಸಾರ, ಅನುದಾನದ ಶೇಕಡಾ 10ರಷ್ಟು ಕಡೆಯ ಕಂತನ್ನು ಯೋಜನೆಯು ಪೂರ್ಣಗೊಂಡಿರುವುದರ ಬಗ್ಗೆ ಪ್ರಮಾಣಪತ್ರ ಮತ್ತು ಪಿಎಂಎ ವರದಿಯನ್ನು[19] ಸಲ್ಲಿಸಿದ ನಂತರ ಬಿಡುಗಡೆಗೊಳಿಸಬೇಕಿದ್ದಿತು. ಬೆಸ್ಕಾಂ, ಸೆಸ್ಕ್ ಮತ್ತು ಮೆಸ್ಕಾಂ, ಇವುಗಳು ಅನುಕ್ರಮವಾಗಿ ₹ 15.59 ಕೋಟಿ, ₹ 19.04 ಕೋಟಿ ಮತ್ತು ₹ 10.14 ಕೋಟಿ ಮೊತ್ತದ ಕೊನೆಯ ಕಂತಿನ ಅನುದಾನವನ್ನು ಪಡೆಯಲು ಮುಕ್ತಾಯದ ಔಪಚಾರಿಕತೆಗಳನ್ನು ಅಂತಿಮಗೊಳಿಸುವಲ್ಲಿ ವಿಳಂಬವನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಯೋಜನೆಯು ಪೂರ್ಣಗೊಂಡಿರುವುದರ ಬಗ್ಗೆ ಪ್ರಮಾಣಪತ್ರವನ್ನು ಸಲ್ಲಿಸುವಲ್ಲಿನ ವಿಳಂಬ ಹಾಗೂ ಅಂತಹ ವಿಳಂಬದ ಕಾರಣ ಹೆಚ್ಚುವರಿ ಬಡ್ಡಿ ಪಾವತಿ ಹೊರೆಯ ವಿವರಗಳನ್ನು ಈ ಕೆಳಗೆ ನೀಡಲಾಗಿರುವುದು:

[19] ಯೋಜನೆ ಪೂರ್ಣಗೊಂಡಿರುವುದು ಮತ್ತು ಈ ನಿಟ್ಟಿನಲ್ಲಿ ಭರಿಸಲಾಗಿರುವ ಮೊತ್ತದ ಬಗ್ಗೆ ಅನುದಾನಗಳ ಬಿಡುಗಡೆಗಾಗಿ ಶಿಫಾರಸಿನೊಂದಿಗೆ.

**ಕೋಷ್ಟಕ ಸಂಖ್ಯೆ 2.4: ದಾಖಲೆಗಳನ್ನು ಸಲ್ಲಿಸುವಲ್ಲಿನ ವಿಳಂಬದ ಕಾರಣ ಭರಿಸಲಾದ ಹೆಚ್ಚುವರಿ ಬಡ್ಡಿ ಪಾವತಿ ಹೊರೆ**

| ಕ್ರಮ ಸಂಖ್ಯೆ | ವಿಸಕಂ ಹೆಸರು | ಪೂರ್ಣಗೊಂಡಿರುವುದಾಗಿ ಘೋಷಿಸಲಾಗಿದ್ದ ದಿನಾಂಕ | ಅನುದಾನದ ಕಡೆಯ ಕಂತಿನ ಪಾವತಿಯನ್ನು ಕೋರಲು ದಾಖಲೆಗಳನ್ನು ಸಲ್ಲಿಸಿದ ದಿನಾಂಕ | ಸಲ್ಲಿಕೆಗಾಗಿ ಅವಕಾಶ ನೀಡಿದ್ದ ಮೂರು ತಿಂಗಳುಗಳನ್ನು ಪರಿಗಣಿಸಿದ ನಂತರ ವಿಳಂಬ ತಿಂಗಳುಗಳಲ್ಲಿ | ಅನುದಾನ ಸ್ವೀಕೃತಿ ದಿನಾಂಕ | ಕೋರಲಾಗಿದ್ದ ಮೊತ್ತ (ಕೋಟಿ ರೂಪಾಯಿಗಳಲ್ಲಿ) | ಹೆಚ್ಚುವರಿ ಬಡ್ಡಿ ಹೊರೆ (ಕೋಟಿ ರೂಪಾಯಿಗಳಲ್ಲಿ) |
|---|---|---|---|---|---|---|---|
| 1 | ಬೆಸ್ಕಾಂ | ಮಾರ್ಚ್ 2019 | ಜನವರಿ 2021 | 19 ತಿಂಗಳುಗಳು | 03 ಏಪ್ರಿಲ್ 2021<br>07 ಜೂನ್ 2021[20] | 15.59 | 2.28[21] |
| 2 | ಸೆಸ್ಕ್ | ಡಿಸೆಂಬರ್ 2019[22] | ಮಾರ್ಚ್ 2021 | 12 ತಿಂಗಳುಗಳು | 02 ಡಿಸೆಂಬರ್ 2021 | 19.04 | 1.76[23] |
| 3 | ಮೆಸ್ಕಾಂ | ಜೂನ್ 2019 | ಮಾರ್ಚ್ 2021 | 18 ತಿಂಗಳುಗಳಿಂದ 24 ತಿಂಗಳುಗಳು | 06 ಜುಲೈ 2021 | 10.14 | 1.41[24] |
| | | | **ಒಟ್ಟು** | | | | **5.45** |

*ಮೂಲ: ವಿಸಕಂಗಳು ಒದಗಿಸಿರುವ ಮಾಹಿತಿಯಂತೆ.*

ದಾಖಲೆಗಳನ್ನು ಸಮಯೋಚಿತವಾಗಿ ಸಲ್ಲಿಸುವಲ್ಲಿನ ವಿಳಂಬವು ವಿಸಕಂಗಳು ಸಾಲಗಳ ರೂಪದಲ್ಲಿ ಪಡೆದುಕೊಂಡಿದ್ದ ಹಣಕಾಸಿನ ಮೇಲೆ ₹ 5.45 ಕೋಟಿ ಮೊತ್ತದಷ್ಟು ಹೆಚ್ಚುವರಿ ಬಡ್ಡಿ ಹೊರೆಯನ್ನು ಭರಿಸುವಲ್ಲಿ ಪರಿಣಮಿಸಿದ್ದಿತು. ಪಿಎಫ್‌ಸಿಗೆ ದಾಖಲೆಗಳನ್ನು ಸಮಯೋಚಿತವಾಗಿ ಸಲ್ಲಿಸಿದ್ದಲ್ಲಿ ಬೆಸ್ಕಾಂ, ಸೆಸ್ಕ ಮತ್ತು ಮೆಸ್ಕಾಂ, ಇವುಗಳ ಮೇಲೆ ಹೆಚ್ಚುವರಿ ಬಡ್ಡಿ ಹೊರೆಯನ್ನು ತಪ್ಪಿಸಬಹುದಾಗಿದ್ದಿತು.

ಕೋವಿಡ್ – 19ರ ಕಾರಣ, ಕರಡು ಪ್ರತಿಗಳು ಮತ್ತು ಮುಕ್ತಾಯಗೊಳಿಸುವಿಕೆ ನಮೂನೆಗಳನ್ನು ಸಮನ್ವಯಗೊಳಿಸುವಲ್ಲಿ ವಿಳಂಬವಾಗಿದ್ದಿತು, ಇದು ದಾಖಲೆಗಳನ್ನು ಸಲ್ಲಿಸುವಲ್ಲಿನ ವಿಳಂಬದಲ್ಲಿ ಪರಿಣಮಿಸಿದ್ದಿತು ಎಂಬುದಾಗಿ ಬೆಸ್ಕಾಂ ಹಾಗೂ ಸೆಸ್ಕ್‌ಗಳು ಉತ್ತರಿಸಿದವು (ಅಕ್ಟೋಬರ್ 2024).

ಕಾಮಗಾರಿಗಳನ್ನು ಮಾರ್ಚ್ ಮತ್ತು ಡಿಸೆಂಬರ್ 2019ರಲ್ಲಿ ಪೂರ್ಣಗೊಳಿಸಲಾಗಿತ್ತು ಬೇಕಿದ್ದಿತು ಎಂಬ ವಾಸ್ತವಾಂಶವನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಬೇಕು ಹಾಗೂ ಕೋವಿಡ್ 19 ಮಾರ್ಚ್ 2020ರಲ್ಲಿ ಸಂಭವಿಸಿದ್ದಿತು. ಅದರಂತೆಯೇ, ಬೆಸ್ಕಾಂ ಮತ್ತು ಸೆಸ್ಕ್‌ಗಳಿಗೆ ಕರಡು ಪ್ರತಿಗಳನ್ನು ಸಮನ್ವಯಗೊಳಿಸಲು ಮತ್ತು ಯೋಜನೆಯು ಪೂರ್ಣಗೊಂಡಿರುವುದರ ಬಗ್ಗೆ ವರದಿಯನ್ನು ಸಲ್ಲಿಸಲು ಸಮರ್ಪಕವಾದಂತಹ ಕಾಲಾವಕಾಶವಿದ್ದಿತು.

ಮೆಸ್ಕಾಂ ಪಿಎಫ್‌ಸಿಯಿಂದ ಯೋಜನೆಯ ಮುಕ್ತಾಯಗೊಳಿಸುವಿಕೆಗಾಗಿನ ನಮೂನೆಗಳನ್ನು ವಿಳಂಬವಾಗಿ ಪಡೆದ ಕಾರಣವನ್ನು ನೀಡಿತು (22 ಡಿಸೆಂಬರ್ 2020ರಲ್ಲಿಯಷ್ಟೇ ಸ್ವೀಕರಿಸಲಾಗಿದ್ದಿತು), ಈ ಕಾರಣದಿಂದ ದಾಖಲೆಗಳನ್ನು 22 ಡಿಸೆಂಬರ್ 2020ರ ನಂತರವೇ ಸಲ್ಲಿಸಲು ಸಾಧ್ಯವಾಗಿದ್ದಿತು.

ಐಪಿಡಿಎಸ್ ಜಾಲತಾಣದಲ್ಲಿ ಯೋಜನೆಯ ಮುಕ್ತಾಯಗೊಳಿಸುವಿಕೆಗೆ ಸಂಬಂಧಿತ ನಮೂನೆಗಳು 29 ಜೂನ್ 2020ಕ್ಕೆ ಮುಂಚಿತವಾಗಿಯೇ ಲಭ್ಯವಿದ್ದವಾದ್ದರಿಂದ ಕರ್ನಾಟಕದ ವಿಸಕಂಗಳಿಗೆ ಭಾರತ ಸರ್ಕಾರದ ಅನುದಾನದ ಕಡೆಯ ಕಂತಿನ ಪಾವತಿಗಾಗಿ ಸಂಸ್ಕರಣೆಯಲ್ಲಿ ತನ್ನ ಕಡೆಯಿಂದ ಯಾವುದೇ

---

[20] ₹ 14.51 ಕೋಟಿ ಮೊತ್ತವನ್ನು 03.04.2021ರಂದು ಬಿಡುಗಡೆಗೊಳಿಸಲಾಗಿದ್ದಿತು ಮತ್ತು ₹ 1.08 ಕೋಟಿ ಮೊತ್ತವನ್ನು 07.06.2021ರಂದು ಬಿಡುಗಡೆಗೊಳಿಸಲಾಗಿದ್ದಿತು.

[21] ₹ 15.59 ಕೋಟಿ ಮೊತ್ತದ ಮೇಲೆ 19 ತಿಂಗಳುಗಳಿಗೆ ಶೇಕಡಾ 9,25ರ ದರದಲ್ಲಿ ಲೆಕ್ಕಹಾಕಲಾಗಿರುವುದು.

[22] ಮೀಟರುಗಳ ಅಳವಡಿಕೆ, ಸೌರ ಪ್ಯಾನೆಲ್ಲುಗಳನ್ನು ಒಳಗೊಂಡಂತೆ ವ್ಯವಸ್ಥೆ ಬಲಪಡಿಸುವಿಕೆ ಕಾಮಗಾರಿಗೆ ಸಂಬಂಧಿತ ಕಾಮಗಾರಿಗಳು.

[23] ಅತ್ಯಂತ ಕಡಿಮೆ ಅವಧಿ 12 ತಿಂಗಳುಗಳಿಗೆ ₹ 19.04 ಕೋಟಿಯ ಮೇಲೆ ಶೇಕಡಾ 9.25ರ ದರದಲ್ಲಿ ಲೆಕ್ಕಹಾಕಲಾಗಿರುವುದು.

[24] ಅತ್ಯಂತ ಕಡಿಮೆ ಅವಧಿ 18 ತಿಂಗಳುಗಳಿಗೆ ₹ 10.14 ಕೋಟಿಯ ಮೇಲೆ ಶೇಕಡಾ 9.25ರ ದರದಲ್ಲಿ ಲೆಕ್ಕಹಾಕಲಾಗಿರುವುದು.

ವಿಳಂಬವು ಆಗಿರುವುದಿಲ್ಲ ಹಾಗೂ 30 ಡಿಸೆಂಬರ್ 2020ರಂದು ನಡೆದ ಡಿಆರ್‌ಸಿ ಸಭೆಯ ನಂತರ, ಕರ್ನಾಟಕದ ವಿಸಕಂಗಳು ಐಪಿಡಿಎಸ್ ಎಸ್‌ಟಿ ಅಂಡ್ ಡಿ ಯೋಜನೆಗಳ ಮುಕ್ತಾಯಗೊಳಿಸುವಿಕೆಗಾಗಿ ಡಿಆರ್‌ಸಿ ಶಿಫಾರಸನ್ನು ಮಾತ್ರ ಒದಗಿಸಬಹುದಾಗಿದ್ದಿತು ಎಂಬುದಾಗಿ ತಿಳಿಸಿತು.

### *2.7 ಬಿಟ್ಟುಕೊಡಲಾಗಿದ್ದ ಹೆಚ್ಚುವರಿ ಅನುದಾನ*

ಯೋಜನೆಯ ಮಾರ್ಗಸೂಚಿಗಳ[25] ಅನುಸಾರ ವಿಸಕಂಗಳು ಈ ಕೆಳಗಿನ ಮೂರು ಷರತ್ತುಗಳನ್ನು ಪೂರೈಸಿರುವುದರ ಷರತ್ತುಗಳಿಗೆ ಒಳಪಟ್ಟಂತೆ ಸಾಲದ ಭಾಗದ ಶೇಕಡಾ 50ರಷ್ಟು ಮೊತ್ತದ ಹೆಚ್ಚುವರಿ ಅನುದಾನಕ್ಕೆ (ಅಂದರೆ ಯೋಜನಾ ವೆಚ್ಚದ ಶೇಕಡಾ 15ರಷ್ಟು) ಅರ್ಹತೆಯನ್ನು ಹೊಂದಿದ್ದವು, ಅವುಗಳೆಂದರೆ;

(ಎ) ಯೋಜನೆಯನ್ನು ಅನುಮೋದಿತ ನಿರ್ದಿಷ್ಟ ಕಾಲಮಿತಿಯೊಳಗೆ ಪೂರ್ಣಗೊಳಿಸಿರುವುದು;

(ಬಿ) ಇಂಧನ ಮಂತ್ರಾಲಯವು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸುವುದರೊಂದಿಗೆ (ವಿಸಕಂವಾರು) ಅಂತಿಮರೂಪಕ್ಕೆ ತಂದಿರುವಂತಹ ವಿಕ್ಷೇಪಪಥ (ಟ್ರಜೆಕ್ಟರಿ)[26] ಅನುಸಾರ ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟಗಳನ್ನು ತಗ್ಗಿಸಿರುವುದು.

(ಸಿ) ಮೀಟರುಗಳ ಅನುಸಾರ ಬಳಸಲಾಗಿರುವ ವಿದ್ಯುತ್ತಿನ ಆಧಾರದ ಮೇರೆಗೆ ರಾಜ್ಯ ಸರ್ಕಾರದಿಂದ ಅರ್ಹತೆಯಿರುವಂತಹ ವರಮಾನ ಸಹಾಯಧನದ ಮುಂಗಡ ಪಾವತಿಯು ಬಿಡುಗಡೆಗೊಂಡಿರುವುದು.

ಮೇಲಿನ ಷರತ್ತುಗಳ ಪೂರೈಕೆಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- ಕೇವಲ ಬೆಸ್ಕಾಂ, ಪಿಎಫ್‌ಸಿ ನಿಗದಿಪಡಿಸಿದ್ದಂತಹ ಕಾಲಮಿತಿಗಳ ಅನುಸಾರ ವ್ಯವಸ್ಥೆ ಬಲಪಡಿಸುವಿಕೆ ಭಾಗವನ್ನು 31 ಮಾರ್ಚ್ 2019ರಂದು ಪೂರ್ಣಗೊಳಿಸಿರುವುದಾಗಿ ಘೋಷಿಸಿದ್ದಿತು (***ಅನುಬಂಧ–3***)

  ಸೆಸ್ಕ್, ಜೆಸ್ಕಾಂ, ಹೆಸ್ಕಾಂ ಮತ್ತು ಮೆಸ್ಕಾಂ ಇವುಗಳು ವ್ಯವಸ್ಥೆ ಬಲಪಡಿಸುವಿಕೆ ಕಾಮಗಾರಿಯನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗಿರಲಿಲ್ಲ ಹಾಗೂ ಅದನ್ನು ವಿಸ್ತರಿಸಲಾಗಿದ್ದ ಅವಧಿಯ ಒಳಗೆ ಪೂರ್ಣಗೊಳಿಸಿದ್ದವು ಮೆಸ್ಕಾಂ ಕಾಲಾವಧಿ ವಿಸ್ತರಣೆಯನ್ನು ತೆಗೆದುಕೊಂಡಿತು ಹಾಗೂ ಕಾಮಗಾರಿಯನ್ನು ಕೇವಲ ಜೂನ್ 2019ರಲ್ಲಿ ಪೂರ್ಣಗೊಳಿಸಲು ಅದಕ್ಕೆ ಸಾಧ್ಯವಾಗಿದ್ದಿತಾದಲ್ಲಿ ಸೆಸ್ಕ್, ಜೆಸ್ಕಾಂ ಮತ್ತು ಹೆಸ್ಕಾಂ ಇವುಗಳು ಇನ್ನೂ ಹೆಚ್ಚಿನ ಕಾಲಾವಧಿ ವಿಸ್ತರಣೆಯನ್ನು ತೆಗೆದುಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸಿದ್ದವು (***ಅನುಬಂಧ–3***).

- ಒಪ್ಪಿಕೊಳ್ಳಲಾಗಿದ್ದಂತಹ ವಿಕ್ಷೇಪಪಥ (ಟ್ರಜೆಕ್ಟರಿ) ಅನುಸಾರ ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟಗಳ ತಗ್ಗಿಸುವಿಕೆಯನ್ನು ವಿಸಕಂಗಳು ಸಾಧಿಸಲಾಗಿರಲಿಲ್ಲ. 2016–17ರಿಂದ 2020–21ರ ಅವಧಿಯಲ್ಲಿ, ಬೆಸ್ಕಾಂ ಮತ್ತು ಸೆಸ್ಕ್ 2017–18ರಲ್ಲಿ ಮಾತ್ರ, ಜೆಸ್ಕಾಂ 2016–18ರಲ್ಲಿ ಮತ್ತು 2019–21ರಲ್ಲಿ ಮತ್ತು ಹೆಸ್ಕಾಂ 2019–21ರಲ್ಲಿ ಸಾಧಿಸಿದ್ದವು. ಮೆಸ್ಕಾಂ ಯಾವುದೇ ಸಾಲಿನಲ್ಲಿಯೂ ಗುರಿಗಳನ್ನು ಸಾಧಿಸಿರಲಿಲ್ಲ. ವಿಸಕಂಗಳ ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟಗಳ ಒಂದು ವಿಶ್ಲೇಷಣೆಯನ್ನು ***ಕಂಡಿಕೆ 2.7.1*** ರಲ್ಲಿ ಮಾಡಲಾಗಿರುವುದು.

---

[25] ಅಧ್ಯಾಯ IV – ಹಣಕಾಸು ವಿತರಣಾ ಮಾರ್ಗಸೂಚಿಗಳು, ಕಂಡಿಕೆ 14.1.

[26] ಇಂಧನ ಮಂತ್ರಾಲಯದ ಸೂತ್ರದ ಅನುಸಾರ ರಾಜ್ಯ ವಿದ್ಯುತ್ ಉಪಯುಕ್ತತಾ ಸಂಸ್ಥೆಗಳ ಕಾರ್ಯನಿರ್ವಹಣೆಯ ಮೇಲಿನ ವರದಿಯಲ್ಲಿ ಇಂಧನ ಹಣಕಾಸು ನಿಗಮದಿಂದ (ಪಿಎಫ್‌ಸಿ) ನಿರ್ಧಾರಣೆ ಮಾಡಲ್ಪಟ್ಟಿರುವಂತಹ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟಗಳು, ಈ ಷರತ್ತಿನ ಅನುಸರಣೆಯನ್ನು ಪರಿಶೀಲಿಸುವ ಸಲುವಾಗಿ ಮೂಲ ಮಾಹಿತಿಯಾಗಿರತಕ್ಕದ್ದು.

- ಕರ್ನಾಟಕ ಸರ್ಕಾರವು ವರಮಾನ ಸಹಾಯಧನದ ಪಾವತಿಯನ್ನು ನೀರಾವರಿ ಪಂಪು ಸೆಟ್ಟುಗಳಿಗೆ ಮೀಟರು ಅಳವಡಿಕೆಯನ್ನು ಸಂಪೂರ್ಣವಾಗಿ ಮಾಡಿರಲಿಲ್ಲವಾದ್ದರಿಂದ ಮೀಟರುಗಳ ಅನುಸಾರದ ಬಳಕೆಗೆ ಬದಲಾಗಿ ನಿರ್ಧಾರಣೆಯ ಆಧಾರದ ಮೇರೆಗೆ ಮಾಡಿದ್ದಿತಾದ್ದರಿಂದ, ವಿಸಕಂಗಳು ಮೂರನೆಯ ಷರತ್ತನ್ನು ಯಾವುದೇ ಸಾಲಿನಲ್ಲಿಯು ಪೂರೈಸಲಾಗಿರಲಿಲ್ಲ.

ಯಾವುದೇ ವಿಸಕಂಗಳೂ ಯೋಜನೆಯ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದ್ದ ಷರತ್ತುಗಳನ್ನು ಪೂರೈಸಿರಲಿಲ್ಲವಾದ್ದರಿಂದ, ಅವುಗಳು ₹ 205.74[27] ಕೋಟಿ ಮೊತ್ತದಷ್ಟು ಹೆಚ್ಚುವರಿ ಅನುದಾನವನ್ನು ಸ್ವೀಕರಿಸಿರಲಿಲ್ಲ.

ನೀರಾವರಿ ಪಂಪುಸೆಟ್ಟುಗಳಿಗಾಗಿ ವರಮಾನ ಸಹಾಯಧನಕ್ಕಾಗಿ ಫೀಡರು ಮಟ್ಟದಲ್ಲಿ ಮೀಟರು ಅಳವಡಿಕೆ ಮಾಡಲಾಗಿರುವುದೇ ಹೊರತು ಗ್ರಾಹಕರುಗಳಿಂದ ವಿರೋಧದ ಕಾರಣ ಅವರುಗಳ ಮಟ್ಟದಲ್ಲಿ ಮಾಡಿರುವುದಿಲ್ಲ ಎಂಬುದಾಗಿ ವಿಸಕಂಗಳು ಉತ್ತರಿಸಿದವು (ಅಕ್ಟೋಬರ್ 2024). ವಿಸ್ತರಿಸಲ್ಪಟ್ಟಿದ್ದಂತಹ ಕಾಲಾವಧಿಯ ಒಳಗೆ ಕಾಮಗಾರಿಗಳು ಪೂರ್ಣಗೊಂಡಿದ್ದವು ಎಂಬುದಾಗಿ ಸೆಸ್ಕ್, ಜೆಸ್ಕಾಂ, ಹೆಸ್ಕಾಂ ಮತ್ತು ಮೆಸ್ಕಾಂ ತಿಳಿಸಿದವು. ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟಗಳಿಗೆ ಸಂಬಂಧಿಸಿದಂತೆ ನಿಗದಿತ ವಿಕ್ಷೇಪಪಥವನ್ನು (ಟ್ರಜೆಕ್ಟರಿ) ಸಾಧಿಸಿರುವುದಾಗಿ ಹೆಸ್ಕಾಂ ಮತ್ತು ಜೆಸ್ಕಾಂಗಳು ತಿಳಿಸಿದವು.

### *2.7.1 ಎಟಿ ಅಂಡ್ ಸಿ ನಷ್ಟಗಳು*

ಯೋಜನಾ ದಾಖಲೆಗಳ ಅನುಸಾರ, ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟಗಳನ್ನು ವಿದ್ಯುತ್ತಿನ ಒಳಹರಿವು ಮತ್ತು ನಿವ್ವಳ ಇಂಧನ ಒಳಹರಿವಿಗೆ ಪಡೆದುಕೊಳ್ಳಲಾದ ವಿದ್ಯುತ್ ಇವುಗಳ ನಡುವಿನ ವ್ಯತ್ಯಾಸದ ಶೇಕಡಾವಾರಿನಂತೆ ವಿವರಿಸಲಾಗಿದ್ದಿತು. ಪಡೆದುಕೊಳ್ಳಲಾದ ವಿದ್ಯುತ್ತು, ವಿದ್ಯುತ್ತಿನ ನಿವ್ವಳ ಮಾರಾಟ ಮತ್ತು ಸಂಗ್ರಹಣಾ ದಕ್ಷತೆಯ ಪ್ರತಿಫಲವಾಗಿರುತ್ತದೆ. ಸಂಗ್ರಹಣಾ ದಕ್ಷತೆಯು ವಿದ್ಯುತ್ ಮಾರಾಟದಿಂದ ಬರುವ ನಿವ್ವಳ ಆದಾಯದ ಶೇಕಡಾವಾರು ಆಗಿದ್ದು, ವಿದ್ಯುತ್ ಮಾರಾಟಕ್ಕಾಗಿ ಸಾಲಗಾರರ (ಡೆಟಾರ್ಸ್) ಬದಲಾವಣೆಗೆ ಅನುಗುಣವಾಗಿ ವಿದ್ಯುತ್ ಮಾರಾಟದಿಂದ ಬರುವ ನಿವ್ವಳ ಆದಾಯಕ್ಕೆ ಹೊಂದಿಸಲಾಗುತ್ತದೆ.

ಎಟಿ ಅಂಡ್ ಸಿ ನಷ್ಟವು ನಿವ್ವಳ ವಿದ್ಯುತ್ತಿನ ಒಳಹರಿವಿಗೆ ಪಡೆದುಕೊಳ್ಳದಿರುವಂಥ ವಿದ್ಯುತ್ತಿನ ಶೇಕಡಾವಾರು ಆಗಿರುತ್ತದೆ (ನಿವ್ವಳ ವಿದ್ಯುತ್ ಒಳಹರಿವಿನಿಂದ ಪಡೆದುಕೊಳ್ಳಲಾದ ವಿದ್ಯುತ್ತನ್ನು ಕಳೆದಿರುವುದು). ಇದು ಗ್ರಾಹಕರುಗಳಿಗೆ ವಿದ್ಯುತ್ ಬಳಕೆಗಾಗಿ ನೀಡಲಾದ ಬಿಲ್ಲುಗಳ ಪರಿಮಾಣವನ್ನು (ಬಿಲ್ಲುಗಳನ್ನು ನೀಡುವಲ್ಲಿನ ದಕ್ಷತೆ) ಹಾಗೂ ವರಮಾನ ಸಂಗ್ರಹಣೆಯ ದಕ್ಷತೆಯನ್ನು (ಸಂಗ್ರಹಣಾ ದಕ್ಷತೆ) ಅವಲಂಭಿಸಿರುತ್ತದೆ.

ಯೋಜನೆಯ ಅನುಸಾರ ಒಟ್ಟಾರೆ ಎಟಿ ಅಂಡ್ ಸಿ ನಷ್ಟಗಳ ವಿಕ್ಷೇಪಪಥ (ಟ್ರಜೆಕ್ಟರಿ) ಹಾಗೂ ವಿಸಕಂಗಳಿಂದ ಅವುಗಳ ಸಾಧನೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿರುವುದು.

**ಕೋಷ್ಟಕ ಸಂಖ್ಯೆ 2.5: ನಿಗದಿಪಡಿಸಲಾಗಿದ್ದಂತಹ ಒಟ್ಟಾರೆ ಎಟಿ ಅಂಡ್ ಸಿ ನಷ್ಟಗಳ ವಿಕ್ಷೇಪಪಥ (ಟ್ರಜೆಕ್ಟರಿ) ಹಾಗೂ ವಿಸಕಂಗಳಿಂದ ಅವುಗಳ ಸಾಧನೆ**

| ಕ್ರಮ ಸಂಖ್ಯೆ | ವರ್ಷ | ವಿಸಕಂ : | ಬೆಸ್ಕಾಂ | ಸೆಸ್ಕ್ | ಜೆಸ್ಕಾಂ | ಹೆಸ್ಕಾಂ | ಮೆಸ್ಕಾಂ |
|---|---|---|---|---|---|---|---|
| 1 | 2016-17 | ಇಂಧನ ಮಂತ್ರಾಲಯವು ಐಪಿಡಿಎಸ್‌ಗಾಗಿ ನಿಗದಿಪಡಿಸಿದ್ದ ವಿಕ್ಷೇಪಪಥದ (ಟ್ರಜೆಕ್ಟರಿ) ಅನುಸಾರ | 14.23 | 14.92 | 23.92 | 18.99 | 12.08 |
| | | ಕಂಪನಿಯು ವರದಿ ಮಾಡಿರುವ ಎಟಿ ಅಂಡ್ ಸಿ ನಷ್ಟ | 14.81 | 20.41 | 17.33 | 18.35 | 12.11 |
| 2 | 2017-18 | ಇಂಧನ ಮಂತ್ರಾಲಯವು ಐಪಿಡಿಎಸ್‌ಗಾಗಿ ನಿಗದಿಪಡಿಸಿದ್ದ ವಿಕ್ಷೇಪಪಥದ (ಟ್ರಜೆಕ್ಟರಿ) ಅನುಸಾರ | 13.37 | 14.27 | 23.41 | 18.56 | 11.65 |
| | | ಕಂಪನಿಯು ವರದಿ ಮಾಡಿರುವ ಎಟಿ ಅಂಡ್ ಸಿ ನಷ್ಟ | 10.28 | 9.02 | 16.39 | 22.84 | 13.36 |
| 3 | 2018-19 | ಇಂಧನ ಮಂತ್ರಾಲಯವು ಐಪಿಡಿಎಸ್‌ಗಾಗಿ ನಿಗದಿಪಡಿಸಿದ್ದ ವಿಕ್ಷೇಪಪಥದ (ಟ್ರಜೆಕ್ಟರಿ) ಅನುಸಾರ | 12.72 | 13.59 | 22.84 | 17.96 | 11.28 |

[27] ₹ 1,371.57 ಕೋಟಿ (ಪಿಎಂಎ ಹೊರತುಪಡಿಸಿ ಅನುಮೋದಿಸಲಾಗಿದ್ದಂತಹ ಒಟ್ಟಾರೆ ವೆಚ್ಚ) × ಶೇಕಡಾ 15).

| ಕ್ರಮ ಸಂಖ್ಯೆ | ವರ್ಷ | ವಿಸಕಂ : | ಬೆಸ್ಕಾಂ | ಸೆಸ್ಕ್ | ಜೆಸ್ಕಾಂ | ಹೆಸ್ಕಾಂ | ಮೆಸ್ಕಾಂ |
|---|---|---|---|---|---|---|---|
| | | ಕಂಪನಿಯು ವರದಿ ಮಾಡಿರುವ ಎಟಿ ಅಂಡ್ ಸಿ ನಷ್ಟ | 15.92 | 18.72 | 28.41 | 24.88 | 11.91 |
| 4 | 2019-20 | ಇಂಧನ ಮಂತ್ರಾಲಯವು ಐಪಿಡಿಎಸ್‌ಗಾಗಿ ನಿಗದಿಪಡಿಸಿದ್ದ ವಿಕ್ಷೇಪಪಥದ (ಟ್ರಜೆಕ್ಟರಿ) ಅನುಸಾರ | 11.87 | 12.99 | 22.44 | 17.43 | 10.79 |
| | | ಕಂಪನಿಯು ವರದಿ ಮಾಡಿರುವ ಎಟಿ ಅಂಡ್ ಸಿ ನಷ್ಟ | 17.62 | 21.45 | 21.29 | 14.64 | 14.85 |
| 5 | 2020-21 | ಇಂಧನ ಮಂತ್ರಾಲಯವು ಐಪಿಡಿಎಸ್‌ಗಾಗಿ ನಿಗದಿಪಡಿಸಿದ್ದ ವಿಕ್ಷೇಪಪಥದ (ಟ್ರಜೆಕ್ಟರಿ) ಅನುಸಾರ | 11.51 | 12.51 | 21.72 | 17.00 | 9.92 |
| | | ಕಂಪನಿಯು ವರದಿ ಮಾಡಿರುವ ಎಟಿ ಅಂಡ್ ಸಿ ನಷ್ಟ | 13.70 | 20.05 | 20.22 | 14.16 | 11.71 |

***ಮೂಲ: ವಿಸಕಂಗಳು ಒದಗಿಸಿರುವ ಮಾಹಿತಿಯಂತೆ***

ವೈಯಕ್ತಿಕ ವಿಸಕಂ–ನಿರ್ದಿಷ್ಟ ಗುರಿಗಳನ್ನು ಎಲ್ಲಾ ವರ್ಷಗಳಲ್ಲಿಯೂ ಸಾಧಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಒಟ್ಟಾರೆ ಎಟಿ ಅಂಡ್ ಸಿ ನಷ್ಟಗಳು ಒಂದು ವ್ಯತ್ಯಗೊಳ್ಳುವಂತಹ ಮಾದರಿಯನ್ನು ತೋರಿಸುತ್ತಿದ್ದವು.

ಲೆಕ್ಕಪರಿಶೋಧನೆಯು ವಿಸಕಂಗಳ ಯೋಜನಾ ಅವಧಿಯಲ್ಲಿನ ಒಟ್ಟಾರೆ ಎಟಿ ಅಂಡ್ ಸಿ ನಷ್ಟಗಳನ್ನು ವಿಶ್ಲೇಷಿಸಿತು ಹಾಗೂ ವಿಸಕಂಗಳ ಪಾವತಿಗಾಗಿ ಬಿಲ್ಲುಗಳನ್ನು ನೀಡುವಿಕೆಯ ದಕ್ಷತೆಯು (ವಿದ್ಯುತ್ತಿನ ನಿವ್ವಳ ಒಳಹರಿವಿಗೆ ಹೋಲಿಸಿದಂತೆ ಮಾರಾಟ ಮಾಡಲಾದ ನಿವ್ವಳ ವಿದ್ಯುತ್ ಮಾರಾಟ, ಇವುಗಳ ಅನುಪಾತ) ಯೋಜನೆಯ ಅವಧಿಯಲ್ಲಿ ಸಾಮಾನ್ಯವಾಗಿ ಸುಧಾರಣೆ ಕಂಡಿರುವುದು, (ಅಂದರೆ ಬಿಲ್ಲು ಮಾಡದೇ ಇರುವ ವಿದ್ಯುತ್ತಿನ ಒಳಹರಿವು ತಗ್ಗುತ್ತಿರುವುದು) ಇದು ಬಿಲ್ಲುಗಳನ್ನು ನೀಡುವಿಕೆಯಲ್ಲಿನ ನಷ್ಟಗಳನ್ನು ತಗ್ಗಿಸುವತ್ತ ಕಾಣಿಕೆಯನ್ನು ನೀಡಿರುವುದು. ಎಂಬುದನ್ನು ಗಮನಿಸಲಾಯಿತು. ಐದು ವಿಸಕಂಗಳಿಗೆ ಬಿಲ್ಲುಗಳನ್ನು ನೀಡುವಿಕೆಗೆ ಸಂಬಂಧಿತ ನಷ್ಟಗಳ ಶೇಕಡಾವಾರನ್ನು ರೇಖಾಚಿತ್ರ 2.2ರಲ್ಲಿ ತೋರಿಸಲಾಗಿರುವುದು.

**ರೇಖಾಚಿತ್ರ 2.2: ಐಪಿಡಿಎಸ್ ಅವಧಿಯಲ್ಲಿ ಐದು ವಿಸಕಂಗಳಿಗೆ ಬಿಲ್ಲುಗಳನ್ನು ನೀಡುವಿಕೆಗೆ ಸಂಬಂಧಿತ ನಷ್ಟಗಳ ವಿವರಗಳು**




** ಮೆಸ್ಕಾಂಗೆ ಸಂಬಂಧಿಸಿದಂತೆ 2015–16 ಮತ್ತು 2016–17 ಸಾಲುಗಳಿಗೆ ಬಿಲ್ಲುಗಳನ್ನು ನೀಡಿರುವಿಕೆಗೆ ಸಂಬಂಧಿತ ಮಾಹಿತಿ ಲಭ್ಯವಿರಲಿಲ್ಲ.*

ಬಿಲ್ಲುಗಳನ್ನು ನೀಡಿರುವಿಕೆಗೆ ಸಂಬಂಧಿಸಿದಂತೆ ನಷ್ಟಗಳು ಇಳಿಮುಖ ಪ್ರವೃತ್ತಿಯಲ್ಲಿ ಇದ್ದವಾದರೂ, ಒಟ್ಟಾರೆ ಎಟಿ ಅಂಡ್ ಸಿ ನಷ್ಟಗಳು ಏರಿಳಿಕೆ ಪ್ರವೃತ್ತಿಯಲ್ಲಿದ್ದವು ಹಾಗೂ ರೇಖಾಚಿತ್ರ 2.3ರಲ್ಲಿ ತೋರಿಸಿರುವಂತೆ ಸಂಗ್ರಹಣಾ ದಕ್ಷತೆಯು ಏರಿಳಿಕೆ ಪ್ರವೃತ್ತಿಯಿಂದ ಕೂಡಿದ್ದಿತಾದ್ದರಿಂದ ಒಂದು ಅವಿರತವಾದಂತಹ ಇಳಿಕೆ ಪ್ರವೃತ್ತಿಯನ್ನು ತೋರಿಸುತ್ತಿರಲಿಲ್ಲ. ಸಂಗ್ರಹಣಾ ದಕ್ಷತೆಯಲ್ಲಿನ ಈ ಏರಿಳಿಕೆಯು ಪ್ರಮುಖವಾಗಿ ಕರ್ನಾಟಕ ಸರ್ಕಾರದಿಂದ ಸಹಾಯಧನ ಬಿಡುಗಡೆಯಲ್ಲಿನ ವಿಳಂಬದಿಂದ ಪ್ರಭಾವವನ್ನು ಹೊಂದಿದ್ದಿತು.

**ರೇಖಾಚಿತ್ರ 2.3: ಐಪಿಡಿಎಸ್ ಅವಧಿಯಲ್ಲಿ ಐದು ವಿಸಕಂಗಳ ಸಂಗ್ರಹಣಾ ದಕ್ಷತೆಯ ವಿವರಗಳು**




| | 2015–16 | 2016–17 | 2017–18 | 2018–19 | 2019–20 | 2020–21 |
|---|---|---|---|---|---|---|
| ಬೆಸ್ಕಾಂ | 98.82% | 98.14% | 103.33% | 95.84% | 93.71% | 97.76% |
| ಸೆಸ್ಕ್ | 97.00% | 91.59% | 104.81% | 92.41% | 88.38% | 91.63% |
| ಜೆಸ್ಕಾಂ | 96.60% | 106.16% | 120.96% | 83.65% | 88.65% | 90.37% |
| ಹೆಸ್ಕಾಂ | 87.16% | 96.69% | 90.53% | 87.90% | 99.45% | 98.95% |
| ಮೆಸ್ಕಾಂ | | | 97.69% | 91.17% | 94.69% | 97.95% |

* *ಮೆಸ್ಕಾಂಗೆ ಸಂಬಂಧಿಸಿದಂತೆ 2015-16 ಮತ್ತು 2016-17 ಸಾಲುಗಳಿಗೆ ಬಿಲ್ಲುಗಳನ್ನು ನೀಡಿರುವಿಕೆಗೆ ಸಂಬಂಧಿತ ಮಾಹಿತಿ ಲಭ್ಯವಿರಲಿಲ್ಲ.*

ಹೆಚ್ಚುಕಡಿಮೆ ಎಲ್ಲಾ ವಿಸಕಂಗಳು ಐದು ವರ್ಷಗಳ ಅವಧಿಯ ಅಂತ್ಯದ ವೇಳೆಗೆ ಗುರಿಯಾಗಿಸಿಕೊಳ್ಳಲಾಗಿದ್ದಂತಹ ಒಟ್ಟಾರೆ ಎಟಿ ಅಂಡ್ ಸಿ ನಷ್ಟಗಳನ್ನು ಸಾಧಿಸಿರುತ್ತವೆ ಎಂಬುದಾಗಿ ಬೆಸ್ಕಾಂ ನಿರ್ಗಮನಮಟ್ಟದ ಸಭೆಯಲ್ಲಿ ತಿಳಿಸಿತು. ಕಂಪನಿಗಳ ಪ್ರಕಟಿತ ಮಾಹಿತಿಯ ಅನುಸಾರ ಯಾವುದೇ ಕಂಪನಿಗಳಲ್ಲಿ ವರ್ಷಗಳಾದ್ಯಂತ ಒಟ್ಟಾರೆ ಎಟಿ ಅಂಡ್ ಸಿ ನಷ್ಟಗಳ ಇಳಿಕೆಯು ಏಕಪ್ರಕಾರವಾಗಿ ಇರದಿದ್ದುದು ಹಾಗೂ ಒಟ್ಟಾರೆ ಎಟಿ ಅಂಡ್ ಸಿ ನಷ್ಟಗಳು ಕೋಷ್ಟಕ ಸಂಖ್ಯೆ 2.5ರಲ್ಲಿ ತೋರಿಸಿರುವಂತೆ ಹೆಚ್ಚುಕಡಿಮೆ ಎಲ್ಲಾ ವರ್ಷಗಳಲ್ಲಿಯೂ ಗುರಿಗಳಿಗಿಂತ ಅಧಿಕವಾಗಿದ್ದುದನ್ನು ಗಮನದಲ್ಲಿಟ್ಟುಕೊಂಡು ಈ ಹೇಳಿಕೆಯನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿರುತ್ತದೆ.

**ಶಿಫಾರಸು:**

1. **ಕರ್ನಾಟಕ ಸರ್ಕಾರವು ಐಪಿಡಿಎಸ್‌ಗಾಗಿ ಇಂಧನ ಮಂತ್ರಾಲಯವು ನಿಗದಿಪಡಿಸಿರುವಂತಹ ವಿಕ್ಷೇಪಪಥದ (ಟ್ರಜೆಕ್ಟರಿ) ಅನುಸಾರ ವಿಸಕಂಗಳು ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ ನಷ್ಟಗಳನ್ನು ತಗ್ಗಿಸುವುದನ್ನು ಖಚಿತಪಡಿಸಿಕೊಳ್ಳಬೇಕು. ಮೀಟರ್ ಬಳಕೆಯ ಪ್ರಕಾರ ನೀರಾವರಿ ಪಂಪ್ ಸೆಟ್‌ಗಳಿಗೆ ಸಹಾಯಧನವನ್ನು ಸಕಾಲಿಕವಾಗಿ ಬಿಡುಗಡೆ ಮಾಡುವುದನ್ನು ಸಹ ಅದು ಖಚಿತಪಡಿಸಿಕೊಳ್ಳಬೇಕು.**

## 2.8 ವಿತ್ತೀಯ ವಿವೇಚನೆಗೆ ಸಂಬಂಧಿತ ಅಂಶಗಳು

### *2.8.1 ಸಾಮಗ್ರಿಗಳ ಖರೀದಿಯ ಮೇಲೆ ಭರಿಸಲಾದ ಹೆಚ್ಚುವರಿ ವೆಚ್ಚ*

ಐಪಿಡಿಎಸ್ ಅಡಿಯಲ್ಲಿ ಗುಣಮಟ್ಟದ ಉಪಕರಣ/ ಸಾಮಗ್ರಿಗಳನ್ನು ಸ್ಪರ್ಧಾತ್ಮಕ ದರಗಳಲ್ಲಿ ಖರೀದಿಸುವಲ್ಲಿ ರಾಜ್ಯಗಳಿಗೆ ಅನುಕೂಲ ಕಲ್ಪಿಸುವ ಸಲುವಾಗಿ, ಇಂಧನ ಮಂತ್ರಾಲಯವು ಟ್ರಾನ್ಸ್‌ಫಾರ್ಮರುಗಳು, ಕಂಡಕ್ಟರ್‌ಗಳು, ಎಬಿ ಕೇಬಲ್ಲುಗಳು ಮತ್ತು ಯುಜಿ ಕೇಬಲ್ಲುಗಳು, ಇವೇ ಮುಂತಾದ ವಿವಿಧ ವಸ್ತುಗಳಿಗೆ ಕೇಂದ್ರೀಯವಾಗಿ ಕೇಂದ್ರ ಖರೀದಿ ದರಗಳಲ್ಲಿ (ಸಿಪಿಪಿ) ಖರೀದಿಸುವ ಉದ್ದೇಶದಿಂದ ತಾಂತ್ರಿಕವಾಗಿ ನಿರ್ದಿಷ್ಟನಿರೂಪಣೆಗಳನ್ನು ಮತ್ತು ದರಗಳನ್ನು ಅಂತಿಮ ರೂಪಕ್ಕೆ ತರುವ ಸಲುವಾಗಿ ಒಂದು ಸಮಿತಿಯನ್ನು ರಚಿಸಲು ತೀರ್ಮಾನಿಸಿತು (ಆಗಸ್ಟ್ 2015). ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯಕ್ಕಾಗಿ ಕಂಡುಕೊಳ್ಳಲಾದಂತಹ ದರಗಳು ಮತ್ತು ಮಾರಾಟಗಾರರುಗಳನ್ನು ಏಪ್ರಿಲ್ 2016ರಲ್ಲಿ ತಿಳಿಸಲಾಗಿದ್ದಿತು. ಸಾಮಗ್ರಿಗಳ ಸಂಗ್ರಹಣೆಗಾಗಿ ಹೊಸ ಪ್ರಯತ್ನಗಳ ಅಡಿಯಲ್ಲಿ ಕಂಡುಕೊಳ್ಳಲಾದಂತಹ ದರಗಳಿಗೆ

ಸಂಬಂಧಿಸಿದಂತೆ ವಿಷಯವನ್ನು ಇಂಧನ ಮಂತ್ರಾಲಯವು ಸಮೀಕ್ಷಿಸಿತು (29 ಜೂನ್ 2016) ಹಾಗೂ ಕೇಂದ್ರ ಖರೀದಿ ದರಗಳಿಗಿಂತ ತಮ್ಮ ದರಗಳು ಕಡಿಮೆಯಾಗಿದ್ದಲ್ಲಿ ನಿರ್ದಿಷ್ಟಪಡಿಸಲಾಗಿರುವ ತಾಂತ್ರಿಕ ನಿರ್ದಿಷ್ಟ ನಿರೂಪಣೆಗಳನ್ನು ತಕ್ಕುದಾದ ರೀತಿಯಲ್ಲಿ ಖಚಿತಪಡಿಸಿಕೊಂಡನಂತರ ತಮ್ಮ ಸ್ವಂತ ಸಾಮಗ್ರಿಗಳನ್ನು ಖರೀದಿಸಲು ರಾಜ್ಯಗಳು ಸ್ವತಂತ್ರವಾಗಿರುತ್ತವೆ ಎಂಬುದಾಗಿ ತೀರ್ಮಾನಿಸಿತು.

ಕರ್ನಾಟಕ ಸರ್ಕಾರವು ಎಲ್ಲಾ ವಿಸಕಂಗಳಿಗೂ ಕೇಂದ್ರೀಯವಾಗಿ ಅಧಿಕ ಮೌಲ್ಯದ ಸಾಮಗ್ರಿಗಳನ್ನು ಖರೀದಿಸಲು ನಿರ್ದೇಶಿಸಿತು (ಆಗಸ್ಟ್ 2016). ಆದಾಗ್ಯೂ, ವಿಸಕಂಗಳು ಐಪಿಡಿಎಸ್ ಅಡಿಯಲ್ಲಿ ವ್ಯವಸ್ಥೆ ಬಲಪಡಿಸುವಿಕೆ ಕಾಮಗಾರಿಗಳನ್ನು ಸಂಪೂರ್ಣ ಟರ್ನ್‌ಕೀ ಆಧಾರದ ಮೇರೆಗೆ ಕೈಗೆತ್ತಿಕೊಂಡವು. ಈ ಕೆಳಗಿನ ಕೋಷ್ಟಕವು ಐಪಿಡಿಎಸ್ ಕಾಮಗಾರಿಗಳಿಗಾಗಿ ವ್ಯವಸ್ಥೆ ಬಲಪಡಿಸುವಿಕೆ ಕಾಮಗಾರಿಯಲ್ಲಿ ಉಪಯೋಗಿಸಲಾದಂತಹ ಅಧಿಕ ಮೌಲ್ಯದ ಸಾಮಗ್ರಿಗಳ ಅಂದರೆ ವಿತರಣಾ ಟ್ರಾನ್ಸ್‌ಫಾರ್ಮರುಗಳು ಮತ್ತು ಕಂಡಕ್ಟರುಗಳು ಹಾಗೂ ವಿಸಕಂಗಳು ಭರಿಸಿದ ವೆಚ್ಚಗಳ ವಿವರಗಳನ್ನು ಸೂಚಿಸುತ್ತದೆ:

**ಕೋಷ್ಟಕ ಸಂಖ್ಯೆ 2.6: ಟರ್ನ್‌ಕೀ ಅಡಿಯಲ್ಲಿ ಅಧಿಕ ಮೌಲ್ಯದ ಸಾಮಗ್ರಿಗಳ ಖರೀದಿಯ ಕಾರಣ ಭರಿಸಲಾಗಿದ್ದಂತಹ ಹೆಚ್ಚುವರಿ ವೆಚ್ಚ**

**(ಕೋಟಿ ರೂಪಾಯಿಗಳಲ್ಲಿ)**

| ಕ್ರಮ ಸಂಖ್ಯೆ | ವಿಸಕಂ | ಉಪಯೋಗಿಸಲಾಗಿದ್ದ ಸಾಮಗ್ರಿಗಳು | ಕೇಂದ್ರ ಖರೀದಿ ದರಗಳ ಅನುಸಾರ ಒಟ್ಟು ಮೌಲ್ಯ | ಟರ್ನ್‌ಕೀ ಅಡಿಯಲ್ಲಿ ವಾಸ್ತವಿಕ ಖರೀದಿ ಮೌಲ್ಯ | ಭರಿಸಲಾಗಿದ್ದ ಹೆಚ್ಚುವರಿ ವೆಚ್ಚ |
|---|---|---|---|---|---|
| 1 | ಬೆಸ್ಕಾಂ | 25, 63, 100, 250 ಕೆವಿಎ ಟ್ರಾನ್ಸ್‌ಫಾರ್ಮರುಗಳು, ಎಸಿಎಸ್‌ಆರ್ ವೀಸೆಲ್ ಮತ್ತು ರ್ಯಾಬಿಟ್ ಕಂಡಕ್ಟರುಗಳು | 28.60 | 35.01 | 6.41 |
| 2 | ಹೆಸ್ಕಾಂ | | 28.43 | 36.63 | 8.20 |
| 3 | ಮೆಸ್ಕಾಂ | | 27.87 | 35.25 | 7.38 |
| 4 | ಸೆಸ್ಕ್ | | 28.29 | 36.71 | 8.42 |
| 5 | ಜೆಸ್ಕಾಂ | | 25.63 | 33.74 | 8.11 |
| | | ಒಟ್ಟು | **138.82** | **177.34** | **38.52** |

***ಮೂಲ: ವಿಸಕಂಗಳು ಒದಗಿಸಿರುವ ಮಾಹಿತಿಯಂತೆ***

ಟರ್ನ್‌ಕೀ ಗುತ್ತಿಗೆ ಅಡಿಯಲ್ಲಿ ಅಧಿಕ ಮೌಲ್ಯದ ಐಟಂಗಳಿಗೆ ಪಡೆದುಕೊಳ್ಳಲಾಗಿರುವಂತಹ ದರಗಳು ಕೇಂದ್ರ ಖರೀದಿ ದರಗಳಿಗಿಂತ ಅಧಿಕವಾಗಿದ್ದವು. ಕೇಂದ್ರ ಖರೀದಿ ದರಗಳನ್ನು ತಿರಸ್ಕರಿಸಿ ಟರ್ನ್‌ಕೀ ಗುತ್ತಿಗೆ ಅಡಿಯಲ್ಲಿ ಅಧಿಕ ಮೌಲ್ಯದ ಐಟಂಗಳನ್ನು ಖರೀದಿಸಿದ್ದು (ಸೆಪ್ಟಂಬರ್ 2016ರಿಂದ ಜನವರಿ 2018) ₹ 38.52 ಕೋಟಿ ಮೌಲ್ಯದ ತಪ್ಪಿಸಬಹುದಾಗಿದ್ದಂತಹ ಹೆಚ್ಚುವರಿ ವೆಚ್ಚವನ್ನು ಭರಿಸುವಲ್ಲಿ ಪರಿಣಮಿಸಿದ್ದಿತು.

ಒಟ್ಟಾರೆ ಟರ್ನ್‌ಕೀ ಆಧಾರದಲ್ಲಿ ಗರಿಷ್ಠ ಕೇಂದ್ರ ಖರೀದಿ ದರಗಳನ್ನು ಅಳವಡಿಸಿಕೊಂಡು ಟೆಂಡರುಗಳನ್ನು ಆಹ್ವಾನಿಸಲಾಯಿತು, ಆದರೆ ವಾಸ್ತವಿಕವಾಗಿ ಕಾಮಗಾರಿಗಳ ನೀಡಿಕೆ ಮೌಲ್ಯವು ಟೆಂಡರು ಪ್ರೀಮಿಯಂ ಸೇರ್ಪಡೆಯ ಕಾರಣ ಅಧಿಕವಾಗಿದ್ದಿತು ಎಂಬುದಾಗಿ ವಿಸಕಂಗಳು ಉತ್ತರಿಸಿದವು (ಅಕ್ಟೋಬರ್ 2024). ಕಂಪನಿಗಳು ಒಟ್ಟಾರೆ ಟರ್ನ್‌ಕೀ ಆಧಾರವನ್ನು ಅಳವಡಿಸಿಕೊಂಡಿದ್ದರಿಂದ, ಇಂಧನ ಮಂತ್ರಾಲಯವು ಕಂಡುಕೊಂಡಿದ್ದ ದರಗಳಲ್ಲಿ ಸಾಮಗ್ರಿಗಳನ್ನು ಖರೀದಿಸಲು ಸಾಧ್ಯವಾಗಿರಲಿಲ್ಲ ಎಂಬುದನ್ನು ಉತ್ತರವು ಖಚಿತಪಡಿಸುತ್ತದೆ.

### *2.8.2 ಟೆಂಡರುಗಳನ್ನು ಆಹ್ವಾನಿಸದೆಯೇ ಯೋಜನಾ ನಿರ್ವಹಣಾ ಸಂಸ್ಥೆಯನ್ನು ನೇಮಕ ಮಾಡಿದ್ದುದು*

ಯೋಜನೆಯನ್ನು ಯೋಜಿಸುವುದಕ್ಕಾಗಿ, ಬಿಡ್ಡು ಪ್ರಕ್ರಿಯೆ ಹಾಗೂ ಯೋಜನೆಯ ಭೌತಿಕ ಮತ್ತು ವಿತ್ತೀಯ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ಸಹಾಯ ಮಾಡಲು ಉಪಯುಕ್ತತಾ ಸಂಸ್ಥೆವಾರು ಯೋಜನಾ ನಿರ್ವಹಣಾ ಸಂಸ್ಥೆಯ ನೇಮಕಾತಿಯನ್ನು ಮಾರ್ಗಸೂಚಿಗಳ *ಅಧ್ಯಾಯ –IIರ ಷರತ್ತು 11* ನಿರ್ದಿಷ್ಟಪಡಿಸಿದ್ದಿತು. ಯೋಜನಾ ನಿರ್ವಹಣಾ ಸಂಸ್ಥೆಯ ಪ್ರಮುಖ ಜವಾಬ್ದಾರಿಯು ಉಪಯುಕ್ತತಾ ಸಂಸ್ಥೆಗೆ ಸಹಾಯ ಮಾಡುವುದು ಹಾಗೂ ಯೋಜನೆಯನ್ನು ಸಮಯೋಚಿತವಾಗಿ ಕಾರ್ಯಗತಗೊಳಿಸುವುದನ್ನು ಖಚಿತಪಡಿಸಿಕೊಳ್ಳುವುದಾಗಿದ್ದಿತು. ಯೋಜನಾ ನಿರ್ವಹಣಾ ಸಂಸ್ಥೆಯನ್ನು ನೇಮಕ ಮಾಡುವುದು ಯೋಜನೆಯ ಅಡಿಯಲ್ಲಿ ಸಂಪರ್ಕ–ಸೇತು ಸಂಸ್ಥೆಯು ಹಣಕಾಸನ್ನು ಬಿಡುಗಡೆಗೊಳಿಸಲು ಪೂರ್ವ–ಅಗತ್ಯತೆಯಾಗಿದ್ದಿತು. ಭಾರತ ಸರ್ಕಾರವು ಕಾಮಗಾರಿಗಳ ಅನುಮೋದಿತ

ವೆಚ್ಚಗಳ ಶೇಕಡಾ 0.5ಕ್ಕೆ ಸೀಮಿತಗೊಂಡಂತೆ ಯೋಜನಾ ನಿರ್ವಹಣಾ ಸಂಸ್ಥೆಯ ಕಡೆಗೆ ಭರಿಸಲಾಗಿರುವ ವೆಚ್ಚದ ಶೇಕಡಾ 100ರಷ್ಟರ ಪಾವತಿಗೆ ಅನುವು ಮಾಡಿದ್ದಿತು. ಯೋಜನಾ ನಿರ್ವಹಣಾ ಸಂಸ್ಥೆಗೆ ಯೋಜನಾ ವೆಚ್ಚದ ಶೇಕಡಾ 0.5ರಷ್ಟನ್ನು ಮೀರಿದಂತೆ ಪಾವತಿಸಬೇಕಾದ ಯಾವುದೇ ಶುಲ್ಕವನ್ನು ವಿಸಕಂಗಳು ಭರಿಸಬೇಕಿದ್ದಿತು.

ಯಾವುದೇ ಒಂದು ಕೇಂದ್ರ ಸಾರ್ವಜನಿಕ ವಲಯ ಉದ್ದಿಮೆಯಿಂದ (ಸಿಪಿಎಸ್‌ಯುಸ್) ಅಥವಾ ಬಿಡ್ಡುಗಳ ಮೂಲಕ ಯೋಜನಾ ನಿರ್ವಹಣಾ ಸಂಸ್ಥೆಯ ನೇಮಕ ಮಾಡಲು ಮಾರ್ಗಸೂಚಿಗಳು ಅನುವು ಮಾಡಿದ್ದವು (*ಷರತ್ತು 3*).

ಇಂಧನ ಇಲಾಖೆಯ ಕೋರಿಕೆಯಂತೆ, (ಜನವರಿ 2015) ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯು ಆರ್‌ಇಸಿ, ಇದರ ಉಪ–ಕಂಪನಿಯಾಗಿದ್ದ ಆರ್‌ಇಸಿ ವಿದ್ಯುತ್ ಅಭಿವೃದ್ಧಿ ನಿಗಮ ನಿಯಮಿತಕ್ಕೆ (ಆರ್‌ಇಸಿಪಿಡಿಸಿಎಲ್) ಸಾರ್ವಜನಿಕ ಖರೀದಿಗಳಲ್ಲಿ ಮತ್ತು ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮ, 1999ರ (ಕೆಟಿಟಿಪಿ ಅಧಿನಿಯಮ) ಪರಿಚ್ಛೇದ 4(ಜಿ) ಅಡಿಯಲ್ಲಿ ವಿನಾಯಿತಿ ನೀಡಿತು. ಈ ವಿನಾಯಿತಿಯ ಆಧಾರದ ಮೇರೆಗೆ ಎಲ್ಲಾ ವಿಸಕಂಗಳು ಟೆಂಡರುಗಳನ್ನು ಆಹ್ವಾನಿಸದೆಯೇ ಆರ್‌ಇಸಿಪಿಡಿಸಿಎಲ್ ಅನ್ನು ಯೋಜನಾ ನಿರ್ವಹಣಾ ಸಂಸ್ಥೆಯನ್ನಾಗಿ ನೇಮಕ ಮಾಡಿದವು (ಜೂನ್ 2015 ಮತ್ತು ಅಕ್ಟೋಬರ್ 2015ರ ನಡುವೆ)[28] ಹಾಗೂ ಮಾರ್ಗಸೂಚಿಗಳಲ್ಲಿ ಮರುಪಾವತಿಸಬಹುದಾದ ಎಂಬುದಾಗಿ ನಮೂದಿಸಲಾಗಿದ್ದ ಶೇಕಡಾ 0.5ಕ್ಕೆ ಪ್ರತಿಯಾಗಿ ಶೇಕಡಾ 1.50 ದರದಲ್ಲಿ (ಆರ್‌ಇಸಿಪಿಡಿಸಿಎಲ್ ಉಲ್ಲೇಖಿಸಿದ ದರ) ಶುಲ್ಕಗಳನ್ನು ನಿಗದಿಗೊಳಿಸಿದವು. ಕಾಕತಾಳೀಯವಾಗಿ, ಮೆಸ್ಕಾಂ ಸ್ಪರ್ಧಾತ್ಮಕ ಬಿಡ್ಡಿಗೆ ಹೋದ ಸಮಯದಲ್ಲಿ ಐಪಿಡಿಎಸ್ ಅಡಿಯಲ್ಲಿ ಹೆಚ್ಚುವರಿ ಕಾಮಗಾರಿಯಾಗಿ ಗ್ಯಾಸ್ ಇನ್ಸುಲೇಟೆಡ್ ಉಪ–ಸ್ಟೇಷನ್ನುಗಳಿಗಾಗಿ ಅನುಮೋದಿತ ವೆಚ್ಚದ ಶೇಕಡಾ 0.94 ದರದಲ್ಲಿ ಯೋಜನಾ ನಿರ್ವಹಣಾ ಸಂಸ್ಥೆಯಾಗಿ ಬರಲು ಕೋರಿಕೆಯನ್ನು ಸ್ವೀಕರಿಸಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಭಾರತದ ಉದ್ದಗಲಕ್ಕೂ ಯೋಜನಾ ನಿರ್ವಹಣಾ ಸಂಸ್ಥೆಯ ಜವಾಬ್ದಾರಿಯನ್ನು ಆರ್‌ಇಸಿಪಿಡಿಸಿಎಲ್ ಶೇಕಡಾ 1.5ರ ಹಾಗೂ ಅದಕ್ಕೂ ಮೀರಿದ ದರದಲ್ಲಿ ನೀಡಿರುತ್ತವೆ ಎಂಬುದಾಗಿ ಬೆಸ್ಕಾಂ ಮತ್ತು ಹೆಸ್ಕಾಂ, ಇವು ಪ್ರತಿಕ್ರಿಯೆ ನೀಡಿದವು. ಆದಾಗ್ಯೂ, ಇತರ ವಿಸಕಂಗಳಲ್ಲಿ[29] ಶೇಕಡಾ 1.5 ಕ್ಕಿಂತ ಕಡಿಮೆ ದರದಲ್ಲಿ ಕಾಮಗಾರಿಗಳನ್ನು ನೀಡಿರುವ ನಿದರ್ಶನಗಳಿವೆ ಎಂದು ಲೆಕ್ಕಪರಿಶೋಧನೆಯು ಗಮನಿಸಿತು. ಮುಂದುವರೆದು, ಅದು ಕೆಟಿಟಿಪಿ ಅಧಿನಿಯಮ ಪರಿಚ್ಛೇದ 4(ಜಿ) ಅಡಿಯಲ್ಲಿ ವಿನಾಯಿತಿ ಹೊಂದಿರುವುದರಿಂದ ಹಾಗೂ ಅದು ಆರ್‌ಇಸಿ, ಇದರ ಉಪ–ಕಂಪನಿಯಾಗಿರುವುದರಿಂದ ಆರ್‌ಇಸಿಪಿಡಿಸಿಎಲ್‌ಗೆ ಯೋಜನಾ ನಿರ್ವಹಣಾ ಸಂಸ್ಥೆಯ ಜವಾಬ್ದಾರಿಯನ್ನು ವಹಿಸಲಾಯಿತು ಎಂಬುದಾಗಿ ಮೆಸ್ಕಾಂ ತಿಳಿಸಿತು. ಟೆಂಡರುಗಳನ್ನು ಆಹ್ವಾನಿಸದೆಯೇ ಸಂಸ್ಥೆಗೆ ಕಾಮಗಾರಿಯನ್ನು ನೀಡುವ ಉದ್ದೇಶದಿಂದಲೇ ಪರಿಚ್ಛೇದ 4(ಜಿ) ವಿನಾಯಿತಿಯನ್ನು ಪಡೆದಿರುವುದರಿಂದ ವಾದವು ಒಪ್ಪುವಂತಿಲ್ಲ. ಮುಂದುವರೆದು, ಟೆಂಡರು ಪ್ರಕ್ರಿಯೆ ಮೂಲಕ ಕಾಮಗಾರಿಯನ್ನು ಕಡಿಮೆ ದರಗಳಲ್ಲಿ ಪಡೆದುಕೊಳ್ಳಬಹುದಾಗಿದ್ದ ಸಂಭಾವ್ಯತೆಯನ್ನು ತಳ್ಳಿಹಾಕುವಂತಿಲ್ಲ.

---

[28] ಬೆಸ್ಕಾಂ – ಜೂನ್ 2015, ಸೆಸ್ಕ್ – ಸೆಪ್ಟಂಬರ್ 2015, ಮೆಸ್ಕಾಂ – ಅಕ್ಟೋಬರ್ 2015, ಹೆಸ್ಕಾಂ – ಸೆಪ್ಟಂಬರ್ 2015, ಜೆಸ್ಕಾಂ – ಸೆಪ್ಟಂಬರ್ 2015.

[29] ಪಶ್ಚಿಮಾಂಚಲ್ ವಿದ್ಯುತ್ ವಿತರಣ್ ಲಿಮಿಟೆಡ್: ಪಿಎಂಎ–ಆರ್‌ಇಸಿಪಿಡಿಸಿಎಲ್ – ದರ: ಅನುಮೋದಿತ ವೆಚ್ಚದ ಶೇಕಡಾ 1.05; ದುರ್ಗಾಪುರ್ ಪ್ರಾಜೆಕ್ಟ್ಸ್ ಲಿಮಿಟೆಡ್: ಪಿಎಂಎ–ಆರ್‌ಇಸಿಪಿಡಿಸಿಎಲ್ – ದರ: ಸವಿವರ ಯೋಜನಾ ವರದಿಯ ಅನುಸಾರ ಅನುಮೋದಿತ ವೆಚ್ಚದ ಶೇಕಡಾ 1.35; ಎಪಿ ಲಿಮಿಟೆಡ್, ಇದರ ಈಸ್ಟರ್ನ್ ಪವರ್ ಡಿಸ್ಟ್ರಿಬ್ಯೂಷನ್ ಕಂಪನಿ: ಪಿಎಂಎ – ಮೆ. ಪಿಎಫ್‌ಸಿ ಕನ್ಸಲ್ಟಿಂಗ್ ಲಿಮಿಟೆಡ್ – ಸವಿವರ ಯೋಜನಾ ವರದಿಯ ಅನುಸಾರ ಅನುಮೋದಿತ ವೆಚ್ಚದ ಶೇಕಡಾ 1.00.

# ಅಧ್ಯಾಯ – III

# ಯೋಜನೆಯ ಪೂರ್ವಭಾವಿ ಯೋಜನೆ ಮತ್ತು ಅನುಷ್ಠಾನ

# ಅಧ್ಯಾಯ III

## ಯೋಜನೆಯ ಪೂರ್ವಭಾವಿ ಯೋಜನೆ ಮತ್ತು ಅನುಷ್ಠಾನ

*ಐಪಿಡಿಎಸ್ ವ್ಯಾಪ್ತಿಯು ಈ ಕೆಳಗಿನ ಭಾಗಗಳನ್ನು ಒಳಗೊಂಡಿರುತ್ತದೆ (i) ಉಪ-ಪ್ರಸರಣಾ ಮತ್ತು ವಿತರಣಾ ಜಾಲವನ್ನು ಬಲಪಡಿಸುವುದು, (ii) ಫೀಡರುಗಳು/ವಿತರಣಾ ಟ್ರಾನ್ಸ್‌ಫಾರ್ಮರುಗಳು/ ಗ್ರಾಹಕರುಗಳು, ಇತ್ಯಾದಿಗಳಿಗೆ ಮೀಟರು ಅಳವಡಿಕೆ, (iii) ವಿತರಣಾ ವಲಯದ ಮಾಹಿತಿ ತಂತ್ರಜ್ಞಾನ ಸಾಧ್ಯತೆಗೊಳಿಸುವಿಕೆ (iv) ಸರ್ಕಾರಿ ಕಟ್ಟಡಗಳ ಮೇಲೆ ನೆಟ್-ಮೀಟರಿಂಗ್ ಹೊಂದಿರುವ ಸೌರ ಫಲಕಗಳನ್ನು ಒದಗಿಸುವುದು, ಇತ್ಯಾದಿ.*

*ವ್ಯವಸ್ಥೆಯನ್ನು ಬಲಪಡಿಸುವ ಕಾರ್ಯಗಳ ಅನುಷ್ಠಾನದಲ್ಲಿ ಯೋಜಿತ ಕೆಲಸಗಳಿಗಿಂತ ಗಮನಾರ್ಹ ವ್ಯತ್ಯಯಗಳನ್ನು ಗಮನಿಸಲಾಯಿತು. ವಿಸಕಂಗಳು ಕೆಲವು ಪರಿಮಾಣಗಳನ್ನು ಸವಿವರ ಯೋಜನಾ ವರದಿಗಳಲ್ಲಿ ಸೇರಿಸಿರಲಿಲ್ಲ ಅಥವಾ ಅವುಗಳಲ್ಲಿ ಅಗತ್ಯವಿಲ್ಲದ ಪರಿಮಾಣಗಳನ್ನು ಸೇರಿಸಿದ್ದವು, ಇದು ಕಾರ್ಯಗತಗೊಳಿಸುವ ವೇಳೆಯಲ್ಲಿ ಕಾಮಗಾರಿಗಳ ವ್ಯಾಪ್ತಿಯನ್ನು ಬದಲಾವಣೆಗೊಳಿಸುವ ಅಗತ್ಯತೆಯನ್ನುಂಟು ಮಾಡಿದವು. ವ್ಯವಸ್ಥೆ ಬಲಪಡಿಸುವ ಭಾಗದ ಅಡಿಯಲ್ಲಿ ಕಾಮಗಾರಿ ಆದೇಶಗಳನ್ನು ಅವುಗಳನ್ನು ನೀಡಿದನಂತರ ಅಗತ್ಯ ಅನುಮತಿಗಳು ಸಿಗದಿರುವುದು, ಕಾಮಗಾರಿ ಪ್ರದೇಶಕ್ಕೆ ಪ್ರವೇಶ ಸಮಸ್ಯೆಗಳು ಹಾಗೂ ಕಾಮಗಾರಿಗಳು ಇತರೆ ಯೋಜನೆಗಳ ಅಡಿಯಲ್ಲಿ ವ್ಯಾಪಿಸಿರುವುದು, ಇವೇ ಮುಂತಾದ ಕಾರಣಗಳನ್ನು ತಿಳಿಸಿ ಕೈಬಿಡಲಾಗಿದ್ದಿತು.*

*ವ್ಯವಸ್ಥೆ ಬಲಪಡಿಸುವ ಭಾಗದ ಅಡಿಯಲ್ಲಿ ಅನುಮೋದಿತ ಪರಿಮಾಣಕ್ಕೆ ಪ್ರತಿಯಾಗಿ ಶೇಕಡಾವಾರು ಕಾರ್ಯಗತಗೊಳಿಸುವಿಕೆಯು ಶೇಕಡಾ ಸೊನ್ನೆಯಿಂದ ಶೇಕಡಾ 4,890ರಷ್ಟು (ರಿಂಗ್ ಮೈನ್ ಯೂನಿಟ್ಟುಗಳು –ಆರ್‌ಎಂಯು) ಆಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕರ್ನಾಟಕ ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆಯುವಲ್ಲಿ ಪಾರದರ್ಶಕತೆ ಅಧಿನಿಯಮ ಹಾಗೂ ಅವುಗಳ ಅಡಿಯಲ್ಲಿ ರೂಪಿಸಿರುವ ನಿಯಮಗಳನ್ನು ಉಲ್ಲಂಘಿಸಿ ವಿಸಕಂಗಳು ಕಡಿಮೆ ದಿನಗಳ ಅವಕಾಶ ನೀಡುವ ಮೂಲಕ ಹಾಗೂ ಅಧಿಕ ಟೆಂಡರು ಪ್ರೀಮಿಯಂಗಳಲ್ಲಿ ಕಾಮಗಾರಿಗಳನ್ನು ನೀಡಿದ್ದವು. ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗಿದ್ದಿತು ಹಾಗೂ ಸವಿವರ ಕಾಮಗಾರಿ ನೀಡಿಕೆ ಆದೇಶವನ್ನು ನೀಡಿದ ದಿನಾಂಕದಿಂದ ಮೂರು ವರ್ಷಗಳೇ ಕಳೆದರೂ ಚಿಂತಿಸಲಾಗಿದ್ದ ಉದ್ದೇಶಗಳನ್ನು ಈಡೇರಿಸಿಕೊಂಡಿರಲಿಲ್ಲ. ಡಿಸಿ/ಡಿಆರ್‌ಸಿ ಕಾಮಗಾರಿಗಳು ಕಾಲಮಿತಿಯೊಳಗೆ ಪೂರ್ಣಗೊಳ್ಳದಿದ್ದುದು ಸಹ-ಹೋಸ್ಟಿಂಗ್ ಮೇಲೆ ಹೆಚ್ಚುವರಿ ವೆಚ್ಚಗಳನ್ನು ನೀಡುವಲ್ಲಿ ಹಾಗೂ ವಿಸಕಂಗಳು ಖರೀದಿಸಿದ್ದಂತಹ ಜಿಐಎಸ್ ಮಾಹಿತಿಯನ್ನು ಉಪಯೋಗಿಸಿಕೊಳ್ಳದಿರುವಲ್ಲಿ ಪರಿಣಮಿಸಿದ್ದಿತು. ಬೆಸ್ಕಾಂ ಇಆರ್‌ಪಿ ಕಾರ್ಯಗತಗೊಳಿಸುವಿಕೆಗಾಗಿ ₹ 42.04 ಕೋಟಿ ಮೊತ್ತವನ್ನು ಭರಿಸಿದ್ದಿತಾದರೂ ಹಾಗೂ ಕಾಮಗಾರಿಯು ಪೂರ್ಣಗೊಂಡಿರುವುದಾಗಿ ಘೋಷಿಸಿದ್ದಿತಾದರು, ಈ ವ್ಯವಸ್ಥೆಯನ್ನು ಇನ್ನೂ ಉಪಯೋಗಿಸುತ್ತಿರುವುದಿಲ್ಲ.*

*ಬೆಸ್ಕಾಂ ಆಯ್ಕೆ ಮಾಡಿಕೊಳ್ಳಲಾಗಿದ್ದ ಎಂಟು ವಿಭಾಗಗಳ ಪೈಕಿ ಯಾವುದರಲ್ಲೂ ಸಹ ಸ್ಥಿರ ಮೀಟರುಗಳನ್ನು ಮತ್ತು ಜಿಪಿಆರ್‌ಎಸ್ ಮೋಡೆಮ್ಮುಗಳನ್ನು ಅಳವಡಿಸಿದನಂತರವೂ ಸ್ವಯಂಚಾಲಿತ ಮೀಟರು ಓದುವಿಕೆಯನ್ನು ಮಾಡಿರಲಿಲ್ಲ. ವಿಸಕಂಗಳು ಸಮರ್ಪಕ ಪೂರ್ವಭಾವಿ ಯೋಜನೆಗಳನ್ನು ತಯಾರಿಸದೆಯೇ ಹಾಗೂ ಸೌರ ವಿದ್ಯುತ್ ಸ್ಥಾವರಗಳ ಸ್ಥಾಪನೆಗಾಗಿ ಕಟ್ಟಡಗಳನ್ನು ಗುರುತಿಸದೆಯೇ ಸವಿವರ ಕಾಮಗಾರಿ ಆದೇಶಗಳನ್ನು (ಡಿಡಬ್ಲ್ಯುಎ) ನೀಡಿದ್ದವು, ಇದು ಕಾಮಗಾರಿಗಳು ವಿಳಂಬಗೊಳ್ಳುವಲ್ಲಿ ಹಾಗೂ ಧ್ಯೇಯೋದ್ದೇಶಗಳು ಈಡೇರದಿರುವಲ್ಲಿ ಪರಿಣಮಿಸಿದ್ದಿತು. ವಿಸಕಂಗಳು ಸಮಗ್ರ ಗುಣಮಟ್ಟ ಭರವಸೆಗೆ ಸಂಬಂಧಿಸಿದಂತೆ ಪೂರ್ವಭಾವಿ ಯೋಜನೆಯನ್ನು ತಯಾರಿಸಿರಲಿಲ್ಲ ಹಾಗೂ ಸಾಮಗ್ರಿಗಳ ನಿರ್ದಿಷ್ಟ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲಾಗಿರಲಿಲ್ಲ. ಕಡ್ಡಾಯವಾಗಿ ಮಾಡಬೇಕಿದ್ದಂತಹ ಪರೀಕ್ಷಣೆಗಳನ್ನು ಮಾಡದಿದ್ದುದು ಸೆಸ್ಕ್ ಸೌರ ಯೋಜನೆಯಲ್ಲಿ ನಿಕೃಷ್ಟ ಗುಣಮಟ್ಟದ ಸಾಮಗ್ರಿಗಳನ್ನು ಉಪಯೋಗಿಸುವಲ್ಲಿ ಹಾಗೂ ತತ್ಪರಿಣಾಮವಾಗಿ ಸೌರ ಫಲಕಗಳು ಕಡಿಮೆ ಪ್ರಮಾಣದಲ್ಲಿ*

*ವಿದ್ಯುತ್ ಉತ್ಪಾದಿಸುವಲ್ಲಿ ಪರಿಣಮಿಸಿದ್ದಿತು. ಸೌರ ಫಲಕಗಳನ್ನು ನಿರ್ವಹಿಸಿಕೊಂಡು ಹೋಗಿರದಿದ್ದುದು ಅವುಗಳ ನಿಕೃಷ್ಟಮಟ್ಟದ ಕಾರ್ಯನಿರ್ವಹಣೆಯಲ್ಲಿ ಪರಿಣಮಿಸಿದ್ದವು.*

### *3.1 ಪೀಠಿಕೆ*

ಯೋಜನೆಯ ಮಾರ್ಗಸೂಚಿಗಳು ಯೋಜನೆಯನ್ನು ಎರಡು ಹಂತಗಳಲ್ಲಿ ರೂಪಿಸುವುದನ್ನು ನಿರ್ದಿಷ್ಟಪಡಿಸಿದ್ದಿತು:

ಮೊದಲ ಹಂತದಲ್ಲಿ ವಿತರಣಾ ವ್ಯವಸ್ಥೆಯ ದಕ್ಷತೆಯಿಂದ ಕೂಡಿದ ನಿರ್ವಹಣೆಗಾಗಿ ಎಲ್ಲಾ ಸಂಬಂಧಿತ ಪರಿಮಿತಿಗಳನ್ನು[30] ಪರಿಗಣಿಸುವ ಮೂಲಕ ಉಪ–ಪ್ರಸರಣ ಮತ್ತು ವಿತರಣಾ ಜಾಲದಲ್ಲಿನ ಗುರುತರವಾದಂತಹ ಅಂತರಗಳನ್ನು ವಿಸಕಂಗಳು ಗುರುತಿಸಬೇಕಿದ್ದಿತು ಹಾಗೂ ಯೋಜನೆಯ ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಲಾಗಿದ್ದಂತಹ ನಮೂನೆಯಲ್ಲಿ ಒಂದು ಅಗತ್ಯತೆಯ ನಿರ್ಧಾರಣಾ ದಾಖಲೆಯನ್ನು ತಯಾರಿಸಬೇಕಿದ್ದಿತು.

ನಿರ್ಧಾರಣೆಯ ಆಧಾರದ ಮೇರೆಗೆ, ಕಾಮಗಾರಿಯ ವ್ಯಾಪ್ತಿಯನ್ನು (i) ನಗರ ಪ್ರದೇಶದಲ್ಲಿನ ಗ್ರಾಹಕರುಗಳಿಗೆ 24×7 ವಿದ್ಯುತ್ ಸರಬರಾಜು (ii) ವಿಕ್ಷೇಪಪಥದ (ಟ್ರಜೆಕ್ಟರಿ) (ರಾಜ್ಯಗಳೊಂದಿಗೆ ಸಮಾಲೋಚಿಸುವ ಮೂಲಕ ಇಂಧನ ಮಂತ್ರಾಲಯವು ವಿಸಕಂವಾರು ಅಂತಿಮರೂಪಕ್ಕೆ ತಂದಿರುವುದು) ಅನುಸಾರ ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ)[31] ನಷ್ಟಗಳನ್ನು ತಗ್ಗಿಸುವ ಸಲುವಾಗಿ ಹಾಗೂ (iii) ನಗರ ಪ್ರದೇಶದ ಎಲ್ಲಾ ಕುಟುಂಬಗಳಿಗೆ ವಿದ್ಯುತ್ ಅನುಕೂಲತೆಗಳನ್ನು ಕಲ್ಪಿಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಆದ್ಯತೆ ನೀಡಬೇಕಿದ್ದಿತು.

ಎರಡನೆಯ ಹಂತದಲ್ಲಿ ಪಿಎಫ್‌ಸಿಯು (ಸಂಪರ್ಕ–ಸೇತು ಸಂಸ್ಥೆ) ಮೊದಲ ಹಂತದಲ್ಲಿ ಮೌಲ್ಯೀಕರಿಸಿದ ಕಾಮಗಾರಿಯ ಸವಿಸ್ತೃತ ವ್ಯಾಪ್ತಿಯ ಆಧಾರದ ಮೇರೆಗೆ ವಿಸಕಂಗಳು ಸವಿವರ ಕ್ಷೇತ್ರ ಸಮೀಕ್ಷೆ ಮತ್ತು ಕಾಮಗಾರಿಗಳ ವಿವಿಧ ಐಟಂಗಳಿಗೆ ಇತ್ತೀಚೆಗೆ ಅನುಮೋದಿತಗೊಂಡಿರುವ ದರಗಳ ಷೆಡ್ಯೂಲುಗಳ ಆಧಾರದ ಮೇರೆಗೆ ಸ್ವೀಕಾರಯೋಗ್ಯವಾದಂತಹ ಸವಿವರ ಯೋಜನಾ ವರದಿಗಳನ್ನು (ಡಿಪಿಆರ್) ರೂಪಿಸಬೇಕಿದ್ದಿತು. ರಾಜ್ಯ ಮಟ್ಟದಲ್ಲಿ ವಿತರಣೆ ಸುಧಾರಣೆಗಳ ಸಮಿತಿ (ಡಿಆರ್‌ಸಿ)[32] ತಕ್ಕುದಾದ ರೀತಿಯಲ್ಲಿ ಶಿಫಾರಸು ಮಾಡಿರುವಂತಹ ಈ ಡಿಪಿಆರ್ ಅನ್ನು ಉಪಯುಕ್ತತಾ ಸಂಸ್ಥೆಗಳು ಸಂಪರ್ಕಸೇತು ಸಂಸ್ಥೆಗೆ ಮೌಲ್ಯ ನಿರ್ಣಯಕ್ಕಾಗಿ ಸಲ್ಲಿಸಬೇಕಿದ್ದಿತು.

ಯೋಜನೆಯ ಮಾರ್ಗಸೂಚಿಗಳ ಅನುಸಾರ ಕಾಮಗಾರಿಗಳನ್ನು ಮೇಲ್ವಿಚಾರಣಾ ಸಮಿತಿಯು ತನ್ನ ಅನುಮೋದನೆಯನ್ನು ನೀಡಿರುವ ದಿನಾಂಕದಿಂದ ಆರು ತಿಂಗಳುಗಳ ಒಳಗೆ ಅಂದರೆ ಸೆಪ್ಟಂಬರ್ 2016ರ ವೇಳೆಗೆ ಗುತ್ತಿಗೆದಾರರುಗಳಿಗೆ ನೀಡಬೇಕಿದ್ದಿತು ಹಾಗೂ ಆ ರೀತಿ ನೀಡಲಾದ ದಿನಾಂಕದಿಂದ 24 ತಿಂಗಳುಗಳ ಒಳಗೆ ಅಂದರೆ ಸೆಪ್ಟಂಬರ್ 2018ರ ವೇಳೆಗೆ ಪೂರ್ಣಗೊಳಿಸಬೇಕಿದ್ದಿತು (ಅಂದರೆ ಮೇಲ್ವಿಚಾರಣಾ ಸಮಿತಿಯಿಂದ ಅನುಮೋದಿತಗೊಂಡ ದಿನಾಂಕದಿಂದ 30 ತಿಂಗಳುಗಳ ಅವಧಿಯ ಒಳಗೆ).

ಐಪಿಡಿಎಸ್ ಕಾರ್ಯಗತಗೊಳಿಸುವಲ್ಲಿನ ಕ್ರಮಗಳನ್ನು ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಲಾಗಿರುವುದು:

---

[30] ಗ್ರಾಹಕ ಸಮ್ಮಿಶ್ರಣ, ಬಳಕೆ ಮಾದರಿ, ಓಲ್ಟೇಜು ನಿಯಂತ್ರಣ, ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟದ ಮಟ್ಟ, ಹೈ ಟೆನ್‌ಷನ್ (ಎಚ್‌ಟಿ) ಮತ್ತು ಲೋ ಟೆನ್‌ಷನ್ (ಎಲ್‌ಟಿ) ಅನುಪಾತ, ಟ್ರಾನ್ಸ್‌ಫಾರ್ಮರುಗಳು ಮತ್ತು ಫೀಡರುಗಳು/ವಿದ್ಯುತ್ ಮಾರ್ಗಗಳ ಅತ್ಯುತ್ತಮ ಗರಿಷ್ಠ ವಿದ್ಯುತ್ ಹೊರೆ ಸಾಮರ್ಥ್ಯ, ಪ್ರತಿಕ್ರಿಯಾತ್ಮಕ ವಿದ್ಯುತ್ ನಿರ್ವಹಣೆ, ವಿದ್ಯುತ್ ಹೊರೆ ಅಂಶ (ಪವರ್ ಫ್ಯಾಕ್ಟರ್) ಸುಧಾರಣೆ, ಕಾರ್ಯನಿರ್ವಹಣೆಯ ಪ್ರಮಾಣಕ ಇತ್ಯಾದಿಗಳಂತಹುಗಳು ಹಾಗೂ ಇತರೆ ಯೋಜನೆಗಳ ಅಡಿಯಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳು.

[31] ತಾಂತ್ರಿಕ ಮತ್ತು ವಾಣಿಜ್ಯ ನಷ್ಟಗಳು ಮತ್ತು ಬಿಲ್ಲುಗಳನ್ನು ನೀಡಲಾಗಿರುವ ಮೊತ್ತವು ಸಂಗ್ರಹವಾಗಿರದಿರುವವುಗಳ ಒಟ್ಟು ಮೊತ್ತ.

[32] ರಾಜ್ಯದ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿರುವ.

**ರೇಖಾಚಿತ್ರ ಸಂಖ್ಯೆ 3.1 ಐಪಿಡಿಎಸ್ ಕಾರ್ಯಗತಗೊಳಿಸುವಲ್ಲಿನ ಪ್ರಕ್ರಿಯೆಗಳು**




ರಾಜ್ಯದಲ್ಲಿನ ವಿಸಕಂಗಳು ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆ (ಐಪಿಡಿಎಸ್) ಅಡಿಯಲ್ಲಿ ಈ ಕೆಳಗಿನ ಪ್ರಧಾನ ಭಾಗಗಳನ್ನು ಕೈಗೆತ್ತಿಕೊಂಡವು:

i. ವ್ಯವಸ್ಥೆ ಬಲಪಡಿಸುವಿಕೆ

ii. ಮೀಟರುಗಳನ್ನು ಅಳವಡಿಸುವಿಕೆ

iii. ನಿವ್ವಳ ಮೀಟರು ಅಳವಡಿಸುವಿಕೆಯನ್ನು ಒಳಗೊಂಡಂತೆ ಸರ್ಕಾರಿ ಕಟ್ಟಡಗಳ ಮೇಲೆ ಸೌರ ಫಲಕಗಳನ್ನು ಹಾಕುವುದು; ಹಾಗೂ

iv. ಮಾಹಿತಿ ತಂತ್ರಜ್ಞಾನ – ಉದ್ದಿಮೆ ಸಂಪನ್ಮೂಲ ಪೂರ್ವಭಾವಿ ಯೋಜನೆ (ಇಆರ್‌ಪಿ) ಹಾಗೂ ಮಾಹಿತಿ ತಂತ್ರಜ್ಞಾನ ಹಂತ–II (ಐಪಿಡಿಎಸ್ ಪಟ್ಟಣಗಳಲ್ಲಿ ಆರ್‌ಎಪಿಡಿಆರ್‌ಪಿ ವ್ಯವಸ್ಥೆಯ ಹಂತ ಹಂತವಾಗಿ ಉನ್ನತೀಕರಣ).

## 3.2 ಯೋಜನೆಯನ್ನು ಕಾರ್ಯಗತಗೊಳಿಸುವ ವಿಧಾನ

ಸಂಪರ್ಕ–ಸೇತು ಸಂಸ್ಥೆಯು (ಪಿಎಫ್‌ಸಿ) ಸ್ಥಿರೀಕರಿಸಿರುವ ಕಾಮಗಾರಿಯ ಸವಿಸ್ತೃತ ವ್ಯಾಪ್ತಿಯ ಆಧಾರದ ಮೇರೆಗೆ ವಿಸಕಂಗಳು ಸವಿವರ ಕ್ಷೇತ್ರ ಸಮೀಕ್ಷೆ ಮತ್ತು ಕಾಮಗಾರಿಗಳ ವಿವಿಧ ಐಟಂಗಳಿಗೆ ಇತ್ತೀಚೆಗೆ ಅನುಮೋದಿತಗೊಂಡಿರುವ ದರಗಳ ಷೆಡ್ಯೂಲುಗಳ ಆಧಾರದ ಮೇರೆಗೆ ಸವಿವರ ಯೋಜನಾ ವರದಿಗಳನ್ನು ತಯಾರಿಸಬೇಕಿದ್ದಿತು. ರಾಜ್ಯ ಮಟ್ಟದಲ್ಲಿ ವಿತರಣೆ ಸುಧಾರಣೆಗಳ ಸಮಿತಿಯು (ಡಿಆರ್‌ಸಿ) ತಕ್ಕುದಾದ ರೀತಿಯಲ್ಲಿ ಅನುಮೋದಿಸಿರುವಂತಹ ಈ ಸವಿವರ ಯೋಜನಾ ವರದಿಗಳನ್ನು ವಿಸಕಂಗಳು ಪಿಎಫ್‌ಸಿಗೆ ಮೌಲ್ಯ ನಿರ್ಣಯಕ್ಕಾಗಿ ಸಲ್ಲಿಸಬೇಕಿದ್ದಿತು. ಅನುದಾನವನ್ನು ಯೋಜನೆಯ ಅನುಮೋದಿತ ವೆಚ್ಚ ಅಥವಾ ಯೋಜನೆಯನ್ನು ಗುತ್ತಿಗೆದಾರರುಗಳಿಗೆ ನೀಡಿರುವ ಮೌಲ್ಯ, ಇವುಗಳಲ್ಲಿ ಯಾವುದು ಕಡಿಮೆಯೋ ಅದರ ಆಧಾರದ ಮೇರೆಗೆ ನೀಡಬೇಕಿದ್ದಿತು.

ಯೋಜನೆಯನ್ನು ವಿಸಕಂಗಳು ನಿರ್ದಿಷ್ಟ ಖರೀದಿ/ಸೇವೆಗಳನ್ನು ಪಡೆಯುವಿಕೆ ಕಾರ್ಯನೀತಿ, ಪ್ರಮಾಣಕ ಬಿಡ್ಡು ದಾಖಲೆ ಮತ್ತು ಪಿಎಫ್‌ಸಿಯು ಪ್ರತ್ಯೇಕವಾಗಿ ನೀಡಿರುವ ತಾಂತ್ರಿಕ ನಿರ್ದಿಷ್ಟನಿರೂಪಣೆಗಳ ಆಧಾರದ ಮೇರೆಗೆ ಇ–ಟೆಂಡರಿಂಗ್ ಮೂಲಕ ಟರ್ನ್–ಕೀ / ಭಾಗಶ: ಟರ್ನ್–ಕೀ / ಇಲಾಖೀಯ ಕಾಮಗಾರಿ ಆಧಾರದ ಮೇರೆಗೆ ಕಾರ್ಯಗತಗೊಳಿಸಬಹುದು ಎಂಬುದಾಗಿ ಐಪಿಡಿಎಸ್ ಮಾರ್ಗಸೂಚಿಗಳ ಕಂಡಿಕೆ 8 ನಿರ್ದಿಷ್ಟಪಡಿಸಿದ್ದಿತು. ಯೋಜನೆಯನ್ನು ಕಾರ್ಯಗತಗೊಳಿಸುವ ಸಲುವಾಗಿ ಗುತ್ತಿಗೆದಾರರುಗಳಿಗೆ ಭಾರತ ಸರ್ಕಾರದ ಮೇಲ್ವಿಚಾರಣಾ ಸಮಿತಿಯು ತನ್ನ ಅನುಮೋದನೆಯನ್ನು ನೀಡಿದ ದಿನಾಂಕದಿಂದ ಆರು ತಿಂಗಳುಗಳ ಒಳಗೆ ನೀಡಬೇಕಿದ್ದಿತು. ಕಾಮಗಾರಿಯನ್ನು ಪೂರ್ಣಗೊಳಿಸಲು ವಿಸಕಂಗಳು ನೀಡಿದ್ದಂತಹ ಕಾಮಗಾರಿ ನೀಡಿಕೆ ಆದೇಶದ (ಎಲ್‌ಒಎ) ದಿನಾಂಕದಿಂದ 24 ತಿಂಗಳುಗಳ ಒಂದು ಕಾಲಮಿತಿಯಿದ್ದಿತು. ಯೋಜನೆಯನ್ನು ಪೂರ್ಣಗೊಳಿಸಲು ಗರಿಷ್ಠ ಕಾಲಮಿತಿಯು ಅಂದರೆ ಗುತ್ತಿಗೆದಾರರುಗಳಿಗೆ ಕಾಮಗಾರಿ ನೀಡಿಕೆ ಮತ್ತು ಅವುಗಳನ್ನು ಕಾರ್ಯಗತಗೊಳಿಸಿ ಪೂರ್ಣಗೊಳಿಸುವಿಕೆಯು ಮೇಲ್ವಿಚಾರಣಾ ಸಮಿತಿಯಿಂದ ಅನುಮೋದನೆಯನ್ನು ತಿಳಿಸಲಾದ ದಿನಾಂಕದಿಂದ ಮೂವತ್ತು ತಿಂಗಳುಗಳನ್ನು ಮೀರುವಂತಿರಲಿಲ್ಲ.

ಅವುಗಳ ನಿಯಂತ್ರಣವನ್ನು ಮೀರಿದ ಸಂದರ್ಭಗಳಲ್ಲಿ ವಿಸಕಂಗಳು ನಿರ್ದಿಷ್ಟ ಕಾಲಮಿತಿಗಳ ಒಳಗೆ ಯೋಜನೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಗದಿದ್ದಲ್ಲಿ, ಪ್ರಕರಣವಾರು ಆಧಾರದ ಮೇರೆಗೆ ಅಸಾಧಾರಣ ಪ್ರಕರಣಗಳಲ್ಲಿ ಅರ್ಹತೆಯ ಆಧಾರದ ಮೇರೆಗೆ ಕಾಲಾವಧಿ ವಿಸ್ತರಣೆಯನ್ನು ನೀಡಲು ಮೇಲ್ವಿಚಾರಣಾ ಸಮಿತಿಗೆ ಅನುಮತಿಯನ್ನು ನೀಡಲಾಗಿದ್ದಿತು.

## 3.3 ವ್ಯವಸ್ಥೆ ಬಲಪಡಿಸುವಿಕೆ

### *3.3.1 ಕಾರ್ಯಗತಗೊಳಿಸುವಲ್ಲಿನ ವಿಳಂಬ*

ರಾಜ್ಯದಲ್ಲಿ ಐಪಿಡಿಎಸ್ ಕಾರ್ಯಗತಗೊಳಿಸುವ ಸಲುವಾಗಿ ₹ 1,138.75 ಕೋಟಿ ಮೊತ್ತದಲ್ಲಿ ಎಲ್ಲಾ ಐದು ವಿಸಕಂಗಳ ಸವಿವರ ಯೋಜನಾ ವರದಿಗಳಿಗೆ ತಾತ್ವಿಕ ಅನುಮೋದನೆಯನ್ನು (ಆಗಸ್ಟ್ 2015) ಮೇಲ್ವಿಚಾರಣಾ ಸಮಿತಿಯ ನಾಲ್ಕನೇ ಸಭೆಯಲ್ಲಿ ನೀಡಲಾಗಿದ್ದಿತು. ವಿದ್ಯುತ್ ಹಣಕಾಸು ನಿಗಮವು (ಪಿಎಫ್‌ಸಿ) (ಸಂಪರ್ಕ–ಸೇತು ಸಂಸ್ಥೆ) ಕರ್ನಾಟಕದಲ್ಲಿನ ವಿಸಕಂಗಳ ಯೋಜನಾ ಪ್ರಸ್ತಾವನೆಗಳಿಗೆ ಅನುಮೋದನೆಯನ್ನು ಮಾರ್ಚ್ 2016ರಲ್ಲಿ ತಿಳಿಸಿತು. ಯೋಜನೆಯ ಮಾರ್ಗಸೂಚಿಗಳ ಅನುಸಾರ, ಮೇಲ್ವಿಚಾರಣಾ ಸಮಿತಿಯು ತನ್ನ ಅನುಮೋದನೆಯನ್ನು ತಿಳಿಸಿದ ದಿನಾಂಕದಿಂದ ಆರು ತಿಂಗಳುಗಳ ಒಳಗೆ ಅಂದರೆ ಸೆಪ್ಟೆಂಬರ್ 2016ರ ವೇಳೆಗೆ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಗುತ್ತಿಗೆದಾರರುಗಳಿಗೆ ನೀಡಬೇಕಿದ್ದಿತು ಹಾಗೂ ಅವುಗಳನ್ನು ನೀಡಿದ ದಿನಾಂಕದಿಂದ 24 ತಿಂಗಳುಗಳ ಒಳಗೆ (ಮೇಲ್ವಿಚಾರಣಾ ಸಮಿತಿಯ ಅನುಮೋದನೆಯ ದಿನಾಂಕದಿಂದ 30 ತಿಂಗಳುಗಳ ಒಳಗೆ) ಅಂದರೆ ಸೆಪ್ಟೆಂಬರ್ 2018ರ ವೇಳೆಗೆ ಪೂರ್ಣಗೊಳಿಸಬೇಕಿದ್ದಿತು.

ಕರ್ನಾಟಕ ರಾಜ್ಯದಲ್ಲಿ ಐಪಿಡಿಎಸ್ ಕಾರ್ಯಗತಗೊಳಿಸಲು ತೆಗೆದುಕೊಳ್ಳಲಾದ ವಾಸ್ತವಿಕ ಅವಧಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿರುವುದು;

**ಕೋಷ್ಟಕ ಸಂಖ್ಯೆ 3.1: ಐಪಿಡಿಎಸ್ ಕಾರ್ಯಗತಗೊಳಿಸಿದ್ದರ ಅವಧಿ**

| ಕ್ರಮ ಸಂಖ್ಯೆ | ಘಟನೆ | ದಿನಾಂಕ | ತೆಗೆದುಕೊಳ್ಳಲಾದ ವಾಸ್ತವಿಕ ಅವಧಿ | ತೆಗೆದುಕೊಳ್ಳಲಾದ ಒಟ್ಟಾರೆ ಅವದಿ |
|---|---|---|---|---|
| 1 | ಭಾರತ ಸರ್ಕಾರದ ಇಂಧನ ಮಂತ್ರಾಲಯದಿಂದ ಯೋಜನೆಯ ಪ್ರಾರಂಭ | ಡಿಸೆಂಬರ್ 2014 | - | - |
| 2 | ವಿಸಕಂ ಗಳಿಂದ ಸವಿವರ ಯೋಜನಾ ವರದಿಗಳನ್ನು ಸಲ್ಲಿಸುವಿಕೆ | ಜೂನ್ 2015 | 6 ತಿಂಗಳುಗಳು | 6 |
| 3 | ಮೇಲ್ವಿಚಾರಣಾ ಸಮಿತಿಯಿಂದ ಸವಿವರ ಯೋಜನಾ ವರದಿಗಳಿಗೆ ತಾತ್ವಿಕ ಅನುಮೋದನೆ ನೀಡುವಿಕೆ | ಆಗಸ್ಟ್ 2015 | 2 ತಿಂಗಳುಗಳು | 8 |
| 4 | ಸಂಪರ್ಕ–ಸೇತು ಸಂಸ್ಥೆಯು ಯೋಜನೆಗೆ ಅನುಮೋದನೆಯನ್ನು ತಿಳಿಸುವುದು | ಮಾರ್ಚ್ 2016 | 7 ತಿಂಗಳುಗಳು | 15 |
| 5 | ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ನೀಡಿಕೆ | 13 ಫೆಬ್ರವರಿ 2017 ರಿಂದ 04 ಜುಲೈ 2018 | ಸಂಪರ್ಕ–ಸೇತು ಸಂಸ್ಥೆಯಿಂದ ಅನುಮೋದನೆಯನ್ನು ತಿಳಿಸಿದ ದಿನಾಂಕದಿಂದ 11 ತಿಂಗಳುಗಳಿಂದ 27 ತಿಂಗಳುಗಳು | 26 - 42 |
| 6 | ಕಾಮಗಾರಿಗಳನ್ನು ಪೂರ್ಣಗೊಳಿಸುವಿಕೆ | ಡಿಸೆಂಬರ್ 2019 | ಪಿಎಫ್‌ಸಿಯಿಂದ ಅನುಮೋದನೆ ತಿಳಿಸಿದ ದಿನಾಂಕದಿಂದ 18ರಿಂದ 34 ತಿಂಗಳುಗಳು | 60 |

*ಮೂಲ: ವಿಸಕಂಗಳು ಒದಗಿಸಿದ ಯೋಜನೆಯ ದಾಖಲೆಗಳು ಮತ್ತು ಮಾಹಿತಿಯಿಂದ ಲೆಕ್ಕಪರಿಶೋಧನೆಯು ಸಂಗ್ರಹಿಸಿರುವುದು.*

ಲೆಕ್ಕಪರಿಶೋಧನೆಯು ಗಮನಿಸಿದಂತೆ, ಮೇಲ್ವಿಚಾರಣಾ ಸಮಿತಿಯು ಸವಿವರ ಯೋಜನಾ ವರದಿಗಳಿಗೆ ಅನುಮೋದನೆ ನೀಡಿರುವುದನ್ನು ತಿಳಿಸಲು ಪಿಎಫ್‌ಸಿ ಏಳು ತಿಂಗಳುಗಳ ಕಾಲಾವಧಿಯನ್ನು ತೆಗೆದುಕೊಂಡಿತು. ವಿಸಕಂಗಳು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಗುತ್ತಿಗೆದಾರರುಗಳಿಗೆ ನೀಡಲು ಆರು ತಿಂಗಳುಗಳಿಗೆ ಪ್ರತಿಯಾಗಿ 11ರಿಂದ 27 ತಿಂಗಳುಗಳ ಕಾಲಾವಧಿಯನ್ನು ತೆಗೆದುಕೊಂಡವು. ಅದರಿಂದಾಗಿ, ಸೆಪ್ಟೆಂಬರ್ 2018ರ ವೇಳೆಗೆ ಪೂರ್ಣಗೊಳ್ಳಬೇಕಿದ್ದಂತಹ ಕಾಮಗಾರಿಗಳು ಕೇವಲ ಡಿಸೆಂಬರ್ 2019ರಲ್ಲಿ ಪೂರ್ಣಗೊಂಡಿದ್ದವು.

ಕಾಮಗಾರಿಗಳನ್ನು ಗುತ್ತಿಗೆದಾರರುಗಳಿಗೆ ನೀಡುವಲ್ಲಿ/ ಅವುಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬಕ್ಕೆ ಪ್ರಮುಖ ಕಾರಣವೆಂದರೆ ಯೋಜನೆಯನ್ನು ಯಾವ ಮಾದರಿಯಲ್ಲಿ ಕಾರ್ಯಗತಗೊಳಿಸಬೇಕು ಅಂದರೆ ಭಾಗಶ: ಟರ್ನ್‌ಕೀ / ಒಟ್ಟಾರೆ ಟರ್ನ್‌ಕೀ ಮೂಲಕವೇ ಎಂಬುದರ ಬಗ್ಗೆ ಪಿಎಫ್‌ಸಿ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವಲ್ಲಿ ವಿಳಂಬವಾಗಿದ್ದಿತು (12 ತಿಂಗಳುಗಳು).

ಮುಂದುವರೆದು, ಭಾರತ ಸರ್ಕಾರವು ಪ್ರಮುಖ ಸಾಮಗ್ರಿಗಳನ್ನು ಒಂದು ಪ್ರಮಾಣಕ ನಿರ್ದಿಷ್ಟ ನಿರೂಪಣೆಗಳೊಂದಿಗೆ ಸ್ಪರ್ಧಾತ್ಮಕ ದರಗಳಲ್ಲಿ (ಕೇಂದ್ರ ಖರೀದಿ ದರಗಳು–ಸಿಪಿಪಿ) ಒಂದು ಪಾರದರ್ಶಕ ಬಿಡ್ಡಿಂಗ್ ಪ್ರಕ್ರಿಯೆಯ ಮೂಲಕ ಖರೀದಿಸುವುದಕ್ಕೆ ಸಲುವಾಗಿ ಹಾಗೂ ರಾಜ್ಯಗಳಿಗೆ ಅನುಕೂಲವಾಗುವಂತೆ ಮತ್ತು ಕೈಜೋಡಿಸಲು ಒಂದು ಕೇಂದ್ರ ಖರೀದಿ ಸಮಿತಿಯನ್ನು (ಸಿಪಿಸಿ) ರಚಿಸಿತು (ಆಗಸ್ಟ್ 2015), ಇದಕ್ಕೆ ಕರ್ನಾಟಕ ರಾಜ್ಯವೂ ಸೇರಿದಂತೆ ಕೆಲವು ರಾಜ್ಯಗಳು ಅಂತಿಮಗೊಳಿಸಲಾಗಿರುವ ದರಗಳ ಬಗ್ಗೆ[33] ತಮ್ಮ ಅನುಮಾನವನ್ನು ವ್ಯಕ್ತಪಡಿಸಿದವು (ಫೆಬ್ರವರಿ 2016). ಭಾರತ ಸರ್ಕಾರವು ಅಂತಿಮವಾಗಿ ತನ್ನ ಅನುಮೋದನೆಯನ್ನು ನೀಡಿತು (29 ಜೂನ್ 2016) ಹಾಗೂ ರಾಜ್ಯಗಳು ತಮ್ಮ ದರಗಳು ಕೇಂದ್ರ ಖರೀದಿ ದರಗಳಿಗಿಂತ ಕಡಿಮೆಯಾಗಿರುವುದಾಗಿ ಭಾವಿಸಿದಲ್ಲಿ, ತಮ್ಮದೇ ಆದಂತಹ ಸಾಮಗ್ರಿಗಳನ್ನು ಖರೀದಿಸಲು ಸ್ವತಂತ್ರವಾಗಿರುತ್ತವೆ ಎಂಬುದಾಗಿ ತಿಳಿಸಿತು.

ಅಲ್ಲದೆಯೇ, ವಿಸಕಂಗಳು ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬಗಳಿದ್ದವು, ಈ ವಿಳಂಬಗಳು ಈ ಕೆಳಗೆ ಚರ್ಚಿಸಿರುವಂತೆ ಅಸಮರ್ಪಕ ಕ್ಷೇತ್ರ ಸಮೀಕ್ಷೆ ಹಾಗೂ ಇದರ ತತ್ಪರಿಣಾಮವಾಗಿ ಪರಿಮಾಣಗಳಲ್ಲಿ ಆದಂತಹ ವ್ಯತ್ಯಯಗಳು, ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೊದಲು ಶಾಸನಬದ್ಧ ಪ್ರಾಧಿಕಾರಗಳಿಂದ ಅನುಮತಿಗಳ ಕೊರತೆ ಭೂಮಿಯನ್ನು ಪಡೆದುಕೊಳ್ಳದಿದ್ದುದು ಕಾಮಗಾರಿ ಆದೇಶಗಳನ್ನು ನೀಡುವಲ್ಲಿ ವಿಸಕಂಗಳಿಂದ ವಿಳಂಬಗಳು ತಪ್ಪಿತಸ್ಥ ಗುತ್ತಿಗೆದಾರರುಗಳ ಮೇಲೆ ಕ್ರಮ ಕೈಗೊಳ್ಳುವಿಕೆಯಲ್ಲಿನ ಕೊರತೆ, ಇತ್ಯಾದಿಗಳಾಗಿದ್ದವು.

### *3.3.2 ಯೋಜನೆಯ ಅಡಿಯಲ್ಲಿ ಕಾಮಗಾರಿಗಳ ಪೂರ್ಣಗೊಳಿಸುವಲ್ಲಿ ಒಟ್ಟಾರೆ ವಿಳಂಬ*

ಯೋಜನೆಯನ್ನು ಡಿಸೆಂಬರ್ 2014ರಲ್ಲಿ ಪ್ರಾರಂಭಿಸಲಾಯಿತು ಹಾಗೂ ವಿಸಕಂಗಳು ಸವಿವರ ಯೋಜನಾ ವರದಿಗಳನ್ನು ಜೂನ್ 2015ರಲ್ಲಿ ಸಲ್ಲಿಸಿದವು, ಅವುಗಳಿಗೆ ಮೇಲ್ವಿಚಾರಣಾ ಸಮಿತಿಯು ಆಗಸ್ಟ್ 2015ರಲ್ಲಿ ತನ್ನ ಅನುಮೋದನೆ ನೀಡಿದ್ದಿತು. ಆದಾಗ್ಯೂ, ಪಿಎಫ್‌ಸಿ ಈ ಅನುಮೋದನೆಯನ್ನು ವಿಸಕಂಗಳಿಗೆ ಮಾರ್ಚ್ 2016ರಲ್ಲಿ ಅಂದರೆ ಏಳು ತಿಂಗಳುಗಳ ನಂತರ ತಿಳಿಸಿದ್ದಿತು. ವಿಸಕಂಗಳು ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಗುತ್ತಿಗೆದಾರರುಗಳಿಗೆ ಫೆಬ್ರವರಿ 2017ರಿಂದ ಜುಲೈ 2018ರ ನಡುವಿನ ಅವಧಿಯಲ್ಲಿ (11ರಿಂದ 27 ತಿಂಗಳುಗಳ ವಿಳಂಬದೊಂದಿಗೆ) ನೀಡಿದ್ದವು. ಕಾಮಗಾರಿಗಳನ್ನು ನೀಡುವಲ್ಲಿ /ಅವುಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬಕ್ಕೆ ಪ್ರಮುಖ ಕಾರಣವು, ಯೋಜನೆಯನ್ನು ಯಾವ ಮಾದರಿಯಲ್ಲಿ ಕಾರ್ಯಗತಗೊಳಿಸಬೇಕು ಅಂದರೆ ಭಾಗಶ: ಟರ್ನ್‌ಕೀ ಮೂಲಕವೇ / ಒಟ್ಟಾರೆ ಟರ್ನ್‌ಕೀ ಮೂಲಕವೇ ಎಂಬುದರ ಬಗ್ಗೆ ಪಿಎಫ್‌ಸಿ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವಲ್ಲಿ ವಿಳಂಬವಾಗಿದ್ದಿತು (12 ತಿಂಗಳುಗಳು).

ಈ ರೀತಿಯಾಗಿ, ಯೋಜನೆಯ ಅಡಿಯಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿ ಎಲ್ಲಾ ವಿಸಕಂಗಳಲ್ಲಿಯೂ ವಿಳಂಬವಾಗಿದ್ದಿತು, ಅಂತಹ ವಿಳಂಬವು ಯೋಜನೆಯ ಮಾರ್ಗಸೂಚಿಗಳ[34] ಅನುಸಾರ ಪೂರ್ಣಗೊಳಿಸುವಿಕೆಯ ಮೂಲ ನಿಗದಿತ ದಿನಾಂಕದಿಂದ ಎರಡು ತಿಂಗಳುಗಳಿಂದ 20 ತಿಂಗಳುಗಳವರೆಗೆ ಆಗಿದ್ದಿತು. ಮೂಲ ನಿಗದಿತ ದಿನಾಂಕದ ಒಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ವಿಸಕಂಗಳಿಗೆ ಸಾಧ್ಯವಾಗಿರಲಿಲ್ಲ ಹಾಗೂ ಅವುಗಳಿಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಾವಧಿಯನ್ನು ವಿಸ್ತರಿಸಲು ಅನುಮತಿ ನೀಡಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ***ಅನುಬಂಧ – 3*** ರಲ್ಲಿ ವಿವರಿಸಿರುವಂತೆ ಕಾಮಗಾರಿಗಳನ್ನು ಆ ದಿನಾಂಕಗಳ ಒಳಗೆ ಪೂರ್ಣಗೊಂಡಿರುವುದಾಗಿ ಘೋಷಿಸಲಾಗಿದ್ದಿತು.

[33] ಕೇಂದ್ರ ಖರೀದಿ ದರಗಳು.

[34] ಕಂಡಿಕೆ 3.2ರಲ್ಲಿ ತಿಳಿಸಲಾಗಿರುವುದು.

ವಿಸಕಂಗಳು ಯೋಜನೆಯನ್ನು ಕಾರ್ಯಗತಗೊಳಿಸಿದ್ದರ ಮೇಲೆ ಲೆಕ್ಕಪರಿಶೋಧನೆಯು ಗಮನಿಸಿರುವ ಅಂಶಗಳು ಈ ಕೆಳಗಿನಂತಿರುವವು:

### *3.3.3 ಟೆಂಡರುಗಳನ್ನು ಅಂತಿಮರೂಪಕ್ಕೆ ತರುವಲ್ಲಿ ಹಾಗೂ ಕಾಮಗಾರಿಗಳನ್ನು ನೀಡುವಲ್ಲಿನ ವಿಳಂಬ*

ಅನುಮೋದಿತ (ಮಾರ್ಚ್ 2016) ಕಾಮಗಾರಿಗಳನ್ನು ಗುತ್ತಿಗೆದಾರರುಗಳಿಗೆ ನೀಡುವಲ್ಲಿ ವಿಸಕಂಗಳು ಗಮನಾರ್ಹವಾದಂತಹ ಸಮಯವನ್ನು ತೆಗೆದುಕೊಂಡಿದ್ದವು, ಇದು ಕಾಮಗಾರಿಗಳು ಪೂರ್ಣಗೊಳ್ಳಲು ವಿಳಂಬಗೊಳ್ಳುವಲ್ಲಿ ಪರಿಣಮಿಸಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಗುತ್ತಿಗೆದಾರರುಗಳಿಗೆ ಆರು ತಿಂಗಳುಗಳ ಒಳಗೆ ನೀಡಬೇಕಿದ್ದಿತಾದರೂ, ಅನೇಕ ಪ್ರಕರಣಗಳಲ್ಲಿ ಆರು ತಿಂಗಳುಗಳ ನಂತರ ಟೆಂಡರುಗಳನ್ನು ನೀಡಲಾಗಿದ್ದಿತು. ವಿಸಕಂವಾರು ನೀಡಲಾಗಿದ್ದ ಟೆಂಡರುಗಳ ಸಂಖ್ಯೆ, ನೀಡಲಾಗಿದ್ದ ಡಿಡಬ್ಲ್ಯುಎ, ಡಿಡಬ್ಲ್ಯುಎ ನೀಡಲು ತೆಗೆದುಕೊಳ್ಳಲಾಗಿದ್ದಂತಹ ಸಮಯ ಹಾಗೂ ವಿಳಂಬಗಳ ವಿವರಗಳನ್ನು ಈ ಕೆಳಗೆ ಕೋಷ್ಟಕದ ರೂಪದಲ್ಲಿ ನೀಡಲಾಗಿರುವುದು:

**ಕೋಷ್ಟಕ ಸಂಖ್ಯೆ 3.2: ವಿಸಕಂವಾರು ಟೆಂಡರುಗಳನ್ನು ಮತ್ತು ಕಾಮಗಾರಿಗಳ ನೀಡಿಕೆ ಆದೇಶಗಳನ್ನು ನೀಡುವಲ್ಲಿನ ವಿಳಂಬಗಳ ವಿವರಗಳು**

| ಕ್ರಮ ಸಂಖ್ಯೆ | ವಿಸಕಂ | ವ್ಯವಸ್ಥೆ ಬಲಪಡಿಸುವ ಸಲುವಾಗಿ ಕರೆಯಲಾಗಿದ್ದ ಟೆಂಡರುಗಳ ಸಂಖ್ಯೆ | ಆರು ತಿಂಗಳುಗಳನ್ನು ಮೀರಿದಂತೆ ನೀಡಲಾಗಿದ್ದ ಟೆಂಡರುಗಳ ಸಂಖ್ಯೆ | ಆರು ತಿಂಗಳುಗಳನ್ನು ಮೀರಿದಂತೆ ನೀಡಲಾಗಿದ್ದ ಟೆಂಡರುಗಳ ಶೇಕಡಾವಾರು ಸಂಖ್ಯೆ | ಟೆಂಡರುಗಳನ್ನು ನೀಡುವಲ್ಲಿನ ವಿಳಂಬ (ತಿಂಗಳುಗಳಲ್ಲಿ) | ನೀಡಲಾಗಿದ್ದ ಡಿಡಬ್ಲ್ಯುಎಗಳ ಸಂಖ್ಯೆ | ವಿಳಂಬ ಗೊಂಡಿದ್ದ ಡಿಡಬ್ಲ್ಯುಎಗಳ ಸಂಖ್ಯೆ | ಡಿಡಬ್ಲ್ಯುಎಗಳ ನೀಡಿಕೆಯಲ್ಲಿನ ವಿಳಂಬ (ತಿಂಗಳುಗಳಲ್ಲಿ) |
|---|---|---|---|---|---|---|---|---|
| 1 | ಬೆಸ್ಕಾಂ | 11 | 5 | 45.45 | 11 ರಿಂದ 17 | 11 | 11 (100.00) | 6 ರಿಂದ 21 |
| 2 | ಸೆಸ್ಕ್ | 6 | 2 | 33.33 | 7 ರಿಂದ 16 | 6 | 6 (100.00) | 4 ರಿಂದ 13 |
| 3 | ಜೆಸ್ಕಾಂ | 8 | 6 | 75.00 | 8 ರಿಂದ 17 | 8 | 8 (100.00) | 7 ರಿಂದ 15 |
| 4 | ಹೆಸ್ಕಾಂ | 14 | 7 | 50.00 | 9 ರಿಂದ 22 | 14 | 14 (100.00) | 5 ರಿಂದ 28 |
| 5 | ಮೆಸ್ಕಾಂ | 10 | 7 | 70.00 | 7 ರಿಂದ 15 | 14 | 10 (100.00) | 7 ರಿಂದ 20 |

*ಮೂಲ: ವಿಸಕಂಗಳು ಒದಗಿಸಿದ ಮಾಹಿತಿಯಿಂದ ಲೆಕ್ಕಪರಿಶೋಧನೆಯು ಸಂಕಲಿಸಲಾಗಿದೆ.*

ಗಮನಿಸಲಾದಂತೆ, ವಿಸಕಂಗಳು ಟೆಂಡರುಗಳನ್ನು ಏಳರಿಂದ 22 ತಿಂಗಳುಗಳ ವಿಳಂಬಗಳೊಂದಿಗೆ ನೀಡಿದ್ದವು ಹಾಗೂ ಕಾಮಗಾರಿಗಳ ನೀಡಿಕೆಯನ್ನು ಸಹ ಮೇಲ್ವಿಚಾರಣಾ ಸಮಿತಿಯು ಅನುಮೋದಿಸಿದ್ದಂತಹ ನಿರ್ದಿಷ್ಟ ಕಾಲಾವಧಿಯನ್ನು ಮೀರಿದಂತೆ ನಾಲ್ಕರಿಂದ 28 ತಿಂಗಳುಗಳಷ್ಟು ವಿಳಂಬಗೊಳಿಸಲಾಗಿದ್ದಿತು. ಟೆಂಡರುಗಳನ್ನು ಮತ್ತು ಡಿಡಬ್ಲ್ಯುಎಗಳನ್ನು ನೀಡುವಲ್ಲಿನ ವಿಳಂಬಗಳನ್ನು ***ಅನುಬಂಧ–4*** ರಲ್ಲಿ ವಿವರಿಸಲಾಗಿರುವುದು.

### *3.3.4 ಕಾಮಗಾರಿ ಆದೇಶಗಳನ್ನು ನೀಡುವಲ್ಲಿನ ವಿಳಂಬ ಹಾಗೂ ತತ್ಪರಿಣಾಮವಾಗಿ ಕಾರ್ಯಗತಗೊಳಿಸುವಲ್ಲಿ ಆದಂತಹ ವಿಳಂಬ*

ಲೆಕ್ಕಪರಿಶೋಧನೆಯು ಐದು ವಿಸಕಂಗಳಲ್ಲಿ ವ್ಯವಸ್ಥೆ ಬಲಪಡಿಸುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನೀಡಲಾಗಿದ್ದಂತಹ 49 ಡಿಡಬ್ಲ್ಯುಎಗಳನ್ನು ಸಮೀಕ್ಷಿಸಿತು ಹಾಗೂ ಕಾಮಗಾರಿಗಳನ್ನು ಕಾರ್ಯಗತಗೊಳಿಸದಿರುವುದನ್ನು ಮತ್ತು ವಿಭಾಗಗಳು ಕಾಮಗಾರಿ ಆದೇಶಗಳನ್ನು ನೀಡುವಲ್ಲಿನ ವಿಳಂಬಗಳ ಕಾರಣ[35] ಕಾಮಗಾರಿಗಳು ಪೂರ್ಣಗೊಳ್ಳುವಲ್ಲಿ ವಿಳಂಬಗಳು ಆಗಿರುವುದನ್ನು ಗಮನಿಸಿತು. ವಿಸಕಂಗಳು ಕಾಮಗಾರಿ ನೀಡಿಕೆ ಆದೇಶ ಪತ್ರವನ್ನು (LoA) ನೀಡಿದ ದಿನಾಂಕದಿಂದ ಯೋಜನೆಗಳನ್ನು ಪೂರ್ಣಗೊಳಿಸಲು 24 ತಿಂಗಳುಗಳ ಕಾಲಮಿತಿ ಇದ್ದಿತು. ವಿಸಕಂಗಳ ಸಾಂಸ್ಥಿಕ ಕಚೇರಿಯು ಟೆಂಡರುಗಳನ್ನು ಆಹ್ವಾನಿಸಿತು ಹಾಗೂ ವೃತ್ತವಾರು ಡಿಡಬ್ಲ್ಯುಎಗಳನ್ನು ನೀಡಿದ್ದಿತು. ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬದ ಕೆಲವು ದೃಷ್ಟಾಂತಗಳನ್ನು ಈ ಕೆಳಗೆ ವಿವರಿಸಲಾಗಿರುವುದು:

[35] ಡಿಡಬ್ಲ್ಯುಎಗಳ ಆಧಾರದ ಮೇರೆಗೆ ವಿಭಾಗಗಳು ವೈಯಕ್ತಿಕ ಕಾಮಗಾರಿ ಭಾಗಗಳಿಗಾಗಿ ಕಾಮಗಾರಿ ನೀಡಿಕೆ ಆದೇಶಗಳನ್ನು ಗುತ್ತಿಗೆದಾರರುಗಳಿಗೆ ನೀಡುತ್ತವೆ.

i. ಬೆಸ್ಕಾಂನ ಪರೀಕ್ಷಾ–ಪರಿಶೀಲನೆ ಮಾಡಲಾದ ಎಂಟು ವಿಭಾಗಗಳು[36] ವ್ಯವಸ್ಥೆ ಬಲಪಡಿಸುವ ಕಾಮಗಾರಿಗಳಿಗಾಗಿ ಆರು ಡಿಡಬ್ಲ್ಯುಎಗಳಿಗಾಗಿ 632 ಕಾಮಗಾರಿ ಆದೇಶಗಳನ್ನು ನೀಡಿದ್ದವು. ಈ ಕಾಮಗಾರಿ ನೀಡಿಕೆ ಆದೇಶಗಳನ್ನು ನೀಡುವಲ್ಲಿ ವಿಳಂಬಗಳಾಗಿದ್ದವು ಹಾಗೂ ಐಪಿಡಿಎಸ್ ಅಡಿಯಲ್ಲಿನ ಇತರೆ ಭಾಗಗಳಿಗೆ ನೀಡಿಕೆ ಆದೇಶಗಳನ್ನು ನೀಡುವಲ್ಲಿ ಈ ಕೆಳಗೆ ನೀಡಿರುವ ವಿವರಗಳ ಅನುಸಾರ ವಿಳಂಬಗಳಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು:

**ಕೋಷ್ಟಕ ಸಂಖ್ಯೆ 3.3: ಬೆಸ್ಕಾಂನಲ್ಲಿ ಕಾಮಗಾರಿ ನೀಡಿಕೆ ಆದೇಶಗಳನ್ನು ನೀಡುವಲ್ಲಿನ ವಿಳಂಬದ ವಿವರಗಳು**

| ಕ್ರಮ ಸಂಖ್ಯೆ | ಕಾಮಗಾರಿಯ ಸ್ವರೂಪ | ನೀಡಲಾಗಿದ್ದ ಕಾಮಗಾರಿ ಆದೇಶಗಳ ಸಂಖ್ಯೆ | ವಿಳಂಬದೊಂದಿಗೆ ನೀಡಲಾಗಿದ್ದಂತಹ ಕಾಮಗಾರಿ ಆದೇಶಗಳ ಸಂಖ್ಯೆ | ಡಿಡಬ್ಲ್ಯುಎಗಳನ್ನು ನೀಡಿದನಂತರ ಕಾಮಗಾರಿ ಆದೇಶಗಳನ್ನು ನೀಡಿದ್ದುದು (ವಿಳಂಬದ ಅವಧಿ ತಿಂಗಳುಗಳಲ್ಲಿ) |
|---|---|---|---|---|
| 1 | ವ್ಯವಸ್ಥೆ ಬಲಪಡಿಸುವಿಕೆ | 632 | 378 | 13-24 |
| | | | 90 | 25-36 |
| | | | 11 | 37-48 |
| 2 | ಗ್ರಾಹಕರುಗಳಿಗೆ ಎಎಂಆರ್ ಮೀಟರುಗಳ ಅಳವಡಿಕೆ | 42 | 27 | 7-12 |
| 3 | ಮೋಡೆಮ್ಮುಗಳ ಖರೀದಿ ಮತ್ತು ಅಳವಡಿಸುವಿಕೆ | 60 | 60 | 10-18 |
| 4 | ಮೀಟರುಗಳನ್ನು ಅಳವಡಿಸುವ ಸಲುವಾಗಿ ಕ್ಯೂಬಿಕಲ್ಲುಗಳು | 5 | 5 | 7-12 |

*ಮೂಲ: ಬೆಸ್ಕಾಂ ಒದಗಿಸಿದ ಮಾಹಿತಿಯಿಂದ ಲೆಕ್ಕಪರಿಶೋಧನೆಯು ಸಂಕಲಿಸಲಾಗಿದೆ.*

ಬೆಸ್ಕಾಂನ ರಾಜಾಜಿನಗರ ಮತ್ತು ದಾವಣಗೆರೆ ವಿಭಾಗಗಳಲ್ಲಿ ₹ 26.81 ಕೋಟಿ ಮೌಲ್ಯದ 69 ಕಾಮಗಾರಿ ಆದೇಶಗಳನ್ನು (63 ಕಾಮಗಾರಿ ಆದೇಶಗಳು ವ್ಯವಸ್ಥೆ ಬಲಪಡಿಸುವಿಕೆಗೆ ಮತ್ತು 6 40 ಎಚ್‌ಪಿ ಮತ್ತು ಅದಕ್ಕೂ ಅಧಿಕ ಪ್ರಮಾಣಕ್ಕೆ, ಎಲ್‌ಟಿ–3 ಮತ್ತು ಎಲ್‌ಟಿ–5 ಮೀಟರುಗಳಿಗೆ ಮೋಡೆಮ್‌ಗಳನ್ನು ಅಳವಡಿಸುವಿಕೆ) ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿತಗೊಂಡಿದ್ದ ದಿನಾಂಕದ ಅಂದರೆ 31 ಮಾರ್ಚ್ 2019ರ ನಂತರ ನೀಡಲಾಗಿದ್ದಿತು (***ಅನುಬಂಧ–5***). ಅನೇಕ ದೃಷ್ಟಾಂತಗಳಲ್ಲಿ (69ರ ಪೈಕಿ 57), ಕಾಮಗಾರಿ ನೀಡಿಕೆ ಆದೇಶಗಳ ದಿನಾಂಕಗಳು ಮತ್ತು ಕಾಮಗಾರಿ ಪೂರ್ಣಗೊಂಡಿರುವಿಕೆ ದಿನಾಂಕಗಳು ಒಂದೇ ಆಗಿದ್ದವು ಎಂಬುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು. ಬೆಸ್ಕಾಂ ಕಾಮಗಾರಿ ಆದೇಶಗಳ ನೀಡಿಕೆಗೆ ವಿಳಂಬಗಳಿಗೆ ಕಾರಣಗಳನ್ನು ದಾಖಲೆಗಳಲ್ಲಿ ನಮೂದಿಸಿರಲಿಲ್ಲ, ಇದಕ್ಕೆ ಉತ್ತರವಾಗಿ ಬೆಸ್ಕಾಂ ವಿಳಂಬವು ಆಯವ್ಯಯ ಹಂಚಿಕೆಯನ್ನು ಮಾಡದಿದ್ದುದು, ತಂತ್ರಾಂಶ ಅನ್ವಯದಲ್ಲಿ ತಾಂತ್ರಿಕ ಅಡಚಣೆಗಳು ಹಾಗೂ ಸಮೀಕ್ಷೆಗಳನ್ನು ನಡೆಸುವ ಅಗತ್ಯತೆಯುಂಟಾದುದ್ದು ಕಾರಣಗಳಾಗಿದ್ದವು ಎಂಬುದಾಗಿ ತಿಳಿಸಿತು. ಬೆಸ್ಕಾಂ ನೀಡಿರುವ ಉತ್ತರವು ಒಪ್ಪುವಂತಿಲ್ಲ ಏಕೆಂದರೆ, ಯೋಜನೆಯ ಅಡಿಯಲ್ಲಿ ಆಯವ್ಯಯ ಹಂಚಿಕೆಯನ್ನು ಅದಾಗಲೇ ಮಾಡಿದ್ದರಿಂದ ಹಾಗೂ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಮೊದಲು ಸಮೀಕ್ಷೆಯನ್ನು ಕೈಗೊಳ್ಳಬೇಕಿದ್ದಿತಾದ್ದರಿಂದ, ಬೆಸ್ಕಾಂ ನೀಡಿರುವ ಕಾರಣಗಳು ಏಳರಿಂದ 48 ತಿಂಗಳುಗಳ ವಿಳಂಬಗಳನ್ನು ಸಮರ್ಥಿಸಿಕೊಳ್ಳುವುದಿಲ್ಲ.

ii. ಸೆಸ್ಕ್ ನಾಲ್ಕು ವ್ಯವಸ್ಥೆ ಬಲಪಡಿಸುವ ಕಾಮಗಾರಿಗಳನ್ನು ಅನುಮೋದಿತ ದಿನಾಂಕದಿಂದ (ಮೇಲ್ವಿಚಾರಣಾ ಸಮಿತಿಯಿಂದ) 10ರಿಂದ 12 ತಿಂಗಳುಗಳ ವಿಳಂಬಗಳೊಂದಿಗೆ ನೀಡಿದ್ದಿತು (ಫೆಬ್ರವರಿ – ಏಪ್ರಿಲ್ 2017) ಹಾಗೂ ಕಾಮಗಾರಿಗಳನ್ನು 35ರಿಂದ 45 ತಿಂಗಳಲ್ಲಿ ಐದರಿಂದ 15 ತಿಂಗಳುಗಳ ವಿಳಂಬಗಳೊಂದಿಗೆ ಪೂರ್ಣಗೊಳಿಸಲಾಗಿದ್ದಿತು. ಸೆಸ್ಕ್‌ನಿಂದ ಚಾಮರಾಜನಗರ – ಕೊಡುಗು ವೃತ್ತದಲ್ಲಿ ಡಿಡಬ್ಲ್ಯುಎಗಳನ್ನು 9 ತಿಂಗಳುಗಳ ವಿಳಂಬದೊಂದಿಗೆ ನೀಡಲಾಗಿದ್ದಿತು ಹಾಗೂ ನಿರ್ದಿಷ್ಟ ಸಮಯದ ಒಳಗೆ ನೀಡಲಾಗಿದ್ದ ಕಾಮಗಾರಿಗಳ ಕೇವಲ ಶೇಕಡಾ 75ರಷ್ಟನ್ನು ಮಾತ್ರ ಕಾರ್ಯಗತಗೊಳಿಸಲು ಸಾಧ್ಯವಾಗಿದ್ದಿತು. ಹಾಸನ ವೃತ್ತದಲ್ಲಿ, ಫೆಬ್ರವರಿ 2017ರಲ್ಲಿ ನೀಡಲಾಗಿದ್ದಂತಹ ಕಾಮಗಾರಿಗಳನ್ನು ಐಪಿಡಿಎಸ್ ಮುಕ್ತಾಯಗೊಳ್ಳುವ ವೇಳೆಯಲ್ಲಿ (ಮಾರ್ಚ್ 2019) ಪೂರ್ಣಗೊಂಡಿರಲಿಲ್ಲ. ಯೋಜನೆಯು ಮುಕ್ತಾಯಗೊಳ್ಳುವ ವೇಳೆಯಲ್ಲಿ, ಭೂಗತ

[36] ದಾವಣಗೆರೆ, ಚಿತ್ರದುರ್ಗ, ತುಮಕೂರು, ಎಚ್‌ಎಸ್‌ಆರ್ ಬಡಾವಣೆ, ಕೋರಮಂಗಲ, ಇಂದಿರಾನಗರ, ರಾಜಾಜಿನಗರ ಮತ್ತು ಕೆಂಗೇರಿ.

ಕೇಬಲ್ಲು ಕಾಮಗಾರಿಯು (ಶೇಕಡಾ 19.05ರಷ್ಟು, ಎಲ್.ಟಿ ಮಾರ್ಗಗಳನ್ನು ಹೆಚ್ಚಳಗೊಳಿಸುವಿಕೆ (ಶೇಕಡಾ 57.78), ಎಲ್.ಟಿ ಉಪ–ಸ್ಟೇಷನ್ನಿನ ಸಾಮರ್ಥ್ಯ ಹೆಚ್ಚಳಗೊಳಿಸುವಿಕೆ (ಶೇಕಡಾ 70.27), ಎಬಿ ಕೇಬಲ್ಲು ಕಾಮಗಾರಿಗಳು (ಶೇಕಡಾ 76.83) ಪೂರ್ಣಗೊಂಡಿದ್ದವು. ಟೆಂಡರು ಷರತ್ತುಗಳ ಅನುಸಾರ ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿನ ವಿಳಂಬಕ್ಕಾಗಿ ಹಾಸನ ವೃತ್ತದಲ್ಲಿ ದಂಡವನ್ನಾಗಿ ₹ 0.18 ಲಕ್ಷ ಮೊತ್ತವನ್ನು ವಿಧಿಸಿದ್ದ ದೃಷ್ಟಾಂತವನ್ನು ಹೊರತುಪಡಿಸಿದಂತೆ ನಿರ್ದಿಷ್ಟ ಕಾಲಮಿತಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದುದಕ್ಕಾಗಿ ಗುತ್ತಿಗೆದಾರರುಗಳ ಪ್ರತಿಯಾಗಿ ಯಾವುದೇ ಕ್ರಮಗಳನ್ನು ಕೈಗೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಕೆಲಸದ ಕಳಪೆ ಪ್ರಗತಿಯಿಂದಾಗಿ, ಗುತ್ತಿಗೆದಾರರಿಗೆ ನೋಟಿಸ್‌ಗಳನ್ನು ಸಹ ನೀಡಲಾಗಿದೆ ಮತ್ತು ಕ್ಷೇತ್ರ ನಿರ್ಬಂಧಗಳು/ ಕಾರಿಡಾರ್/ ದಾರಿಯ ಹಕ್ಕು, ಸಮಸ್ಯೆಗಳು/ ಮರು–ಮಾರ್ಗೀಕರಣ/ ಸ್ಥಳೀಯ ಸಮಸ್ಯೆಗಳಿಂದಾಗಿ, ನೀಡಲಾದ ವಸ್ತುಗಳ ಪ್ರಮಾಣವನ್ನು ಕಡಿಮೆ ಮಾಡಲಾಗಿದೆ/ ಹೆಚ್ಚಿಸಲಾಗಿದೆ ಎಂದು ಸೆಸ್ಕ್ ತಿಳಿಸಿದೆ (ಅಕ್ಟೋಬರ್ 2024). ಇದಲ್ಲದೆ, ಮಾರ್ಚ್ 2018 ರಿಂದ ಮೇ 2018 ರವರೆಗೆ ಕರ್ನಾಟಕ ವಿಧಾನಸಭೆಗೆ ಚುನಾವಣೆಗಳು, ಮಾರ್ಚ್ 2019 ರಿಂದ ಮೇ 2019 ರವರೆಗೆ ಸಂಸತ್ತಿನ ಚುನಾವಣೆ, 2018 ರಲ್ಲಿ ಕೊಡಗಿನಲ್ಲಿ ನಡೆದ ನೈಸರ್ಗಿಕ ವಿಕೋಪ, 2017 ರಲ್ಲಿ ಜಿಎಸ್‌ಟಿ ಜಾರಿ ಇತ್ಯಾದಿಗಳಿಂದಾಗಿ ಕೆಲಸ ಪೂರ್ಣಗೊಳ್ಳುವಲ್ಲಿ ವಿಳಂಬವಾಗಿದೆ ಎಂದು ಸೆಸ್ಕ್ ತಿಳಿಸಿದೆ. ಕಾಮಗಾರಿಗಳನ್ನು ನೀಡುವ ಮೊದಲು ದಾರಿಯ ಹಕ್ಕು, ಸಮಸ್ಯೆಗಳು ಇತ್ಯಾದಿಗಳನ್ನು ಬಗೆಹರಿಸಬೇಕಾಗಿತ್ತು ಮತ್ತು ಇದಲ್ಲದೆ, ಸೆಸ್ಕ್ 2016 ರಲ್ಲಿ ಆರಂಭಿಕ ಟೆಂಡರ್ ಕರೆಯುವ ಸಮಯದಲ್ಲಿ ಮಾಡಿದಂತೆ ನೀತಿ ಸಂಹಿತೆಯಿಂದ ವಿನಾಯಿತಿ ನೀಡುವಂತೆ ಭಾರತೀಯ ಚುನಾವಣಾ ಆಯೋಗಕ್ಕೆ ಬರೆಯುವ ಆಯ್ಕೆಯನ್ನು ಬಳಸಲಿಲ್ಲ ಎಂದು ಆಡಿಟ್ ಗಮನಿಸಿದೆ. ಗುತ್ತಿಗೆದಾರರು ಏಪ್ರಿಲ್ 12, 2019ರ ವೇಳೆಗೆ ಕೆಲಸವನ್ನು ಪೂರ್ಣಗೊಳಿಸಿರಲಿಲ್ಲ. ಸೆಸ್ಕ್ ಯಾವುದೇ ವಿಳಂಬಕ್ಕಾಗಿ ಪರಿಹಾರ ವಿಧಿಸಲಿಲ್ಲ ಮತ್ತು ವಿಧಿಸದಿರಲು ಕಾರಣಗಳು ದಾಖಲೆಗಳಿಂದ ಲಭ್ಯವಾಗಲಿಲ್ಲ.

iii. ಹೆಸ್ಕಾಂ ಚಿಕ್ಕೋಡಿ ವೃತ್ತದಲ್ಲಿ ಆರು ಪಟ್ಟಣಗಳಲ್ಲಿ ವ್ಯವಸ್ಥೆ ಬಲಗೊಳಿಸುವಿಕೆ ಕಾಮಗಾರಿಗಳನ್ನು ಮಣಿಪಾಲ್ ಎನರ್ಜಿ ಅಂಡ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್, ಬೆಂಗಳೂರು, ಇವರಿಗೆ ಮಾರ್ಚ್ 2017ರಲ್ಲಿ ₹4.74 ಕೋಟಿ[37] ಮೌಲ್ಯದಲ್ಲಿ (ಟೆಂಡರಿಗೆ ಇಡಲಾದ ಮೊತ್ತಕ್ಕೆ ಶೇಕಡಾ 20.69ರಷ್ಟು ಅಧಿಕವಾಗಿ) ಮಾರ್ಚ್ 2018ರ ವೇಳೆಗೆ ಪೂರ್ಣಗೊಳಿಸಬೇಕಾದ ಷರತ್ತಿನೊಂದಿಗೆ ನೀಡಿದ್ದಿತು (ಮಾರ್ಚ್ 2017). ಕಾಮಗಾರಿಯನ್ನು ಸೆಪ್ಟಂಬರ್ 2019ರಲ್ಲಿ 18 ತಿಂಗಳುಗಳ ವಿಳಂಬದೊಂದಿಗೆ ₹3.46 ಕೋಟಿ ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದ್ದಿತು. ಹೆಸ್ಕಾಂ ಯಾವುದೇ ಸಮಾಪನ ನಷ್ಟಗಳ ದಂಡವನ್ನು ವಿಧಿಸಿರಲಿಲ್ಲ ಹಾಗೂ ಅದನ್ನು ವಿಧಿಸದಿರಲು ಕಾರಣಗಳು ದಾಖಲೆಗಳಿಂದ ಕಂಡುಬರುತ್ತಿರಲಿಲ್ಲ.

ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಈ ಅಂಶಕ್ಕೆ ಹೆಸ್ಕಾಂ ಯಾವುದೇ ನಿರ್ದಿಷ್ಟ ಉತ್ತರವನ್ನು ಒದಗಿಸಲಿಲ್ಲ.

ಈ ವಿಳಂಬಗಳು ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬದಲ್ಲಿ ಪರಿಣಮಿಸಿದ್ದವು ಹಾಗೂ ತತ್ಪರಿಣಾಮವಾಗಿ ಸವಿವರ ಕಾಮಗಾರಿ ನೀಡಿಕೆ ಆದೇಶಗಳನ್ನು ನೀಡಿದ ದಿನಾಂಕದಿಂದ ಮೂರು ವರ್ಷಗಳು ಮೀರಿದಂತೆ ಕಳೆದನಂತರವೂ ಚಿಂತಿಸಲಾಗಿದ್ದಂತೆ ಉದ್ದೇಶಗಳನ್ನು ಈಡೇರಿಸಿಕೊಳ್ಳದಿರುವಲ್ಲಿ ಪರಿಣಮಿಸಿದ್ದಿತು.

[37] ₹ 3.63 ಕೋಟಿ (ಸರಬರಾಜು) + ₹ 1.11 ಕೋಟಿ (ಸ್ಥಾಪಿಸುವುದು) = ₹ 4.74 ಕೋಟಿ.

**ಶಿಫಾರಸುಗಳು:**

**2.** **ವಿಸಕಂಗಳು ಟೆಂಡರುಗಳನ್ನು ಸಮಯೋಚಿತವಾಗಿ ನೀಡುವುದನ್ನು ಹಾಗೂ ಕಾಮಗಾರಿಗಳನ್ನು ಯಾವುದೇ ವಿಳಂಬವಿಲ್ಲದೆಯೇ ಕೈಗೆತ್ತಿಕೊಳ್ಳುವುದನ್ನು ಹಾಗೂ ಚಿಂತಿಸಲಾಗಿರುವ ಉದ್ದೇಶಗಳು ಈಡೇರುವ ಸಲುವಾಗಿ ಕಾಮಗಾರಿಗಳನ್ನು ಸಮಯೋಚಿತವಾಗಿ ಪೂರ್ಣಗೊಳಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಒಂದು ವ್ಯವಸ್ಥೆಯನ್ನು ಸ್ಥಾಪಿಸುವುದನ್ನು ಕರ್ನಾಟಕ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.**

### *3.4 ಯೋಜನೆಯಡಿಯಲ್ಲಿ ವ್ಯವಸ್ಥೆ ಬಲಪಡಿಸುವಿಕೆ ಕಾರ್ಯಗಳ ಸ್ಥಿತಿ*

ಪಿಎಫ್‌ಸಿ ಸಂಪರ್ಕ–ಸೇತು ಸಂಸ್ಥೆಯಾಗಿದ್ದು, ವ್ಯವಸ್ಥೆ ಬಲಪಡಿಸುವಿಕೆ ಕಾಮಗಾರಿಗಳ ಅಡಿಯಲ್ಲಿ ಕೈಗೆತ್ತಿಕೊಳ್ಳಬೇಕಾದಂತಹ 27 ಘಟಕಗಳನ್ನು ಗುರುತಿಸಿತು, ಅವುಗಳ ಪೈಕಿ 23 ಘಟಕಗಳಿಗೆ ಸವಿವರ ಯೋಜನಾ ವರದಿಗಳನ್ನು ತಯಾರಿಸಲಾಗಿದ್ದಿತು ಮತ್ತು ಅನುಮೋದಿಸಲಾಗಿದ್ದಿತು ಹಾಗೂ ರಾಜ್ಯದಲ್ಲಿನ ವಿಸಕಂಗಳು 19 ಘಟಕಗಳನ್ನು ಕಾರ್ಯಗತಗೊಳಿಸಿದವು. ವಿಸಕಂಗಳು ಉಪ–ಸ್ಟೇಷನ್ನುಗಳು, ಟ್ರಾನ್ಸ್‌ಫಾರ್ಮರ್‌ಗಳ ಸ್ಥಾಪನೆ ಮತ್ತು ಸಾಮರ್ಥ್ಯ ವರ್ಧನೆ, ಹೊಸ 33ಕಿವ್ಯಾ ಫೀಡರ್‌ಗಳನ್ನು ಎಳೆಯುವುದು, ಭೂಗತ ಕೇಬಲ್ಲುಗಳನ್ನು ಸ್ಥಾಪಿಸುವುದು, 11 ಕಿವ್ಯಾ ಬೇ ವಿಸ್ತರಣೆ ಹಾಗೂ ಸರ್ಕಾರಿ ಕಟ್ಟಡಗಳ ಮೇಲೆ ಸೌರ ಫಲಕಗಳ ಅಳವಡಿಕೆ, ಮುಂತಾದ ಒಂಬತ್ತು ಘಟಕಗಳ ಕಾಮಗಾರಿಗಳನ್ನು ಕಾರ್ಯಗತಗೊಳಿಸಿದವು. 33/11 ಕಿವ್ಯಾ ಉಪ–ಸ್ಟೇಷನ್ನುಗಳ ದುರಸ್ತಿ ಮತ್ತು ನಿರ್ವಹಣೆ, ಕೆಪಾಸಿಟರ್ ಬ್ಯಾಂಕು, ಸ್ಮಾರ್ಟ್ ಮೀಟರು ಮತ್ತು ಪ್ರೀಪೈಡ್ ಮೀಟರು, ಇವುಗಳಿಗೆ ಸಂಬಂಧಿತ ನಾಲ್ಕು ಘಟಕಗಳನ್ನು ಕಾರ್ಯಗತಗೊಳಿಸಿರಲಿಲ್ಲ. ಮೇಲೆ ತಿಳಿಸಲಾದ ಘಟಕಗಳ ಅನುಮೋದಿತ ಪ್ರಮಾಣಕ್ಕೆ ಪ್ರತಿಯಾಗಿ ಕಾರ್ಯಗತಗೊಳಿಸುವಿಕೆಯು ಶೇಕಡಾವಾರು ಶೂನ್ಯದಿಂದ ಶೇಕಡಾ 4,890 ರವರೆಗೆ ಇದ್ದಿತು (ರಿಂಗ್ ಮೈನ್ ಯೂನಿಟ್ಟುಗಳಿಗೆ –ಆರ್‌ಎಂಯು ಸಂಬಂಧಿಸಿದಂತೆ). ಅನುಮೋದಿಸಲಾಗಿದ್ದ ಕಾಮಗಾರಿಗಳು, ಕಾರ್ಯಗತಗೊಳಿಸಿದ್ದುದು ಹಾಗೂ ಕೊರತೆ/ಹೆಚ್ಚುವರಿ ಹಾಗೂ ಅನುಮೋದಿತ ಪ್ರಮಾಣಕ್ಕೆ ಹೋಲಿಸಿದರೆ ಕಾರ್ಯಗತಗೊಳಿಸಲಾದ ಶೇಕಡಾವಾರು ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

**ಕೋಷ್ಟಕ ಸಂಖ್ಯೆ 3.4: ವಿಸಕಂಗಳಿಗೆ ಸಂಬಂಧಿಸಿದಂತೆ ಕ್ರೋಡೀಕರಿಸಲಾಗಿರುವಂತಹ ವ್ಯವಸ್ಥೆ ಬಲಪಡಿಸುವಿಕೆಯಲ್ಲಿನ ಅನುಮೋದಿತ ಪರಿಮಾಣಕ್ಕೆ ಪ್ರತಿಯಾಗಿ ಶೇಕಡಾವಾರು ಸಾಧನೆ**

| ಕ್ರಮ ಸಂಖ್ಯೆ | ಘಟಕಗಳು | ಯೂನಿಟ್ಟು | ಅನುಮೋದಿತ ಪರಿಮಾಣ | ಕಾರ್ಯಗತ ಗೊಳಿಸಲಾದ ಪರಿಮಾಣ | ಕೊರತೆ (–) / ಹೆಚ್ಚುವರಿ | ಅನುಮೋದಿತ ಪರಿಮಾಣಕ್ಕೆ ಪ್ರತಿಯಾಗಿ ಶೇಕಡಾವಾರು ಸಾಧನೆ |
|---|---|---|---|---|---|---|
| 1 | ಹೊಸ ಉಪ–ಸ್ಟೇಷನ್ನು | ಎಂವಿಎ | 85.00 | 75.00 | -10.00 | 88.24 |
| | ಹೊಸ ಉಪ–ಸ್ಟೇಷನ್ನುಗಳ ಸಂಖ್ಯೆ | ಸಂಖ್ಯೆ | 7 | 7 | - | 100.00 |
| 2 | 33/11 ಕಿವ್ಯಾ ಹೆಚ್ಚುವರಿ ಟ್ರಾನ್ಸ್‌ಫಾರ್ಮರು | ಎಂವಿಎ | 10.00 | 10.00 | - | 100.00 |
| | 33/11 ಕಿವ್ಯಾ ಹೆಚ್ಚುವರಿ ಟ್ರಾನ್ಸ್‌ಫಾರ್ಮರುಗಳ ಸಂಖ್ಯೆ | ಸಂಖ್ಯೆ | 2 | 2 | - | 100.00 |
| 3 | 33 ಕಿವ್ಯಾ ಹೊಸ ಫೀಡರುಗಳು | ಕಿಮೀ | 19.00 | 21.73 | 2.73 | 114.37 |
| 4 | 33 ಕಿವ್ಯಾ ಫೀಡರು ರೀಕಂಡಕ್ಟರಿಂಗ್ | ಕಿಮೀ | 63.00 | 43.14 | -19.86 | 68.48 |
| 5 | 11 ಕಿವ್ಯಾ ಹೊಸ ಫೀಡರುಗಳು | ಕಿಮೀ | 1,166.50 | 927.81 | -238.69 | 79.54 |
| 6 | 11 ಕಿವ್ಯಾ ಫೀಡರು ರೀಕಂಡಕ್ಟರಿಂಗ್ | ಕಿಮೀ | 1,207.90 | 930.60 | -277.30 | 77.04 |
| 7 | ಏರಿಯಲ್ ಬಂಚ್ಡ್ ಕೇಬಲ್ಲು | ಕಿಮೀ | 2,319.20 | 2,067.75 | -251.45 | 89.16 |
| 8 | ಭೂಗತ ಕೇಬಲ್ಲುಗಳು | ಕಿಮೀ | 950.72 | 1,300.12 | 349.40 | 136.75 |
| 9 | 11 ಕಿವ್ಯಾ ಬೇ ಎಕ್ಸ್‌ಟೆನ್‌ಷನ್ | ಸಂಖ್ಯೆ | 2 | 6 | 4 | 300.00 |
| 10 | ಹೊಸ ಡಿಟಿ ಸ್ಥಾಪನೆ | ಎಂವಿಎ | 293.04 | 384.34 | 91.30 | 131.16 |
| | ಹೊಸ ಡಿಟಿ ಸ್ಥಾಪನೆಯ ಸಂಖ್ಯೆ | ಸಂಖ್ಯೆ | 3,966 | 3,899 | -67 | 98.31 |
| 11 | ಡಿಟಿ ಸಾಮರ್ಥ್ಯ ಹೆಚ್ಚಳ | ಎಂವಿಎ | 78.22 | 93.01 | 14.79 | 118.91 |
| | ಡಿಟಿ ಸಾಮರ್ಥ್ಯ ಹೆಚ್ಚಳದ ಡಿಟಿಗಳ ಸಂಖ್ಯೆ | ಸಂಖ್ಯೆ | 1,240 | 1,225 | -15 | 98.79 |
| 12 | ಹೊಸ ಎಲ್‌ಟಿ ಮಾರ್ಗಗಳು | ಕಿಮೀ | 727.96 | 456.91 | -271.05 | 62.77 |

| ಕ್ರಮ ಸಂಖ್ಯೆ | ಘಟಕಗಳು | ಯೂನಿಟ್ಟು | ಅನುಮೋದಿತ ಪರಿಮಾಣ | ಕಾರ್ಯಗತ ಗೊಳಿಸಲಾದ ಪರಿಮಾಣ | ಕೊರತೆ (–) / ಹೆಚ್ಚುವರಿ | ಅನುಮೋದಿತ ಪರಿಮಾಣಕ್ಕೆ ಪ್ರತಿಯಾಗಿ ಶೇಕಡಾವಾರು ಸಾಧನೆ |
|---|---|---|---|---|---|---|
| 13 | ಎಲ್‌ಟಿ ಮಾರ್ಗ ರೀಕಂಡಕ್ಟರಿಂಗ್ | ಕಿಮೀ | 6,744.50 | 5,625.33 | -1,119.17 | 83.41 |
| 14 | ಬೌಂಡರಿ ಮೀಟರು | ಸಂಖ್ಯೆ | 95 | 72 | -23 | 75.79 |
| 15 | ಫೀಡರು ಮೀಟರುಗಳು / ಡಿಟಿ ಮೀಟರುಗಳು | ಸಂಖ್ಯೆ | 4,318 | 6810 | -3,637 | 15.77 |
| 16 | ಗ್ರಾಹಕರ ಮೀಟರುಗಳು | ಸಂಖ್ಯೆ | 8,99,681 | 6,04,183 | -2,95,498 | 67.16 |
| 17 | ಸೌರ ಪ್ಯಾನೆಲ್ಲುಗಳು | ಕೆಡಬ್ಲ್ಯುಪಿ | 7,142.00 | 8,318.00 | 1,176.00 | 116.47 |
| 18 | ಆರ್‌ಎಂಯು ಇತ್ಯಾದಿ | ಲಾಟ್ | 10 | 489 | 479 | 4890.00 |
| 19 | ಇತರವುಗಳು | ₹ ಲಕ್ಷಗಳಲ್ಲಿ | 1,447.47 | 770.98 | -676.49 | 53.26 |
| 20* | *33/11 ಕೆವಿ ಎಸ್/ಎಸ್‌ನ /ಆರ್ & ಎಮ್* | ಸಂಖ್ಯೆ | 1 | - | -1 | 0.00 |
| 21* | *ಕೆಪಾಸಿಟರ್ ಬ್ಯಾಂಕ್* | ಎಂವಿಎಆರ್ | 1.00 | - | -1.00 | 0.00 |
| 22* | *ಸ್ಮಾರ್ಟ್ ಮೀಟರು* | ಸಂಖ್ಯೆ | 12,760 | - | -12,760 | 0.00 |
| 23* | *ಪ್ರೀ– ಪೇಡ್ ಮೀಟರು* | ಸಂಖ್ಯೆ | 9,126 | - | -9,126 | 0.00 |

** ವಿಸಕಂಗಳು ಕೈಗೆತ್ತಿಕೊಳ್ಳದಿದ್ದ ಕಾಮಗಾರಿಗಳು*

ಪ್ರಾರಂಭಿಕ ಸಮೀಕ್ಷೆಯ ಸಮಯದಲ್ಲಿ (ಜನವರಿ–ಮಾರ್ಚ್ 2015) ಪ್ರಸ್ತುತ ಇದ್ದಂತಹ ಕೆಟ್ಟು ಹೋಗಿದ್ದ ಆರ್‌ಎಂಯುಗಳನ್ನು ಬದಲಾಯಿಸುವ ಸಲುವಾಗಿ ಬಿಎಂಎರುಡ್ ಪ್ರದೇಶದಲ್ಲಿ 10 ಆರ್‌ಎಂಯುಗಳನ್ನು ಪ್ರಸ್ತಾಪಿಸಲಾಗಿದ್ದಿತು ಎಂಬುದಾಗಿ ಬೆಸ್ಕಾಂ ಉತ್ತರಿಸಿತು. ಆದರೆ ಡಿಸೆಂಬರ್ 2015ರಿಂದ ಫೆಬ್ರವರಿ 2016ರ ಅವಧಿಯಲ್ಲಿ ಪಿಎಂಎ ಮತ್ತು ಕ್ಷೇತ್ರ ಸಿಬ್ಬಂದಿಯು ನಡೆಸಿದ ಕ್ಷೇತ್ರ ಸಮೀಕ್ಷೆಯ ಸಮಯದಲ್ಲಿ, ಪಟ್ಟಣ ವ್ಯಾಪ್ತಿಯಲ್ಲಿ ಭೂಗತ ಕೇಬಲ್ಲುಗಳನ್ನು ಪ್ರಸ್ತಾಪಿಸಲಾಯಿತು ಹಾಗೂ 703.48 ಕಿಮೀಗಳಷ್ಟು ಭೂಗತ ಕೇಬಲ್ಲು ಕಾಮಗಾರಿಯನ್ನು ಕಾರ್ಯಗತಗೊಳಿಸಲಾಯಿತು, ಅದಕ್ಕಾಗಿ ಗ್ರಾಹಕರುಗಳಿಗೆ ವಿಶ್ವಾಸಾರ್ಹತೆಯಿಂದ ಕೂಡಿದ ಅಡಚಣೆರಹಿತ ವಿದ್ಯುತ್ ಸರಬರಾಜು ಮಾಡುವ ಉದ್ದೇಶದಿಂದ ಹಾಲಿ ರೇಡಿಯಲ್ ವಿತರಣಾ ವ್ಯವಸ್ಥೆಯನ್ನು ರಿಂಗ್ ಮೈನ್ ಡಿಸ್ಟ್ರಿಬ್ಯೂಷನ್ ವ್ಯವಸ್ಥೆಯನ್ನಾಗಿ ಪರಿವರ್ತಿಸುವ ಸಲುವಾಗಿ 455 ಸಂಖ್ಯೆಗಳಷ್ಟು ಆರ್‌ಎಂಯುಗಳನ್ನು ಸ್ಥಾಪಿಸಲಾಯಿತು.

### *3.4.1 ಅನುಮೋದಿತ /ಸವಿವರ ಯೋಜನಾ ವರದಿಯಲ್ಲಿನ ಪರಿಮಾಣಗಳಿಗೆ ಪ್ರತಿಯಾಗಿ ಕಾರ್ಯಗತಗೊಳಿಸಲಾಗಿದ್ದ ಪರಿಮಾಣಗಳಲ್ಲಿನ ವ್ಯತ್ಯಯಗಳು*

ವಿಸಕಂಗಳು 1,923.28 ಕಿಮೀಗಳಷ್ಟು ಹೈ ಟೆನ್ಷನ್ (ಎಚ್‌ಟಿ) ಫೀಡರುಗಳು[38], 6,082.24 ಕಿಮೀಗಳಷ್ಟು ಲೋ ಟೆನ್ಷನ್ (ಎಲ್‌ಟಿ) ಫೀಡರುಗಳು, 1,300.12 ಕಿಮೀಗಳಷ್ಟು ಭೂಗತ (ಯುಜಿ) ಕೇಬಲ್ಲು, 2,067.75 ಕಿಮೀಗಳಷ್ಟು ಎಲ್‌ಟಿ ಏರಿಯಲ್ ಬಂಚ್ಡ್ (ಎಬಿ) ಕೇಬಲ್ಲು, 5,124 ಸಂಖ್ಯೆಗಳಷ್ಟು ಟ್ರಾನ್ಸ್‌ಫಾರ್ಮರುಗಳು ಮತ್ತು 8,318 kWp ಸಾಮರ್ಥ್ಯದ ಸೌರ ಪ್ಯಾನೆಲ್ಲುಗಳನ್ನು ಸ್ಥಾಪಿಸಿದ್ದವು.

ಕಾಮಗಾರಿಗಳ ಪ್ರಧಾನ ಐಟಂಗಳಲ್ಲಿ ಕಾರ್ಯಗತಗೊಳಿಸಲಾದ ಪರಿಮಾಣಗಳು ಪಿಎಫ್‌ಸಿಯಿಂದ ಅನುಮೋದಿತ ಸವಿವರ ಯೋಜನಾ ವರದಿಯ ಅನುಸಾರ ಅನುಮೋದಿತ ಪರಿಮಾಣಗಳಿಗೆ ಹೋಲಿಸಿದಂತೆ ವ್ಯತ್ಯಯದಿಂದ ಕೂಡಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅದನ್ನು ***ಅನುಬಂಧ–6*** ರಲ್ಲಿ ತೋರಿಸಲಾಗಿರುವುದು.

ಸವಿವರ ಯೋಜನಾ ವರದಿ/ಅನುಮೋದಿತ ಪರಿಮಾಣಕ್ಕೆ ಹೋಲಿಸಿದಂತೆ ವಾಸ್ತವಿಕವಾಗಿ ಕಾರ್ಯಗತಗೊಳಿಸಲಾಗಿದ್ದ ಪರಿಮಾಣಗಳಲ್ಲಿನ ವ್ಯತ್ಯಯವು ಎಚ್‌ಟಿ ಫೀಡರುಗಳಿಗೆ ಸಂಬಂಧಿಸಿದಂತೆ (–) ಶೇಕಡಾ 21.69, ಎಲ್‌ಟಿ ಫೀಡರುಗಳಿಗೆ ಸಂಬಂಧಿಸಿದಂತೆ (–) ಶೇಕಡಾ 18.61, ಎಬಿ ಕೇಬಲ್ಲುಗಳಿಗೆ ಸಂಬಂಧಿಸಿದಂತೆ (–) ಶೇಕಡಾ 10.84, ಭೂಗತ ಕೇಬಲ್ಲುಗಳಿಗೆ ಸಂಬಂಧಿಸಿದಂತೆ ಶೇಕಡಾ 36.75, ಟ್ರಾನ್ಸ್‌ಫಾರ್ಮರುಗಳಿಗೆ ಸಂಬಂಧಿಸಿದಂತೆ (–) ಶೇಕಡಾ 1.58 ಹಾಗೂ ಗ್ರಾಹಕರ ಮೀಟರುಗಳಿಗೆ ಸಂಬಂಧಿಸಿದಂತೆ (–) ಶೇಕಡಾ 32.84 ಆಗಿದ್ದಿತು. ಬೆಸ್ಕಾಂ 577.6 ಕಿಮೀಗಳಿಗೆ ಪ್ರತಿಯಾಗಿ 954.1

[38] 11 ಕಿವ್ಯಾ ಫೀಡರು (1858.41 ಕಿಮೀ) + 33ಕಿವ್ಯಾ ಫೀಡರುಗಳು (64.87 ಕಿಮೀ).

ಕಿಮೀಗಳಷ್ಟು ಭೂಗತ (ಯುಜಿ) ಕೇಬಲ್ಲು ಕಾಮಗಾರಿಯನ್ನು ಕಾರ್ಯಗತಗೊಳಿಸಿದ್ದಿತು, ಇದು ಶೇಕಡಾ 65.18ರಷ್ಟು ವ್ಯತ್ಯಯದಿಂದ ಕೂಡಿದ್ದಿತು.

ಮಾದರಿ ಆಯ್ಕೆ ಮಾಡಿಕೊಳ್ಳಲಾಗಿದ್ದ ವಿಭಾಗಗಳಲ್ಲಿ ಗಮನಿಸಲಾದಂತಹ ಸಾಮಗ್ರಿಗಳ ಪರಿಮಾಣಗಳಲ್ಲಿನ ವ್ಯತ್ಯಯಗಳ ದೃಷ್ಟಾಂತಗಳು ಹಾಗೂ ತತ್ಪರಿಣಾಮವಾಗಿ ವೆಚ್ಚಗಳಲ್ಲಿನ ವ್ಯತ್ಯಯಗಳನ್ನು ಈ ಕೆಳಗೆ ವಿವರಿಸಲಾಗಿದೆ:

- ಸೆಸ್ಕ್‌ನ ಕಾರ್ಯಾಚರಣೆಗಳು ಮತ್ತು ನಿರ್ವಹಣಾ (ಒಅಂಡ್‌ಎಂ) ವೃತ್ತ, ಮಂಡ್ಯ, ಇಲ್ಲಿ 88 ಸಾಮಗ್ರಿಗಳ ಸರಬರಾಜಿನಲ್ಲಿ ವ್ಯತ್ಯಯಗಳಿದ್ದವು ಮತ್ತು 66 ಸ್ಥಾಪನೆಯ (ಎರೆಕ್ಷನ್) ಕಾಮಗಾರಿಗಳಲ್ಲಿ ವ್ಯತ್ಯಯಗಳಿದ್ದವು ಮುಂದುವರಿದು, 12 ಐಟಂಗಳ ಸರಬರಾಜನ್ನು ಹಾಗೂ 53 ಐಟಂಗಳ ಸ್ಥಾಪನೆಯನ್ನು ಸವಿವರ ಕಾಮಗಾರಿ ನೀಡಿಕೆ ಆದೇಶದಲ್ಲಿ (ಡಿಡಬ್ಲ್ಯುಎ)[39], ಸೇರಿಸಿರಲಿಲ್ಲ, ಇದು, ಸವಿವರ ಡಿಡಬ್ಲ್ಯುಎ ವೆಚ್ಚವನ್ನು ಮೀರಿದಂತೆ ₹ 3.39 ಕೋಟಿ ಮೊತ್ತದಷ್ಟು ಅಧಿಕಗೊಳ್ಳುವಲ್ಲಿ ಪರಿಣಮಿಸಿದ್ದಿತು.

  ಆರ್‌ಸಿಸಿ ಒಂಬತ್ತು ಮೀಟರುಗಳ ಕಂಬಗಳ ವಿಷಯದಲ್ಲಿ, ಮಂಡ್ಯದ ಒಅಂಡ್‌ಎಂ ವೃತ್ತದ ವ್ಯಾಪ್ತಿಯ ಮದ್ದೂರು ಪಟ್ಟಣದಲ್ಲಿ, ಎಚ್‌ಟಿ ಮತ್ತು ಎಲ್‌ಟಿ ಎಬಿ ಕೇಬಲ್ಲು ಕಾಮಗಾರಿಗಳಿಗೆ ₹ 1.19 ಕೋಟಿ ಮೌಲ್ಯದ 1,486 ಕಂಬಗಳ ಡಿಡಬ್ಲ್ಯುಎ ಪರಿಮಾಣಕ್ಕೆ ಪ್ರತಿಯಾಗಿ ₹ 2.50 ಕೋಟಿ ಮೌಲ್ಯದ 3,132 ಕಂಬಗಳನ್ನು ಉಪಯೋಗಿಸಲಾಗಿದ್ದಿತು. ಆರ್‌ಸಿಸಿ 9 ಮೀಟರುಗಳ ಕಂಬಗಳ ಅಂದಾಜು ಪ್ರಮಾಣಕ್ಕಿಂತ ಶೇ. 110.77 ರಷ್ಟು ವ್ಯತ್ಯಾಸದ ಪ್ರಮಾಣವು ಎಲ್‌ಟಿ ಮಾರ್ಗದ ಮೇಲೆ ಇದ್ದಂತಹ ಅಧಿಕ ಸಂಖ್ಯೆಯ ಸಂಪರ್ಕಭೇದಕಗಳ ಕಾರಣ ಹಾಗೂ ಹಾನಿಗೊಳಗಾದ ಮತ್ತು ದುರವಸ್ಥೆಯಲ್ಲಿದ್ದಂತಹ ಕಂಬಗಳನ್ನು ಬದಲಾಯಿಸುವುದರಿಂದ ಉಂಟಾಗಿದ್ದಿತು.

- ಸೆಸ್ಕ್‌ನ ಮಂಡ್ಯ ವೃತ್ತದ ಮದ್ದೂರು ಪಟ್ಟಣದಲ್ಲಿ ಡಿಡಬ್ಲ್ಯುಎನಲ್ಲಿ ಸೇರಿರದ ಎಚ್‌ಟಿ ಮತ್ತು ಎಲ್‌ಟಿ ಮಾರ್ಗಗಳ ಕಾಮಗಾರಿಗಳನ್ನು ಕಾರ್ಯಗತಗೊಳಿಸಿದ್ದಂತಹ ದೃಷ್ಟಾಂತಗಳಿದ್ದವು, ಇದು ಎಸಿಎಸ್‌ಆರ್[40] ರ್ಯಾಬಿಟ್ ಕಂಡಕ್ಟರ್‌ನ ಹೆಚ್ಚಳಗೊಳಿಸಲ್ಪಟ್ಟ ಬಳಕೆಯಲ್ಲಿ ಪರಿಣಮಿಸಿದ್ದಿತು. ಆದಾಗ್ಯೂ, ಮಂಡ್ಯ ವೃತ್ತಕ್ಕೆ ಒಟ್ಟಾರೆಯಾಗಿ, ಎಸಿಎಸ್‌ಆರ್ ರ್ಯಾಬಿಟ್ ಕಂಡಕ್ಟರ್‌ನ ಬಳಕೆಯಲ್ಲಿ 547.13 ಕಿಮಿಗಳ ಇಳಿಕೆಯಾಗಿದ್ದಿತು, ಇದು ₹ 2.47 ಕೋಟಿ ಮೊತ್ತದಷ್ಟು ವೆಚ್ಚವು ಕಡಿಮೆಯಾಗುವಲ್ಲಿ ಪರಿಣಮಿಸಿದ್ದಿತು.

- ಡಿಡಬ್ಲ್ಯುಎ ಆದೇಶದ ಅನುಸಾರ, ಸೆಸ್ಕ್‌ನ ಕೊಡಗು ವೃತ್ತದ ಚಾಮರಾಜನಗರದಲ್ಲಿ, ಗುತ್ತಿಗೆದಾರರಿಗೆ ನೀಡಲಾಗಿದ್ದ ಕಾಮಗಾರಿಯ ಮೌಲ್ಯವು ₹ 39.09 ಕೋಟಿ ಆಗಿದ್ದಿತಾದಲ್ಲಿ, ಕಾರ್ಯಗತಗೊಳಿಸಲಾದ ಕಾಮಗಾರಿಯ ಮೌಲ್ಯವು ₹ 29.21 ಕೋಟಿ ಆಗಿದ್ದಿತು, ಇದು ರೂ.9.88 ಕೋಟಿ (ಶೇಕಡಾ 25.28 ರಷ್ಟು) ಮೊತ್ತದಷ್ಟು ಉಳಿತಾಯದಲ್ಲಿ ಪರಿಣಮಿಸಿದ್ದಿತು. ಉಳಿತಾಯಕ್ಕೆ ನೀಡಲಾದ ಪ್ರಮುಖ ಕಾರಣವೆಂದರೆ ಬದಲಾದ ನಿವೇಶನ ಪರಿಸ್ಥಿತಿಯ ಕಾರಣ 11 kV ರೀಕಂಡಕ್ಟರಿಂಗ್ ಕಾಮಗಾರಿಗಳ ಅಗತ್ಯತೆಯಿರದಿದ್ದುದು. ಅಲ್ಲದೆಯೇ ಡಿಡಬ್ಲ್ಯುಎದಲ್ಲಿ ಚಿಂತಿಸಿರದ ಸರಬರಾಜು (₹ 0.55 ಕೋಟಿ) ಮತ್ತು ಸ್ಥಾಪನೆ ಕಾಮಗಾರಿಗಳನ್ನು (₹ 0.65 ಕೋಟಿ) ಕಾರ್ಯಗತಗೊಳಿಸಲಾಗಿದ್ದಿತು.

ಕ್ಷೇತ್ರದ ಅಗತ್ಯತೆಗಳು/ಕಾರಿಡಾರ್/ಕಾಮಗಾರಿ ಪ್ರದೇಶಕ್ಕೆ ಪ್ರವೇಶದ ಹಕ್ಕು (ಆರ್‌ಒಡಬ್ಲ್ಯು) ಸಮಸ್ಯೆಗಳು/ ಮರು–ಮಾರ್ಗೀಕರಣಗಳು/ ಸ್ಥಳೀಯ ಸಮಸ್ಯೆಗಳು, ಮುಂತಾದ ಕಾರಣಗಳಿಂದ ನೀಡಲಾಗಿದ್ದ ಸಾಮಗ್ರಿಗಳ ಪರಿಮಾಣವು ಇಳಿಕೆಯಾಗಿದ್ದಿತು/ ಹೆಚ್ಚಳಗೊಂಡಿದ್ದಿತು ಎಂಬುದಾಗಿ ಸೆಸ್ಕ್ ಉತ್ತರಿಸಿತು (ಅಕ್ಟೋಬರ್ 2024). ಈ ಬಗ್ಗೆ ಎಸ್‌ಎಲ್‌ಡಿಸಿ ಮತ್ತು ಪಿಎಫ್‌ಸಿ, ಇವುಗಳಿಗೆ ವರದಿ ಮಾಡಲಾಗಿದ್ದಿತು

[39] ಸವಿವರ ಕಾಮಗಾರಿ ನೀಡಿಕೆ ಆದೇಶದಲ್ಲಿನ (ಡಿಡಬ್ಲ್ಯುಎ) ₹ 37.94 ಕೋಟಿ ಮೊತ್ತಕ್ಕೆ ಪ್ರತಿಯಾಗಿ.

[40] ಸಾಮಾನ್ಯ ಅನ್ವಯಗಳಿಗೆ (ಓವರ್‌ಹೆಡ್ ಅಪ್ಲಿಕೇಷನ್ಸ್) ಉಪಯೋಗಿಸಲಾಗುವಂತಹ ಅಲ್ಯುಮಿನಿಯಮ್ ಕಂಡಕ್ಟರ್ ಸ್ಟೀಲ್ ರೀಇನ್‌ಫೋರ್ಸ್‌ಡ್ (ಎಸಿಎಸ್‌ಆರ್) ಕಂಡಕ್ಟರುಗಳು.

ಹಾಗೂ ಎಲ್ಲಾ ಅನುದಾನಗಳನ್ನು ಸ್ವೀಕರಿಸಲಾಗಿದ್ದಿತು ಎಂಬುದಾಗಿಯೂ ಸೆಸ್ಕ್ ತಿಳಿಸಿತು. ಈ ನಿಟ್ಟಿನಲ್ಲಿ ಪೂರ್ವಭಾವಿ ಯೋಜನೆಯು ಕೊರತೆಯಿಂದ ಕೂಡಿದ್ದಿತು ಹಾಗೂ ಸೆಸ್ಕ್ ಸಮರ್ಪಕ ಸಮೀಕ್ಷೆಗಳನ್ನು ನಡೆಸಿರಲಿಲ್ಲ, ಎಂಬುದನ್ನು ಉತ್ತರವು ಸುಸ್ಪಷ್ಟವಾಗಿ ಸೂಚಿಸಿದ್ದಿತು, ಇದು ಅಂದಾಜುಗಳಲ್ಲಿ ಯಥಾರ್ಥತೆಯಿಂದ ಕೂಡಿರದ ಪರಿಮಾಣಗಳನ್ನು ಸೇರಿಸುವಲ್ಲಿ ಪರಿಣಮಿಸಿದ್ದಿತು.

ಅನುಮೋದಿತ ಪರಿಮಾಣಕ್ಕೆ ಪ್ರತಿಯಾಗಿ ಒಟ್ಟಾರೆ ಕಾರ್ಯಗತಗೊಳಿಸಲಾಗಿದ್ದಂತಹ ಪರಿಮಾಣಕ್ಕೆ ಹೋಲಿಸಿದಂತೆ ವಿಸಕಂವಾರು ವ್ಯತ್ಯಯದ ವಿಸ್ತಾರವನ್ನು ***ಅನುಬಂಧ–6*** ರಲ್ಲಿ ವಿವರವಾಗಿ ನೀಡಲಾಗಿರುವುದು.

ನಿರ್ಗಮನ ಸಮ್ಮೇಳನದಲ್ಲಿ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರು ಯೋಜನೆಯ ಘೋಷಣೆ ಮತ್ತು ಅದರ ಕಾರ್ಯಗತಗೊಳಿಸಿದ್ದರ ನಡುವೆ ಗಣನೀಯ ಅಂತರವಿದೆ ಎಂದು ಹೇಳಿದರು, ಅಂದರೆ ಯೋಜನೆಯ ಅಧಿಕೃತ ಆದೇಶವನ್ನು 2014 ರಲ್ಲಿ ನೀಡಲಾಯಿತು, ಅಗತ್ಯ ಮೌಲ್ಯಮಾಪನ ದಾಖಲೆಯನ್ನು ಸಿದ್ಧಪಡಿಸಲಾಯಿತು ಮತ್ತು 2015 ರಲ್ಲಿ ಸವಿವರ ಯೋಜನಾ ವರದಿಗೆ ಅನುಮೋದನೆ ನೀಡಲಾಗಿದ್ದಿತು 2017 ರಲ್ಲಿ ಟೆಂಡರ್‌ಗಳನ್ನು ಕರೆಯಲಾಯಿತು ಮತ್ತು 2019 ರಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಯಿತು. ವಿದ್ಯುಚ್ಛಕ್ತಿ ವಲಯವು ಕ್ರಿಯಾತ್ಮಕ ಪ್ರಕೃತಿಯುಳ್ಳದಾಗಿರುವುದರಿಂದ, ಸಮಯದ ಅಂತರವು ಕೆಲವು ತುರ್ತು ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯಲ್ಲಿ ಪರಿಣಮಿಸಿದ್ದಿತು, ಅದು ವ್ಯತ್ಯಯದಿಂದ ಕೂಡಿದ ಪರಿಮಾಣಗಳಲ್ಲಿ ಪರಿಣಮಿಸಿದ್ದಿತು. ಈ ಹೇಳಿಕೆಯು ವಿಸಕಂಗಳು ಸವಿವರ ಯೋಜನಾ ವರದಿಯ ಅನುಮೋದನೆಯ ನಂತರ ಕಾಮಗಾರಿಗಳಿಗೆ ಟೆಂಡರನ್ನು ಆಹ್ವಾನಿಸಲು ಎರಡು ವರ್ಷಗಳನ್ನು ತೆಗೆದುಕೊಂಡವು ಎಂಬುದನ್ನು ಖಚಿತಪಡಿಸುತ್ತದೆ.

### *3.4.2 ಪೂರ್ವಭಾವಿಯಾಗಿ ಯೋಜಿತ ಕಾಮಗಾರಿಗಳನ್ನು ಕೈಬಿಟ್ಟಿದ್ದುದು*

ಬೆಸ್ಕಾಂ ಮತ್ತು ಮೆಸ್ಕಾಂ, ಪಿಎಫ್‌ಸಿಯಿಂದ ಅನುಮೋದಿತಗೊಂಡಿದ್ದಂತಹ (ಡಿಪಿಆರ್‌ಗಳನ್ನು ಸಿದ್ಧಪಡಿಸಿದ ನಂತರ) ಕಾಮಗಾರಿಗಳನ್ನು ಕಾಮಗಾರಿ ಪ್ರದೇಶಕ್ಕೆ ಪ್ರವೇಶದ ಹಕ್ಕು (ಆರ್‌ಒಡಬ್ಲ್ಯು), ಸ್ಥಳಾವಕಾಶದ ಮಿತಿಗಳು, ಸ್ಥಳೀಯ ನಿರ್ಬಂಧಗಳು ಹಾಗೂ ಸ್ಥಳೀಯ ಪ್ರಾಧಿಕಾರಗಳಿಂದ ಅನುಮತಿ ಸ್ವೀಕೃತಗೊಳ್ಳದಿದ್ದುದು, ಕಾಮಗಾರಿಗಳನ್ನು ಯೋಜನೆಯ ಹೊರಗೆ ಕಾರ್ಯಗತಗೊಳಿಸಿದ್ದುದು, ಇತ್ಯಾದಿಗಳನ್ನು ಕಾರಣಗಳನ್ನು ಉಲ್ಲೇಖಿಸಿ ಕಾಮಗಾರಿಗಳನ್ನು ಕೈಬಿಟ್ಟಿದ್ದವು. ಲೆಕ್ಕಪರಿಶೋಧನೆಯು ಬೆಸ್ಕಾಂ (₹ 13.90 ಕೋಟಿ) ಹಾಗೂ ಮೆಸ್ಕಾಂನ (₹ 10.69 ಕೋಟಿ) ಆಯ್ಕೆ ಮಾಡಲಾದಂತಹ ವಿಭಾಗಗಳಲ್ಲಿ ಅರೀತಿ ಕೈಬಿಡಲಾಗಿದ್ದಂತಹ 14 ದೃಷ್ಟಾಂತಗಳನ್ನು[41] ಗಮನಿಸಿತು. ಹೆಚ್ಚಿನ ವಿವರಗಳನ್ನು ***ಅನುಬಂಧ–7*** ರಲ್ಲಿ ನೀಡಲಾಗಿರುವುದು. ಎರಡು ದೃಷ್ಟಾಂತಗಳನ್ನು ಈ ಕೆಳಗೆ ನೀಡಲಾಗಿರುವುದು:

**ಬೆಸ್ಕಾಂ:** ದಾವಣಗೆರೆ ವಿಭಾಗದಲ್ಲಿ ವಿತರಣಾ ಪರಿವರ್ತಕಗಳ ಅಳವಡಿಕೆ ಮತ್ತು ಯುಜಿ ಕೇಬಲ್‌ಗಳನ್ನು ಎಳೆಯುವ 26 ಯೋಜಿತ ಕಾಮಗಾರಿಗಳನ್ನು ಕಾಮಗಾರಿ ಪ್ರದೇಶಕ್ಕೆ ಪ್ರವೇಶದ ಹಕ್ಕು (ಆರ್‌ಒಡಬ್ಲ್ಯು), ಸ್ಥಳಾವಕಾಶದ ಮಿತಿಗಳು, ಹಾಗೂ ಸ್ಥಳೀಯ ಪ್ರಾಧಿಕಾರಗಳಿಂದ ಅನುಮತಿ ಸ್ವೀಕೃತಗೊಳ್ಳದಿದ್ದುದು, ಇತರ ಕಾಮಗಾರಿಗಳ ಅಡಿಯಲ್ಲಿ ಸ್ಥಾಪಿಸಲಾದ ಪರಿವರ್ತಕಗಳಿಂದಾಗಿ ಇತ್ಯಾದಿ ಕಾರಣಗಳಿಂದಾಗಿ ಕೈಬಿಡಲಾಗಿದ್ದಿತು.

**ಮೆಸ್ಕಾಂ:** ಪೂರ್ವಭಾವಿಯಾಗಿ ಯೋಜಿಸಲಾಗಿದ್ದಂತಹ ಕೊಯೋಟೆ ಮತ್ತು ರ್‍ಯಾಬಿಟ್ ಕಂಡಕ್ಟರನ್ನು (ಮಂಗಳೂರು ವಿಭಾಗ 1 ಮತ್ತು 2) ಬಳಸಿಕೊಂಡು ಸಿಂಗಲ್ ಸರ್ಕ್ಯೂಟ್ 11 kV ರೀಕಂಡಕ್ಟರಿಂಗ್ ಕಾಮಗಾರಿಯನ್ನು, ಅದು 2013–17ರಲ್ಲಿ ಈ ಯೋಜನೆಯ ಹೊರಗೆ ಈಗಾಗಲೇ ಕಾರ್ಯಗತಗೊಳಿಸಲ್ಪಟ್ಟಿದ್ದರಿಂದ, ಕೈಬಿಡಲಾಗಿದ್ದಿತು.

[41] ಬೆಂವಿಸಕಂಯ ಇಂದಿರಾನಗರ ವಿಭಾಗದ ಮೆಟ್ರೋ ಕಂಬಗಳ ಹಾಗೂ ಸ್ಟೇಷನ್ನಿನ ಅಡಿಯಲ್ಲಿ ಕೇಬಲ್ಲು ಹಾಕಲು ಬೆಂಗಳೂರು ಮೆಟ್ರೋ ರೈಲ್ ಕಾರ್ಪೋರೇಷನ್ ಲಿಮಿಟೆಡ್ ಅನುಮತಿ ನೀಡಲಿಲ್ಲ. ಬೆಂವಿಸಕಂಯ ಇಂದಿರಾನಗರ ವಿಭಾಗದಲ್ಲಿ ರಸ್ತೆಗೆ ಹೊಸದಾಗಿ ಡಾಂಬರು ಹಾಕಿದ್ದರಿಂದ ಸ್ಥಳಿಯ ಪ್ರಾಧಿಕಾರವು ಅನುಮತಿಯನ್ನು ನೀಡಿರಲಿಲ್ಲ. ಕೊಯೊಟೆ ಮತ್ತು ರ್‍ಯಾಬಿಟ್ ಕಂಡಕ್ಟರ್ ಉಪಯೋಗಿಸಿಕೊಂಡು ಸಿಂಗಲ್ ಸರ್ಕ್ಯೂಟ್ 11ಕಿವ್ಯಾನ ರೀಕಂಡಕ್ಟರಿಂಗ್ (ಮಂಗಳೂರು ವಿಭಾಗ 1 ಮತ್ತು 2).

ಈ ಕಾಮಗಾರಿಗಳನ್ನು ಗುರುತಿಸಿ ಆದ್ಯತೆಯ ಮೇರೆಗೆ ಆಯ್ಕೆ ಮಾಡಲಾಗಿರುವುದರಿಂದ, ಈ ಕಾಮಗಾರಿಗಳನ್ನು ಕೈಬಿಡುವುದರಿಂದ ಪೂರ್ಣಗೊಳ್ಳುವಲ್ಲಿ ವಿಳಂಬವಾಗುವುದರ ಜೊತೆಗೆ ನಿರೀಕ್ಷಿತ ಪ್ರಯೋಜನಗಳು ದೊರೆಯಲಿಲ್ಲ.

ಇದು ಈ ವಿಸಕಂಗಳು ನಡೆಸಿದ್ದಂತಹ ಸಮೀಕ್ಷೆಗಳು ಅಸಮರ್ಪಕವಾಗಿದ್ದವು ಹಾಗೂ ಸವಿವರ ಯೋಜನಾ ವರದಿಗಳನ್ನು ತಕ್ಕುದಾದ ರೀತಿಯಲ್ಲಿ ಗಮನಹರಿಸದೆಯೇ ತಯಾರಿಸಲಾಗಿದ್ದಿತು ಎಂಬುದನ್ನು ಸೂಚಿಸುತ್ತದೆ. ಹಣಕಾಸಿನ ಪ್ರಭಾವವು ಇರಲಿಲ್ಲವಾದರೂ, ಪೂರ್ವಭಾವಿಯಾಗಿ ಯೋಜಿಸಲಾಗಿದ್ದಂತಹ ಕಾಮಗಾರಿಗಳನ್ನು ಅಸಮರ್ಪಕ ಸಮೀಕ್ಷೆಯ ಕಾರಣ ಕಾರ್ಯಗತಗೊಳಿಸಲಾಗಿರಲಿಲ್ಲ.

ಲೆಕ್ಕಪರಿಶೋಧನೆಯಲ್ಲಿ ತಿಳಿಸಿರುವ ಕಾರಣಗಳಿಂದ ಕಾಮಗಾರಿಗಳನ್ನು ಕೈಬಿಟ್ಟಿರುವುದಾಗಿ ಬೆಸ್ಕಾಂ ಮತ್ತು ಮೆಸ್ಕಾಂ ಉತ್ತರಿಸಿದವು.

### *3.5 ಕೆಟಿಟಿಪಿ ಅಧಿನಿಯಮ ಮತ್ತು ನಿಯಮಗಳನ್ನು ಉಲ್ಲಂಘಿಸಿ ಗುತ್ತಿಗೆಗಳನ್ನು ನೀಡಿದ್ದುದು*

ವಿಸಕಂಗಳು ಬಿಡ್ಡುಗಳನ್ನು ಸಲ್ಲಿಸಲು ಸಂಭಾವ್ಯ ಬಿಡ್ಡುದಾರರುಗಳಿಗೆ ಅಸಮರ್ಪಕವಾದಂತಹ ಸಮಯವನ್ನು ನೀಡುವ ಮೂಲಕ ಹಾಗೂ ಟೆಂಡರುಗಳನ್ನು ಅಧಿಕ ಮೌಲ್ಯದ ಟೆಂಡರು ಪ್ರೀಮಿಯಂನಲ್ಲಿ ಒಪ್ಪಿಕೊಳ್ಳುವ ಮೂಲಕ ಈ ಕೆಳಗಿನ ಕಂಡಿಕೆಗಳಲ್ಲಿ ಚರ್ಚಿಸಿರುವಂತೆ ಕರ್ನಾಟಕ ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ (ಕೆಟಿಟಿಪಿ) ಅಧಿನಿಯಮ, 1999 ಮತ್ತು ನಿಯಮಗಳ ಅನುವುಗಳಿಗೆ ಬದ್ಧತೆಯಿಂದ ಕೂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

### *3.5.1 ಬಿಡ್ಡುಗಳನ್ನು ಸಲ್ಲಿಸಲು ಅಸಮರ್ಪಕ ಸಮಯವನ್ನು ನೀಡಿದ್ದುದು*

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ ನಿಯಮಗಳು), 2000 ರ ನಿಯಮ 17 (ಬಿ) ಎರಡು ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಮೌಲ್ಯದ ಟೆಂಡರ್‌ಗಳಿಗೆ ಬಿಡ್‌ಗಳನ್ನು ಸಲ್ಲಿಸಲು ಎನ್‌ಐಟಿ[42] ದಿನಾಂಕದಿಂದ ಕನಿಷ್ಠ ಅರವತ್ತು ದಿನಗಳ ಕಾಲಾವಕಾಶವನ್ನು ನಿರ್ದಿಷ್ಟಪಡಿಸಿರುತ್ತದೆ. ನಿರ್ದಿಷ್ಟಪಡಿಸಲಾಗಿರುವ ಸಮಯದ ಯಾವುದೇ ಇಳಿಸುವಿಕೆಗೆ ಕಾರಣಗಳನ್ನು ಲಿಖಿತ ರೂಪದಲ್ಲಿ ದಾಖಲಿಸುವುದರೊಂದಿಗೆ ಟೆಂಡರು ಆಹ್ವಾನ ಮಾಡುವ ಅಧಿಕಾರಿಯವರಿಗಿಂತ ಉನ್ನತ ಮಟ್ಟದ ಅಧಿಕಾರಿಯವರು ಅನುಮತಿಯನ್ನು ನೀಡಿರತಕ್ಕದ್ದು.

ಹೆಸ್ಕಾಂ ಮತ್ತು ಜೆಸ್ಕಾಂಗಳಲ್ಲಿ ಆಹ್ವಾನಿಸಿದ್ದಂತಹ ಟೆಂಡರುಗಳನ್ನು ಪರೀಕ್ಷಾ–ಪರಿಶೀಲನೆ ಮಾಡಲಾಗಿ, ಎರಡು ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಮೌಲ್ಯವನ್ನು[43] ಮೀರಿದ್ದಂತಹ ಟೆಂಡರುಗಳನ್ನು ಸಲ್ಲಿಸಲು ಕೇವಲ 15ರಿಂದ 54 ದಿನಗಳ ಸಮಯವನ್ನು ನೀಡಿದ್ದವು ಎಂಬುದನ್ನು ತೋರಿಸಿಕೊಟ್ಟಿತು. ಮುಂದುವರೆದು, ಯಾವುದೇ ದಾಖಲಿತ ಕಾರಣಗಳಿಲ್ಲದೆ ಟೆಂಡರುಗಳನ್ನು ಸಲ್ಲಿಸಲು ನಿರ್ದಿಷ್ಟಪಡಿಸಿರುವ ಸಮಯವನ್ನು ಕಡಿತಗೊಳಿಸಲು ಅಧಿಕಾರ ನೀಡಲಾಗಿದೆ.

ಆರ್‌ಇಸಿ/ಪಿಎಫ್‌ಸಿಯಿಂದ ಕಾರ್ಯಗತಗೊಳಿಸುವ ವಿಧಾನದಲ್ಲಿನ ಬದಲಾವಣೆ ಮತ್ತು ಪ್ರಮಾಣಿತ ಬಿಡ್ಡಿಂಗ್ ದಾಖಲೆಗಳ (SBD) ಪರಿಷ್ಕರಣೆಯಿಂದಾಗಿ, ಕಾಮಗಾರಿಗಳನ್ನು ನೀಡುವಲ್ಲಿ ವಿಳಂಬವಾಗಿದ್ದು, ಇಂಧನ ಮಂತ್ರಾಲಯ/ಪಿಎಫ್‌ಸಿ ನಿಗದಿಪಡಿಸಿದ ಕಾಲಮಿತಿಯೊಳಗೆ ಯೋಜನೆಯನ್ನು ಪೂರ್ಣಗೊಳಿಸುವ ಸಲುವಾಗಿ, ಅದು ಅಲ್ಪಾವಧಿ ಟೆಂಡರುಗಳನ್ನು ಆಹ್ವಾನಿಸುವ (ಮೊದಲ ಕರೆ ಟೆಂಡರ್‌ಗಳಿಗೆ 45 ದಿನಗಳು ಮತ್ತು ಎರಡನೇ ಕರೆ ಟೆಂಡರ್‌ಗಳಿಗೆ[44] 15 ದಿನಗಳು) ಅಗತ್ಯತೆಯನ್ನುಂಟುಮಾಡಿತು ಎಂಬುದಾಗಿ ಹೆಸ್ಕಾಂ ಉತ್ತರಿಸಿತು (ಅಕ್ಟೋಬರ್ 2024). ಜೆಸ್ಕಾಂ ಕೂಡ

[42] ಟೆಂಡರನ್ನು ಆಹ್ವಾನಿಸಿರುವ ನೋಟೀಸು.

[43] ಹೆಸ್ಕಾಂನಲ್ಲಿ ಏಳು ವ್ಯವಸ್ಥೆ ಬಲಪಡಿಸುವಿಕೆ ಕಾಮಗಾರಿಗಳು ಮತ್ತು ಎರಡು ಮೀಟರುಗಳನ್ನು ಅಳವಡಿಸುವಿಕೆ ಕಾಮಗಾರಿಗಳು, ಜೆಸ್ಕಾಂನಲ್ಲಿ ಎರಡು ವ್ಯವಸ್ಥೆ ಬಲಪಡಿಸುವಿಕೆ ಕಾಮಗಾರಿಗಳು.

[44] ಹುಬ್ಬಳ್ಳಿ, ವಿಜಯಪುರ ಮತ್ತು ಬಾಗಲಕೋಟೆ ವೃತ್ತಗಳು.

ಅದೇ ರೀತಿಯ ಕಾರಣಗಳನ್ನು ತಿಳಿಸಿದ್ದಿತು. ಉತ್ತರವು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳನ್ನು ಖಚಿತಪಡಿಸುವುದು.

### *3.5.2 ಕಾಮಗಾರಿಗಳನ್ನು ಅಧಿಕ ಟೆಂಡರು ಪ್ರೀಮಿಯಂನಲ್ಲಿ ನೀಡಿದ್ದುದು*

ಕರ್ನಾಟಕ ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ (ಕೆಟಿಟಿಪಿ) ಅಧಿನಿಯಮ, 1999 ಹಾಗೂ ಅವುಗಳ ಅಡಿಯಲ್ಲಿ ನೀಡಿರುವ ಸುತ್ತೋಲೆಯು (3 ಡಿಸೆಂಬರ್ 2002) ಕಡಿಮೆ ದರಗಳನ್ನು ಪಡೆದುಕೊಳ್ಳುವ ಸಲುವಾಗಿನ ಏಕೈಕ ಕಾರಣದಿಂದಾಗಿ ಹಾಗೂ ಸ್ಪರ್ಧಾತ್ಮಕತೆಯ ಕೊರತೆ (ಮೂರು ಬಿಡ್ದರುಗಳಿಗಿಂತ ಕಡಿಮೆ), ಏಕೈಕ ಬಿಡ್ಡು, ಅನುಮಾನಾಸ್ಪದವಾಗಿ ಶಾಮೀಲಾಗಿರುವುದು, ಅಥವಾ ಅತ್ಯಂತ ಕಡಿಮೆ ದರದ ಮೌಲ್ಯಮಾಪನ ಮಾಡಲಾಗಿರುವ ಪ್ರತಿಕ್ರಿಯಾತ್ಮಕ ಬಿಡ್ಡು ಅಂದಾಜು ಮೊತ್ತಕ್ಕಿಂತ ಗಮನಾರ್ಹವಾಗಿ ಅಧಿಕ ಮಟ್ಟದಲ್ಲಿರುವುದು, ಇಂತಹ ಅಸಾಧಾರಣ ಸಂಧರ್ಭಗಳಲ್ಲಿ ಮಾತ್ರ ದರಸಂಧಾನಗಳಿಗೆ ಅನುವು ಮಾಡಿರುತ್ತದೆ. ಅಂತಹ ಪ್ರಕರಣಗಳಲ್ಲಿ ಮೊದಲ ಆಯ್ಕೆಯೆಂದರೆ ಎಲ್ಲಾ ಟೆಂಡರುಗಳನ್ನು ತಿರಸ್ಕರಿಸುವುದು ಹಾಗೂ ಟೆಂಡರುಗಳನ್ನು ಪುನರ್–ಆಹ್ವಾನಿಸುವುದು. ಸುತ್ತೋಲೆಯ *ಷರತ್ತು 3.2* ಗಣನೀಯವಾಗಿ ಹೆಚ್ಚಿನ ಟೆಂಡರ್ ಅನ್ನು (ಬೆಲೆ ಹೊಂದಾಣಿಕೆ ಒದಗಿಸದಿದ್ದರೆ ಮತ್ತು ₹ 50 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಕೆಲಸದ ಅಂದಾಜು ವೆಚ್ಚವನ್ನು ನವೀಕರಿಸದಿದ್ದರೆ) ನವೀಕರಿಸಿದ ಅಂದಾಜಿಗಿಂತ ಶೇಕಡಾ 10 ರಷ್ಟು ಅಧಿಕವಾಗಿರುವ ಟೆಂಡರು ಎಂಬುದಾಗಿ ವ್ಯಾಖ್ಯಾನಿಸುತ್ತದೆ.

***ಅನುಬಂಧ–8*** ರಲ್ಲಿ ವಿವರಿಸಿರುವಂತೆ ಹಾಗೂ ಈ ಕೆಳಗೆ ಸಂಕ್ಷಿಪ್ತವಾಗಿ ತಿಳಿಸಿರುವಂತೆ, ವಿಸಕಂಗಳು ವ್ಯವಸ್ಥೆ ಬಲಪಡಿಸುವಿಕೆಯ ಕಾಮಗಾರಿಗಳನ್ನು ಅಂದಾಜು ಮೌಲ್ಯಗಳನ್ನು ಮೀರಿದಂತೆ ಶೇಕಡಾ 13.93ರಿಂದ ಶೇಕಡಾ 34.21ರಷ್ಟು ಅಧಿಕ ಮೌಲ್ಯಗಳಲ್ಲಿ ನೀಡಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

**ಕೋಷ್ಟಕ 3.5: ಆಯ್ಕೆ ಮಾಡಿಕೊಳ್ಳಲಾಗಿದ್ದ ವಿಭಾಗಗಳಲ್ಲಿ ವಿಸಕಂಗಳು ಟೆಂಡರುಗಳನ್ನು ಗಮನಾರ್ಹವಾದಂತಹ ಅಧಿಕ ದರಗಳಲ್ಲಿ ಒಪ್ಪಿಕೊಂಡಿದ್ದರ ವಿವರಗಳು**

(₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ವಿವರಗಳು | ಬೆಸ್ಕಾಂ | ಸೆಸ್ಕ್ | ಜೆಸ್ಕಾಂ | ಹೆಸ್ಕಾಂ | ಮೆಸ್ಕಾಂ |
|---|---|---|---|---|---|---|
| 1 | ಟೆಂಡರುಗಳ ಸಂಖ್ಯೆ | 5 | 4 | 5 | 7 | 7 |
| 2 | ಒಟ್ಟು ಅಂದಾಜು ವೆಚ್ಚ | 232.90 | 110.51 | 135.20 | 92.70 | 129.83 |
| 3 | ಘೋಷಿಸಿದ್ದ ಒಟ್ಟು ಮೌಲ್ಯ | 282.73 | 143.17 | 168.96 | 113.19 | 160.62 |
| 4 | ಒಟ್ಟು ನೀಡಲಾದ ಮೌಲ್ಯ | 282.94 | 141.30 | 168.96 | 113.19 | 156.14 |
| 5 | ಅಂದಾಜು ವೆಚ್ಚಕ್ಕಿಂತ ಹೆಚ್ಚಿನ ನೀಡಲಾದ ಮೌಲ್ಯ | 50.04 | 30.79 | 33.76 | 20.49 | 26.31 |
| 6 | ಅಂದಾಜು ಮೌಲ್ಯವನ್ನು ಮೀರಿದಂತೆ ನೀಡಲಾಗಿದ್ದ ಮೌಲ್ಯದ ಶೇಕಡಾವಾರು ವ್ಯಾಪ್ತಿ (%) | 18.76 ರಿಂದ 26.8 | 19.81 ರಿಂದ 34.21 | 21.61 ರಿಂದ 28.49 | 18.86 ರಿಂದ 23.33 | 13.93 ರಿಂದ 24.99 |

***ಮೂಲ: ವಿಸಕಂಗಳು ಒದಗಿಸಿದ ಮಾಹಿತಿಯಂತೆ***

ವಿಸಕಂಗಳು ಒಂದು ಅಂತಹುದೇ ಸ್ವರೂಪದ ಕಾಮಗಾರಿಗಳನ್ನು ವಿವಿಧ ವೃತ್ತಗಳಲ್ಲಿ ವ್ಯತ್ಯಯದಿಂದ ಕೂಡಿದ ಟೆಂಡರು ಪ್ರೀಮಿಯಂಗಳಲ್ಲಿ ನೀಡಿದ್ದವು ಹಾಗೂ ಗುತ್ತಿಗೆದಾರರುಗಳು ಘೋಷಿಸಿದ್ದ ದರಗಳನ್ನು ತಗ್ಗಿಸಿಕೊಳ್ಳುವಲ್ಲಿ ಯಶಸ್ವಿಯಾಗಿರಲಿಲ್ಲ. ಮುಂದುವರೆದು, ಹೆಚ್ಚಿನ ಪ್ರೀಮಿಯಂಗಳೊಂದಿಗೆ ಪರಿಣಾಮವಾಗಿ ಬಂದ ಏಕೈಕ ಟೆಂಡರ್‌ಗಳನ್ನು ಜೆಸ್ಕಾಂ (ಎಲ್ಲಾ ಐದು ಟೆಂಡರುಗಳಿಗೆ), ಮೆಸ್ಕಾಂ (ಐದು ಟೆಂಡರುಗಳ ಪೈಕಿ ಎರಡು), ಹೆಸ್ಕಾಂ (ಏಳು ಟೆಂಡರುಗಳ ಪೈಕಿ ನಾಲ್ಕು) ಹಾಗೂ ಸೆಸ್ಕ್ (ನಾಲ್ಕು ಟೆಂಡರುಗಳ ಪೈಕಿ ಎರಡು) ಮರು–ಟೆಂಡರ್ ಕರೆಯುವ ಬದಲು ಸ್ವೀಕರಿಸಲಾಯಿತು.

ಟೆಂಡರುಗಳನ್ನು ಪ್ರಮಾಣಿತ ಬಿಡ್ಡಿಂಗ್ ದಾಖಲೆಗಳ ಅನುಸಾರ ಆಹ್ವಾನಿಸಲಾಗಿದ್ದಿತು ಹಾಗೂ ನಿರ್ದೇಶಕರುಗಳ ಮಂಡಳಿಯ ಅನುಮೋದನೆಗಳ ನಂತರ ನೀಡಲಾಗಿದ್ದಿತು ಎಂಬುದಾಗಿ ವಿಸಕಂಗಳು ಪ್ರತಿಕ್ರಿಯೆಯನ್ನು ನೀಡಿದವು (ಅಕ್ಟೋಬರ್ 2024). ಕೆಲವು ಪ್ರಕರಣಗಳಲ್ಲಿ, ಕಾಮಗಾರಿಗಳನ್ನು ಟೆಂಡರುಗಳನ್ನು ಪುನರ್–ಆಹ್ವಾನಿಸಿದ ನಂತರವೂ ಕಡಿಮೆ ದರಗಳನ್ನು ಪಡೆಯಲಾಗಲಿಲ್ಲವಾದ್ದರಿಂದ,

ಅಧಿಕ ಪ್ರೀಮಿಯಂಗಳಲ್ಲಿ ನೀಡಲಾಗಿದ್ದಿತು. ವಿಸಕಂಗಳು ಕೆಟಿಟಿಪಿ ಅಧಿನಿಯಮವನ್ನು ಉಲ್ಲಂಘಿಸಿದ್ದವಲ್ಲದೆಯೇ (ಕಾಮಗಾರಿಗಳನ್ನು ಅಧಿಕ ಟೆಂಡರು ಪ್ರೀಮಿಯಂನಲ್ಲಿ ನೀಡುವ ಮೂಲಕ) ಪ್ರಮಾಣಿತ ಬಿಡ್ಡಿಂಗ್ ದಾಖಲೆಗಳಿಗೂ (ಎಸ್‌ಬಿಡಿ) ಬದ್ಧತೆಯಿಂದ ಕೂಡಿರಲಿಲ್ಲವಾದ್ದರಿಂದ ಹಾಗೂ ನಿರ್ಬಂಧಿತ ಟೆಂಡರು ಷರತ್ತುಗಳನ್ನು ಹಾಕಿದ್ದವಾದ್ದರಿಂದ ಉತ್ತರವು ಒಪ್ಪುವಂತಿಲ್ಲ.

**ಶಿಫಾರಸು:**

**3. ವಿಸಕಂಗಳು ಸಮರ್ಪಕ ಸ್ಪರ್ಧಾತ್ಮಕತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಹಾಗೂ ಅತ್ಯಂತ ಆರ್ಥಿಕವಾಗಿ ಅನುಕೂಲಕರ ಮಾರುಕಟ್ಟೆ ದರಗಳಿಗಾಗಿ ಮಾರುಕಟ್ಟೆ ಆವಿಷ್ಕರಣೆಯನ್ನು ಅನುವು ಮಾಡುವ ಸಲುವಾಗಿ ಕೆಟಿಟಿಪಿ ಅಧಿನಿಯಮ, 1999 ಹಾಗೂ ನಿಯಮಗಳು, 2000, ಇವುಗಳ ಅನುಸಾರ ಕಾಲಮಿತಿ ಚೌಕಟ್ಟುಗಳನ್ನು ಅನುಸರಿಸುವುದನ್ನು ಕರ್ನಾಟಕ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.**

### *3.6 ಜಿಐಎಸ್ ಸ್ಟೇಷನ್ನು ಸ್ಥಾಪನೆ*

ಧಾರವಾಡ ಜಿಲ್ಲೆಯ ಹುಬ್ಬಳ್ಳಿ ನಗರದ ಹೊಸೂರಿನ ಸಮೀಪ, ಐಪಿಡಿಎಸ್ ಅಡಿಯಲ್ಲಿ 2×8 mVA, 33/11 kV ಗ್ಯಾಸ್ ಇನ್ಸ್ಯುಲೇಟೆಡ್ ಉಪ–ಸ್ಟೇಷನನ್ನು (GIS) ಸಂಬಂಧಿಸಿದ 33 ಕೆವಿ ಮಾರ್ಗದ ಜೊತೆ ನಿರ್ಮಿಸುವುದನ್ನು ಹೆಸ್ಕಾಂ ಯೋಜಿಸಿತು, ಅದಕ್ಕಾಗಿ ಡಿಡಬ್ಲ್ಯುಎಯನ್ನು ಅಕ್ಟೋಬರ್ 2018ರಲ್ಲಿ ನೀಡಲಾಗಿದ್ದು, ಆಸಕ್ತಿಯ ಪತ್ರವನ್ನು ನೀಡಿದ ದಿನಾಂಕದಿಂದ (ಸೆಪ್ಟಂಬರ್ 2018) ಅಥವಾ ಭೂಮಿಯನ್ನು ವಹಿಸಿಕೊಟ್ಟ ದಿನಾಂಕದಿಂದ, ಇವುಗಳಲ್ಲಿ ಯಾವುದು ನಂತರದ ದಿನಾಂಕವೋ, ಆ ದಿನಾಂಕದಿಂದ 12 ತಿಂಗಳುಗಳ ಒಳಗೆ ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು ಎಂಬುದಾಗಿ ನಿರ್ದಿಷ್ಟಪಡಿಸಿ ನೀಡಲಾಗಿದ್ದಿತು. ಸಾಮಗ್ರಿಗಳನ್ನು ಖರೀದಿಸಲಾಯಿತಾದರೂ, ಹಾಗೂ ಕಾರ್ಯಕ್ರಮ ಮೌಲ್ಯಮಾಪನ ಮತ್ತು ಸಮೀಕ್ಷಾ ವಿಧಾನ (PERT) ನಕ್ಷೆಯನ್ನು ತಯಾರಿಸಲಾಗಿದ್ದಿತಾದರೂ (ಸೆಪ್ಟಂಬರ್ 2018), ಸ್ಥಳೀಯ ನಿವಾಸಿಗಳಿಂದ ಪ್ರತಿರೋಧದ ಕಾರಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಲಿಲ್ಲ.

ಜೂನ್ 2020ರಲ್ಲಿ, ಗುತ್ತಿಗೆದಾರರು ಹೆಸ್ಕಾಂ ಭೂಮಿಯನ್ನು ಹಂಚಿಕೆ ಮಾಡದಿರುವ ಬಗ್ಗೆ ವಿಷಯವನ್ನು ಗಮನಕ್ಕೆ ತಂದರು. ಗುತ್ತಿಗೆದಾರರು ಸಾಮಗ್ರಿಗಳ ಖರೀದಿಗಾಗಿ ಆದೇಶಗಳನ್ನು ಅದಾಗಲೇ ನೀಡಿದ್ದರಿಂದ, ಯೋಜನೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯ (ಕೆಐಎಡಿಬಿ) ರಾಯಪುರ ಕೈಗಾರಿಕಾ ಪ್ರದೇಶ, ಧಾರವಾಡ, ಇಲ್ಲಿನ ಹೆಸ್ಕಾಂನ ಗುತ್ತಿಗೆ ಹಿಡುವಳಿ ಭೂಮಿಗೆ (2,500 ಚದರ ಮೀಟರು – 26,910 ಚದರ ಅಡಿ) ಸ್ಥಳಾಂತರಿಸಲು ತೀರ್ಮಾನಿಸಲಾಯಿತು ಮತ್ತು ಗುತ್ತಿಗೆದಾರರಿಗೆ ಜೂನ್ 2020 ರಲ್ಲಿ ಕೆಲಸವನ್ನು ಪ್ರಾರಂಭಿಸಲು ಸೂಚಿಸಲಾಯಿತು. ರಾಯಪುರ ಕೈಗಾರಿಕಾ ಪ್ರದೇಶದ ನಿವೇಶನವನ್ನು ಗುತ್ತಿಗೆದಾರರಿಗೆ ಸೆಪ್ಟಂಬರ್ 2020ರಲ್ಲಿ ವಹಿಸಿಕೊಡಲಾಯಿತು ಹಾಗೂ ಉಪ–ಸ್ಟೇಷನನ್ನು ಡಿಸೆಂಬರ್ 2021ರಲ್ಲಿ ₹ 19.20 ಕೋಟಿ ವೆಚ್ಚದಲ್ಲಿ ಕಾರ್ಯೋನ್ಮುಖಗೊಳಿಸಲಾಯಿತು.

ಹೆಸ್ಕಾಂ 15 ಆಗಸ್ಟ್ 2018ರಲ್ಲಿ ಪೂರ್ಣಗೊಳ್ಳಬೇಕಿದ್ದಂತಹ ಕಾಮಗಾರಿಗೆ ಗುತ್ತಿಗೆಯನ್ನು ಸಮಯೋಚಿತವಾಗಿ ನೀಡಲಾಗಲಿಲ್ಲವಾದ್ದರಿಂದ, ಕಾಮಗಾರಿಗಾಗಿ ಪಿಎಫ್‌ಸಿಯ ಅನುಮೋದನೆಯ ಅನುಸಾರ ಕಾಮಗಾರಿಯನ್ನು ಮುಕ್ತಾಯಗೊಳಿಸಲಾಗಿರುವುದು ಅಥವಾ ರದ್ದುಗೊಳಿಸಲಾಗಿರುವುದು ಎಂಬುದಾಗಿ ಪರಿಗಣಿಸಲಾಗಿದ್ದಿತು. ಇದರರ್ಥ ಹೆಚ್ಚಿನ ಮುಂಗಡ ವೆಚ್ಚದೊಂದಿಗೆ ಯೋಜಿತ ಕೆಲಸವು ಸ್ವಂತ ನಿಧಿಯನ್ನು ಬಳಸಿಕೊಂಡು ಎರಡು ವರ್ಷಗಳ ವಿಳಂಬದೊಂದಿಗೆ ಪೂರ್ಣಗೊಂಡಿತು ಮತ್ತು ಹೆಸ್ಕಾಂ ಐಪಿಡಿಎಸ್ ಅಡಿಯಲ್ಲಿ ಅನುದಾನ ಪಡೆಯುವ ಅವಕಾಶವನ್ನು ಕಳೆದುಕೊಂಡಿತು.

ನಿವಾಸಿಗಳು ಸ್ಟೇಷನನ್ನು ತನ್ನದೇ ಆದಂತಹ ಸ್ವಂತ ಭೂಮಿಯಲ್ಲಿ ಸ್ಥಾಪಿಸುವುದನ್ನು ವಿರೋಧಿಸಿದರು ಹಾಗೂ ಈ ಸಮಸ್ಯೆಯನ್ನು ಸ್ಥಳೀಯ ವಿಧಾನಸಭಾ ಸದಸ್ಯರು, ಮಹಾಪೌರರು ಮತ್ತು ಆಯುಕ್ತರ ಗಮನಕ್ಕೆ ತರಲಾಗಿದ್ದಿತು ಎಂಬುದಾಗಿ ಹೆಸ್ಕಾಂ ಉತ್ತರಿಸಿತು (ಅಕ್ಟೋಬರ್ 2024). ಯಾವುದೇ ಬದಲಿ ಭೂಮಿಯನ್ನು ಗುರುತಿಸಲು ಸಾಧ್ಯವಾಗಲಿಲ್ಲ ಹಾಗೂ ಈ ಕಾಮಗಾರಿಗಾಗಿ ಅನುಮೋದಿತಗೊಂಡಿದ್ದಂತಹ ಮೊತ್ತವನ್ನು ಇತರೆ ಅಗತ್ಯ ಕಾಮಗಾರಿಗಳಿಗಾಗಿ

ಉಪಯೋಗಿಸಿಕೊಳ್ಳಲಾಯಿತು ಎಂಬುದಾಗಿಯೂ ಹೆಸ್ಕಾಂ ತಿಳಿಸಿತು. ಈ ರೀತಿಯಾಗಿ ಹೆಸ್ಕಾಂ ಮಂಜೂರಾತಿಗೊಂಡಿದ್ದ ಮೊತ್ತವನ್ನು ಉಪಯೋಗಿಸಿಕೊಂಡಿದ್ದಿತಾದರೂ, ಐಪಿಡಿಎಸ್ ಅಡಿಯಲ್ಲಿ ಯೋಜಿಸಲಾಗಿದ್ದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಲಿಲ್ಲ ಏಕೆಂದರೆ ಅದು ಅಕ್ಟೋಬರ್ 2018ರಲ್ಲಿ ನೀಡಲಾಗಿದ್ದಂತಹ ಡಿಡಬ್ಲ್ಯುಎಗಾಗಿ ಜೂನ್ 2020ರವರೆವಿಗೂ ಭೂಮಿಯನ್ನು ಒದಗಿಸಲು ಸಾಧ್ಯವಾಗಿಲ್ಲ ಮತ್ತು ಸ್ವಂತ ಹಣವನ್ನು ಬಳಸಿಕೊಂಡು ಪೂರ್ಣಗೊಳಿಸಲಾಯಿತು.

### 3.7 ಸಂಪರ್ಕ ಕಡಿತಗೊಳಿಸಲಾಗಿದ್ದಂತಹ ಭೂಗತ ಕೇಬಲ್ಲುಗಳು

ಐಪಿಡಿಎಸ್ ಅಡಿಯಲ್ಲಿ ತುಮಕೂರಿನಲ್ಲಿ 2018 ಮತ್ತು 2019ರಲ್ಲಿ ಭೂಗತ ಕೇಬಲ್ಲುಗಳನ್ನು ಹಾಕುವ ಒಂಬತ್ತು ಕಾಮಗಾರಿಗಳನ್ನು (18.41 ಕಿಮೀ) ಬೆಸ್ಕಾಂ ಕೈಗೆತ್ತಿಕೊಂಡಿತು. ಈ ಭೂಗತ ಕೇಬಲ್ಲು ಫೀಡರುಗಳ ಸಂಪರ್ಕ ಕಡಿತಗೊಳಿಸಲಾಯಿತು ಹಾಗೂ ವಿದ್ಯುತ್ತನ್ನು ಓವರ್‌ಹೆಡ್ ಫೀಡರುಗಳ ಮೂಲಕ ಪಡೆದುಕೊಳ್ಳಲಾಗಿದ್ದಿತು, ಇದರಿಂದಾಗಿ ಐಪಿಡಿಎಸ್ ಅಡಿಯಲ್ಲಿ ₹ 6.01 ಕೋಟಿ ವೆಚ್ಚದಲ್ಲಿ ಕಾರ್ಯಗತಗೊಳಿಸಲಾದ ಕಾಮಗಾರಿಗಳು ನಾಲ್ಕು ವರ್ಷಗಳ ಅವಧಿಯಲ್ಲಿ ನಿಷ್ಫಲಗೊಂಡವು. ಬೆಸ್ಕಾಂ ತಾಂತ್ರಿಕ ನಿರ್ದಿಷ್ಟನಿರೂಪಣೆಗಳ ಅನುಸಾರ, ಭೂಗತ ಕೇಬಲ್ಲುಗಳ ಉಪಯೋಗಿಸಬಹುದಾದಂತಹ ಅವಧಿಯು 40 ವರ್ಷಗಳಾಗಿದ್ದಿತು.

ತಾಂತ್ರಿಕ ಸಲಹೆಗಾರರರೊಂದಿಗೆ ಮತ್ತು ಬೆಸ್ಕಾಂ ಸಿಬ್ಬಂದಿಯೊಂದಿಗೆ ನಡೆಸಲಾದ ಜಂಟಿ ಭೌತಿಕ ಪರೀಕ್ಷಣೆಯು ಕೂಡ (ಫೆಬ್ರವರಿ 2024) ಈ ಭೂಗತ ಕೇಬಲ್ಲು ಫೀಡರುಗಳ ಸಂಪರ್ಕ ಕಡಿತಗೊಳಿಸಲಾಗಿದ್ದಿತು ಹಾಗೂ ವಿದ್ಯುತ್ತನ್ನು ಓವರ್‌ಹೆಡ್ ಫೀಡರುಗಳ ಮೂಲಕ ಪಡೆದುಕೊಳ್ಳಲಾಗಿದ್ದಿತು ಎಂಬುದನ್ನು ಖಚಿತಪಡಿಸಿದವು.




**ಛಾಯಾಚಿತ್ರ ಸಂಖ್ಯೆ 3.1: ಬೆಸ್ಕಾಂ ತುಮಕೂರು ಓ & ಎಂ ವಿಭಾಗದಲ್ಲಿ ಐಪಿಡಿಎಸ್ ಭೂಗತ ಕೇಬಲ್ಲುಗಳ ಸಂಪರ್ಕ ಕಡಿತಗೊಳಿಸಿರುವುದು.**

ಒಂದು ಫೀಡರು ಕೇಬಲ್ಲು ಅಕ್ಟೋಬರ್ 2023ರಲ್ಲಿ ಹಾನಿಗೊಳಗಾಗಿದ್ದಿತು ಹಾಗೂ ವಿದ್ಯುತ್ ಸರಬರಾಜನ್ನು ಓವರ್‌ಹೆಡ್ ವಿದ್ಯುತ್ ಮಾರ್ಗಗಳ ಮೂಲಕ ವ್ಯವಸ್ಥೆಗೊಳಿಸಲಾಗಿದ್ದಿತು ಹಾಗೂ ತದನಂತರದಲ್ಲಿ ವಿದ್ಯುತ್ ಸರಬರಾಜನ್ನು ಭೂಗತ ಕೇಬಲ್ಲಿನ ಮೂಲಕ ಪೂರ್ವಸ್ಥಿತಿಗೆ ತರಲಾಯಿತು ಎಂಬುದಾಗಿ ಬೆಸ್ಕಾಂ ಉತ್ತರಿಸಿತು (ಅಕ್ಟೋಬರ್ 2024).

### 3.8 ಮೀಟರು ಅಳವಡಿಸುವಿಕೆ

ಐಪಿಡಿಎಸ್ ಅಡಿಯಲ್ಲಿ ಮೀಟರು ಅಳವಡಿಸುವಿಕೆ ಭಾಗವು ಫೀಡರುಗಳಿಗೆ, ವಿತರಣಾ ಟ್ರಾನ್ಸ್‌ಫಾರ್ಮರುಗಳಿಗೆ ಮತ್ತು ಮೀಟರುಗಳನ್ನು ಅಳವಡಿಸಿರದ ವಿದ್ಯುತ್ ಸಂಪರ್ಕದೊಂದಿಗಿನ ಎಲ್ಲಾ ಗ್ರಾಹಕರುಗಳಿಗೆ ಸೂಕ್ತವಾದಂತಹ ಸ್ಥಿರ ಮೀಟರ್‌ಗಳ ಸ್ಥಾಪನೆ, ದೋಷಯುಕ್ತ ಮೀಟರ್‌ಗಳು ಮತ್ತು

ಎಲೆಕ್ಟ್ರೋ–ಮೆಕ್ಯಾನಿಕಲ್ ಮೀಟರ್‌ಗಳ ಬದಲಿ, ಫೀಡರುಗಳು, ವಿತರಣಾ ಟ್ರಾನ್ಸ್‌ಫಾರ್ಮರುಗಳು ಮತ್ತು ಹೈ ಲೋಡ್ ಗ್ರಾಹಕರುಗಳು, ಇತ್ಯಾದಿಗಳಿಗೆ ಸ್ವಯಂಚಾಲಿತ ಮೀಟರು ಓದುವಿಕೆ (AMR) ವ್ಯವಸ್ಥೆ, ಇವುಗಳನ್ನು ಒಳಗೊಂಡಿದ್ದಿತು.

### *3.8.1 ಡೇಟಾ ಸರ್ವರುಗಳೊಂದಿಗೆ ಡಿಟಿಸಿ ಮೀಟರುಗಳಿಗೆ ಮೋಡೆಮ್‌ಗಳನ್ನು ಸಂಯೋಜಿಸದಿದ್ದುದು.*

ಸೆಸ್ಕ್‌ನಲ್ಲಿ, ಐಪಿಡಿಎಸ್ ಅಡಿಯಲ್ಲಿ ಮೀಟರುಗಳನ್ನು ಅಳವಡಿಸುವ ಕಾಮಗಾರಿಗಾಗಿ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದ್ದಿತು (ಆಗಸ್ಟ್ 2017) ಹಾಗೂ ಕಾಮಗಾರಿಯನ್ನು ಅತ್ಯಂತ ಕಡಿಮೆ ದರವನ್ನು ಘೋಷಿಸಿದ್ದಂತಹ ಮೆ. ಸಂತೋಷ್ ಇಲೆಕ್ಟ್ರಿಕಲ್ಸ್, ಮೈಸೂರು (ಗುತ್ತಿಗೆದಾರರು), ಇವರಿಗೆ ದರಸಂಧಾನ (ಸೆಪ್ಟೆಂಬರ್ 2017) ಮಾಡಿದನಂತರ ₹ 25.48 ಕೋಟಿ ಮೊತ್ತಕ್ಕೆ ನೀಡಲಾಗಿದ್ದಿತು (ಅಕ್ಟೋಬರ್ 2017). ಕಾಮಗಾರಿಯು ಭಾರತ ಸರ್ಕಾರದ ಇಂಧನ ಮಂತ್ರಾಲಯ ಮಾರ್ಗಸೂಚಿಗಳ ಪ್ರಕಾರ ಸಂದೇಶ ಮೂಲಸೌಕರ್ಯ ಅನುಕೂಲತೆಯೊಂದಿಗೆ ಡಿಟಿಸಿಗಳ ಡಿಎಲ್‌ಎಂಎಸ್‌ಯೇತರ (ಡಿವೈಸ್ ಲ್ಯಾಂಗ್ವೇಜ್ ಮೆಸೇಜ್ ಸ್ಪೆಸಿಫಿಕೇಶನ್) ಮೀಟರುಗಳನ್ನು ಡಿಎಲ್‌ಎಂಎಸ್ ಹೊಂದಿರುವ ಸಾಧನವನ್ನು ಕೂಡಿದಂತೆ ಬದಲಾವಣೆಗೊಳಿಸುವುದನ್ನು ಒಳಗೊಂಡಿದ್ದಿತು. ಗುತ್ತಿಗೆದಾರರು ಮೋಡೆಮ್ (ಎಲ್ಲಾ ಸಂಬಂಧಿತ ಭಾಗಗಳೊಂದಿಗೆ ಜಿಪಿಆರ್‌ಎಸ್ ಮೋಡೆಮ್) ಒಂದಕ್ಕೆ ಸರಬರಾಜಿಗಾಗಿ ₹ 15,000ದಂತೆ ಹಾಗೂ ಸ್ಥಾಪನೆಗಾಗಿ ಮೋಡೆಮ್ ಒಂದಕ್ಕೆ ₹ 3,000ದಂತೆ ದರವನ್ನು ಘೋಷಿಸಿದ್ದರು. ಡಿಡಬ್ಲ್ಯೂಎ ಅನುಸಾರ, 438 ಡಿಟಿಸಿಗಳಿಗೆ ಜಿಪಿಆರ್‌ಎಸ್ ಮೋಡೆಮ್‌ಗಳನ್ನು ಸ್ಥಾಪಿಸಬೇಕಿದ್ದಿತು. ಇದಕ್ಕೆ ಪ್ರತಿಯಾಗಿ, ಗುತ್ತಿಗೆದಾರರು ಸೆಸ್ಕ್ ಅಡಿಯಲ್ಲಿನ ಡಿಟಿಸಿಗಳಿಗೆ 561 ಮೋಡೆಮ್‌ಗಳನ್ನು ಹಾಗೂ ಸಿಮ್‌ಗಳನ್ನು ಸರಬರಾಜು ಮಾಡಿದ್ದರು ಹಾಗೂ ಸ್ಥಾಪಿಸಿದ್ದರು.

ಡಿಡಬ್ಲ್ಯೂಎಯ *ಷರತ್ತು 8 (a)* ಮತ್ತು *(b)* ಅನುಸಾರ ಗುತ್ತಿಗೆದಾರರು ಇಂಧನ ಬಳಕೆ ಬಿಲ್ಲುಗಳನ್ನು ಪಡೆಯುವ ಸಲುವಾಗಿ ಮೂರು, ಹ್ಯಾಂಡ್‌ಹೆಲ್ಡ್ ಯೂನಿಟ್‌ಗಳನ್ನು (ICS ಹೊಂದಾಣಿಕೆಯ) (ಎಚ್‌ಎಚ್‌ಯುಗಳು) ಪ್ರತಿ ಓ & ಎಂ ವಿಭಾಗಕ್ಕೂ ಉಪಯೋಗಿಸುವಂತಹ ತಂತ್ರಾಂಶ ಅನ್ವಯದೊಂದಿಗೆ ಉಚಿತವಾಗಿ ಸರಬರಾಜು ಮಾಡತಕ್ಕದ್ದು, ಅಲ್ಲದೆಯೇ ತಂತ್ರಾಂಶ ಅನ್ವಯವನ್ನು ಉಪಯೋಗಿಸುವುದರ ಬಗೆ ತರಬೇತಿ ನೀಡುವಂತೆ ನಿರ್ದಿಷ್ಟಪಡಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ಗುತ್ತಿಗೆದಾರರು ಟೆಂಡರು ಷರತ್ತುಗಳ ಅನುಸಾರ ಎಚ್‌ಎಚ್‌ಯುಗಳನ್ನು ತಂತ್ರಾಂಶ ಅನ್ವಯದೊಂದಿಗೆ ಯಾವುದೇ ಓ & ಎಂ ವಿಭಾಗಗಳಿಗೆ ಒದಗಿಸಿರಲೂ ಇಲ್ಲ ಅಥವಾ ತಂತ್ರಾಂಶ ಅನ್ವಯವನ್ನು ಉಪಯೋಗಿಸುವುದರ ಬಗ್ಗೆ ತರಬೇತಿಯನ್ನೂ ನೀಡಿರಲಿಲ್ಲ.

ತಂತ್ರಾಂಶ ಅನ್ವಯದ ಅನುಪಸ್ಥಿತಿಯಲ್ಲಿ ಸ್ಥಾಪಿಸಲಾಗಿದ್ದಂತಹ 561 ಮೋಡೆಮ್‌ಗಳ ಪೈಕಿ ಯಾವುದೂ ಸಂವಹನ ನಡೆಸುತ್ತಿರಲಿಲ್ಲ ಹಾಗೂ ಅವುಗಳನ್ನು ಸೆಸ್ಕ್‌ನ ಸರ್ವರುಗಳೊಂದಿಗೆ ಸಂಯೋಜಿಸಲಾಗಿರಲಿಲ್ಲ.

ಮೋಡೆಮ್‌ಗಳಿಂದ ಮಾಹಿತಿಯನ್ನು ಪಡೆದುಕೊಳ್ಳುವ ಸಲುವಾಗಿ M-DAS ಸಂದೇಶ ಸಾಧನಗಳನ್ನು (ಮೀಟರುಗಳನ್ನು ಅಳವಡಿಸುವಿಕೆ ಮತ್ತು ಮಾಹಿತಿ ಪಡೆದುಕೊಳ್ಳುವಿಕೆ ವ್ಯವಸ್ಥೆಗಳು) ಮಾಹಿತಿ ತಂತ್ರಜ್ಞಾನ ಹಂತ – IIರಲ್ಲಿ ಕೈಗೆತ್ತಿಕೊಳ್ಳಬೇಕಿದ್ದಿತು, ಅದು ಇನ್ನೂ ಪೂರ್ಣಗೊಂಡಿರುವುದಿಲ್ಲ ಹಾಗೂ ಎಂಡಿಎಂ ಸಾಧನವನ್ನು ಚಾಲನೆಗೊಳಿಸಿದನಂತರ ಸಂದೇಶ ಸಾಧನವನ್ನು ಸ್ಥಾಪಿಸಲು ಕ್ರಮವನ್ನು ಕೈಗೊಳ್ಳಲಾಗುವುದು ಎಂಬುದಾಗಿ ಸೆಸ್ಕ್ ತಿಳಿಸಿತು (ಅಕ್ಟೋಬರ್ 2024). ಗುತ್ತಿಗೆದಾರರು ಎಚ್‌ಎಚ್‌ಯುಗಳನ್ನು ಸರಬರಾಜು ಮಾಡುವಲ್ಲಿ ವಿಫಲರಾಗಿದ್ದರಿಂದ, ಕಾರಣ ಕೇಳಿ ನೋಟೀಸನ್ನು ನೀಡಲಾಗಿದ್ದಿತು. ಕಾಮಗಾರಿಯನ್ನು ₹ 1.01 ಕೋಟಿ ಮೌಲ್ಯದಲ್ಲಿ (561 ಡಿಟಿಸಿಗಳು x ₹ 18,000) ಪೂರ್ಣಗೊಳಿಸಲಾಗಿದ್ದಿತಾದರು (ಡಿಸೆಂಬರ್ 2019), ಈ ಆಸ್ತಿಗಳನ್ನು ಉಪಯೋಗಿಸಿರಲಿಲ್ಲ (ಅಕ್ಟೋಬರ್ 2024) ಇದು ನಿಷ್ಫಲ ವೆಚ್ಚವಾಗುವಲ್ಲಿ ಪರಿಣಮಿಸಿದ್ದಿತು.

### *3.8.2 ಉದ್ದೇಶಗಳು ಈಡೇರದಿದ್ದುದು*

ಅಧಿಕ ವಿದ್ಯುತ್ ಹೊರೆಯ ಎಲ್‌ಟಿ ಬಳಕೆದಾರರುಗಳಿಗೆ ಸ್ವಯಂಚಾಲಿತ ಮೀಟರು ಓದುವಿಕೆ (AMR) ಅನುಕೂಲತೆಯನ್ನು ಕಲ್ಪಿಸುವ ಸಲುವಾಗಿ, ಬೆಸ್ಕಾಂ ಐಪಿಡಿಎಸ್ ಅಡಿಯಲ್ಲಿ 12,373 ಮೋಡೆಮ್‌ಗಳ ಸರಬರಾಜು, ಸ್ಥಾಪನೆ, ಕಾರ್ಯೋನ್ಮುಕ್ತಗೊಳಿಸುವಿಕೆ, ಏಕೀಕರಣ ಹಾಗೂ ನಿರ್ವಹಣೆಗಾಗಿ ಹಾಗೂ

ಮಾಹಿತಿಯನ್ನು ಪ್ರಸಕ್ತ ಇರುವಂತಹ ಮೀಟರುಗಳು ಮತ್ತು ಮಾಹಿತಿ ಪಡೆದುಕೊಳ್ಳುವಿಕೆ ಸಾಧನಗಳಿಗೆ[45] (M-DAS) ಸೇರಿಸುವ ಸಲುವಾಗಿ ಮೆ. ಅನಲಾಜಿಕ್ಸ್ ಟೆಕ್ ಇಂಡಿಯಾ ಲಿಮಿಟೆಡ್, ಹೈದರಾಬಾದ್, ಇವರಿಗೆ ಐದು ವರ್ಷಗಳ ಅವಧಿಗೆ ಟರ್ನ್‌ಕೀ ಆಧಾರದ ಮೇರೆಗೆ ಡಿಡಬ್ಲ್ಯುಎ ನೀಡಿತು (ಫೆಬ್ರವರಿ 2018). ಗುತ್ತಿಗೆದಾರರು 12,373 ಮೋಡೆಮ್‌ಗಳನ್ನು ಸರಬರಾಜು ಮಾಡಿದರು ಹಾಗೂ ಸ್ಥಾಪಿಸಿದರು (ಮಾರ್ಚ್ 2019) ಹಾಗೂ ಮೋಡೆಮ್‌ಗಳನ್ನು ಸರಬರಾಜು ಮಾಡದಿದ್ದುದು ಮತ್ತು ಸಮಯೋಚಿತವಾಗಿ ಸ್ಥಾಪಿಸಬೇಕಿದ್ದ ಮೋಡೆಮ್‌ಗಳನ್ನು ವಿಳಂಬವಾಗಿ ಸ್ಥಾಪಿಸಿದ್ದ ಕಾರಣ ದಂಡವನ್ನು ಕಡಿತಗೊಳಿಸಿ ಭಾಗಶಃ ಪಾವತಿಯಾಗಿ ಅವರಿಗೆ ₹ 4.75 ಕೋಟಿ (ಪೂರ್ಣಗೊಂಡ ಪ್ರಮಾಣಕ್ಕೆ ₹ 10.41 ಕೋಟಿಗೆ ವಿರುದ್ಧವಾಗಿ) ಮೊತ್ತವನ್ನು ಮಾತ್ರ ಪಾವತಿಸಲಾಗಿದ್ದಿತು.

ಬೆಸ್ಕಾಂನ ಎಂಟು ಆಯ್ದ ವಿಭಾಗಗಳಲ್ಲಿ ಅಧಿಕ ವಿದ್ಯುತ್ ಹೊರೆ ಎಲ್‌ಟಿ3 ಮತ್ತು ಎಲ್‌ಟಿ5 ಸ್ಥಾಪಕಗಳಿಗೆ ಅಳವಡಿಸಲಾಗಿರುವ ಮೀಟರುಗಳು ಮತ್ತು ಸಂಬಂಧಿತ ಮೋಡೆಮ್‌ಗಳ ಸ್ಥಿತಿಗತಿಗಳು ಈ ಕೆಳಗಿನಂತಿದ್ದವು:

**ಕೋಷ್ಟಕ ಸಂಖ್ಯೆ 3.6: ಆಯ್ದ ಎಂಟು ವಿಭಾಗಗಳಲ್ಲಿ ಐಪಿಡಿಎಸ್ ಅಡಿಯಲ್ಲಿ AMR ಮೀಟರುಗಳ ಸ್ಥಾಪನೆಯ ಸ್ಥಿತಿಗತಿ**

| ಕ್ರಮ ಸಂಖ್ಯೆ | ವಿಭಾಗ | ಜೂನ್ 2023ರಲ್ಲಿದ್ದಂತೆ 40 ಎಚ್‌ಪಿಗಿಂತ ಅಧಿಕ ವಿದ್ಯುತ್ ಹೊರೆ ಇರುವ ಎಲ್‌ಟಿ 3 ಮತ್ತು ಎಲ್‌ಟಿ 5 ಸ್ಥಾಪಕಗಳು | ಐಪಿಡಿಎಸ್ ಅಡಿಯಲ್ಲಿ ಅಳವಡಿಸಲಾಗಿದ್ದ ಮೀಟರುಗಳು | ಐಪಿಡಿಎಸ್ ಅಡಿಯಲ್ಲಿ ಅಳವಡಿಸಲಾಗಿದ್ದ ಮೋಡೆಮ್‌ಗಳು | ಜೂನ್ 2023ರಲ್ಲಿದ್ದಂತೆ ಸಂದೇಶ ನೀಡುವ ಎಎಂಆರ್ ಮೀಟರುಗಳು | ಸಂವಹನ ನಡೆಸುವ ಮೋಡೆಮ್‌ಗಳ ಶೇಕಡಾವಾರು |
|---|---|---|---|---|---|---|
| 1 | ಎಚ್‌ಎಸ್‌ಆರ್ ಬಡಾವಣೆ | 1,508 | 274 | 1,168 | 1,168 | 100 |
| 2 | ಕೋರಮಂಗಲ | 605 | 0 | 193 | 193 | 100 |
| 3 | ಇಂದಿರಾನಗರ | 1,189 | 521 | 844 | 301 | 35.66 |
| 4 | ಚಿತ್ರದುರ್ಗ | 184 | 0 | 74 | 0 | 0 |
| 5 | ದಾವಣಗೆರೆ | 310 | 36 | 67 | 49 | 75.13 |
| 6 | ತುಮಕೂರು | 119 | 119 | 119 | 119 | 100 |
| 7 | ಕೆಂಗೇರಿ | 2,014 | 839 | 839 | 214 | 25.51 |
| 8 | ರಾಜಾಜಿನಗರ | 2,080 | 301 | 1,055 | 757 | 71.75 |
| | **ಒಟ್ಟು** | **8,009** | **2,090** | **4,359** | **2,801** | **64.25** |

*ಮೂಲ: ಬೆಸ್ಕಾಂ ಒದಗಿಸಿದ ಮಾಹಿತಿ*

ಗಮನಿಸಲಾದಂತೆ, ಮೋಡೆಮ್‌ಗಳನ್ನು ಎಲ್ಲಾ ಎಲ್‌ಟಿ3 ಮತ್ತು ಎಲ್‌ಟಿ5 ಸ್ಥಾಪಕಗಳಿಗೆ AMR ಮೀಟರುಗಳೊಂದಿಗೆ ಸ್ಥಾಪಿಸಿರಲಿಲ್ಲ ಹಾಗೂ ಕೆಲವು ಮೋಡೆಮ್‌ಗಳು ಸಂದೇಶಗಳನ್ನು ನೀಡುತ್ತಿರಲಿಲ್ಲ. ಬೆಸ್ಕಾಂ ಐಪಿಡಿಎಸ್ ಕಾರ್ಯಗತಗೊಳಿಸಿದ ನಂತರದಲ್ಲಿ 40ಎಚ್‌ಪಿಗಿಂತ ಮೇಲಿನ ವಿದ್ಯುತ್ ಹೊರೆಯೊಂದಿಗಿನ ಹೆಚ್ಚುವರಿ ಎಲ್‌ಟಿ3 ಮತ್ತು ಎಲ್‌ಟಿ5 ಗ್ರಾಹಕರುಗಳಿಗೆ AMR ಮೀಟರುಗಳನ್ನು ಮತ್ತು ಮೋಡೆಮ್‌ಗಳನ್ನು ಒದಗಿಸಿರಲಿಲ್ಲ, ಇದು ಐಪಿಡಿಎಸ್ ಅಡಿಯಲ್ಲಿ ಪ್ರಾರಂಭಿಸಲಾದ ಪ್ರಕ್ರಿಯೆಯನ್ನು ಮುಂದುವರೆಸಿಕೊಂಡು ಹೋಗಿರಲಿಲ್ಲ ಎಂಬುದನ್ನು ಸೂಚಿಸುತ್ತಿದ್ದಿತು.

ಸಂವಹನ ಸಮಸ್ಯೆಗಳಿಂದಾಗಿ ಮೋಡೆಮ್‌ಗಳ ಏಕೀಕರಣ ವಿಳಂಬವಾಯಿತು ಮತ್ತು ಹಾಗೂ ಹೆಚ್ಚುವರಿ ಕಾಮಗಾರಿಯನ್ನು ಆಯವ್ಯಯ ಕೊರತೆ ಮತ್ತು ತಂತ್ರಜ್ಞಾನದ ಪ್ರಗತಿಯಿಂದಾಗಿ ಪರಿಗಣಿಸಿರಲಿಲ್ಲ ಎಂಬುದಾಗಿ ಬೆಸ್ಕಾಂ ತಿಳಿಸಿತು (ಅಕ್ಟೋಬರ್ 2024). ಮುಂದುವರೆದು, ಪ್ರಸ್ತುತ, AMR ಮೀಟರುಗಳ ಸಂದೇಶ ನೀಡಿಕೆಯು ಶೇಕಡಾ 79ರಿಂದ ಶೇಕಡಾ 92ರಷ್ಟು ಆಗಿರುವುದು ಎಂಬುದಾಗಿಯೂ ಬೆಸ್ಕಾಂ ತಿಳಿಸಿತು. AMR ಮೀಟರುಗಳನ್ನು ಅರ್ಹ ಗ್ರಾಹಕರುಗಳ ಒಂದು ಭಾಗಕ್ಕೆ ಮಾತ್ರ ಅಳವಡಿಸಲಾಗಿದ್ದಿತಾದ್ದರಿಂದ ಹಾಗೂ ಎಂಟು ವಿಭಾಗಗಳ ಪೈಕಿ ಐದರಲ್ಲಿ AMR ಮೀಟರು ಶೇಕಡಾ 100ರಷ್ಟು ಸಂದೇಶ ನೀಡಿಕೆ (ಕಮ್ಯುನಿಕೇಷನ್) ಸಾಧನ ಅಳವಡಿಕೆಯನ್ನು ಸಾಧಿಸಿರದ ವಾಸ್ತವಾಂಶದ ಕಾರಣ ಯೋಜನೆಯ ಉದ್ದೇಶವನ್ನು ಸಾಧಿಸಿಕೊಂಡಿರಲಿಲ್ಲ ಎಂಬುದನ್ನು ಉತ್ತರವು ಪುನರುಚ್ಚರಿಸುತ್ತದೆ.

[45] ಜಿಪಿಆರ್‌ಎಸ್ ಮಾಹಿತಿ ಸಂದೇಶ ವ್ಯವಸ್ಥೆಗಾಗಿ ಸ್ಥಳೀಯವಾಗಿ ಸೇವೆಗಳನ್ನು ಒದಗಿಸುತ್ತಿದ್ದಂತಹ ಮೆ. ಇನ್‌ಫೋಸಿಸ್ ಟೆಕ್ನಾಲಜೀಸ್ ಮತ್ತು ಮೆ. ಎನ್. ಸಾಫ್ಟ್ ಇವರುಗಳೊಂದಿಗೆ ಒಪ್ಪಂದ ಮಾಡಿಕೊಂಡು.

## 3.9 ಸೌರ ಪ್ಯಾನೆಲ್ಲುಗಳ ಭಾಗ

ಐಪಿಡಿಎಸ್ ಅಡಿಯಲ್ಲಿ, ಎಲ್ಲಾ ವಿಸಕಂಗಳು ಸೌರ ಫಲಕಗಳನ್ನು ಒದಗಿಸಬೇಕಾಗಿತ್ತು ಮತ್ತು ಅವುಗಳನ್ನು ಸರ್ಕಾರಿ ಕಟ್ಟಡಗಳ ಮೇಲ್ಛಾವಣಿಯ ಮೇಲೆ ಸ್ಥಾಪಿಸಬೇಕಾಗಿತ್ತು. ಐಪಿಡಿಎಸ್ ಅಡಿಯಲ್ಲಿ ಸೌರ ಘಟಕದ ಅನುಷ್ಠಾನದಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಸಮಸ್ಯೆಗಳನ್ನು ಗಮನಿಸಿತು.

### *3.9.1 ನಿರ್ಬಂಧಿತ ಟೆಂಡರ್ ಷರತ್ತುಗಳು*

ಸೆಸ್ಕ್ ಗ್ರಿಡ್ ಸಂಪರ್ಕಿತ ಹೆಚ್ಚುವರಿ ಚಾವಣಿ ಮೇಲಿನ ಸೌರ ವ್ಯವಸ್ಥೆಗಳ ಸರಬರಾಜು, ಅನುಸ್ಥಾಪನಾ ಪರೀಕ್ಷೆ ಮತ್ತು ಕಾರ್ಯಾರಂಭಕ್ಕಾಗಿ ಐದು ವರ್ಷಗಳ ನಿರ್ವಹಣೆಯೊಂದಿಗೆ ₹ 7.78 ಕೋಟಿ ಅಂದಾಜು ವೆಚ್ಚದಲ್ಲಿ, 1,112 kWp ಸಾಮರ್ಥ್ಯಕ್ಕಾಗಿ ಟರ್ನ್‌ಕೀ ಆಧಾರದ ಮೇಲೆ ಅಲ್ಪಾವಧಿಯ ಟೆಂಡರ್ (ಫೆಬ್ರವರಿ 2018) ಅನ್ನು ಕರೆಯಿತು. ಟೆಂಡರು–ಪೂರ್ವ ಅರ್ಹತೆಯ ಮಾನದಂಡವು 1,000 kWp ಕ್ರೋಡೀಕೃತ ಸಾಮರ್ಥ್ಯವನ್ನು ಹೊಂದಿರುವಂತಹ ಐಪಿಡಿಎಸ್ ಅಡಿಯಲ್ಲಿ ಗ್ರಿಡ್ ಸಂಪರ್ಕಿತ ಸೌರ ವಿದ್ಯುತ್ ಕಾಮಗಾರಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವ ಅನುಭವವನ್ನು ನಿರ್ದಿಷ್ಟಪಡಿಸಿದ್ದಿತು. ಈ ಹಿಂದೆ ಐಪಿಡಿಎಸ್ ಅಡಿಯಲ್ಲಿ ಕೇವಲ ಒಂದು ಟೆಂಡರನ್ನು ಮಾತ್ರ ಆಹ್ವಾನಿಸಲಾಗಿದ್ದಿತಾದ್ದರಿಂದ ಹಾಗೂ ಕೇವಲ ಓರ್ವ ಗುತ್ತಿಗೆದಾರರು ಈ ಮೊದಲು ಕಾರ್ಯಗತಗೊಳಿಸಲಾಗಿದ್ದ 1,715 kWp ಪರಿಮಾಣದೊಂದಿಗೆ ಅರ್ಹತೆಯನ್ನು ಹೊಂದಿದ್ದರಾದ್ದರಿಂದ, ಟೆಂಡರು ಷರತ್ತನ್ನು ಕೇವಲ ಓರ್ವ ಗುತ್ತಿಗೆದಾರರು ಮಾತ್ರ ಪೂರೈಸಬಹುದಿತ್ತು. ಈ ಷರತ್ತು ಇತರೆ ಬಿಡ್ದುದಾರರುಗಳು ಭಾಗವಹಿಸುವುದನ್ನು ತಡೆಗಟ್ಟಿತು ಹಾಗೂ ಓರ್ವ ನಿರ್ದಿಷ್ಟ ಬಿಡ್ದುದಾರರಿಗೆ ಅನುಕೂಲಕರವಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಈ ಕಾಮಗಾರಿಯನ್ನು ಮೆ. ನವಿಯ ಟೆಕ್ನಾಲಜೀಸ್, ಇವರಿಗೆ ದರಸಂಧಾನದ ನಂತರ ₹ 8.29 ಕೋಟಿ ದರದಲ್ಲಿ (ಟೆಂಡರಿಗೆ ಇಡಲಾದ ಮೊತ್ತವನ್ನು ಶೇಕಡಾ 6.48 ರಷ್ಟು ಮೀರಿದಂತೆ) ಡಿಡಬ್ಲ್ಯುಎ ದಿನಾಂಕದಿಂದ ಒಂಬತ್ತು ತಿಂಗಳುಗಳ ಒಳಗೆ (ಫೆಬ್ರವರಿ 2019 ರೊಳಗೆ) ಪೂರ್ಣಗೊಳಿಸಬೇಕೆಂಬ ಷರತ್ತಿನೊಂದಿಗೆ ನೀಡಲಾಯಿತು (ಮೇ 2018). ಈ ಗುತ್ತಿಗೆದಾರರು ಕೂಡ ಕಾಮಗಾರಿಯನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ[46].

ಹೆಚ್ಚುವರಿ ಎಸ್‌ಆರ್‌ಟಿಪಿವಿ ಟೆಂಡರನ್ನು ಕಾರ್ಯಗತಗೊಳಿಸಲು ಉಳಿದಿದ್ದಂತಹ ಸಮಯವು ಕೇವಲ 12–13 ತಿಂಗಳುಗಳಾಗಿದ್ದರಿಂದ, ಅನುಭವಿ ವಿದ್ಯುತ್ ವ್ಯವಸ್ಥೆ ಸಂಯೋಜಕರುಗಳ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಐಪಿಡಿಎಸ್ ಅಡಿಯಲ್ಲಿ ಅನುಭವ ಇರುವವರಿಗಾಗಿ ಒತ್ತಾಯಿಸಲಾಗಿದ್ದಿತು ಎಂಬುದಾಗಿ ಸೆಸ್ಕ್ ತಿಳಿಸಿತು (ಅಕ್ಟೋಬರ್ 2024). ಮುಂದುವರೆದು, ಐಪಿಡಿಎಸ್ ಅಡಿಯಲ್ಲಿ ಭಾರತದಲ್ಲಿ ಯಾವುದೇ ಸ್ಥಳದಲ್ಲಿನ ಅನುಭವವನ್ನು ಕೇಳಲಾಗಿದ್ದಿತಾದ್ದರಿಂದ, ಈ ಷರತ್ತು ನಿರ್ಬಂಧನೆಯನ್ನು ಹೊಂದಿರಲಿಲ್ಲ. ಭಾರತದಲ್ಲಿನ ಎಲ್ಲಾ ವಿಸಕಂಗಳು ಸೌರ ವಿದ್ಯುತ್ ಭಾಗವನ್ನು ಕೈಗೆತ್ತಿಕೊಂಡಿರಲಿಲ್ಲವಾದ್ದರಿಂದ ಉತ್ತರವು ಒಪ್ಪುವಂತಿಲ್ಲ. ಮುಂದುವರೆದು, ಐಪಿಡಿಎಸ್ ಕಾಮಗಾರಿಯು ಎಲ್ಲಾ ಸ್ಥಳಗಳಲ್ಲಿ ನಡೆಯುತ್ತಿದ್ದಿತಾದ್ದರಿಂದ, ಐಪಿಡಿಎಸ್ ಅಡಿಯಲ್ಲಿ ನಿರ್ದಿಷ್ಟ ಪರಿಮಾಣದ ಸೌರ ವಿದ್ಯುತ್ ಕಾಮಗಾರಿಗಳನ್ನು ಪೂರ್ಣಗೊಳಿಸಿರಬಹುದಾದ ಗುತ್ತಿಗೆದಾರರುಗಳ ಸಂಖ್ಯೆಯು ಅತ್ಯಂತ ಕಡಿಮೆ ಇದ್ದಿರಬಹುದು.

### *3.9.2 ಪರಿಷ್ಕರಣೆ–ಪೂರ್ವ ದರಗಳ ಆಧಾರದ ಮೇರೆಗೆ ಅಂದಾಜುಗಳನ್ನು ತಯಾರಿಸಿದ್ದುದು*

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದಿಂದ (ಕೆಇಆರ್‌ಸಿ) ಅನುಮೋದಿತ (ಮೇ 2016) 2017–18 ಹಣಕಾಸು ಸಾಲಿಗೆ ವಿದ್ಯುತ್ ದರಪಟ್ಟಿ (ಟಾರಿಫ್) ಆದೇಶದ ಅನುಸಾರ, 1ರಿಂದ 10 kW ಸಾಮರ್ಥ್ಯದ ಸಣ್ಣ ಸೌರ ವಿದ್ಯುತ್ ಸ್ಥಾವರಕ್ಕೆ ಸಂಬಂಧಿಸಿದಂತೆ ಬಂಡವಾಳ ವೆಚ್ಚವು ಬಂಡವಾಳ ವೆಚ್ಚದ

[46] 1,112 kWp ಸೌರ ಸ್ಥಾವರ ಪರಿಮಾಣದ ಕಾಮಗಾರಿ ಆದೇಶಕ್ಕೆ ಪ್ರತಿಯಾಗಿ, 1,091 ಕೆಡಬ್ಲ್ಯುಪಿ ಸಾಮರ್ಥ್ಯವನ್ನು ಸ್ಥಾಪಿಸಲಾಯಿತು, ಕಾಮಗಾರಿ ಆದೇಶದ ಮೌಲ್ಯ ₹ 8.29 ಕೋಟಿಗೆ ಪ್ರತಿಯಾಗಿ ಕೇವಲ ₹ 7.72 ಕೋಟಿ ಮೌಲ್ಯದ ಕಾಮಗಾರಿಯನ್ನು ಕಾರ್ಯಗತಗೊಳಿಸಲಾಯಿತು.

ಶೇಕಡಾ ಒಂದರಂತೆ ಕಾರ್ಯಾಚರಣೆಗಳು ಮತ್ತು ನಿರ್ವಹಣಾ ವೆಚ್ಚಗಳೊಂದಿಗೆ ಹಾಗೂ ವಾರ್ಷಿಕವಾಗಿ ಶೇಕಡಾ 5.72ರ ಹೆಚ್ಚಳದೊಂದಿಗೆ, kW ಒಂದಕ್ಕೆ ₹ 75,000 ಆಗಿದ್ದಿತು. ಅದರಂತೆಯೇ ಅಂದಾಜನ್ನು kW ಒಂದಕ್ಕೆ ₹ 75,000 + ಶೇಕಡಾ 1ರಂತೆ ಕಾರ್ಯಾಚರಣೆಗಳು ಮತ್ತು ನಿರ್ವಹಣಾ ಶುಲ್ಕಗಳು kW ಒಂದಕ್ಕೆ ₹ 750, ಶೇಕಡಾ ಐದರಂತೆ ವಾರ್ಷಿಕ ಹೆಚ್ಚಳ ಅಂದರೆ kW ಒಂದಕ್ಕೆ ₹ 37.5ರಂತೆ, ಹೀಗೆ ಒಟ್ಟಾರೆ kW ಒಂದಕ್ಕೆ ₹ 75,785.50ರಂತೆ ತಯಾರಿಸಬೇಕಿದ್ದಿತು. ಆದಗ್ಯೂ, ಸೆಸ್ಕ್ ಅಂದಾಜನ್ನು ಪರಿಷ್ಕರಣಾ–ಪೂರ್ವ ಬಂಡವಾಳ ವೆಚ್ಚದ ಆಧಾರದ ಮೇರೆಗೆ (2014–18 ಸಾಲುಗಳಿಗೆ ಅಕ್ಟೋಬರ್ 2013) ₹ 90.000ಕ್ಕೆ ತಯಾರಿಸಿತು, ಇದು ಅಂದಾಜು ವೆಚ್ಚಗಳನ್ನು ₹ 2.44 ಕೋಟಿ[47] ಮೊತ್ತದಷ್ಟು ಹೆಚ್ಚಳಗೊಳಿಸಿತು. ಟೆಂಡರನ್ನು ಅಂತಿಮವಾಗಿ kW ಒಂದಕ್ಕೆ ₹ 88,300ರಂತೆ (₹ 15.14 ಕೋಟಿ/ 1,715 kWp) ನೀಡಲಾಗಿದ್ದಿತು (ಮಾರ್ಚ್ 2017). ಸೆಸ್ಕ್ ಇದೇ ರೀತಿಯ ಕಾಮಗಾರಿಗಳನ್ನು ಈ ಮೊದಲು ಇದೇ ಗುತ್ತಿಗೆದಾರರಿಗೆ ನೀಡಿದ್ದ (ಸೆಪ್ಟಂಬರ್ 2016ರಲ್ಲಿ) kWp ಒಂದಕ್ಕೆ ₹ 81,733.47) ದರಗಳಿಗೆ ಹೋಲಿಸಿದಲ್ಲಿ ಅಧಿಕವಾಗಿದ್ದಿತು. ಈ ರೀತಿಯಾಗಿ ಸೆಸ್ಕ್ ಐಪಿಡಿಎಸ್ ಅಡಿಯಲ್ಲಿ ಸೌರ ವಿದ್ಯುತ್ ಕಾಮಗಾರಿಗಳನ್ನು ಏಕೈಕ ಬಿಡ್ಡರಿಗೆ ದರಗಳನ್ನು ತಗ್ಗಿಸಲು ನಿರಾಕರಿಸಿದ್ದರೂ ಸಹ ಅಧಿಕ ದರಗಳಲ್ಲಿ ನೀಡಿದ್ದಿತು.

ಸಾಮಾನ್ಯ ವಿದ್ಯುತ್ ದರಪಟ್ಟಿ (ಟಾರಿಫ್) ಆದೇಶದ (ಅಕ್ಟೋಬರ್ 2013) ಅನುಸಾರ ಕೆಇಆರ್‌ಸಿ ಸೌರ ಛಾವಣಿ ಮೇಲಿನ ಫೋಟೋವೋಲ್ಟಾಯಿಕ್ ಸೆಲ್ಲುಗಳಿಗೆ kW ಒಂದಕ್ಕೆ ₹ 0.90 ಲಕ್ಷ ಬಂಡವಾಳ ವೆಚ್ಚವನ್ನು ನಿರ್ಧಾರಣೆ ಮಾಡಿರುವುದನ್ನು ಪರಿಗಣಿಸಿದಂತೆ ಕಾಮಗಾರಿಯನ್ನು ನೀಡಲಾಗಿದ್ದಿತು ಎಂಬುದಾಗಿ ಸೆಸ್ಕ್ ಉತ್ತರಿಸಿತು (ಅಕ್ಟೋಬರ್ 2024). ಕೆಇಆರ್‌ಸಿ ಇತ್ತೀಚೆಗೆ ಮೇ 2016ರಲ್ಲಿ ಅನುಮೋದಿಸಿದ ದರಗಳನ್ನು ಅನುಮೋದಿಸಿದನಂತರ ಸೆಪ್ಟೆಂಬರ್ 2016ರಲ್ಲಿ ಅಧಿಕ ದರಗಳ ಆಧಾರದ ಮೇರೆಗೆ ಆದೇಶವನ್ನು ನೀಡಲು ನಿರ್ದೇಶಕರುಗಳ ಮಂಡಳಿಯು ಸೆಪ್ಟೆಂಬರ್ 2016 ರಲ್ಲಿ ತನ್ನ ಅನುಮೋದನೆಯನ್ನು ನೀಡಿರುವುದರಿಂದ ಉತ್ತರವು ಒಪ್ಪುವಂತಿಲ್ಲ. ಸೆಸ್ಕ್ ಕೆಇಆರ್‌ಸಿ ಅನುಮೋದಿತ ದರಗಳ ಅನುಸಾರ ದರಗಳನ್ನು ತಗ್ಗಿಸಲು ಕ್ರಮಗಳನ್ನು ಕೈಗೊಳ್ಳಬೇಕಿದ್ದಿತು.

### *3.9.3 ಸೌರ ವಿದ್ಯುತ್ ಭಾಗವನ್ನು ಪೂರ್ಣಗೊಳಿಸದಿದ್ದುದು*

ಸವಿವರ ಯೋಜನಾ ವರದಿಯಲ್ಲಿನ ವೆಚ್ಚ, ನೀಡಲಾಗಿದ್ದ ಸೌರ ಫಲಕಗಳ ಡಿಡಬ್ಲ್ಯುಎ ಸಾಮರ್ಥ್ಯ, ಪ್ರಸ್ತಾಪಿಸಲಾಗಿದ್ದ ಹಾಗೂ ಪೂರ್ಣಗೊಂಡ ಕಟ್ಟಡಗಳ ಸಂಖ್ಯೆ ಮತ್ತು ಸಾಮರ್ಥ್ಯ ಹಾಗೂ ವಿಸಕಂಗಳು ಭರಿಸಿದ್ದ ಮೊತ್ತದ ವಿವರಗಳನ್ನು ಈ ಕೆಳಗೆ ವಿವರಿಸಲಾಗಿದೆ:

**ಕೋಷ್ಟಕ ಸಂಖ್ಯೆ 3.7: ವಿಸಕಂಗಳು ಸರ್ಕಾರಿ ಕಟ್ಟಡಗಳ ಮೇಲೆ ಕಾರ್ಯೋದ್ಯುಕ್ತಗೊಳಿಸಿದ್ದ ಸೌರ ವಿದ್ಯುತ್ ಫಲಕಗಳ ವಿವರಗಳು (₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ವಿಸಕಂ | ಡಿಡಬ್ಲ್ಯುಎ ಸಾಮರ್ಥ್ಯ (kWp) | ಡಿಡಬ್ಲ್ಯುಎ ಮೊತ್ತ | ಪ್ರಸ್ತಾಪಿಸ ಲಾಗಿದ್ದ ಕಟ್ಟಡಗಳು | ಪೂರ್ಣ ಗೊಳಿಸ ಲಾಗಿದ್ದ ಕಟ್ಟಡಗಳು | ಪೂರ್ಣ ಗೊಂಡಿದ್ದ ವಾಸ್ತವಿಕ ಸಾಮರ್ಥ್ಯ (kWp) | ಭರಿಸ ಲಾಗಿದ್ದ ಮೊತ್ತ | ಕೊರತೆ (kWp) | ವಿಳಂಬ |
|---|---|---|---|---|---|---|---|---|---|
| 1 | ಬೆಸ್ಕಾಂ | 1,125 | 7.85 | 82 | 51 | 673.5 | 3.40 | 451.5 | 615 kWp ಕೆಡಬ್ಲ್ಯುಪಿಗೆ ನೀಡಲಾದ ಗುತ್ತಿಗೆ ಕಾಮಗಾರಿಯನ್ನು ಅಲ್ಪಾವಧಿಯಲ್ಲಿ ಮುಕ್ತಾಯ ಗೊಳಿಸಲಾತಿದ್ದಿತು |
| 2 | ಸೆಸ್ಕ್ | 1,715 | 15.14 | 343 | 343 | 1,715 | 15.14 | 0 | |
| | | 1,112 | 8.29 | 512 | 431 | 1,091 | 7.77 | 21 | |
| 3 | ಮೆಸ್ಕಾಂ | 1,671 | 11.74 | 68 | 56 | 1,351.44 | 8.35 | 319.56 | 10ರಿಂದ 16 ತಿಂಗಳುಗಳು |

*ಮೂಲ:ವಿಸಕಂಗಳು ಒದಗಿಸಿದ ಮಾಹಿತಿಯನ್ನು ಲೆಕ್ಕಪರಿಶೋಧನೆಯು ಸಂಕಲಿಸಿರುವುದು.*

[47] ₹ 15.44 ಕೋಟಿ – ₹ 13.00 ಕೋಟಿ (₹ 75,785 × 1,715 kWp).

ಸರ್ಕಾರಿ ಕಟ್ಟಡಗಳ ಸವಿವರ ಸಮೀಕ್ಷೆಯನ್ನು ನಡೆಸದೆಯೇ ಗುತ್ತಿಗೆದಾರರುಗಳಿಗೆ ಡಿಡಬ್ಲ್ಯುಎ ನೀಡಿದ್ದುದು ಹಾಗೂ ಕಟ್ಟಡದ ಮಾಲೀಕರುಗಳಿಂದ/ಇಲಾಖೆಗಳ ಮುಖ್ಯಸ್ಥರುಗಳಿಂದ ಮುಂಚಿತವಾಗಿ ಅನುಮತಿ ಪಡೆಯದಿದ್ದ ಕಾರಣ ಡಿಡಬ್ಲ್ಯುಎ ಸಾಮರ್ಥ್ಯದೊಂದಿಗೆ ಹೋಲಿಸಲಾಗಿ ವಾಸ್ತವಿಕ ಸಾಮರ್ಥ್ಯದಲ್ಲಿ ವ್ಯತ್ಯಾಸಗಳಿದ್ದವು. ಡಿಡಬ್ಲ್ಯುಎದಲ್ಲಿ ಗುರುತಿಸಲಾಗಿದ್ದ ಹಾಗೂ ಸೇರಿಸಲಾಗಿದ್ದ ಅನೇಕ ಕಟ್ಟಡಗಳು, ಅವುಗಳ ಛಾವಣಿಗಳು ಇಳಿಜಾರಿನಿಂದ ಕೂಡಿದ್ದವು, ಹಂಚುಗಳನ್ನು ಹಾಕಲಾಗಿದ್ದಿತು ಅಥವಾ ಪೂರ್ವ/ಪಶ್ಚಿಮ[48] ದಿಕ್ಕಿಗೆ ಮುಖ ಮಾಡಿದ್ದವು ಹಾಗೂ ಕೆಲವು ಕಟ್ಟಡ ಮಾಲೀಕರುಗಳು ತಮ್ಮ ಕಟ್ಟಡಗಳನ್ನು ಭವಿಷ್ಯದಲ್ಲಿ ವಿಸ್ತರಿಸುವ ಯೋಜನೆಗಳಿವೆ ಎಂಬುದಾಗಿ ತಿಳಿಸಿ ಸೌರ ಪ್ಯಾನೆಲ್ಲುಗಳನ್ನು ಹಾಕಲು ಅನುಮತಿ ನೀಡಿರಲಿಲ್ಲ ಇವೇ ಕಾರಣಗಳಿಂದ ಸೌರ ಫಲಕಗಳನ್ನು ಅಳವಡಿಸಲು ಸೂಕ್ತವಾಗಿರಲಿಲ್ಲ. ಇದು ಬದಲಿ ಕಟ್ಟಡಗಳನ್ನು ಗುರುತಿಸುವ ಅಥವಾ ಸಾಮರ್ಥ್ಯವನ್ನು ರದ್ದುಗೊಳಿಸುವ ಅಗತ್ಯತೆಯನ್ನುಂಟು ಮಾಡಿತು.

ಬೆಸ್ಕಾಂ ಮತ್ತು ಮೆಸ್ಕಾಂ ಇವುಗಳು ತಮ್ಮ ಡಿಡಬ್ಲ್ಯುಎ ಸಾಮರ್ಥ್ಯವನ್ನು ಈ ಕೆಳಗಿನ ಕಂಡಿಕೆಗಳಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಪೂರ್ಣಗೊಳಿಸಲು ಸಾಧ್ಯವಾಗಿರಲಿಲ್ಲ:

- ಬೆಸ್ಕಾಂ ಐಪಿಡಿಎಸ್ ಅಡಿಯಲ್ಲಿ (ಬೆಸ್ಕಾಂ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿರುವ) ವಿವಿಧ ಬೆಸ್ಕಾಂ/ಸರ್ಕಾರಿ/ಸ್ಥಳೀಯ ಸಂಸ್ಥೆಗಳ ಕಚೇರಿ ಕಟ್ಟಡಗಳ ಚಾವಣಿ ಮೇಲೆ ಸೌರ ಛಾವಣಿ ಮೇಲಿನ ಫೋಟೋವೋಲ್ಟಾಯಿಕ್ ಗ್ರಿಡ್ ಸಂಪರ್ಕಿತ ವಿದ್ಯುತ್ ಉತ್ಪಾದನಾ ಸ್ಥಾವರಗಳ ವಿನ್ಯಾಸ, ಸರಬರಾಜು, ಸ್ಥಾಪನೆ ಮತ್ತು ಕಾರ್ಯೋದ್ಯುಕ್ತಗೊಳಿಸುವಿಕೆಗಾಗಿ ಐದು ವರ್ಷಗಳ ಅವಧಿಗೆ ನಿರ್ವಹಣೆಯೂ ಸೇರಿದಂತೆ ಎರಡು ಗುಂಪುಗಳಲ್ಲಿ[49] ಟೆಂಡರನ್ನು ಆಹ್ವಾನಿಸಿತು (ಅಕ್ಟೋಬರ್ 2016), ಗುಂಪು 1ನ್ನು (615 kWp) ಮೆ. ಪಿಇಎನ್ಎ ಪವರ್ ಇಂಜಿನಿಯರಿಂಗ್ ಅಂಡ್ ಆಟೋಮೇಷನ್ ಲಿಮಿಟೆಡ್, ಬೆಂಗಳೂರು (ಪಿಪಿಇಎಲ್), ಇವರಿಗೆ ₹ 4.08 ಕೋಟಿ ಮೊತ್ತಕ್ಕೆ ನೀಡಲಾಗಿದ್ದಿತು (ಸೆಪ್ಟಂಬರ್ 2017) ಹಾಗೂ ಗುಂಪು 2ನ್ನು (510 kWp) ಮೆ. ಐಸಿ ಇಂಡಿಯಾ ಪ್ರೈ ಲಿಮಿಟೆಡ್ (ಐಸಿಐಎಲ್), ಇವರಿಗೆ ₹ 3.83 ಕೋಟಿ ಮೊತ್ತಕ್ಕೆ ನೀಡಲಾಗಿದ್ದಿತು.

  ಗುಂಪು 1ರ ಅಡಿಯಲ್ಲಿ ಕೇವಲ 163.5 kWp ಸಾಮರ್ಥ್ಯವನ್ನು ಮಾರ್ಚ್ 2019ರ ವೇಳೆಗೆ ಪೂರ್ಣಗೊಳಿಸಲಾಗಿದ್ದಿತು. ಉಳಿದ ಸಾಮರ್ಥ್ಯವನ್ನು (451.5 kWp) ಪೂರ್ಣಗೊಳಿಸದಿದ್ದುದಕ್ಕೆ ಕಾರಣವು ಅನುಮೋದನೆಗಾಗಿ ಸಲ್ಲಿಸಲಾಗಿದ್ದಂತಹ (ಅಕ್ಟೋಬರ್ 2017) ಸವಿವರ ಸಮೀಕ್ಷೆಯಲ್ಲಿ ಗಮನಿಸಲಾಗಿದ್ದಂತಹ ಅಂಶಗಳ ಮೇಲೆ ಕ್ರಮಗಳನ್ನು ಕೈಗೊಳ್ಳುವಲ್ಲಿನ ಹಾಗೂ ಆ ನಿಟ್ಟಿನಲ್ಲಿ ಪಿಪಿಇಎಲ್ ಗಮನಿಸಿದ್ದಂತಹ ಸೂಕ್ತವಲ್ಲದ ಸ್ಥಳಗಳ[50] ಮೇಲೆ ತೀರ್ಮಾನವನ್ನು ತೆಗೆದುಕೊಳ್ಳುವಲ್ಲಿನ (ಸೆಪ್ಟೆಂಬರ್ 2018) ಬೆಸ್ಕಾಂನ ಅಸಾಮರ್ಥ್ಯತೆ ಆಗಿದ್ದಿತು. ಐಪಿಡಿಎಸ್ ಮುಕ್ತಾಯಗೊಂಡಿರುವುದಾಗಿ ಘೋಷಿಸಲಾಯಿತಾದ್ದರಿಂದ (31 ಮಾರ್ಚ್ 2019), ಬೆಸ್ಕಾಂ ಉಳಿದ 31 ಸ್ಥಳಗಳಲ್ಲಿ ಸೌರ ಪ್ಯಾನೆಲ್ಲುಗಳ ಸ್ಥಾಪನೆಯಲ್ಲಿ ಮುಂದಿನ ಪ್ರಗತಿ ಆಗಿರಲಿಲ್ಲ.

  ಈ ರೀತಿಯಾಗಿ ಬೆಸ್ಕಾಂ ₹ 2.45 ಕೋಟಿ[51] ಅನುದಾನವನ್ನು ಉಪಯೋಗಿಸಿಕೊಳ್ಳುವ ಅವಕಾಶವನ್ನು ಕಳೆದುಕೊಂಡಿತು.

---

[48] ದಕ್ಷಿಣಾಭಿಮುಖವಾಗಿರುವ ಛಾವಣಿಯೊಂದಿಗೆ ಸೌರ ಪ್ಯಾನೆಲ್ಲು ಒಟ್ಟಾರೆಯಾಗಿ ಗರಿಷ್ಠ ಪ್ರಮಾಣದಲ್ಲಿ ವಿದ್ಯುತ್ತನ್ನು ಉತ್ಪಾದಿಸುತ್ತವೆ.

[49] **ಗುಂಪು 1**: ಬೆಂಗಳೂರು ಮೆಟ್ರೊಪಾಲಿಟನ್ ಪ್ರದೇಶ ವಲಯ (ಬಿಎಂಎಝಡ್)–1, ಬೆಂಗಳೂರು ಗ್ರಾಮೀಣ, ರಾಮನಗರ ಮತ್ತು ಕೋಲಾರ, ಇವುಗಳನ್ನು ವ್ಯಾಪಿಸಿದ್ದಿತು, **ಗುಂಪು 2**: ಬಿಎಂಎಝಡ್ 2, ತುಮಕೂರು ಮತ್ತು ದಾವಣಗೆರೆ ವೃತ್ತಗಳನ್ನು ವ್ಯಾಪಿಸಿದ್ದಿತು.

[50] ಹೊಸಕೋಟೆ, ಎಚ್ಎಸ್ಆರ್ ಬಡಾವಣೆ ಮತ್ತು ಜಯನಗರ ವಿಭಾಗಗಳು ಸೋರಿಕೆಗಳು, ನೆರಳು ಇರುವುದು, ಸಿವಿಲ್ ಕಾಮಗಾರಿ ಪ್ರಗತಿಯಲ್ಲಿರುವುದು, ಇತ್ಯಾದಿ ಕಾರಣಗಳಿಂದಾಗಿ.

[51] ₹ 4.08 ಕೋಟಿಯ ಶೇಕಡಾ 60ರಷ್ಟು (ಪಿಪಿಇಎಲ್‌ಗೆ ಯಾವುದೇ ಪಾವತಿಗಳನ್ನು ಮಾಡಿರಲಿಲ್ಲವಾದ್ದರಿಂದ).

ಕಟ್ಟಡಗಳ ಸಂಖ್ಯೆಯಲ್ಲಿ 40ರಿಂದ 29ಕ್ಕೆ ಬದಲಾವಣೆಗೊಂಡಿದ್ದಿತು ಹಾಗೂ ಪ್ರಸ್ತಾಪಿಸಲಾಗಿದ್ದ ಸಾಮರ್ಥ್ಯವು ಮಾರ್ಪಾಡುಗೊಂಡಿರಲಿಲ್ಲ ಎಂಬುದಾಗಿ ಬೆಸ್ಕಾಂ ಉತ್ತರಿಸಿತು (ಅಕ್ಟೋಬರ್ 2024). ಆದಾಗ್ಯೂ, ಪ್ರಸ್ತಾಪಿಸಲಾಗಿದ್ದ ಸಾಮರ್ಥ್ಯವನ್ನು ಕಾರ್ಯಗತಗೊಳಿಸಿರಲಿಲ್ಲ ಮತ್ತು ಉತ್ತರವು ಪಿಪಿಇಎಲ್ ಸ್ಪಷ್ಟಪಡಿಸಿದ್ದ ಅಂಶಗಳಿಗೆ ಸಂಬಂಧಿಸಿದಂತೆ ಮೌನವಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

- ಮೆಸ್ಕಾಂ ತಾನು ಯೋಜಿಸಿದ್ದ 1,671.00 kWp ಸಾಮರ್ಥ್ಯಕ್ಕೆ ಪ್ರತಿಯಾಗಿ 319.56 kWp (ಶೇಕಡಾ 19.13) ಸಾಮರ್ಥ್ಯದ ಅಂತರವನ್ನು ಉಳಿಸಿದಂತೆ, 1,351.44 kWp ಸಾಮರ್ಥ್ಯದ ಸೌರ ಪ್ಯಾನೆಲ್ಲುಗಳನ್ನು ಸ್ಥಾಪಿಸಲು ಸಾಧ್ಯವಾಗಿದ್ದಿತು, ಯೋಜನೆಯ ಮಾರ್ಗಸೂಚಿಗಳು, ವಿಸಕಂಗಳು ಸವಿವರ ಕ್ಷೇತ್ರ ಸಮೀಕ್ಷೆಯ ಆಧಾರದ ಮೇರೆಗೆ ವಿಶ್ವಾಸಾರ್ಹತೆಯಿಂದ ಕೂಡಿದ ಸವಿವರ ಯೋಜನಾ ವರದಿಗಳನ್ನು ತಯಾರಿಸುವ ಅಗತ್ಯತೆಯನ್ನು ಹೊಂದಿದ್ದವು. ಮೆಸ್ಕಾಂ ಸವಿವರ ಕ್ಷೇತ್ರ ಸಮೀಕ್ಷೆಗಳನ್ನು (ಸರ್ಕಾರಿ ಕಟ್ಟಡಗಳಲ್ಲಿ ಕಾರ್ಯಸಾಧ್ಯತೆಯ ಬಗ್ಗೆ) ನಡೆಸಿರಲಿಲ್ಲ ಹಾಗೂ ಕಟ್ಟಡ ಮಾಲೀಕರುಗಳಿಂದ/ ಇಲಾಖೆಗಳ ಮುಖ್ಯಸ್ಥರುಗಳಿಂದ ಸೌರ ಪ್ಯಾನೆಲ್ಲುಗಳ ಸ್ಥಾಪನೆಗಾಗಿ ಪೂರ್ವಾನುಮತಿಯನ್ನು ಪಡೆದುಕೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

  ನಿವೇಶನ ಸಮೀಕ್ಷೆಗಳು ಮತ್ತು ತಾಂತ್ರಿಕವಾಗಿ ಕಾರ್ಯಸಾಧ್ಯತೆಯ ಬಗ್ಗೆ ವರದಿ ಕಾರ್ಯವನ್ನು ಗುತ್ತಿಗೆದಾರರಿಗೆ ವಹಿಸಲಾಗಿದ್ದಿತು ಹಾಗೂ ಗುತ್ತಿಗೆದಾರರು ಕೆಲವು ಕಟ್ಟಡಗಳು ಸೂಕ್ತವಾಗಿರುವುದಿಲ್ಲ ಎಂಬುದನ್ನು ಗಮನಿಸಿದರು ಹಾಗೂ ಕೆಲವು ಕಟ್ಟಡ ಮಾಲೀಕರುಗಳು / ಇಲಾಖಾ ಮುಖ್ಯಸ್ಥರುಗಳು ಯಾವುದೇ ಆಕ್ಷೇಪಣೆ ಇಲ್ಲ ಎಂಬುದಾಗಿ ಪ್ರಮಾಣಪತ್ರ ನೀಡಲು ನಿರಾಕರಿಸಿದರು ಎಂಬುದಾಗಿ ಮೆಸ್ಕಾಂ ತಿಳಿಸಿತು (ಅಕ್ಟೋಬರ್ 2024).

  ಇದು ಮೆಸ್ಕಾಂ ಐಪಿಡಿಎಸ್ ಅಡಿಯಲ್ಲಿ ಕಾಮಗಾರಿಗಳನ್ನು ಸೇರಿಸುವ ಮೊದಲು ಹಾಗೂ ಕಾಮಗಾರಿಗಳನ್ನು ಗುತ್ತಿಗೆದಾರರುಗಳಿಗೆ ನೀಡುವ ಮೊದಲು ಸ್ಥಳದ ಸೂಕ್ತತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಕ್ಷೇತ್ರ ಸಮೀಕ್ಷೆಗಳನ್ನು ನಡೆಸಿರಲಿಲ್ಲ ಎಂಬುದನ್ನು ಸೂಚಿಸುತ್ತಿದ್ದಿತು.

### *3.9.4 ಛಾವಣಿ ಮೇಲಿನ ಸೌರ ವಿದ್ಯುತ್ ಸ್ಥಾವರಗಳ ನಿಕೃಷ್ಟಮಟ್ಟದಲ್ಲಿನ ಕಾರ್ಯನಿರ್ವಹಣೆ*

ವಿಸಕಂಗಳು ಸರ್ಕಾರಿ ಕಟ್ಟಡಗಳ ಛಾವಣಿ ಮೇಲೆ ಸೌರ ಪ್ಯಾನೆಲ್ಲುಗಳ ಸ್ಥಾಪನೆಗಾಗಿ ಬಿಡ್ಡು ದಾಖಲೆಗಳು/ ಡಿಡಬ್ಲ್ಯುಎ/ ಆಸಕ್ತಿ ಪತ್ರಗಳು ಒಂದು ಷರತ್ತನ್ನು ಒಳಗೊಂಡಿದ್ದವು, ಅದರಲ್ಲಿ ಬಿಡ್ಡದಾರರು ಬೆಸ್ಕಾಂ ಮತ್ತು ಜೆಸ್ಕಾಂನಲ್ಲಿ ಒಂದು ಕ್ಯಾಲೆಂಡರು ವರ್ಷದಲ್ಲಿ ದಿನ ಒಂದಕ್ಕೆ /kWp ಒಂದಕ್ಕೆ/4.5 ಯೂನಿಟ್ಟುಗಳಷ್ಟು ಸರಾಸರಿ ಕನಿಷ್ಠ ವಿದ್ಯುತ್ ಉತ್ಪಾದನೆಯ ಖಾತರಿಯನ್ನು ಹಾಗೂ ಸೆಸ್ಕ್, ಹೆಸ್ಕಾಂ ಮತ್ತು ಮೆಸ್ಕಾಂನಲ್ಲಿ ಗ್ರಿಡ್ ನಷ್ಟ ಮತ್ತು ಹವಾಮಾನ ಪರಿಸ್ಥಿತಿಯನ್ನು ಪರಿಗಣಿಸಿದನಂತರ ಒಂದು ಕ್ಯಾಲೆಂಡರು ವರ್ಷದಲ್ಲಿ ಕನಿಷ್ಠ 300 ದಿನಗಳಿಗೆ ದಿನ ಒಂದಕ್ಕೆ kWp ಒಂದಕ್ಕೆ 5 ಯೂನಿಟ್ಟುಗಳ ವಿದ್ಯುತ್ ಉತ್ಪಾದನೆಯ ಖಾತರಿಯನ್ನು ನೀಡಬೇಕಿದ್ದಿತು. ಸೌರ ಪ್ಯಾನೆಲ್ಲುಗಳ ಕಾರ್ಯನಿರ್ವಹಣೆಯ ಮೇಲೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳನ್ನು ಈ ಕೆಳಗೆ ವಿವರಿಸಲಾಗಿರುವುದು:

- ಬೆಸ್ಕಾಂ ನೀಡಿರುವ ನಿರ್ದಿಷ್ಟ ನಿರೂಪಣೆಗಳ ಅನುಸಾರ, ಸೌರ ಫೋಟೋವೋಲ್ಟಾಯಿಕ್ ಮಾಡ್ಯೂಲುಗಳು 10 ವರ್ಷಗಳಿಗೆ ಶೇಕಡಾ 10ರ ತಗ್ಗಣೆಗೆ ಅನುವು ಮಾಡುವುದರೊಂದಿಗೆ, ಶೇಕಡಾ 15.2ಕ್ಕಿಂತ ಅಧಿಕವಾಗಿ ಅಥವಾ ಅದಕ್ಕೆ ಸಮನಾಗಿ ದಕ್ಷತೆಯನ್ನು ಹೊಂದಿರತಕ್ಕದ್ದು. 2022–23 ಸಾಲಿಗೆ ಸ್ಥಾಪಕಗಳ ಕಾರ್ಯನಿರ್ವಹಣೆಯ ಸಮೀಕ್ಷೆಯು ಬೆಸ್ಕಾಂನ 51 ಸೌರ ಸ್ಥಾಪಕಗಳ ಪೈಕಿ 49ರ ದಕ್ಷತೆಯು ಶೇಕಡಾ ಶೂನ್ಯದಿಂದ ಶೇಕಡಾ 14.82ರಷ್ಟು[52] ಆಗಿದ್ದಿತು ಹಾಗೂ ಕೇವಲ ಎರಡು ಸ್ಥಾಪಕಗಳು ಶೇಕಡಾ 14.82ರಷ್ಟು ಅಥವಾ ಅದಕ್ಕೂ ಹೆಚ್ಚಿನ ದಕ್ಷತೆಯನ್ನು ಹೊಂದಿದ್ದವು ಎಂಬುದನ್ನು ತೋರಿಸಿಕೊಟ್ಟಿತು. ಆದ್ದರಿಂದ, ಬೆಸ್ಕಾಂನಲ್ಲಿ

[52] ಮೂರು ವರ್ಷಗಳಿಗೆ ತಗ್ಗಣೆಗೆ ಅನುವು ಮಾಡಿದನಂತರ.

ಐಪಿಡಿಎಸ್ ಅಡಿಯಲ್ಲಿನ ಶೇಕಡಾ 96ರಷ್ಟು ಸೌರ ಸ್ಥಾಪಕಗಳಿಂದ ನಿರೀಕ್ಷಿತ ಮಟ್ಟಗಳಿಗೆ ವಿದ್ಯುತ್ತನ್ನು ಉತ್ಪಾದಿಸಲಾಗಿರಲಿಲ್ಲ. ವಿದ್ಯುತ್ ಉತ್ಪಾದನಾ ವಿವರಗಳ ಒಂದು ಸಮೀಕ್ಷೆಯು ಆರು[53] ಸ್ಥಳಗಳಲ್ಲಿ ತಾಂತ್ರಿಕ ಸಮಸ್ಯೆಗಳು / ಕಟ್ಟಡವನ್ನು ಕೆಡವಿರುವುದು ಮುಂತಾದ ಕಾರಣಗಳಿಂದ ವಿದ್ಯುತ್ತನ್ನು ಉತ್ಪಾದಿಸುತ್ತಿರಲಿಲ್ಲ ಎಂಬುದನ್ನು ತೋರಿಸಿಕೊಟ್ಟಿತು.

- ಸೆಸ್ಕ್‌ನ ಆಯ್ದ ವಿಭಾಗಳಲ್ಲಿನ 23 ಸ್ಥಾಪಕಗಳಲ್ಲಿ ವಿದ್ಯುತ್ ಉತ್ಪಾದನೆಯು 31 ಮಾರ್ಚ್ 2023ರವರೆವಿಗೂ ಶೂನ್ಯವಾಗಿದ್ದಿತು. ಇದು ನಿಕೃಷ್ಟಮಟ್ಟದ ಮೇಲ್ವಿಚಾರಣೆಯನ್ನು ಎತ್ತಿತೋರಿಸುತ್ತಿದ್ದಿತು ಹಾಗೂ ವಿದ್ಯುತ್ ಉತ್ಪಾದನೆಯ ನಷ್ಟವಾಗುವಲ್ಲಿ ಪರಿಣಮಿಸಿದ್ದಿತು.

  ಕಂಪನಿಯ ಮೀಟರು ಪರೀಕ್ಷಣಾ ವಿಭಾಗವು ಲೋಪದೋಷಗಳಿಗಾಗಿ ಸೌರ ಸ್ಥಾಪಕಗಳ ನಿಯತಕಾಲಿಕ ಪರೀಕ್ಷಣೆಗಳನ್ನು ಮಾಡುವುದು ಹಾಗೂ ಅಂತಹ ಲೋಪದೋಷಗಳನ್ನು ಸರಬರಾಜುದಾರರಿಗೆ ತಿಳಿಸುವುದು ಹಾಗೂ ಸರಬರಾಜುದಾರರು ಅಂತಹ ಲೋಪದೋಷಗಳನ್ನು ಸರಿಪಡಿಸುವರು ಎಂಬುದಾಗಿ ಸೆಸ್ಕ್ ಉತ್ತರಿಸಿತು (ಅಕ್ಟೋಬರ್ 2024). ಆದಾಗ್ಯೂ, ಉತ್ಪಾದನೆಯು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಆಗಿದ್ದುದು ನಿಯತಕಾಲಿಕ ಪರೀಕ್ಷಣೆಗಳು ಸ್ಥಾಪನೆಗಳು ಕಾರ್ಯಪ್ರವೃತ್ತವಾಗಿರುವುದನ್ನು ಖಚಿತಪಡಿಸಿಕೊಳ್ಳುವಲ್ಲಿ ಫಲಪ್ರದವಾಗಿರದಿದ್ದುದನ್ನು ಸೂಚಿಸುತ್ತಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

- ಮೆಸ್ಕಾಂನಲ್ಲಿ ಪರೀಕ್ಷಣೆಗಾಗಿ ಆಯ್ಕೆ ಮಾಡಿಕೊಳ್ಳಲಾಗಿದ್ದ 18 ಸ್ಥಾಪಕಗಳಲ್ಲಿ, ವಿದ್ಯುತ್ ಉತ್ಪಾದನೆಯು ಸ್ಥಾಪನೆಯ ದಿನಾಂಕದಿಂದ[54] 31 ಮಾರ್ಚ್ 2023ರವರೆವಿಗೆ 1ರಿಂದ 26 ತಿಂಗಳುಗಳವರೆವಿಗೆ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಆಗಿದ್ದಿತು (ಶೂನ್ಯದಿಂದ 50 ಯೂನಿಟ್ಟುಗಳು). ಸರಬರಾಜುದಾರರು ಲೋಪದೋಷಗಳನ್ನು ಸರಿಪಡಿಸಿರಲಿಲ್ಲ ಹಾಗೂ ಅಂತಹ ಲೋಪದೋಷಗಳನ್ನು ಸರಿಪಡಿಸಲು ಒಂದರಿಂದ 33 ತಿಂಗಳುಗಳ ಸಮಯವನ್ನು ತೆಗೆದುಕೊಂಡಿದ್ದರು, ಇದು ವಿದ್ಯುತ್ ಉತ್ಪಾದನೆಯ ನಷ್ಟವಾಗುವಲ್ಲಿ ಪರಿಣಮಿಸಿದ್ದಿತು.

  ನಿರೀಕ್ಷಿತ ವಿದ್ಯುತ್ ಉತ್ಪಾದನೆಯನ್ನು ತಲುಪದಿರುವುದಕ್ಕೆ ದಂಡವನ್ನು ವಿಧಿಸಲಾಗುವುದು ಎಂಬುದಾಗಿ ಮೆಸ್ಕಾಂ ಉತ್ತರಿಸಿತು (ಅಕ್ಟೋಬರ್ 2024). ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳಿಗೆ ಪ್ರತಿಕ್ರಿಯೆಯಾಗಿ ತೆಗೆದುಕೊಳ್ಳಲಾಗಿರುವ ಪ್ರಸ್ತಾಪಿತ ಕ್ರಮವು ಮೇಲ್ವಿಚಾರಣಾ ಪ್ರಕ್ರಿಯೆಗಳನ್ನು ಹೆಚ್ಚಳಗೊಳಿಸುವುದಕ್ಕೆ ಹೆಚ್ಚಿನ ಅವಕಾಶವಿರುವುದನ್ನು ಒತ್ತಿ ಹೇಳುತ್ತದೆ.

- ಜೆಸ್ಕಾಂ 22[55] ಸೌರ ಸ್ಥಾಪಕಗಳು ಮತ್ತು ಹೆಸ್ಕಾಂ 32 ಸೌರ ಸ್ಥಾಪಕಗಳ ಜಂಟಿ ಭೌತಿಕ ಪರೀಕ್ಷಣೆಯು, ಎರಡೂ ಕಂಪನಿಗಳು ಐಪಿಡಿಎಸ್ ಅಡಿಯಲ್ಲಿ ಸೌರ ವಿದ್ಯುತ್ ಉತ್ಪಾದನಾ ಸ್ಥಾಪಕಗಳನ್ನು ಅತ್ಯಂತ ನಿಕೃಷ್ಟ ಮಟ್ಟದಲ್ಲಿ ನಿರ್ವಹಿಸಿದ್ದವು ಎಂಬುದನ್ನು ತೋರಿಸಿಕೊಟ್ಟಿತು. ಜೆಸ್ಕಾಂ ಮತ್ತು ಹೆಸ್ಕಾಂಗೆ ಮಾಹಿತಿಯನ್ನು ನೀಡದೆಯೇ ಪ್ಯಾನೆಲ್ಲುಗಳನ್ನು ತೆಗೆದಿರುವ ದೃಷ್ಟಾಂತಗಳನ್ನು ಹಾಗೂ ಸೌರ ಆಸ್ತಿಗಳು ಕಾಣೆಯಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಇದು ಅತ್ಯಂತ ಕಡಿಮೆ ಮಟ್ಟದಲ್ಲಿ ವಿದ್ಯುತ್ ಉತ್ಪಾದನೆಯಾಗುವಲ್ಲಿ ಪರಿಣಮಿಸಿದ್ದಿತು. ಜೆಸ್ಕಾಂ ಮತ್ತು ಹೆಸ್ಕಾಂನಲ್ಲಿ ಗಮನಿಸಲಾದ ಲೋಪದೋಷಗಳನ್ನು ***ಅನುಬಂಧ–9*** ರಲ್ಲಿ ವಿವರಿಸಲಾಗಿರುವುದು.

- ಕಾರ್ಯಸ್ಥಗಿತವಾಗಿರುವ ಎಸ್‌ಆರ್‌ಟಿಪಿವಿಗಳನ್ನು ಸರಿಪಡಿಸುವ ಸಲುವಾಗಿ ಕಾರ್ಯಾಚರಣೆ ಮತ್ತು ನಿರ್ವಹಣಾ ವಿಭಾಗಗಳ ಕಾರ್ಯನಿರ್ವಾಹಕ ಇಂಜಿನಿಯರುಗಳಿಗೆ ಕಟ್ಟುನಿಟ್ಟಿನ

[53] ಅನುಗೋಡು ಉಪ–ವಿಭಾಗ, ದಾವಣಗೆರೆ ನಗರ ಉಪ–ವಿಭಾಗ, ತುಮಕೂರು, ಸಿಎಸ್‌ಡಿ ಉಪ–ವಿಭಾಗ ಕಚೇರಿ ಕವಿಪ್ರನಿನಿ ಕಟ್ಟಡ, ಸಿರಾ, ಉಪ–ವಿಭಾಗ ಕಚೇರಿ ಕವಿಪ್ರನಿನಿ ಪ್ರಾಂಗಣ, ಪಾವಗಡ ಮತ್ತು ಎಸ್2 ಉಪ–ವಿಭಾಗ, ಬೆಂಗಳೂರು.

[54] 2018 ಮತ್ತು 2019ರಲ್ಲಿ ಸ್ಥಾಪಿಸಿದ್ದುದು.

[55] ಜೆಸ್ಕಾಂ – ನಾಲ್ಕು ವಿಭಾಗಗಳು – 251 kWp ಸ್ಥಾಪಿತ ಸಾಮರ್ಥ್ಯ, ಹೆಸ್ಕಾಂ – ಏಳು ವಿಭಾಗಗಳು – 875 kWp ಸ್ಥಾಪಿತ ಸಾಮರ್ಥ್ಯ.

ನಿರ್ದೇಶನಗಳನ್ನು ನೀಡಲಾಗಿರುವುದು ಎಂಬುದಾಗಿ ಹೆಸ್ಕಾಂ ಉತ್ತರಿಸಿರುವುದು (ಅಕ್ಟೋಬರ್ 2024).

### *3.9.5 ಕಾರ್ಯನಿರ್ವಹಣಾ ಖಾತರಿಯ ಪರಿಮಿತಿಗಳನ್ನು ಅನುಸರಿಸದಿರುವುದು*

ಸೌರ ಛಾವಣಿ ಮೇಲಿನ ಫೋಟೋವೋಲ್ಟಾಯಿಕ್ ವಿದ್ಯುತ್ ಉತ್ಪಾದನಾ ಸ್ಥಾವರಗಳಿಗಾಗಿ ತಾಂತ್ರಿಕ ನಿರ್ದಿಷ್ಟನಿರೂಪಣೆಗಳು (ಪ್ರಮಾಣಕ ಬಿಡ್ಡು ದಾಖಲೆಗಳು (ಎಸ್‌ಬಿಡಿ) (ಸಂಪುಟ–III) ಕನಿಷ್ಠ ಖಾತರಿಯನ್ನು ಹೊಂದಿರುವ ಅವಧಿಯ ಬಗ್ಗೆ, ಖಾತರಿಯಿಂದ ಕೂಡಿದ ವಿದ್ಯುತ್ ಉತ್ಪಾದನೆ, ಕಾರ್ಯನಿರ್ವಹಣಾ ಅನುಪಾತ (ಪಿಆರ್), ಕಾರ್ಯನಿರ್ವಹಿಸದಿರುವುದಕ್ಕೆ ದಂಡ ವಿಧಿಸುವ ಷರತ್ತು, ಇತ್ಯಾದಿಗಳ ಬಗ್ಗೆ ನಿರ್ದಿಷ್ಟ ನಿರ್ದೇಶನಗಳನ್ನು ಒಳಗೊಂಡಿದ್ದಿತು. ಎಸ್‌ಬಿಡಿಯಲ್ಲಿ ತಿಳಿಸಲಾಗಿದ್ದಂತಹ ಪ್ರಮುಖ ತಾಂತ್ರಿಕ ಪರಿಮಿತಿಗಳಿಗಾಗಿ ಅವೆಂದರೆ ಖಾತರಿಗಳನ್ನು ಪಡೆದುಕೊಳ್ಳುವುದು, ಕಾರ್ಯನಿರ್ವಹಿಸದಿರುವುದಕ್ಕಾಗಿ ಸಮಾಪನ ನಷ್ಟಗಳನ್ನು ವಿಧಿಸುವಿಕೆಯ ಷರತ್ತು, ತಾಂತ್ರಿಕ ವಾಣಿಜ್ಯ ಬಿಡ್ಡಿನೊಂದಿಗೆ ದೀರ್ಘಾವಧಿ ಪಿಆರ್ ಮೌಲ್ಯಗಳಿಗಾಗಿ ಒತ್ತಾಯಿಸುವಿಕೆ ದಂಡ ವಿಧಿಸುವಿಕೆ ಷರತ್ತುಗಳು, ಇತ್ಯಾದಿಗಳಿಗಾಗಿ ಸೆಸ್ಕ್ ಒತ್ತಾಯಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಎಸ್‌ಬಿಡಿ ಪರಿಮಿತಿಗಳನ್ನು ಅನುಸರಿಸದಿರುವುದರ ಬಗ್ಗೆ ವಿವರಗಳನ್ನು ***ಅನುಬಂಧ–10*** ರಲ್ಲಿ ವಿವರಿಸಲಾಗಿರುವುದು.

**ಶಿಫಾರಸುಗಳು:**

**4. ಯೋಜನೆಗಳನ್ನು ಕಾರ್ಯಗತಗೊಳಿಸುವ ಮೊದಲು ಸಮಗ್ರ ಕಾರ್ಯಸಾಧ್ಯತೆ ಸಮೀಕ್ಷೆಗಳನ್ನು ನಡೆಸುವುದನ್ನು ಕರ್ನಾಟಕ ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಹಾಗೂ ಬಿಡ್ಡುಗಳಿಗಾಗಿ ಆಹ್ವಾನದಲ್ಲಿ ಪ್ರಮಾಣಕ ಬಿಡ್ಡು ದಾಖಲೆಗಳಲ್ಲಿನ ಷರತ್ತುಗಳನ್ನು ಸೇರಿಸಬೇಕು ಹಾಗೂ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ವೇಳೆಯಲ್ಲಿ ಅವುಗಳನ್ನು ಖಚಿತಪಡಿಸಿಕೊಳ್ಳಬೇಕು.**

## 3.10 *ಐಪಿಡಿಎಸ್ ಅಡಿಯಲ್ಲಿ ಮಾಹಿತಿ ತಂತ್ರಜ್ಞಾನ ಅನ್ವಯಗಳು ಮತ್ತು ಉದ್ದಿಮೆ ಸಂಪನ್ಮೂಲಗಳ ಪೂರ್ವಭಾವಿ ಯೋಜನೆ*

ಐಪಿಡಿಎಸ್ ಅಡಿಯಲ್ಲಿ (i) ಉದ್ದಿಮೆ ಸಂಪನ್ಮೂಲ ಪೂರ್ವಭಾವಿ ಯೋಜನೆ[56] (ಇಆರ್‌ಪಿ) ವ್ಯವಸ್ಥೆ ಹಾಗೂ (ii) ಪಟ್ಟಣಗಳಲ್ಲಿ ಡಿಸಿ/ಡಿಆರ್‌ಸಿಗಳ ಹೆಚ್ಚುವರಿ ಮೇಲ್ದರ್ಜೆಗೇರಿಸುವಿಕೆಗಾಗಿ ಹೆಚ್ಚುವರಿ ಯಂತ್ರಾಂಶ ಅನ್ವಯಗಳು[57], ಆಸ್ತಿಗಳ ಜಿಐಎಸ್ ಸಮೀಕ್ಷೆ, ಡಿಸಿ/ಡಿಆರ್‌ಸಿಯ ಸಮಗ್ರಗೊಳಿಸುವಿಕೆ ಮಾಹಿತಿ ತಂತ್ರಜ್ಞಾನ ಅನ್ವಯಗಳು, ಇವುಗಳಿಗಾಗಿ ಅನುವು ಮಾಡಿರುವುದು. ಇಆರ್‌ಪಿ ಹೊರತುಪಡಿಸಿದಂತೆ ಮಾಹಿತಿ ತಂತ್ರಜ್ಞಾನ ಭಾಗಗಳನ್ನು ಮಾಹಿತಿ ತಂತ್ರಜ್ಞಾನ ಹಂತ – II ಎಂಬುದಾಗಿ ಕರೆಯಲಾಗುತ್ತಿದ್ದಿತು.

ಆರ್‌ಎಪಿಡಿಆರ್‌ಪಿಯೇತರ ಪಟ್ಟಣಗಳಲ್ಲಿ ಮಾಹಿತಿ ತಂತ್ರಜ್ಞಾನ ಅನ್ವಯಗಳಿಗಾಗಿ ಮತ್ತು ಉದ್ದಿಮೆ ಸಂಪನ್ಮೂಲ ಪೂರ್ವಭಾವಿ ಯೋಜನೆ ನಿರ್ವಹಣೆಗಾಗಿ (ಇಆರ್‌ಪಿ)[58] ಯೋಜನೆಯನ್ನು ತಯಾರಿಸುವ ಸಲುವಾಗಿನ ಮಾರ್ಗಸೂಚಿಗಳು ಮಾನವ ಸಂಪನ್ಮೂಲ ನಿರ್ವಹಣೆ, ಹಣಕಾಸು ಮತ್ತು ಲೆಕ್ಕಪತ್ರಗಳು ಮತ್ತು ಸಾಮಗ್ರಿಗಳ (ಖರೀದಿಗಳು ಮತ್ತು ಉಗ್ರಾಣ) ಇಆರ್‌ಪಿ ಚಟುವಟಿಕೆಗಳನ್ನು ನಿರ್ದಿಷ್ಟಪಡಿಸಿರುವುದು (ಡಿಸೆಂಬರ್ 2015).

[56] ಉದ್ದಿಮೆ ಸಂಪನ್ಮೂಲ ಪೂರ್ವಭಾವಿ ಯೋಜನೆಯು (ಇಆರ್‌ಪಿ) ಸಂಪೂರ್ಣ ವ್ಯವಹಾರವನ್ನು ನಡೆಸಲು ಸಹಾಯಕವಾಗುವ ಅಂತರ್ಗತ ತಂತ್ರಾಂಶ ಅನ್ವಯ ವ್ಯವಸ್ಥೆಯಾಗಿದ್ದು ಹಣಕಾಸು, ಮಾನವ ಸಂಪನ್ಮೂಲಗಳು, ತಯಾರಿಕೆ, ಸರಬರಾಜು ಸರಪಳಿ, ಸೇವೆಗಳು, ಖರೀದಿ/ಪಡೆದುಕೊಳ್ಳುವಿಕೆ, ಇತ್ಯಾದಿಗಳನ್ನು ಸ್ವಯಂಚಾಲಿತಗೊಳಿಸಲು ಹಾಗೂ ಪ್ರಕ್ರಿಯೆಗಳನ್ನು ನಡೆಸಿಕೊಂಡು ಹೋಗಲು ಬೆಂಬಲಿಸುತ್ತದೆ/ಸಹಾಯಕವಾಗುತ್ತದೆ.

[57] ಸ್ವಿಚ್ಚುಗಳು, ರೂಟರ್, ಮೀಟರುಗಳು, ಮೋಡೆಮ್‌ಗಳು, ಎಸ್‌ಬಿಎಂಗಳು, ವರ್ಕ್‌ಸ್ಟೇಷನ್ ಪಿಸಿ ಮತ್ತು ಪ್ರಿಂಟರುಗಳು ಮುಂತಾದವುಗಳು.

[58] ಐಪಿಡಿಎಸ್ ಅಡಿಯಲ್ಲಿ (ಐಟಂ 3(ಸಿ) ಮತ್ತು (ಡಿ)).

### 3.10.1 ಬೆಸ್ಕಾಂ ಇಆರ್‌ಪಿ ಯೋಜನೆಯನ್ನು ಸಮಯೋಚಿತವಾಗಿ ಪೂರ್ಣಗೊಳಿಸದಿದ್ದುದು

ಬೆಸ್ಕಾಂ ಇಆರ್‌ಪಿ ವ್ಯವಸ್ಥೆಯನ್ನು ಮಾನವ ಸಂಪನ್ಮೂಲ ನಿರ್ವಹಣೆ, ಹಣಕಾಸು ಮತ್ತು ಲೆಕ್ಕಪತ್ರಗಳ ನಿರ್ವಹಣೆ ಮತ್ತು ಆಸ್ತಿಗಳ ನಿರ್ವಹಣಾ ಮಾಡ್ಯೂಲುಗಳೊಂದಿಗೆ ಕಾರ್ಯಗತಗೊಳಿಸುವ ಪ್ರಸ್ತಾವನೆಯನ್ನು ಮಾಡಿತು, ಅದಕ್ಕಾಗಿ ಸವಿವರ ಯೋಜನಾ ವರದಿಯನ್ನು ತಯಾರಿಸಲಾಯಿತು ಹಾಗೂ ಒಟ್ಟಾರೆ ₹ 75.76 ಕೋಟಿ[59] ಮೊತ್ತದ ಪ್ರಸ್ತಾವನೆಯೊಂದಿಗೆ ಪಿಎಫ್‌ಸಿಗೆ ಸಲ್ಲಿಸಿತು (ನವೆಂಬರ್ 2017). ಪಿಎಫ್‌ಸಿ ₹ 30.89 ಕೋಟಿ ಮೊತ್ತದಷ್ಟು ಅನುದಾನ ಭಾಗದೊಂದಿಗೆ ₹ 51.05 ಕೋಟಿ ಮೊತ್ತಕ್ಕೆ ಯೋಜನಾ ವೆಚ್ಚವನ್ನು[60] ಅನುಮೋದಿಸಿತು (ಫೆಬ್ರವರಿ 2018). ಯೋಜನೆಯನ್ನು ಪಿಎಫ್‌ಸಿ ನೀಡಿರುವಂತಹ ಸಲಹೆ ಜೊತೆಯಲ್ಲಿ ಮಾರ್ಗಸೂಚಿ ತತ್ವಗಳ ಅನುಸಾರ ಕಾರ್ಯಗತಗೊಳಿಸತಕ್ಕದ್ದು ಎಂಬುದನ್ನು ಅನುಮೋದನಾ ಪತ್ರವು ಪುನರುಚ್ಚರಿಸಿದ್ದಿತು. ಯೋಜನೆಯನ್ನು ಅನುಮೋದನ ಪತ್ರದ ದಿನಾಂಕದಿಂದ ಆರು ತಿಂಗಳುಗಳ ಒಳಗೆ ನೀಡಬೇಕಿದ್ದಿತು ಹಾಗೂ 31 ಜುಲೈ 2020ರ ಒಳಗೆ ಪೂರ್ಣಗೊಳಿಸಬೇಕಿದ್ದಿತು. ಅನುದಾನವನ್ನು ಪಡೆದುಕೊಳ್ಳಲು 30 ಜುಲೈ 2021 ಕಡೆಯ ದಿನಾಂಕವಾಗಿದ್ದಿತು.

### 3.10.2 ಕಾಮಗಾರಿಗಳನ್ನು ನೀಡುವಲ್ಲಿನ ವಿಳಂಬ

ಇಆರ್‌ಪಿಯ ಸವಿವರ ಯೋಜನಾ ವರದಿಗೆ (ಮಾನವ ಸಂಪನ್ಮೂಲ ನಿರ್ವಹಣೆ, ಹಣಕಾಸು ಮತ್ತು ಲೆಕ್ಕಪತ್ರಗಳ ನಿರ್ವಹಣೆ ಮತ್ತು ಆಸ್ತಿಗಳ ನಿರ್ವಹಣಾ ಮಾಡ್ಯೂಲುಗಳೊಂದಿಗೆ) ಅನುಮೋದನೆಯನ್ನು ಫೆಬ್ರವರಿ 2018ರಲ್ಲಿ ಸ್ವೀಕರಿಸಲಾಗಿದ್ದಿತು ಹಾಗೂ ಕಾಮಗಾರಿಯನ್ನು ಆರು ತಿಂಗಳುಗಳ ಒಳಗೆ ಅಂದರೆ ಆಗಸ್ಟ್ 2018ರ ವೇಳೆಗೆ ಗುತ್ತಿಗೆದಾರರಿಗೆ ನೀಡಬೇಕಿದ್ದಿತು (ಮಾರ್ಗಸೂಚಿಗಳ ಅನುಸಾರ). ಮಾರ್ಚ್ 2018ರಲ್ಲಿ, ಬೆಸ್ಕಾಂ ಮಾನವ ಸಂಪನ್ಮೂಲ ನಿರ್ವಹಣೆ, ಹಣಕಾಸು ಮತ್ತು ಲೆಕ್ಕಪತ್ರಗಳ ನಿರ್ವಹಣೆ ಮತ್ತು ಆಸ್ತಿಗಳ ನಿರ್ವಹಣಾ ಮಾಡ್ಯೂಲುಗಳಿಗಾಗಿ ಸರಬರಾಜು, ಸ್ಥಾಪನೆ, ಕಾರ್ಯೋದ್ಯುಕ್ತಗೊಳಿಸುವಿಕೆ, ಕಾರ್ಯಗತಗೊಳಿಸುವಿಕೆ ಮತ್ತು ಬೆಂಬಲಕ್ಕಾಗಿ ಒಂದು ಕೋರಿಕೆ ಪತ್ರವನ್ನು ನೀಡಿತು, ಇದು ಯಾವುದೇ ಬಿಡ್ಡುಗಳನ್ನು ಪಡೆಯುವಲ್ಲಿ ಯಶಸ್ವಿಯಾಗಲಿಲ್ಲ. ತದನಂತರದ ಬೆಸ್ಕಾಂನ ಪ್ರಮುಖ ಕಚೇರಿ ಹಿನ್ನೆಲೆಯ ಕಾರ್ಯಾಚರಣೆಗಳನ್ನು ಇಆರ್‌ಪಿ ಅಡಿಯಲ್ಲಿ ತರುವ ಉದ್ದೇಶದಿಂದ ಆರ್‌ಎಫ್‌ಪಿಯನ್ನು ಇನ್ನೂ ಹೆಚ್ಚಿನ ನಾಲ್ಕು ಮಾಡ್ಯೂಲುಗಳನ್ನು ಅಂದರೆ ಯೋಜನಾ ನಿರ್ವಹಣೆ, ಗುಣಮಟ್ಟ ಮತ್ತು ಸುರಕ್ಷತೆ, ವಿದ್ಯುತ್ ಖರೀದಿ, ದಾಖಲೆಗಳ ನಿರ್ವಹಣಾ ವ್ಯವಸ್ಥೆ (ಡಿಎಂಎಸ್) ಹಾಗೂ ಕಾಮಗಾರಿಗಳ ಹರಿವು ನಿರ್ವಹಣಾ ವ್ಯವಸ್ಥೆ (ಡಬ್ಲ್ಯುಎಂಎಸ್) ಇವುಗಳನ್ನು ಟೆಂಡರಿನಲ್ಲಿ ಸೇರಿಸುವ ಮೂಲಕ 11 ತಿಂಗಳುಗಳ ವಿಳಂಬದ ನಂತರ ಆಹ್ವಾನಿಸಿತು (ಫೆಬ್ರವರಿ 2019).

ಪರಿಷ್ಕೃತ ಆರ್‌ಎಫ್‌ಪಿಯು ಇನ್ನಿತರವುಗಳ ನಡುವೆ, ತಾಂತ್ರಿಕ, ವಿತ್ತೀಯವಾಗಿ 60:40ರಿಂದ 70:30ಕ್ಕೆ ಹೆಚ್ಚಳಗೊಳಿಸಲ್ಪಟ್ಟ ಮೌಲ್ಯ, ಅನುಭವ ಅಗತ್ಯತೆಯಲ್ಲಿ ಬಳಕೆದಾರರುಗಳ ಸಂಖ್ಯೆಯಿಂದ ಸ್ಥಳಗಳ ಸಂಖ್ಯೆಗೆ ಅನುಭವದಲ್ಲಿ ಬದಲಾವಣೆ ಹಾಗೂ ವಾರ್ಷಿಕ ವಹಿವಾಟು ಅಗತ್ಯತೆಯನ್ನು ₹ 350 ಕೋಟಿಯಿಂದ ಟೆಂಡರಿಗೆ ಇಡಲಾದ ಮೊತ್ತದ ಶೇಕಡಾ 50ಕ್ಕೆ ಬದಲಾವಣೆ, ಇವುಗಳನ್ನು ಒಳಗೊಂಡಂತೆ ಪಿಕ್ಯುಆರ್ ಮತ್ತು ತಾಂತ್ರಿಕ ಮೌಲ್ಯಮಾಪನ ಮಾನದಂಡವನ್ನು ಮಾರ್ಪಾಡು ಮಾಡುವುದನ್ನು ಒಳಗೊಂಡಿದ್ದಿತು.

ಕಾಮಗಾರಿಯನ್ನು ಅತ್ಯಂತ ಕಡಿಮೆ ದರವನ್ನು ಘೋಷಿಸಿದ್ದ ಬಿಡ್ಡರು ಮೆ. ಟೆಕ್ ಮಹಿಂದ್ರ ಲಿಮಿಟೆಡ್, ಇವರಿಗೆ ದರಸಂಧಾನ ಮಾಡುವ ಮೂಲಕ 12 ತಿಂಗಳುಗಳ ಒಳಗೆ (ಮಾರ್ಚ್ 2021) ಕಾಮಗಾರಿಯು ಪೂರ್ಣಗೊಂಡು ಬಳಕೆದಾರರ ಉಪಯೋಗಕ್ಕಾಗಿ ಪ್ರಾಯೋಗಿಕ ಪರೀಕ್ಷೆಯು ನಡೆಯತಕ್ಕದ್ದು (ಪೈಲಟ್–ಗೋ–ಲೈವ್) ಹಾಗೂ 20 ತಿಂಗಳುಗಳ (ನವಂಬರ್ 2021ರ ವೇಳೆಗೆ) ಒಳಗೆ ಗುರುತಿಸಲ್ಪಟ್ಟಿರುವ ಕಚೇರಿಗಳಲ್ಲಿ ಬಳಕೆದಾರರಿಗೆ ಲಭ್ಯವಾಗುವ ರೀತಿಯಲ್ಲಿ ಕಾರ್ಯೋದ್ಯುಕ್ತಗೊಂಡಿರತಕ್ಕದ್ದು

[59] ₹ 53.79 ಕೋಟಿ ಮೊತ್ತವು ಸ್ಥಾಪಿಸುವ ಸಲುವಾಗಿ ಆಗಿದ್ದಿತು ಹಾಗೂ ₹ 21.96 ಕೋಟಿ ಮೊತ್ತವು ವಾರ್ಷಿಕ ನಿರ್ವಹಣಾ ವೆಚ್ಚಗಳ ಕಡೆಗೆ, ವಾರ್ಷಿಕ ತಾಂತ್ರಿಕ ಬೆಂಬಲ ಮತ್ತು ಐದು ವರ್ಷಗಳಿಗೆ ಆವರ್ತನ ಶುಲ್ಕ, ಇವುಗಳನ್ನು ಸಯೋಜನಾ ಮಾರ್ಗಸೂಚಿಗಳ ಅನುಸಾರ ಬೆಸ್ಕಾಂ ಭರಿಸಬೇಕಿದ್ದಿತು.

[60] ವಾರ್ಷಿಕ ನಿರ್ವಹಣಾ ವೆಚ್ಚಗಳು ವಾರ್ಷಿಕ ತಾಂತ್ರಿಕ ಬೆಂಬಲ ಮತ್ತು ಐದು ವರ್ಷಗಳಿಗೆ ಆವರ್ತಹ ಶುಲ್ಕಗಳನ್ನು ಬ್ಯಾಂಡ್ ವಿಡ್ತ್ ವೆಚ್ಚ ಹೊರತುಪಡಿಸಿದಂತೆ.

(ಎಂಟರ್‌ಪ್ರೈಸ್–ಗೋ–ಲೈವ್) ಎಂಬ ಷರತ್ತುಗಳೊಂದಿಗೆ ₹65.00 ಕೋಟಿ[61] ಮೊತ್ತಕ್ಕೆ ನೀಡಲಾಗಿದ್ದಿತು (ಮಾರ್ಚ್ 2020).

ಈ ರೀತಿಯಾಗಿ, ಅದು ಅನುಮೋದನೆ ನೀಡಿದ ದಿನಾಂಕದಿಂದ ಡಿಡಬ್ಲ್ಯುಎ ನೀಡುವ ದಿನಾಂಕದವರೆವಿಗೆ ಎರಡು ವರ್ಷಗಳನ್ನು ತೆಗೆದುಕೊಂಡಿದ್ದಿತಾದಲ್ಲಿ ಮಾರ್ಗಸೂಚಿಗಳು ಆರು ತಿಂಗಳುಗಳ ಒಳಗೆ ಗುತ್ತಿಗೆದಾರರಿಗೆ ಕಾಮಗಾರಿಯನ್ನು ನೀಡತಕ್ಕದ್ದು ಎಂಬುದಾಗಿ ನಿರ್ದಿಷ್ಟಪಡಿಸಿದ್ದಿತು.

ಟೆಂಡರನ್ನು ನೀಡುವಲ್ಲಿನ ವಿಳಂಬವು ಲೋಕಸಭಾ ಚುನಾವಣೆಗಳು, 2019ಕ್ಕೆ ನೀತಿ ಸಂಹಿತೆ ಜಾರಿಗೊಂಡ ಕಾರಣದಿಂದ ಆಗಿದ್ದಿತು ಹಾಗೂ ಬಿಡ್ಡುಗಳನ್ನು ಸಲ್ಲಿಸುವ ದಿನಾಂಕಗಳಿಗೆ ಅನೇಕ ಸಂಖ್ಯೆಯ (ಐದು ಸಲ) ಕಾಲಾವಧಿ ವಿಸ್ತರಣೆಗಳನ್ನು ನೀಡಲಾಗಿದ್ದಿತು ಎಂಬುದಾಗಿ ಬೆಸ್ಕಾಂ ತಿಳಿಸಿತು (ಅಕ್ಟೋಬರ್ 2024). ಜೂನ್ 2019ರಲ್ಲಿ ತಾಂತ್ರಿಕ ಬಿಡ್ಡುಗಳನ್ನು ತೆರೆದನಂತರ, ವಿತ್ತೀಯ/ಹಣಕಾಸು ಬಿಡ್ಡುಗಳನ್ನು ತೆರೆಯುವಿಕೆ, ದರಸಂಧಾನಗಳು ಹಾಗೂ ತಾಂತ್ರಿಕ ಸಮಿತಿಯಿಂದ ಹಾಗೂ ನಿರ್ದೇಶಕರುಗಳ ಮಂಡಳಿಯಿಂದ ಅನುಮೋದನೆ ಪಡೆಯುವುದು ಸಮಯವನ್ನು ತೆಗೆದುಕೊಂಡಿತು. ಆಸಕ್ತಿ ಹೊಂದಿರುವ ಪತ್ರವನ್ನು (ಎಲ್‌ಒಐ) ಡಿಸೆಂಬರ್ 2019ರಲ್ಲಿ ನೀಡಲಾಗಿದ್ದಿತು ಹಾಗೂ ಸಂಸ್ಥೆಯು ಕಾರ್ಯನಿರ್ವಹಣಾ ಬ್ಯಾಂಕು ಖಾತರಿಯನ್ನು ನೀಡಿದನಂತರ ಡಿಡಬ್ಲ್ಯುಎಯನ್ನು ಮಾರ್ಚ್ 2020ರಲ್ಲಿ ನೀಡಲಾಗಿದ್ದಿತು. ಸವಿವರ ಯೋಜನಾ ವರದಿ ತಯಾರಿಸಲು, ಕಾಮಗಾರಿಯ ವ್ಯಾಪ್ತಿಯನ್ನು ಮಾರ್ಪಾಡು ಮಾಡಲು ಹಾಗೂ ವಿತ್ತೀಯ / ಹಣಕಾಸು ಬಿಡ್ಡುಗಳನ್ನು ತೆರೆಯಲು (ಆಗಸ್ಟ್ 2019ರಲ್ಲಿ ತೆರೆಯಲಾಗಿದ್ದಿತು) ಗಮನಾರ್ಹ ಸಮಯವನ್ನು ತೆಗೆದುಕೊಳ್ಳಲಾಗಿದ್ದಿತಾದ್ದರಿಂದ, ಹಾಗೂ ಅದರಿಂದ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ನೀಡುವಲ್ಲಿ ವಿಳಂಬವಾಗಿದ್ದಿತಾದ್ದರಿಂದ ಉತ್ತರವು ಒಪ್ಪುವಂತಿಲ್ಲ. ಮುಂದುವರೆದು, ಬೆಸ್ಕಾಂ ಕಾಮಗಾರಿಯ ಪೂರ್ಣಗೊಳ್ಳುವಿಕೆಗೆ ಸೀಮಿತ ಅವಧಿಯು ಇರುವುದನ್ನು ತಿಳಿಸಿ ಚುನಾವಣಾ ಆಯೋಗದಿಂದ ಟೆಂಡರುಗಳನ್ನು ನೀಡುವ ಸಲುವಾಗಿ ನೀತಿ ಸಂಹಿತೆಯಿಂದ ವಿನಾಯಿತಿ ಪಡೆಯಬಹುದಾಗಿದ್ದಿತು.

### *3.10.3 ಇಆರ್‌ಪಿ ಭಾಗವನ್ನು ಪೂರ್ಣಗೊಳಿಸುವಲ್ಲಿ ವಿಳಂಬ*

ಭಾರತ ಸರ್ಕಾರದ ಮೇಲ್ವಿಚಾರಣಾ ಸಮಿತಿಯು ಮೂರನೇ ತಂಡದಿಂದ ಮೌಲ್ಯಮಾಪನ ಹಾಗೂ ಯೋಜನೆಯ ವಿತ್ತೀಯ ಮುಕ್ತಾಯಗೊಳಿಸುವಿಕೆಯನ್ನು 31 ಮಾರ್ಚ್ 2022ಕ್ಕೆ[62] ವಿಸ್ತರಿಸುವುದರೊಂದಿಗೆ ಯೋಜನೆಯನ್ನು ಪೂರ್ಣಗೊಳಿಸಬೇಕಾದ ದಿನಾಂಕವನ್ನು 31 ಡಿಸೆಂಬರ್ 2021ಕ್ಕೆ[63] ವಿಸ್ತರಿಸಿತು. ಇದನ್ನು ಪರಿಗಣಿಸಿದಂತೆ, ಬೆಸ್ಕಾಂ ಡಿಡಬ್ಲ್ಯುಎಯನ್ನು ಡಿಸೆಂಬರ್ 2021ರಲ್ಲಿ ತಿದ್ದುಪಡಿ ಮಾಡಿತು. ಇಆರ್‌ಪಿ ಪರಿಹಾರ ಬಿಡುಗಡೆಯ ದಿನಾಂಕವನ್ನು 31 ಡಿಸೆಂಬರ್ 2022ರ, ವೇಳೆಗೆ ಹಾಗೂ ಸ್ಥಿರಗೊಳಿಸುವಿಕೆ ಅವಧಿಯನ್ನು ಏಪ್ರಿಲ್ 2023ರವರೆವಿಗೂ ವಿಸ್ತರಿಸುವ ಮೂಲಕ ಡಿಡಬ್ಲ್ಯುಎಗೆ ಎರಡನೆಯ ತಿದ್ದುಪಡಿಯನ್ನು ಡಿಸೆಂಬರ್ 2022ರಲ್ಲಿ[64] ನೀಡಲಾಗಿದ್ದಿತು. ಡಿಡಬ್ಲ್ಯುಎ *ಷರತ್ತು 11.1(i)ರ* ಅನುಸಾರ ಒಟ್ಟಾರೆ ಗುತ್ತಿಗೆ ಮೌಲ್ಯದ ಮೇಲೆ ತಪ್ಪಿತಸ್ಥಗೊಂಡ ದಿನಾಂಕದಿಂದ ಕಾಮಗಾರಿಯನ್ನು ವಾಸ್ತವಿಕವಾಗಿ ಪೂರ್ಣಗೊಳಿಸಲಾದ ದಿನಾಂಕದವರೆವಿಗೆ ಡಿಡಬ್ಲ್ಯುಎ ಸಂಬಂಧಿತ ಷರತ್ತುಗಳ ಅನುಸಾರ ಸಮಾಪನ ನಷ್ಟಗಳನ್ನು ವಿಧಿಸುವ ತೀರ್ಮಾನವನ್ನು ಸಹ ತೆಗೆದುಕೊಳ್ಳಲಾಗಿದ್ದಿತು.

ಇದೇ ವೇಳೆಯಲ್ಲಿ, ಮೂರನೇ ತಂಡದ ಪರೀಕ್ಷಣಾ ಸಂಸ್ಥೆಯಿಂದ (ಮೆ. ಫೀಡ್‌ಬ್ಯಾಕ್ ಇನ್‌ಫ್ರಾ ಪ್ರೈವೇಟ್ ಲಿಮಿಟೆಡ್)[65] ಪ್ರಮಾಣಪತ್ರದ ಅನುಸಾರ, ಪಿಎಫ್‌ಸಿ ಇಆರ್‌ಪಿ ಯೋಜನೆಯು ₹ 30.45 ಕೋಟಿ ವೆಚ್ಚದಲ್ಲಿ ಪೂರ್ಣಗೊಂಡಿರುವುದಾಗಿ ಅನುಮೋದಿಸಿತು (ಮೇ 2022) ಹಾಗೂ ₹ 18.42 ಕೋಟಿ ಅನುದಾನವನ್ನು ಬಿಡುಗಡೆಗೊಳಿಸಿತು.

[61] ಟೆಂಡರಿಗೆ ಇಡಲಾಗಿದ್ದ ಮೊತ್ತವನ್ನು ಮೀರಿದಂತೆ ಶೇಕಡಾ 27.33ರಷ್ಟು ಅಧಿಕ ಮೌಲ್ಯ.

[62] ಅನುಮೋದನಾ ಆದೇಶದ ಅನುಸಾರ ಜುಲೈ 2021ಕ್ಕೆ ಪ್ರತಿಯಾಗಿ.

[63] ಅನುಮೋದನಾ ಆದೇಶದ ಅನುಸಾರ ಜುಲೈ 2020ಕ್ಕೆ ಪ್ರತಿಯಾಗಿ.

[64] ನಿರ್ದೇಶಕರುಗಳ ಮಂಡಳಿಯು ಸೆಪ್ಟಂಬರ್ 2022ರಲ್ಲಿ ತನ್ನ ಅನುಮೋದನೆ ನೀಡಿದ್ದಿತು.

[65] ಹಂತ – I ಪೂರ್ಣಗೊಂಡಿರುವುದಾಗಿ ತೋರಿಸುವ ಉದ್ದೇಶಕ್ಕಾಗಿ ಕಾಮಗಾರಿಯನ್ನು ಹಂತ – I ಮತ್ತು ಹಂತ– II ಎಂಬುದಾಗಿ ವಿಭಜಿಸುವ ಮೂಲಕ ತಿದ್ದುಪಡಿಗೊಂಡಿದ್ದಂತಹ ಡಿಡಬ್ಲ್ಯುಎ ಆಧಾರದ ಮೇರೆಗೆ ಪೂರ್ಣಗೊಂಡಿರುವಿಕೆಯನ್ನು ಪ್ರಮಾಣೀಕರಿಸಿದ್ದಿತು.

ಈ ಕೆಳಗೆ ಚರ್ಚಿಸಿರುವಂತೆ, ಇಆರ್‌ಪಿ ಕಾರ್ಯಗತಗೊಳಿಸುವಿಕೆಯು ಪೂರ್ಣಗೊಂಡಿರಲೂ ಇಲ್ಲ ಅಥವಾ ಉಪಯೋಗಕ್ಕೆ ಬಿಡುಗಡೆಗೊಳಿಸುವ ಸಲುವಾಗಿ ಸಿದ್ಧಗೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

**ಕೋಷ್ಟಕ ಸಂಖ್ಯೆ 3.8: ಡಿಡಬ್ಲ್ಯುಎ ತಿದ್ದುಪಡಿಯ ವಿವರಗಳು**

| ಕ್ರಮ ಸಂಖ್ಯೆ | ಕಾಮಗಾರಿ ಐಟಂ | ಹಳೆಯ ಡಿಡಬ್ಲ್ಯುಎ (ಮಾರ್ಚ್ 2020) | 1ನೇ ತಿದ್ದುಪಡಿ ಮಾಡಲಾದ ಡಿಡಬ್ಲ್ಯುಎ (ಡಿಸೆಂಬರ್ 2021) | ಲೆಕ್ಕಪರಿಶೋಧನೆಯ ಷರಾ |
|---|---|---|---|---|
| 1 | ಮಾಡ್ಯೂಲು ಗಳು | ಎಲ್ಲಾ ಮಾಡ್ಯೂಲುಗಳು 31 ಮಾರ್ಚ್ 2021ರ ವೇಳೆಗೆ ಪೂರ್ಣಗೊಂಡಿರತಕ್ಕದ್ದು | ಮೂರು ಮಾಡ್ಯೂಲುಗಳನ್ನು (ಹಣಕಾಸು ಮತ್ತು ಲೆಕ್ಕಪತ್ರಗಳು, ಮಾನವ ಸಂಪನ್ಮೂಲ ನಿರ್ವಹಣಾ ಸೇವೆಗಳು (ಎಚ್‌ಆರ್‌ಎಂಎಸ್) ಮತ್ತು ಸಾಮಗ್ರಿಗಳು) ಹಂತ– Iರಲ್ಲಿ 31 ಡಿಸೆಂಬರ್ 2021ರ ವೇಳೆಗೆ ಹಾಗೂ ಉಳಿದ ಮಾಡ್ಯೂಲುಗಳನ್ನು ಹಂತ–IIರಲ್ಲಿ 30 ಜೂನ್ 2022ರ ವೇಳೆಗೆ ಪೂರ್ಣಗೊಳಿಸಬೇಕಿದ್ದಿತು ಎಂಬುದಾಗಿ ತಿಳಿಸುವ ಮೂಲಕ ಕಾಮಗಾರಿಯನ್ನು ಹಂತ–I ಮತ್ತು ಹಂತ–II ಎಂಬುದಾಗಿ ವಿಭಜಿಸಲಾಗಿದ್ದಿತು. | ಮಾಡ್ಯೂಲುಗಳಲ್ಲಿ ಯಾವುದೇ ಒಂದನ್ನೂ ಬಿಡುಗಡೆಗೊಳಿಸಿರಲಿಲ್ಲ. |
| 2 | ಪೈಲಟ್–ಗೋ–ಲೈವ್ | ಪಾರಂಪರಿಕ ಆಸ್ತಿಯ ಮಾಹಿತಿಯ ಸ್ಥಳಾಂತರದ ನಂತರ, ಬಳಕೆದಾರರು ಒಪ್ಪಿಕೊಳ್ಳುವಿಕೆಯ ಪರೀಕ್ಷಣೆಯನ್ನು ಗುರುತಿಸಲ್ಪಟ್ಟಿರುವ ಪ್ರಧಾನ (ಪೈಲಟ್) ಕಚೇರಿಗಳಲ್ಲಿ 12 ತಿಂಗಳುಗಳ ಒಳಗೆ ಪೂರ್ಣಗೊಳಿಸತಕ್ಕದ್ದು. | ಪಾರಂಪರಿಕ ಆಸ್ತಿಯ ಮಾಹಿತಿಯ ಸ್ಥಳಾಂತರದ ನಂತರ, ಬಳಕೆದಾರರು ಒಪ್ಪಿಕೊಳ್ಳುವಿಕೆಯ ಪರೀಕ್ಷಣೆಯನ್ನು ಹಂತ– Iಕ್ಕೆ ಗುರುತಿಸಲ್ಪಟ್ಟಿರುವ ಪ್ರಧಾನ (ಪೈಲಟ್) ಕಚೇರಿಗಳಲ್ಲಿ ನವಂಬರ್ 2021ರ ಒಳಗೆ ಪೂರ್ಣಗೊಳಿಸತಕ್ಕದ್ದು.<br>ಪಾರಂಪರಿಕ ಆಸ್ತಿಯ ಮಾಹಿತಿಯ ಸ್ಥಳಾಂತರದ ನಂತರ, ಬಳಕೆದಾರರು ಒಪ್ಪಿಕೊಳ್ಳುವಿಕೆಯ ಪರೀಕ್ಷಣೆಯನ್ನು ಹಂತ IIಕ್ಕೆ ಗುರುತಿಸಲ್ಪಟ್ಟಿರುವ ಪ್ರಧಾನ ಕಚೇರಿಗಳಲ್ಲಿ ಮೇ 2022ರ ಒಳಗೆ ಪೂರ್ಣಗೊಳಿಸತಕ್ಕದ್ದು. | ಮಾಡ್ಯೂಲುಗಳನ್ನು ಬಿಡುಗಡೆಗೊಳಿಸಿರಲಿಲ್ಲ ವಾದ್ದರಿಂದ ಪಾರಂಪರಿಕ ಆಸ್ತಿಯ ಮಾಹಿತಿಯ ಸ್ಥಳಾಂತರ ಹಾಗೂ ಬಳಕೆದಾರರಿಂದ ಒಪ್ಪಿಗೆ ಪರೀಕ್ಷಣೆಗಳು ಕೂಡ ವಿಳಂಬಗೊಂಡಿದ್ದವು. |
| 3 | ಎಂಟರ್‌ಪ್ರೈಸ್–ಗೋ–ಲೈವ್ | ಪ್ರಧಾನ (ಪ್ರಾರಂಭಿಕ) ಕಚೇರಿಗಳನ್ನು ಹೊರತುಪಡಿಸಿದಂತೆ ಗುರುತಿಸಲ್ಪಟ್ಟಿರುವ ಇತರೆ ಕಚೇರಿಗಳಲ್ಲಿ ಬಿಡುಗಡೆಗೊಳಿಸಿದ ನಂತರ (20 ತಿಂಗಳುಗಳ ಒಳಗೆ) ಸ್ಥಿರೀಕರಣ ಮತ್ತು ಅಂತಿಮ ಒಪ್ಪಿಗೆಯನ್ನು ಬೆಸ್ಕಾಂ ನೀಡಬೇಕಿರುವುದು. | ಹಂತ–I ಗುರುತಿಸಲ್ಪಟ್ಟಿರುವ ಕಚೇರಿಗಳಲ್ಲಿ ಡಿಸೆಂಬರ್ 2021ರ ಒಳಗೆ ತರಬೇತಿ ಮತ್ತು ಬಿಡುಗಡೆ<br>ಹಂತ–II ಪ್ರಧಾನ (ಪೈಲಟ್) ಕಚೇರಿಗಳನ್ನು ಹೊರತುಪಡಿಸಿದಂತೆ ಗುರುತಿಸಲ್ಪಟ್ಟಿರುವ ಕಚೇರಿಗಳಲ್ಲಿ ತರಬೇತಿ ಮತ್ತು ಬಿಡುಗಡೆ ಜೂನ್ 2022ರ ಒಳಗೆ ಹಾಗೂ ಬೆಂವಿಸಕಂಯಿಂದ ಸ್ಥಿರೀಕರಿಸುವಿಕೆ ಮತ್ತು ಅಂತಿಮ ಒಪ್ಪಿಗೆ | ಗುರುತಿಸಲ್ಪಟ್ಟಿರುವ ಕಚೇರಿಗಳಲ್ಲಿ ಬಳಕೆದಾರರಿಗೆ ಲಭ್ಯವಾಗುವ ರೀತಿಯಲ್ಲಿ ಕಾರ್ಯೋದ್ಯುಕ್ತಗೊಂಡಿರುವಿಕೆಯು (ಎಂಟರ್‌ಪ್ರೈಸ್–ಗೋ–ಲೈವ್) ಕೂಡ ವಿಳಂಬಗೊಂಡಿದ್ದಿತು. |

*ಮೂಲ: ಬೆಸ್ಕಾಂ ನೀಡಿದ ಮಾಹಿತಿಯನ್ನು ಲೆಕ್ಕಪರಿಶೋಧನೆಯು ಸಂಕಲಿಸಿರುವುದು*

ಪ್ರಧಾನ ಕಾರ್ಯಗತಗೊಳಿಸುವಿಕೆ ಅವಧಿಯು ಕೋವಿಡ್–19 ಸಾಂಕ್ರಾಮಿಕದೊಂದಿಗೆ ಹಾದುಗೋಗಿದ್ದಿತು, ಇದು ದೀರ್ಘಕಾಲದ ವಿಳಂಬಗಳಿಗೆ ಹಾಗೂ ಇಆರ್‌ಪಿಯನ್ನು ಕಾರ್ಯಗತಗೊಳಿಸದಿರಲು ಕಾರಣವಾಗಿದ್ದಿತು. ಇದರ ಪರಿಣಾಮವಾಗಿ ಪ್ರಸ್ತುತ, ₹ 42.04 ಕೋಟಿ[66] ಮೊತ್ತವನ್ನು ಭರಿಸಿದ್ದರ ಹೊರತಾಗಿಯೂ, ಕಂಪನಿಯ ಉದ್ದಗಲಕ್ಕೂ ಹೆಚ್ಚಳಗೊಳಿಸಬಹುದಾದ ಮತ್ತು ಪ್ರಮಾಣಕಗೊಳಿಸಲಾಗಿರುವ ವ್ಯವಹಾರ ಪ್ರಕ್ರಿಯೆಗಳಿಗೆ ನೇರವಾಗಿ ಗ್ರಾಹಕರುಗಳೊಂದಿಗೆ ಪಾರಸ್ಪರಿಕ ಕ್ರಿಯೆಗಳನ್ನು ಹೊಂದಿರದ ಆಡಳಿತಾತ್ಮಕ ಮತ್ತು ಬೆಂಬಲ ಕಾರ್ಯಾಚರಣೆಗಳಿಗಾಗಿ ಇಆರ್‌ಪಿ ವ್ಯವಸ್ಥೆಯ ಕಾರ್ಯಗತಗೊಳಿಸಿದ್ದರ ತನ್ನ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ.

ಮೇಲೆ ತಿಳಿಸಲಾಗಿರುವ ವಾಸ್ತವಾಂಶಗಳನ್ನು ಬೆಸ್ಕಾಂ ಖಚಿತಪಡಿಸುವ ವೇಳೆಯಲ್ಲಿ (ಅಕ್ಟೋಬರ್ 2024) ಎಚ್‌ಆರ್‌ಎಂಎಸ್, ವಿದ್ಯುತ್ ಖರೀದಿ, ಹಣಕಾಸು ಮತ್ತು ಲೆಕ್ಕಪತ್ರಗಳು, ಇತ್ಯಾದಿ ಮಾಡ್ಯೂಲುಗಳು ಬಿಡುಗಡೆಗೊಳಿಸುವ ಮೊದಲು ಅತೀ ಕಟ್ಟುನಿಟ್ಟಿನ ಸ್ಥಿರೀಕರಣಗಳ ಅಗತ್ಯತೆಯನ್ನು ಹೊಂದಿರುತ್ತವೆ ಹಾಗೂ ವೈಯಕ್ತಿಕ ಮಾಡ್ಯೂಲುಗಳನ್ನು ಪ್ರಸ್ತುತ ಇರುವಂತಹ ವಿಧಾನಗಳೊಂದಿಗೆ ಸ್ಥಿರೀಕರಿಸಲಾಗಿದ್ದಿತು ಹಾಗೂ ಮಾಡ್ಯೂಲುಗಳನ್ನು ಪ್ರಾರಂಭಿಕ ಹಂತದಿಂದ ಮೊದಲ್ಗೊಂಡು ಕೊನೆಯವರೆವಿಗೂ ಸಂಪೂರ್ಣವಾಗಿ ಸಮಗ್ರೀಕರಿಸುವುದರೊಂದಿಗೆ ಬಿಡುಗಡೆಗೊಳಿಸಿದನಂತರ ಪ್ರಯೋಜನಗಳನ್ನು ಪಡೆಯಲಾಗುತ್ತದೆ. ಇದು ಅನುದಾನಗಳನ್ನು ಪಡೆಯುವ ಸಲುವಾಗಿಯೇ ಯೋಜನಾ ಭಾಗವನ್ನು

[66] 30 ಜೂನ್ 2023ರವರೆಗೆ.

ಸಂಪೂರ್ಣ ಕಾರ್ಯೋದ್ದುಕ್ತ ಮಾಡ್ಯೂಲುಗಳ ಅನುಪಸ್ಥಿತಿಯಲ್ಲಿ ಡಿಸೆಂಬರ್ 2021ರಲ್ಲಿ ಪೂರ್ಣಗೊಂಡಿರುವುದಾಗಿ ಘೋಷಿಸಲಾಗಿದ್ದಿತು ಎಂಬುದಾಗಿ ಲೆಕ್ಕಪರಿಶೋಧನೆಯು ಮಾಡಿರುವ ವಾದವನ್ನು ಖಚಿತಪಡಿಸುವುದು.

### *3.11 ಮಾಹಿತಿ ತಂತ್ರಜ್ಞಾನ – ಹಂತ – II*

ರಾಜ್ಯದಲ್ಲಿನ ವಿಸಕಂಗಳು ಆರ್‌ಎಪಿಡಿಆರ್‌ಪಿ ಯೋಜನೆ ಅಡಿಯಲ್ಲಿ ಕಾರ್ಯಗತಗೊಳಿಸಲಾಗಿದ್ದಂತಹ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು[67] ಈಗಾಗಲೇ ಮಾರ್ಚ್ 2016ರಿಂದಲೂ ಉಪಯೋಗಿಸುತ್ತಿದ್ದವು, ಇದು ವಿಸಕಂಗಳಾದ್ಯಂತ 98 ಮಟ್ಟಣಗಳನ್ನು ವ್ಯಾಪಿಸಿತ್ತು. ಈ ವ್ಯವಸ್ಥೆಯನ್ನು ಸಂಪೂರ್ಣ ರಾಜ್ಯದ ಅಗತ್ಯತೆಯನ್ನು ಪೂರೈಸುವ ಸಲುವಾಗಿ ಮಾಹಿತಿ ಕೇಂದ್ರ (ಡಿಸಿ) / ಅಪಾಯಗಳಿಂದ ಚೇತರಿಕೆ ಕೇಂದ್ರ (ಡಿಆರ್‌ಸಿ), ಇವುಗಳ ವಿನ್ಯಾಸದಲ್ಲಿ ಅನುವನ್ನು ಹೊಂದುವ ಸಲುವಾಗಿ ರೂಪಿಸಲಾಗಿದ್ದಿತು. ಪ್ರಸಕ್ತ ಇರುವಂತಹ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಯೋಜನೆಯ ಅಡಿಯಲ್ಲಿ ಸೇರಿಸಲಾಗಿರುವಂತಹ 124 ಹೊಸ ಪಟ್ಟಣಗಳಿಗೆ ವಿಸ್ತರಿಸುವುದನ್ನು ಐಪಿಡಿಎಸ್ ಚಿಂತಿಸಿರುವುದು. ಆದ್ದರಿಂದ, ಹೆಚ್ಚುವರಿ ಪಟ್ಟಣಗಳಿಗೆ ವ್ಯಾಪನೆಯನ್ನು ವಿಸ್ತರಿಸುವ ಸಲುವಾಗಿ, ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ವಿಸ್ತರಣೆಗಾಗಿ ಕೇವಲ ಹೆಚ್ಚುವರಿ ವೆಚ್ಚವನ್ನು ಮಾತ್ರ ಚಿಂತಿಸಲಾಗಿದ್ದಿತು. ಚಿಂತಿಸಲಾಗಿದ್ದಂತಹ ಪ್ರಧಾನ ಭಾಗಗಳೆಂದರೆ ಎಲ್ಲಾ ವಿಸಕಂಗಳಿಗೆ ಡಿಸಿ/ಡಿಆರ್‌ಸಿಗಾಗಿ ಹೆಚ್ಚುವರಿ ವೆಚ್ಚ, ಯಂತ್ರಾಂಶ ಅನ್ವಯ ವೆಚ್ಚಗಳು, ಕಾರ್ಯಗತಗೊಳಿಸುವಿಕೆ ವೆಚ್ಚಗಳು ಮತ್ತು ಜಿಐಎಸ್ ಸಮೀಕ್ಷೆ ವೆಚ್ಚಗಳು. ಮಾಹಿತಿ ತಂತ್ರಜ್ಞಾನ ಹಂತ–II ಕೂಡ ಐಪಿಡಿಎಸ್ ಅಡಿಯಲ್ಲಿನ ಪಟ್ಟಣಗಳಲ್ಲಿ ಮಾಹಿತಿ ತಂತ್ರಜ್ಞನಾ ಮೂಲಸೌಕರ್ಯ[68] ಹಾಗೂ ಜಿಐಎಸ್ ಸಮೀಕ್ಷೆಗಳನ್ನು ಒಳಗೊಂಡಿದ್ದಿತು. ಮಾಹಿತಿ ತಂತ್ರಜ್ಞಾನ ಹಂತ–IIರ ಕಾರ್ಯಗತಗೊಳಿಸುವಿಕೆಯಲ್ಲಿ ಲೆಕ್ಕಪರಿಶೋಧನೆಯು ಗಮನಿಸಿರುವ ಅಂಶಗಳನ್ನು ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿರುವುದು:

#### *3.11.1 ಮಾಹಿತಿ ಕೇಂದ್ರ (ಡಿಸಿ)/ವಿಪತ್ತು ಚೇತರಿಕೆ ಕೇಂದ್ರ (ಡಿಆರ್‌ಸಿ)*

ರಾಜ್ಯ ಮಟ್ಟದ ವಿತರಣಾ ಸುಧಾರಣಾ ಸಮಿತಿಯು (ಎಸ್‌ಎಲ್‌ಡಿಆರ್‌ಸಿ) ಪಿಎಫ್‌ಸಿಗೆ ಸಲ್ಲಿಸುವ ಸಲುವಾಗಿ ರಾಜ್ಯದಲ್ಲಿನ ಐಪಿಡಿಎಸ್ (ಮಾಹಿತಿ ತಂತ್ರಜ್ಞಾನ ಹಂತ–II) ರಲ್ಲಿ ಮಾಹಿತಿ ತಂತ್ರಜ್ಞಾನ ಅನುಕೂಲತೆಯನ್ನು ಸಾಧ್ಯಗೊಳಿಸುವಿಕೆಗಾಗಿ ₹ 103.08 ಕೋಟಿ ಮೊತ್ತದ ಸವಿವರ ಯೋಜನಾ ವರದಿಗಳನ್ನು ಅನುಮೋದಿಸಿದ್ದಿತು (ಫೆಬ್ರವರಿ 2017). ಇದರ ಪೈಕಿ, ₹ 71.79 ಕೋಟಿ ಮೊತ್ತವು ಬೆಸ್ಕಾಂಗೆ ಸಂಬಂಧಿಸಿದ್ದಿತು (ಎಲ್ಲಾ ವಿಸಕಂಗಳ ಪರವಾಗಿ ಬೆಸ್ಕಾಂ ಕಾರ್ಯಗತಗೊಳಿಸಬೇಕಿದ್ದಂತಹ ಮಾಹಿತಿ ಕೇಂದ್ರ (ಡಿಸಿ) / ವಿಪತ್ತು ಚೇತರಿಕೆ ಕೇಂದ್ರ (ಡಿಆರ್‌ಸಿ), ಇವುಗಳಿಗಾಗಿ ಹೆಚ್ಚಳಗೊಳಿಸಲ್ಪಟ್ಟ (ಇಂಕ್ರಿಮೆಂಟಲ್) ಮೌಲ್ಯ ₹ 63.55 ಕೋಟಿ ಒಳಗೊಂಡಂತೆ). ಇದಕ್ಕೆ ಪ್ರತಿಯಾಗಿ ಪಿಎಫ್‌ಸಿ ಮಾಹಿತಿ ತಂತ್ರಜ್ಞಾನ ಅನುಕೂಲತೆಯನ್ನು ಸಾಧ್ಯಗೊಳಿಸುವಿಕೆಗಾಗಿ ₹ 33.93 ಕೋಟಿ[69] ಮೊತ್ತಕ್ಕೆ ತನ್ನ ಅನುಮೋದನೆ ನೀಡಿದ್ದಿತು (ಜುಲೈ 2017). ಅನುಮೋದನೆ ಆದೇಶದ ಅನುಸಾರ, ಕಾಮಗಾರಿಯನ್ನು ಅನುಮೋದನೆಯ ದಿನಾಂಕದಿಂದ 3 ತಿಂಗಳುಗಳ ಒಳಗೆ ಗುತ್ತಿಗೆದಾರರಿಗೆ ನೀಡಬೇಕಿದ್ದಿತು ಹಾಗೂ ಕಾಮಗಾರಿಯನ್ನು ಜನವರಿ 2020ರ ವೇಳೆಗೆ ಪೂರ್ಣಗೊಳಿಸಬೇಕಿದ್ದಿತು. ಐಪಿಡಿಎಸ್ ಅಡಿಯಲ್ಲಿ ಮಾಹಿತಿ ತಂತ್ರಜ್ಞಾನ ಅನುಕೂಲತೆಯನ್ನು ಸಾಧ್ಯಗೊಳಿಸುವಿಕೆಯನ್ನು ಕಾರ್ಯಗತಗೊಳಿಸುವ ಸಲುವಾಗಿ ಎಲ್ಲಾ ವಿಸಕಂಗಳ ಪರವಾಗಿ ಟೆಂಡರುಗಳನ್ನು ಆಹ್ವಾನಿಸಲು ಬೆಸ್ಕಾಂ ಅಕ್ಟೋಬರ್ 2017ರಲ್ಲಿ ತೀರ್ಮಾನಿಸಿತಾದರೂ ಕಾಮಗಾರಿಯು ಸೆಪ್ಟಂಬರ್ 2024ರಲ್ಲಿದ್ದಂತೆಯೂ ಪೂರ್ಣಗೊಂಡಿರಲಿಲ್ಲ.

ಮಾಹಿತಿ ತಂತ್ರಜ್ಞಾನ ಅನುಕೂಲತೆಯನ್ನು ಸಾಧ್ಯಗೊಳಿಸುವಿಕೆಯ ಭಾಗದ ಅಡಿಯಲ್ಲಿ ಕಾರ್ಯಚಟುವಟಿಕೆಗಳ ಚಿಂತಿಸಲಾಗಿದ್ದಂತಹ ಕಾಲ ಮಿತಿ ಹಾಗೂ ಅದಕ್ಕೆ ಪ್ರತಿಯಾಗಿ ವಾಸ್ತವಿಕವಾಗಿ

[67] ಮೆ. ಇನ್ಫೋಸಿಸ್ ಲಿಮಿಟೆಡ್, ಇವರು ಕಾರ್ಯಗತಗೊಳಿಸಿರುವರು.

[68] ಸ್ವಿಚ್ಚುಗಳು, ರೂಟರು, ಮೀಟರುಗಳು, ಮೋಡೆಮ್‌ಗಳು, ಎಸ್‌ಬಿಎಂಗಳು, ವರ್ಕ್‌ಸ್ಟೇಷನ್ ಪಿಸಿಗಳು, ಪ್ರಿಂಟರುಗಳು ಮತ್ತು ಇತರವುಗಳು ಮುಂತಾದವು.

[69] ಕಾರ್ಯಗತಗೊಳಿಸುವಿಕೆ ಕಡೆಗೆ ಸ್ವೀಕರಿಸಬೇಕಿರುವ ಅನುದಾನ – ₹ 20.35 ಕೋಟಿ (ಶೇಕಡಾ 60) ಪಿಎಂಎ ಶುಲ್ಕದ ಕಡೆಗೆ ₹ 0.17 ಕೋಟಿ (ಶೇಕಡಾ 0.5).

ಕಾರ್ಯಗತಗೊಳಿಸಲಾದ ಕಾಲಾವಧಿಯ ಸಂಕ್ಷಿಪ್ತ ಚಿತ್ರಣವನ್ನು ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಲಾಗಿರುವುದು:

**ರೇಖಾಚಿತ್ರ ಸಂಖ್ಯೆ 3.2 : ಡಿಸಿ / ಡಿಆರ್‌ಸಿ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯಲ್ಲಿ ಗುರಿಗಳಿಗೆ ಪ್ರತಿಯಾಗಿ ವಾಸ್ತವಿಕವಾಗಿ ತೆಗೆದುಕೊಳ್ಳಲಾದ ಕಾಲಾವಧಿಯನ್ನು ತೋರಿಸುವ ಸಂಕ್ಷಿಪ್ತ ಚಿತ್ರಣ.**




ಯೋಜನೆಯ ಕಾರ್ಯಗತಗೊಳಿಸಿರುವಿಕೆಯ ಸಮೀಕ್ಷೆಯ ಮೇಲೆ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು.

### *3.11.2 ಕಾಮಗಾರಿಗಳನ್ನು ಟೆಂಡರಿಗೆ ಇಡುವಲ್ಲಿ ಮತ್ತು ಗುತ್ತಿಗೆದಾರರಿಗೆ ನೀಡುವಲ್ಲಿ ವಿಳಂಬ*

ಬೆಸ್ಕಾಂ ಫೆಬ್ರವರಿ 2017ರಲ್ಲಿ ಐಪಿಡಿಎಸ್ ಅಡಿಯಲ್ಲಿ ಸವಿವರ ಯೋಜನಾ ವರದಿಯನ್ನು ತಯಾರಿಸುವ ವೇಳೆಯಲ್ಲಿ ಪ್ರಸಕ್ತ ಇರುವಂತಹ ಡಿಸಿ/ಡಿಆರ್‌ಸಿ, ಇವುಗಳ ಯಂತ್ರಾಂಶ ಅನ್ವಯಗಳನ್ನು ಮೇಲ್ದರ್ಜೆಗೇರಿಸಬೇಕಾಗುವುದು ಎಂಬುದನ್ನು ನಿರೀಕ್ಷಿಸಿರಲಿಲ್ಲ. ಪ್ರಾರಂಭಿಕ ಯೋಜನೆಗಾಗಿ (ಅದು ಮಾಹಿತಿ ತಂತ್ರಜ್ಞಾನ ಹಂತ IIರ[70] ಬಿಡ್ಡುಗಳನ್ನು ಸ್ವೀಕರಿಸಲಾಗದ ಎಲ್ಲಾ ಭಾಗಗಳನ್ನು ಒಳಗೊಂಡಿದ್ದಿತು), ಮಾರ್ಚ್/ ಜೂನ್ 2018ರಲ್ಲಿ ಮಾಹಿತಿ ತಂತ್ರಜ್ಞಾನ ಕಾರ್ಯಗತಗೊಳಿಸುವಿಕೆ ಸಂಸ್ಥೆಯನ್ನು (ಐಟಿಐಎ) ನೇಮಕ ಮಾಡುವ ಸಲುವಾಗಿ ಟೆಂಡರುಗಳನ್ನು ಆಹ್ವಾನಿಸಿದನಂತರ ತಜ್ಞರ ಅಭಿಪ್ರಾಯವನ್ನು ಅಕ್ಟೋಬರ್ 2018ರಲ್ಲಿ ಪಡೆದುಕೊಳ್ಳಲಾಗಿದ್ದಿತು. ಪ್ರಸಕ್ತ ಇದ್ದಂತಹ ಮಾಹಿತಿ ತಂತ್ರಜ್ಞಾನ ಕಾರ್ಯಗತಗೊಳಿಸುವಿಕೆ ಸಂಸ್ಥೆಯಿಂದ ಹಾಗೂ ಆರ್‌ಎಪಿಡಿಆರ್‌ಪಿ[71], ಅಡಿಯಲ್ಲಿ ತಾಂತ್ರಿಕ ಸಲಹೆಗಾರರಿಂದ[72] ಮಾಡಲ್ಪಟ್ಟಿದ್ದಂತಹ ಗುಣಮಟ್ಟ ಮೌಲ್ಯಮಾಪನವನ್ನು ಪರಿಗಣಿಸಿದಂತೆ, ಬೆಸ್ಕಾಂ

[70] ಐಟಿಐಎ ಪ್ರಸ್ತುತ ಇರುವಂತಹ ಹಾಗೂ ಅಲ್ಲದೆಯೇ ಚಿಂತಿಸಲಾಗಿದ್ದ ವಿದ್ಯುತ್ ಹೊರೆಗೆ ಅಗತ್ಯವಿರುವ ಯಂತ್ರಾಂಶ ಅನ್ವಯಗಳಿಗೆ ಪ್ರಸ್ತಾವನೆ ನೀಡಬೇಕಿದ್ದಿತು, ಬೆಸ್ಕಾಂ ಡಿಸಿಗೆ ತಂತ್ರಾಂಶ ಅನ್ವಯವನ್ನು ಮೇಲ್ದರ್ಜೆಗೇರಿಸುವುದು, ಹೊಸ ಪರವಾನಗಿ ಅಗತ್ಯತೆಗಳನ್ನು ಪ್ರಸ್ತಾಪಿಸಬೇಕಿತ್ತು ಯಂತ್ರಾಂಶದ ಸರಬರಾಜು ಮತ್ತು ಸ್ಥಾಪನೆ, ಕ್ಲೌಡ್ ಮೇಲೆ ಡಿಆರ್‌ಸಿ ಸ್ಥಾಪನೆ, ಕ್ಷೇತ್ರ ಮೂಲಸೌಕರ್ಯ ಸರಬರಾಜು ಮತ್ತು ಸ್ಥಾಪನೆ, ಕ್ಷೇತ್ರ ಆಸ್ತಿಗಳ ಜಿಐಎಸ್ ಸಮೀಕ್ಷೆ ಮತ್ತು ಅನುಕೂಲತೆ ನಿರ್ವಹಣಾ ಸೇವೆಗಳನ್ನು ಐದು ವರ್ಷಗಳಿಗೆ ಒದಗಿಸುವುದು.

[71] ಇನ್ಫೋಸಿಸ್ ಟೆಕ್ನಾಲಜೀಸ್ ಲಿಮಿಟೆಡ್.

[72] ಸಲಹೆಗಾರರು, ಮೆ. ಇಂಟರ್ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇನ್‌ಫರ್ಮೇಷನ್ ಟೆಕ್ನಾಲಜಿ, ಬೆಂಗಳೂರು, ಇವರು ಪ್ರಸ್ತುತ ಇರುವಂತಹ ಆರ್‌ಎಪಿಡಿಆರ್‌ಪಿ ಯಂತ್ರಾಂಶ ಅನ್ವಯವು ಅದರ ಉಪಯೋಗಿಸಬಹುದಾದ ಅವಧಿಯ ಅಂತ್ಯದಲ್ಲಿರುವುದು ಹಾಗೂ ಬೆಂಬಲ ಮತ್ತು ಮೂಲಸೌಕರ್ಯವು ಭರ್ತಿಯಾಗಿರುವುದು ಹಾಗೂ ವಿಸ್ತರಣೆಗಾಗಿ ಅವಕಾಶವನ್ನು ಸೀಮಿತಗೊಳಿಸಿರುವುದು ಎಂಬುದಾಗಿ ಅಭಿಪ್ರಾಯ ಪಟ್ಟಿರುವರು. ತಂತ್ರಾಂಶ ಅನ್ವಯದ ಉಪಯೋಗಿಸಲಾಗುತ್ತಿರುವ ಒಇಎಂಎಸ್ ಸೂಕ್ತ ಬೆಂಬಲ ನೀಡುವ ಸಲುವಾಗಿ ಕಡೆಯ ಪಕ್ಷ ಎನ್–1 ಅವತರಣಿಕೆ (ವರ್ಷನ್) ಆಗಿರತಕ್ಕದ್ದು ಎಂಬುದಾಗಿ ಶಿಫಾರಸು ಮಾಡಿರುವರು.

ಡಿಸಿ/ಡಿಆರ್‌ಸಿಗಾಗಿ ಒಟ್ಟಾರೆ ಪುನರ್–ಚಿಂತನೆ[73] ಮಾಡಲು ತೀರ್ಮಾನಿಸಿತು (ನವಂಬರ್ 2018). ಅದರಂತೆಯೇ, ಮಾಹಿತಿ ತಂತ್ರಜ್ಞಾನ ಹಂತ– IIರ ವೆಚ್ಚವನ್ನು ಈ ಮುಂಚಿನ ₹ 103.08 ಕೋಟಿ ಮೊತ್ತಕ್ಕೆ ಪ್ರತಿಯಾಗಿ ₹ 188.58 ಕೋಟಿ[74] ಎಂಬುದಾಗಿ ಪುನರ್–ಅಂದಾಜು ಮಾಡಲಾಗಿದ್ದಿತು (ನವಂಬರ್ 2017). ಮುಂದುವರೆದು, ಬೆಸ್ಕಾಂ ವಿವಿಧ ಭಾಗಗಳಿಗೆ[75] ಪ್ರತ್ಯೇಕವಾಗಿ ಟೆಂಡರುಗಳನ್ನು ಆಹ್ವಾನಿಸಲು ಕೂಡ ತೀರ್ಮಾನಿಸಿದ್ದಿತು. ಕರ್ನಾಟಕದ ಎಲ್ಲಾ ವಿಸಕಂಗಳ ಉದ್ದಗಲಕ್ಕೂ ಐಪಿಡಿಎಸ್ ಮಾಹಿತಿ ತಂತ್ರಜ್ಞಾನ ಹಂತ IIರ ಅಡಿಯಲ್ಲಿ ಡಿಸಿ–ಡಿಆರ್‌ಸಿ ಯಂತ್ರಾಂಶ ಅನ್ವಯ ಮತ್ತು ತಂತ್ರಾಂಶ ಅನ್ವಯ ಹೊಸದಾಗಿ ಕಾರ್ಯಗತಗೊಳಿಸುವ ಸಲುವಾಗಿ ವ್ಯವಸ್ಥೆಯ ಸಂಘಟಕರ ನೇಮಕಾತಿಗಾಗಿ ಫೆಬ್ರವರಿ 2019ರಲ್ಲಿ ₹ 130.00 ಕೋಟಿ ಟೆಂಡರು ಮೌಲ್ಯದ ಹೊಸ ಟೆಂಡರುಗಳನ್ನು ನೀಡಲಾಗಿದ್ದಿತು. ತದನಂತರದಲ್ಲಿ, ಸಂಭಾವ್ಯ ಬಿಡ್ಡರುಗಳ ಸ್ಪಷ್ಟಪಡಿಸಿದ ಸಮಸ್ಯೆಗಳ ಆಧಾರದ ಮೇರೆಗೆ ಮಾರ್ಪಾಡುಗಳು/ತಿದ್ದುಪಡಿಗಳನ್ನು ಅಳವಡಿಸಿಕೊಳ್ಳುವ ಸಲುವಾಗಿ, ಬೆಸ್ಕಾಂ ಬಿಡ್ಡುಗಳ ಸಲ್ಲಿಕೆಯ ದಿನಾಂಕವನ್ನು ಜುಲೈ 2019ಕ್ಕೆ ವಿಸ್ತರಿಸಿತು. ಇದು ಟೆಂಡರು ಸಲ್ಲಿಕೆ ಅವಧಿಯನ್ನು 30 ದಿನಗಳಿಂದ 148 ದಿನಗಳಿಗೆ ಹೆಚ್ಚಳಗೊಳಿಸಿತು. ಆಸಕ್ತಿ ಪತ್ರವನ್ನು (ಎಲ್‌ಒಐ) ಡಿಸೆಂಬರ್ 2019ರಲ್ಲಿ ನೀಡಲಾಯಿತು, ಇದನ್ನು ಅನುಸರಿಸಿದಂತೆ ಮಾರ್ಚ್ 2020ರಲ್ಲಿ ಪಿಎಫ್‌ಸಿಯ ಅನುಮೋದನೆಯ ಅನುಸಾರಕ್ಕೆ ಯೋಜನೆಯನ್ನು ಮುಕ್ತಾಯಗೊಳಿಸಬೇಕಾದ ದಿನಾಂಕದ (ಜನವರಿ 2020) ನಂತರ ಡಿಡಬ್ಲ್ಯುಎ ನೀಡಲಾಗಿದ್ದಿತು. ಒಟ್ಟಾರೆ ಡಿಡಬ್ಲ್ಯುಎ ಮೌಲ್ಯವು ₹ 172.00 ಕೋಟಿ ಆಗಿದ್ದಿತು, ಇದರ ಪೈಕಿ ₹ 89.92 ಕೋಟಿ ಮೊತ್ತವು ಕಾರ್ಯಗತಗೊಳಿಸುವಿಕೆಗಾಗಿ ಹಾಗೂ ₹ 82.08 ಕೋಟಿ[76] ಮೊತ್ತವು ತಂತ್ರಾಂಶ ಅನ್ವಯ ಸೇವೆಗಳ ನೀಡಿಕೆಗಾಗಿ (ಹೋಸ್ಟಿಂಗ್) ಮತ್ತು ನಿರ್ವಹಣೆಗಾಗಿ ಆಗಿದ್ದಿತು.

ವಿಳಂಬವು ಮಾಹಿತಿ ತಂತ್ರಜ್ಞಾನ ಭಾಗಕ್ಕಾಗಿ ಪಿಎಂಎ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಆರ್‌ಇಸಿಪಿಡಿಸಿಎಲ್ ನಿರಾಕರಿಸಿದ್ದ ಕಾರಣ ಆಗಿದ್ದಿತು, ಇದು ಮಾಹಿತಿ ತಂತ್ರಜ್ಞಾನ ಭಾಗಕ್ಕಾಗಿ ಪಿಎಂಎಗಾಗಿ ಸೆಪ್ಟಂಬರ್ 2017ರಲ್ಲಿ ಟೆಂಡರುಗಳನ್ನು ಕರೆಯುವಲ್ಲಿ ಪರಿಣಮಿಸಿದ್ದಿತು ಎಂಬುದಾಗಿ ಬೆಸ್ಕಾಂ ತಿಳಿಸಿತು (ಅಕ್ಟೋಬರ್ 2024). ಏಕೈಕ ಬಿಡ್ಡನ್ನು ಸ್ವೀಕರಿಸಲಾದ ಕಾರಣ ಅಕ್ಟೋಬರ್ 2017ರಲ್ಲಿ ಬಿಡ್ಡನ್ನು ಕೈಬಿಡಲಾಗಿದ್ದಿತು, ಈ ಕಾರಣದಿಂದಾಗಿ ಪಿಎಂಎ ಹೊರತಾಗಿ ಮುಂದುವರಿಯುವ ತೀರ್ಮಾನವನ್ನು ತೆಗೆದುಕೊಳ್ಳಲಾಗಿದ್ದಿತು ಎಂಬುದಾಗಿಯೂ ಕಂಪನಿಯು ತಿಳಿಸಿತು. ಈ ***ಹಿಂದಿನ ಕಂಡಿಕೆ 3.11.1*** ರಲ್ಲಿ ವಿವರಿಸಲಾಗಿರುವಂತೆ ಅಕ್ಟೋಬರ್ 2018ರ ನಂತರ ಗಮನಾರ್ಹವಾದಂತಹ ವಿಳಂಬಗಳು ಸಂಭವಿಸಿದ್ದಿತಾದ್ದರಿಂದ, ಉತ್ತರವು ಒಪ್ಪುವಂತಿರುವುದಿಲ್ಲ.

### *3.11.3 ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದುದು ಮತ್ತು ಉದ್ದೇಶಗಳು ಈಡೇರಿರದಿದ್ದುದು*

ಕಾಮಗಾರಿಯನ್ನು ಡಿಡಬ್ಲ್ಯುಎ ನೀಡಿದ ದಿನಾಂಕದಿಂದ (ಮಾರ್ಚ್ 2020) 24 ತಿಂಗಳುಗಳ ಒಳಗೆ ಪೂರ್ಣಗೊಳಿಸಬೇಕಿದ್ದಿತು. ಕೋವಿಡ್–19 ಸಾಂಕ್ರಾಮಿಕದ ಪ್ರಭಾವವನ್ನು ಪರಿಗಣಿಸಿದಂತೆ ಡಿಡಬ್ಲ್ಯುಎಗೆ ಒಂದು ತಿದ್ದುಪಡಿಯನ್ನು ತರಲಾಯಿತು, (ಜೂನ್ 2021) ಅದರಂತೆ ಪ್ರಾರಂಭಿಸುವಿಕೆ ದಿನಾಂಕವನ್ನು ಜುಲೈ 2020ಕ್ಕೆ ಬದಲಾಯಿಸಲಾಯಿತು, ಅದರಿಂದಾಗಿ ಐಪಿಡಿಎಸ್ ಅಡಿಯಲ್ಲಿನ ಪಟ್ಟಣಗಳಿಗೆ ಪೂರ್ಣಗೊಳ್ಳುವಿಕೆಯ ನಿಗದಿತ ದಿನಾಂಕವನ್ನು ಡಿಸೆಂಬರ್ 2021ಕ್ಕೆ ಹಾಗೂ ಆರ್‌ಎಪಿಡಿಆರ್‌ಪಿ ಪಟ್ಟಣಗಳಿಗೆ ಜುಲೈ 2022ಕ್ಕೆ ವಿಸ್ತರಿಸಲಾಗಿದ್ದಿತು.

---

[73] ಒಟ್ಟಾರೆ ಮೇಲ್ದರ್ಜೆಗೇರಿಸಿರುವ ಭಾಗಗಳು:

ಎ. **ಯಂತ್ರಾಂಶ ಅನ್ವಯಗಳನ್ನು ಮೇಲ್ದರ್ಜೆಗೇರಿಸುವುದು:** ಪ್ರಸ್ತುತ ಇರುವಂಥ ಮೂಲಸೌಕರ್ಯಗಳನ್ನು ಬದಲಾಯಿಸುವ ಮೂಲಕ ಹೊಸ ಸರ್ವರುಗಳ ಸಂಪೂರ್ಣ ಸೆಟ್ಟು, ಜಾಲತಾಣ (ನೆಟ್‌ವರ್ಕ್) ಮತ್ತು ಇತರೆ ಯಂತ್ರಾಂಶ ಅನ್ವಯಗಳನ್ನು ಸರಬರಾಜು ಮಾಡುವುದು/ಸ್ಥಾಪಿಸುವುದು/ಕಾರ್ಯೋದ್ಯುಕ್ತಗೊಳಿಸುವುದು.

ಬಿ. **ಮೇಲ್ದರ್ಜೆಗೇರಿಸಿರುವ ತಂತ್ರಾಂಶ ಅನ್ವಯ:** ಪ್ರಸ್ತುತ ಇರುವಂತಹ ತಂತ್ರಾಂಶ ಅನ್ವಯ ಉತ್ಪನ್ನಗಳನ್ನು ಮೇಲ್ದರ್ಜೆಗೇರಿಸುವುದು ಅಥವಾ ಇತರೆ ಸೂಕ್ತ ತಂತ್ರಾಂಶ ಅನ್ವಯದಿಂದ ಬದಲಾಯಿಸುವುದು.

[74] ಡಿಸಿ–ಡಿಆರ್‌ಸಿ ಮೂಲಸೌಕರ್ಯ ಭಾಗದ ಮೌಲ್ಯವು ₹ 98.00 ಕೋಟಿ, ಎಫ್‌ಎಂಎಸ್ 16 ಕೋಟಿ ಡಿಸಿ–ಡಿಆರ್‌ಸಿಗೆ ಒಟ್ಟು ಅಂದಾಜು ವೆಚ್ಚ ₹ 114 ಕೋಟಿ.

[75] ಇತರೆ ಭಾಗಗಳು – ಐಪಿಡಿಎಸ್ ಪಟ್ಟಣಗಳಲ್ಲಿ ಮಾಹಿತಿ ತಂತ್ರಜ್ಞಾನ ಮೂಲಸೌಕರ್ಯ (ಸ್ವಿಚ್ಚುಗಳು, ರೂಟರುಗಳು, ಸ್ಥಳದಲ್ಲಿಯೇ ಬಿಲ್ಲುಗಳನ್ನು ನೀಡುವ ಯಂತ್ರಗಳು, ವರ್ಕ್‌ಸ್ಟೇಷನ್ನುಗಳು, ಇತ್ಯಾದಿ) ಐಪಿಡಿಎಸ್ ಪಟ್ಟಣಗಳಲ್ಲಿ ಜಿಐಎಸ್ ಸಮೀಕ್ಷೆ, ಐಪಿಡಿಎಸ್ ಪಟ್ಟಣಗಳಲ್ಲಿ ಮೀಟರುಗಳು ಮತ್ತು ಮೋಡೆಮ್‌ಗಳನ್ನು ಅಳವಡಿಸುವುದು, ಇತ್ಯಾದಿ.

[76] ವಿಸಕಂಗಳು ಭರಿಸಬೇಕಾದ ವರಮಾನ ವೆಚ್ಚಗಳು – ಅನುದಾನಕ್ಕೆ ಅರ್ಹತೆ ಹೊಂದಿರುವುದಿಲ್ಲ.

ಪಿಎಫ್‌ಸಿಯಿಂದ ಅನುದಾನ ಪಡೆದುಕೊಳ್ಳುವ ಉದ್ದೇಶಕ್ಕಾಗಿ, ಬೆಸ್ಕಾಂ ಕಾಮಗಾರಿಯು ಡಿಸೆಂಬರ್ 2021ರಲ್ಲಿ ಪೂರ್ಣಗೊಂಡಿರುವುದಾಗಿ ಘೋಷಿಸಿದ್ದಿತು (ಮಾರ್ಚ್ 2022).ಆದಾಗ್ಯೂ, ಕಾಮಗಾರಿಯು ಇನ್ನೂ ಪೂರ್ಣಗೊಂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (ಮೇ 2024). ತಂತ್ರಾಂಶ ಅನ್ವಯ ಭಾಗಗಳ ಸರಬರಾಜಿಗಾಗಿ ಪ್ರಸ್ತಾಪಿತ ಮೂಲ ಉಪಕರಣ ತಯಾರಕರಿಂದ[77] ಬೆಂಬಲದ ಕೊರತೆಯು ವಿಳಂಬಕ್ಕೆ ಕಾರಣವಾಗಿದ್ದಿತು. ಬೆಸ್ಕಾಂ ಕಾಮಗಾರಿಯ ಮೇಲೆ ₹ 70.82 ಕೋಟಿ ಮೊತ್ತವನ್ನು ಭರಿಸಿದ್ದಿತಾದರೂ (ಸೆಪ್ಟೆಂಬರ್ 2024), ಅದು ಅಂತಹ ವೆಚ್ಚದಿಂದ ಯಾವುದೇ ಪ್ರಯೋಜನಗಳನ್ನು ಪಡೆದುಕೊಂಡಿರಲಿಲ್ಲ ಹಾಗೂ ಡಿಡಬ್ಲ್ಯುಎ ಕಾಮಗಾರಿಯನ್ನು ಪೂರ್ಣಗೊಳಿಸದಿರುವುದಕ್ಕಾಗಿ, ಸಮಾಪನ ನಷ್ಟಗಳನ್ನು ವಿಧಿಸುವುದಕ್ಕೆ ಅನುವುಗಳನ್ನು ಒಳಗೊಂಡಿದ್ದಿತಾದರೂ, ಬೆಸ್ಕಾಂ ಮೆ. ಇನ್‌ಫೈನೈಟ್ ಕಂಪ್ಯೂಟರ್ಸ್, ಇವರ ಮೇಲೆ ಯಾವುದೇ ದಂಡವನ್ನು ವಿಧಿಸಿರಲಿಲ್ಲ.

ಸಮಾಪನ ನಷ್ಟಗಳನ್ನು ವಿಧಿಸುವ ಸಲುವಾಗಿ ಚರ್ಚಿಸಲು ಹಾಗೂ ಆ ನಿಟ್ಟಿನಲ್ಲಿ ಅಂತಿಮ ತೀರ್ಮಾನಕ್ಕೆ ಬರಲು ದಂಡ ವಿಧಿಸುವಿಕೆ ಸಮಿತಿಯನ್ನು ಮೇ 2023ರಲ್ಲಿ ರಚಿಸಲಾಗಿರುವುದು ಎಂಬುದಾಗಿ ಬೆಸ್ಕಾಂ ಉತ್ತರಿಸಿತು (ಅಕ್ಟೋಬರ್ 2024). ಸಮಾಪನ ನಷ್ಟಗಳ ವಸೂಲಾತಿಯನ್ನು ಸಮಿತಿಯ ತೀರ್ಮಾನ ಹಾಗೂ ನಿರ್ದೇಶಕರುಗಳ ಮಂಡಳಿಯ ಅನುಮೋದನೆಯ ಆಧಾರದ ಮೇರೆಗೆ ಜಾರಿಗೆ ತರಲಾಗುವುದು ಎಂಬುದಾಗಿಯೂ ಬೆಸ್ಕಾಂ ತಿಳಿಸಿರುವುದು.

### *3.11.4 ವೆಚ್ಚಗಳಲ್ಲಿ ಹೆಚ್ಚಳಗೊಂಡಿದ್ದುದು ಹಾಗೂ ಹೆಚ್ಚುವರಿ ಸಾಲಕ್ಕಾಗಿ ಅಗತ್ಯತೆಯುಂಟಾದುದು*

ಬೆಸ್ಕಾಂ ಮಾರ್ಗಸೂಚಿಗಳಲ್ಲಿ ಚಿಂತಿಸಲಾಗಿದ್ದಂತೆ ಐಪಿಡಿಎಸ್ ಅಡಿಯಲ್ಲಿನ ಪಟ್ಟಣಗಳ ಹೆಚ್ಚಳಗೊಳಿಸಲ್ಪಟ್ಟಿರುವ ಮಾಹಿತಿ ತಂತ್ರಜ್ಞಾನ ಅನುಕೂಲತೆಯನ್ನು ಸಾಧ್ಯಗೊಳಿಸುವಿಕೆಯನ್ನು ಕಾರ್ಯಗತಗೊಳಿಸುವಿಕೆಯ ಕಾರ್ಯಸಾಧ್ಯತೆಯನ್ನು ಮೌಲ್ಯಮಾಪನ ಮಾಡುವ ಸಲುವಾಗಿ ಯಾವುದೇ ಅಧ್ಯಯನವನ್ನು ನಡೆಸಿರಲಿಲ್ಲ. ಇದರಿಂದಾಗಿ ಡಿಸಿ–ಡಿಆರ್‌ಸಿ ನವೀಕರಣವಿಲ್ಲದೆ ಆರಂಭಿಕ ಡಿಪಿಆರ್ ಸಿದ್ಧಪಡಿಸಲಾಯಿತು. ಪರಿಷ್ಕೃತ ಸವಿವರ ಯೋಜನಾ ವರದಿಯಲ್ಲಿನ ವೆಚ್ಚವು ಡಿಸಿ–ಡಿಆರ್‌ಸಿಯ ಒಟ್ಟಾರೆಯಾಗಿ ನವೀಕರಣವನ್ನು ಒಳಗೊಂಡಿದ್ದಿತು ಹಾಗೂ ಅಂತಹ ವೆಚ್ಚವು ಉನ್ನತ ಮಟ್ಟದಲ್ಲಿದ್ದಿತು ಹಾಗೂ ಹಣಕಾಸು ಬದ್ಧತೆಗಳನ್ನು ಪೂರೈಸುವ ಸಲುವಾಗಿ ಬೆಸ್ಕಾಂ ಪಿಎಫ್‌ಸಿ ಮಂಜೂರು ಮಾಡಿದ್ದ ಸಾಲದ ಭಾಗವನ್ನು ಮೀರಿದಂತೆ ಸಾಲಗಳನ್ನು ತೆಗೆದುಕೊಳ್ಳಬೇಕಾಯಿತು. ಡಿಸಿ/ಡಿಆರ್‌ಸಿಯ ಕಾರ್ಯಗತಗೊಳಿಸುವಿಕೆಯ ಅನುಮೋದಿತ ವೆಚ್ಚ ಹಾಗೂ ಗುತ್ತಿಗೆದಾರರಿಗೆ ಕಾರ್ಯಗತಗೊಳಿಸುವಿಕೆಗಾಗಿ ನೀಡಲಾಗಿದ್ದ ವೆಚ್ಚದ ನಡುವೆ ಒಂದು ಹೋಲಿಕೆಯನ್ನು ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಲಾಗಿರುವುದು:

**ರೇಖಾಚಿತ್ರ ಸಂಖ್ಯೆ 3.3: ಡಿಸಿ/ಡಿಆರ್‌ಸಿಯ[78] ಅನುಮೋದಿತ ಮತ್ತು ವಾಸ್ತವಿಕ ವೆಚ್ಚಗಳ ನಡುವೆ ಹೋಲಿಕೆ**




---

[77] ಮೆ. ಫ್ಲ್ಯುನ್ಟ್‌ಗ್ರಿಡ್; ಗುತ್ತಿಗೆದಾರರ ಕೋರಿಕೆಯ ಮೇರೆಗೆ ಅದನ್ನು ಮೆ. ಒರಾಕಲ್‌ಗೆ ಬದಲಾಯಿಸಲಾಯಿತು.

[78] ವಾಸ್ತವಿಕವಾಗಿ ಸ್ವೀಕರಿಸಲಾಗಿದ್ದ ಅನುದಾನಗಳು, ಆರ್‌ಎಪಿಡಿಆರ್‌ಪಿ ಪ್ರತಿಯಾಗಿ ಹೊಂದಾಣಿಕೆ ಮಾಡಿರುವುದನ್ನು ಹೊರತುಪಡಿಸಿದಂತೆ.

### 3.11.5 ಕೋ-ಹೋಸ್ಟಿಂಗ್ ಶುಲ್ಕಗಳ ಮೇಲೆ ಭರಿಸಲಾಗಿದ್ದ ಹೆಚ್ಚುವರಿ ವೆಚ್ಚ

ಐಪಿಡಿಎಸ್ ಮಾರ್ಗಸೂಚಿಗಳು ಪ್ರಸ್ತುತ ಇದ್ದಂತಹ ಆರ್‌ಎಪಿಡಿಆರ್‌ಪಿ ಯೋಜನೆಯನ್ನು ಐಪಿಡಿಎಸ್ ಒಳಸೇರ್ಪಡೆಗೊಳಿಸಿಕೊಳ್ಳುವ ಸಲುವಾಗಿ ಹಾಗೂ ಅದನ್ನು ವಿತರಣಾ ವಲಯದ ಮಾಹಿತಿ ತಂತ್ರಜ್ಞಾನ ಅನುಕೂಲತೆಯನ್ನು ಸಾಧ್ಯಗೊಳಿಸುವಿಕೆಗಾಗಿ ಐಪಿಡಿಎಸ್ ಒಂದು ಪ್ರತ್ಯೇಕ ಭಾಗ ಎಂಬುದಾಗಿ ಮುಂದುವರೆಸಿಕೊಂಡು ಹೋಗಲು ಅನುವು ಮಾಡಿದ್ದವು. ಆರ್‌ಎಪಿಡಿಆರ್‌ಪಿ ಅಡಿಯಲ್ಲಿ, ಬೆಸ್ಕಾಂ ಮೆ. ಸಿಫಿ ಇನ್‌ಫೈನೈಟ್ ಸ್ಪೇಸಸ್ ಲಿಮಿಟೆಡ್, ಇವರೊಂದಿಗೆ ಬೆಂಗಳೂರಿನಲ್ಲಿ ಡಿಸಿಗಾಗಿ ಸಹ-ಮೇಲ್ವಿಚಾರಣೆಯ/ ನಿರ್ವಹಣೆಯ (ಕೋ-ಹೋಸ್ಟಿಂಗ್)[79] ಅನುಕೂಲತೆಯನ್ನು ಹೊಂದಿದ್ದಿತು (ಮಾರ್ಚ್ 2011ರಿಂದ ಕಾರ್ಯಾಚರಣೆಗೊಂಡಿದ್ದಿತು). ಡಿಆರ್‌ಸಿಯು ಚೆನ್ನೈನಲ್ಲಿದ್ದಿತು ಹಾಗೂ ಮೆ. ನೆಕ್ಸ್ಟ್ರ ಡಾಟಾ ಲಿಮಿಟೆಡ್ ಇವರೊಂದಿಗೆ ಸಹ ನಿರ್ವಹಣೆ / ಮೇಲ್ವಿಚಾರಣೆ ಮಾಡಲಾಗುತ್ತಿದ್ದಿತು (ಅಕ್ಟೋಬರ್ 2011ರಿಂದ ಕಾರ್ಯಾಚರಣೆಗೊಂಡಿದ್ದಿತು). ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸಿದನಂತರ ಡಿಸಿಯನ್ನು ಬೆಂಗಳೂರಿನ ಬೆಸ್ಕಾಂ ಕಟ್ಟಡದಲ್ಲಿ ಇರಿಸಬೇಕಿದ್ದಿತು ಹಾಗೂ ಡಿಆರ್‌ಸಿಯನ್ನು ಕ್ಲೌಡ್‌ನಲ್ಲಿ ನಡೆಸಬೇಕಿದ್ದಿತು (ಹೋಸ್ಟ್) (ವಿದ್ಯುನ್ಮಾನಗಳು ಮತ್ತು ಮಾಹಿತಿ ತಂತ್ರಜ್ಞಾನ ಮಂತ್ರಾಲಯದಿಂದ (ಎಂಇಐಟಿವೈ) ಅನುಮೋದಿತಗೊಂಡಿರುವುದು). ಐಪಿಡಿಎಸ್ ಅಡಿಯಲ್ಲಿನ ಡಿಸಿ-ಡಿಆರ್‌ಸಿಯನ್ನು ಕಾರ್ಯೋದ್ಯುಕ್ತಗೊಳಿಸಿದನಂತರ ಆರ್‌ಎಪಿಡಿಆರ್‌ಪಿ ಅಡಿಯಲ್ಲಿನ ಡಿಸಿ-ಡಿಆರ್‌ಸಿ ಹಾಗೂ ಸೌಲಭ್ಯ ನಿರ್ವಹಣಾ ಸೇವಾ (ಎಫ್‌ಎಂಎಸ್)[80] ಸಹ-ನಿರ್ವಹಣೆ ಗುತ್ತಿಗೆಗಳನ್ನು ಮುಕ್ತಾಯಗೊಳಿಸಬೇಕಿದ್ದಿತು.

ಡಿಸಿ ಕಾಮಗಾರಿಯನ್ನು ನಿರ್ದಿಷ್ಟ ಸಮಯದ ಒಳಗೆ (ಜುಲೈ 2022) ಪೂರ್ಣಗೊಳಿಸದಿದ್ದ ಕಾರಣ, ಆರ್‌ಎಪಿಡಿಆರ್‌ಪಿ ಡಿಸಿಗಾಗಿ ಸಹ-ನಿರ್ವಹಣೆಯ ಅನುಕೂಲತೆಯ ಎಫ್‌ಎಮ್‌ಎಸ್ ಗುತ್ತಿಗೆಯನ್ನು ಈ ಕೆಳಗೆ ವಿವರಿಸಿರುವಂತೆ ಹೆಚ್ಚುವರಿ ವೆಚ್ಚವನ್ನು ಭರಿಸುವ ಮೂಲಕ ಪ್ರಸಕ್ತ ಇದ್ದಂತಹ ಗುತ್ತಿಗೆದಾರರುಗಳೊಂದಿಗೆ ನವೀಕರಿಸಲಾಗಿದ್ದಿತು:

**ಕೋಷ್ಟಕ ಸಂಖ್ಯೆ 3.9: ಡಿಸಿ/ಡಿಆರ್‌ಸಿಯ ಸಹ-ನಿರ್ವಹಣೆಯ ಅನುಕೂಲತೆ ಹಾಗೂ ಎಫ್‌ಎಂಎಸ್ ಗುತ್ತಿಗೆಗಳ ಮೇಲೆ ಭರಿಸಲಾಗಿದ್ದ ಹೆಚ್ಚುವರಿ ವೆಚ್ಚ**

| ಕ್ರಮ ಸಂಖ್ಯೆ | ಏಜೆನ್ಸಿ | ಗುತ್ತಿಗೆ ಮಾದರಿ | ಗುತ್ತಿಗೆ ಅವಧಿ (ಗುತ್ತಿಗೆಗಳನ್ನು ಐಪಿಡಿಎಸ್ ಮುಕ್ತಾಯ ಗೊಳ್ಳುವಿಕೆ ದಿನಾಂಕ ಮತ್ತು ಅದನ್ನು ಮೀರಿದ ಅವಧಿಯನ್ನು ಹಾದು ಹೋಗಿರುವುದು) | ವೆಚ್ಚ (₹ ಕೋಟಿಗಳಲ್ಲಿ) | ಐಪಿಡಿಎಸ್ ಡಿಸಿ – ಡಿಆರ್‌ಸಿ ಪೂರ್ಣಗೊಳ್ಳುವಿಕೆ ದಿನಾಂಕವನ್ನು (ಜುಲೈ 2022) ಮೀರಿದ ಅವಧಿ | ಐಪಿಡಿಎಸ್ ಡಿಸಿ-ಡಿಆರ್‌ಸಿ ಪೂರ್ಣಗೊಳ್ಳುವಿಕೆ ದಿನಾಂಕವನ್ನು ಮೀರಿದ ಅವಧಿಗೆ ವೆಚ್ಚ (₹ ಕೋಟಿಗಳಲ್ಲಿ)[81] |
|---|---|---|---|---|---|---|
| 1 | ಮೆ. ಇನ್ ಫೈನೈಟ್ ಕಂಪ್ಯೂಟರ್ ಸಲ್ಯೂಷನ್ಸ್ | ಅನುಕೂಲತೆ ನಿರ್ವಹಣಾ ಸೇವೆಗಳು | 01.05.2022 ರಿಂದ 31.10.2022 | 10.78 | 01.08.2022 ರಿಂದ 31.10.2022 | 5.39 |
| | | | 01.11.2022 ರಿಂದ 31.03.2023 | 8.98 | 01.11.2022 ರಿಂದ 31.03.2023 | 8.98 |
| 2 | ಮೆ. ಸಿಫಿ ಇನ್‌ಫೈನೈಟ್ ಸ್ಪೇಸಸ್ ಲಿಮಿಟೆಡ್ | ಮಾಹಿತಿ ಕೇಂದ್ರ | 16.12.2021 ರಿಂದ 15.12.2022 | 3.50 | 01.08.2022 ರಿಂದ 15.12.2022 | 1.30 |
| | | | 16.12.2022 ರಿಂದ 15.06.2023 | 1.75 | 16.12.2022 ರಿಂದ 15.06.2023 | 1.75 |
| | ಒಟ್ಟು | | | | | **17.42** |

*ಮೂಲ :ಬೆಸ್ಕಾಂ ಒದಗಿಸಿದ ಮಾಹಿತಿಯನ್ನು ಲೆಕ್ಕಪರಿಶೋಧನೆಯು ಸಂಕಲಿಸಿರುವುದು*

[79] ಸಹ-ನಿರ್ವಹಣೆ ಮತ್ತು ಮೇಲ್ವಿಚಾರಣೆ (ಕೋ-ಹೋಸ್ಟಿಂಗ್): ರಿಯಲ್ ಎಸ್ಟೇಟ್ ಪ್ರದೇಶವನ್ನು ಒದಗಿಸುವುದು, ಅವಿರತ ವಿದ್ಯುತ್ ಸರಬರಾಜು, ಕಟ್ಟಡ ನಿರ್ವಹಣಾ ವ್ಯವಸ್ಥೆಯನ್ನು ಮತ್ತು ಭದ್ರತಾ ವ್ಯವಸ್ಥೆಯನ್ನು ಸ್ಥಾಪಿಸುವುದು ಹಾಗೂ ನಿರ್ವಹಿಸಿಕೊಂಡು ಹೋಗುವುದು, ಆದರೆ ಸರ್ವರುಗಳು ಬೆಸ್ಕಾಂ ಮಾಲಿಕತ್ವದಲ್ಲಿರುವುದು.

[80] ಡಿಡಬ್ಲ್ಯೂಎ ಪ್ರಕಾರ, ಸೌಲಭ್ಯ ನಿರ್ವಹಣಾ ಸೇವಾ ಪೂರೈಕೆದಾರರು ಸರ್ವರ್‌ಗಳು, ನೆಟ್‌ವರ್ಕ್ ಮತ್ತು ಸಾಫ್ಟ್‌ವೇರ್ ಘಟಕಗಳಂತಹ ಐಟಿ ಹಾರ್ಡ್‌ವೇರ್ ಉಪಕರಣಗಳ ತೊಂದರೆ ನಿವಾರಣೆಯ ಜೊತೆಗೆ ಎಲ್ಲಾ ಐಟಿ ಅಪ್ಲಿಕೇಶನ್‌ಗಳ ಸುಗಮ ಚಾಲನೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.

[81] ಹೊಸ ಮಾಹಿತಿ ಕೇಂದ್ರ ಮತ್ತು ವಿಪತ್ತುಗಳಿಂದ ಹೊರಬರುವಿಕೆ ಕೇಂದ್ರವು ಕಾರ್ಯಾಚರಣೆಗೊಳ್ಳಲು ನಿಗದಿತಗೊಂಡ ದಿನಾಂಕ 1 ಆಗಸ್ಟ್ 2022ರಿಂದ ಪ್ರಮಾಣಾನುಗುಣವಾದಂತಹ ವೆಚ್ಚ.

ಈ ರೀತಿಯಾಗಿ ಐಪಿಡಿಎಸ್ ಅಡಿಯಲ್ಲಿ ಡಿಸಿ/ಡಿಆರ್‌ಸಿ ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದುದು ₹ .17.42 ಕೋಟಿ ಮೊತ್ತದಷ್ಟು ಹೆಚ್ಚುವರಿ ವೆಚ್ಚವಾಗುವಲ್ಲಿ ಪರಿಣಮಿಸಿದ್ದಿತು.

ಆಕಸ್ಮಿಕವಾಗಿ, ಆರ್‌ಎಪಿಡಿಆರ್‌ಪಿ ವ್ಯವಸ್ಥೆಗಾಗಿ (ಪ್ರಸ್ತುತ ಇರುವಂತಹ ವ್ಯವಸ್ಥೆ) ಸೌಲಭ್ಯ ನಿರ್ವಹಣಾ ಸೇವೆಗಳನ್ನು ಮೆ. ಇನ್ಫಿನಿಟ್ ಕಂಪ್ಯುಟರ್ ಸಲ್ಯೂಷನ್ಸ್, ಇವರು ಮಾಡುತ್ತಿದ್ದರು, ಇವರಿಗೆ ಐಪಿಡಿಎಸ್ ಅಡಿಯಲ್ಲಿಯೂ ಡಿಸಿ/ಡಿಆರ್‌ಸಿ ರೆಫ್ರೆಷ್ ಯನ್ನೂ ಸಹ ನೀಡಲಾಗಿದ್ದಿತು. ಆದ್ದರಿಂದ ಡಿಸಿ–ಡಿಆರ್‌ಸಿ ಪೂರ್ಣಗೊಳ್ಳುವಲ್ಲಿನ ವಿಳಂಬ ಎಂದರೆ ಹಳೆಯ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗಿರುವುದು ಹಾಗೂ ತತ್ಪರಿಣಾಮವಾಗಿ ಅದೇ ಹಳೆಯ ವ್ಯವಸ್ಥೆಯ ಎಫ್‌ಎಮ್‌ಎಸ್‌ಗೆ ಮೆ. ಇನ್ಫಿನಿಟಿ ಕಂಪ್ಯುಟರ್ ಸಲ್ಯೂಷನ್ಸ್, ಇವರಿಗೆ ಪಾವತಿಯನ್ನು ಮಾಡಿರುವುದು, ಇದು ಈ ಸಂಸ್ಥೆಗೆ ನ್ಯಾಯಸಮ್ಮತವಲ್ಲದ ಅನುಕೂಲತೆಯನ್ನು ಮಾಡಿಕೊಡುವಲ್ಲಿ ಪರಿಣಮಿಸಿದ್ದಿತು.

ಮುಂದುವರೆದು, ಮೆ. ಇನ್ಫಿನಿಟಿ ಕಂಪ್ಯುಟರ್ ಸಲ್ಯೂಷನ್ಸ್, ಇವರು ಐಪಿಡಿಎಸ್ ಅಡಿಯಲ್ಲಿ ಡಿಸಿ–ಡಿಆರ್‌ಸಿಗಾಗಿ ವರ್ಷ ಒಂದಕ್ಕೆ ₹ 3.80 ಕೋಟಿ ಮೊತ್ತವನ್ನು ವಾರ್ಷಿಕ ಎಫ್‌ಎಂಎಸ್ ವೆಚ್ಚವಾಗಿ ಸೇರಿಸಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು ಹಳೆಯ ವ್ಯವಸ್ಥೆಯ[82] ಎಫ್‌ಎಂಎಸ್ ವೆಚ್ಚಕ್ಕಿಂತ ಸಾಕಷ್ಟು ಕಡಿಮೆ ಮೌಲ್ಯದಲ್ಲಿ ಆಗಿದ್ದಿತು, ಅದನ್ನು ಡಿಸಿ/ಡಿಆರ್‌ಸಿಯ ರೆಫ್ರೆಷ್ ಅನುಪಸ್ಥಿತಿಯಲ್ಲಿ ಜುಲೈ 2022ರಿಂದ ಮುಂದಕ್ಕೂ ಮುಂದುವರೆಸಿಕೊಂಡು ಹೋಗಬೇಕಿದ್ದಿತು.

ಮಾಹಿತಿ ತಂತ್ರಜ್ಞಾನ ಅನ್ವಯಗಳನ್ನು 26 ನವಂಬರ್ 2023ರಂದು ಎಚ್‌ಎಸ್‌ಆರ್ ಮಾಹಿತಿ ಕೇಂದ್ರದಿಂದ ಹೊರಬಿಡಲಾಗಿದ್ದಿತು / ಬಿಡುಗಡೆಗೊಳಿಸಲಾಗಿದ್ದಿತು ಎಂಬುದಾಗಿ ಬೆಸ್ಕಾಂ ತಿಳಿಸಿತು. ಪ್ರಧಾನ ಮಾಡ್ಯೂಲುಗಳ ಮೇಲ್ದರ್ಜೆಗೇರಿಸಲ್ಪಟ್ಟಿರುವ ಅವತರಣಿಕೆಗಳನ್ನು 20 ಮಾರ್ಚ್ 2024ರಂದು ಹೊರಬಿಡಲಾಗಿದ್ದಿತು / ಬಿಡುಗಡೆಗೊಳಿಸಲಾಗಿದ್ದಿತು ಹಾಗೂ ಸಹ–ನಿರ್ವಹಣೆ ಗುತ್ತಿಗೆಯನ್ನು ಮಾರ್ಚ್ 2024ರಲ್ಲಿ ಅಂತ್ಯಗೊಳಿಸಲಾಯಿತು. ಸಹ–ನಿರ್ವಹಣೆ ಸೈಫಿಯೊಂದಿಗಿನ ಗುತ್ತಿಗೆಯನ್ನು ಮಾರ್ಚ್ 2024ರಲ್ಲಿ ಅಂತ್ಯಗೊಳಿಸಲಾಯಿತಾದರೂ, ಮಾಹಿತಿ ತಂತ್ರಜ್ಞಾನ ಹಂತ IIರ ಕಾಮಗಾರಿಗಳನ್ನು ಸಮಯೋಚಿತವಾಗಿ ಪೂರ್ಣಗೊಳಿಸಿರದ ಕಾರಣ ಮೇಲೆ ತಿಳಿಸಿರುವಂತೆ ಕಂಪನಿಯು ಹೆಚ್ಚುವರಿ ವೆಚ್ಚಗಳನ್ನು ಭರಿಸಿರುವುದು.

### *3.11.6 ಡಿಸಿ/ಡಿಆರ್‌ಸಿಯನ್ನು ಕಾರ್ಯಗತಗೊಳಿಸುವಲ್ಲಿನ ವಿಳಂಬದ ಕಾರಣ ಜಿಐಎಸ್ ಮಾಹಿತಿಯನ್ನು ಉಪಯೋಗಿಸಿಕೊಳ್ಳದಿದ್ದುದು*

ಮಾಹಿತಿ ತಂತ್ರಜ್ಞಾನ ಹಂತ IIರ ಭಾಗಗಳಲ್ಲಿ ಒಂದು ಎಂದರೆ ಗ್ಲೋಬಲ್ ಪೊಸಿಷನಿಂಗ್ ಸಿಸ್ಟಮ್ (ಜಿಪಿಎಸ್) ಆಧಾರಿತ ಆಸ್ತಿಗಳ ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್) ಸಮೀಕ್ಷೆ ಹಾಗೂ ಅವುಗಳನ್ನು ಡಿಸಿ/ಡಿಆರ್‌ಸಿಯೊಂದಿಗೆ ಸಮಗ್ರೀಕರಿಸುವುದು. ಜಿಐಎಸ್ ಆಧಾರಿತ ಆಸ್ತಿಗಳನ್ನು ಗುರುತಿಸುವಿಕೆ, ಸಮೀಕ್ಷೆ ಮತ್ತು ಡಿಜಿಟಲಿಕರಿಸುವುದು ಮತ್ತು ಐಪಿಡಿಎಸ್ ಅಡಿಯಲ್ಲಿನ 124 ಪಟ್ಟಣಗಳಲ್ಲಿ ಗ್ರಾಹಕ ಸೂಚ್ಯಾಂಕ ಮಾಹಿತಿಯನ್ನು ಸಮಗ್ರೀಕರಿಸುವ ಕಾಮಗಾರಿಗಾಗಿ ಸೆಪ್ಟಂಬರ್ 2019ರಲ್ಲಿ ಎಲ್ಲಾ ವಿಸಕಂಗಳ ಪರವಾಗಿ ಮೆ. ಸೈಬರ್‌ಸ್ವಿಫ್ಟ್ ಇನ್ಫೋಟೆಕ್ ಪ್ರೈವೇಟ್ ಲಿಮಿಟೆಡ್, ಕೋಲ್ಕಟ, ಇವರಿಗೆ ₹ 5.69 ಕೋಟಿ ಮೊತ್ತಕ್ಕೆ ಆಸಕ್ತಿ ಪತ್ರವನ್ನು (ಎಲ್‌ಒಐ) ಬೆಸ್ಕಾಂ ನೀಡಿತು. ಸಂಬಂಧಿತ ವಿಸಕಂಗಳು ಮೇಲೆ ತಿಳಿಸಲಾದ ಸಂಸ್ಥೆಗೆ ಮಾರ್ಚ್ 2020ರಲ್ಲಿ ಪ್ರತ್ಯೇಕ ಡಿಡಬ್ಲ್ಯುಎ ನೀಡಿದವು ಹಾಗೂ ಮೇಲೆ ತಿಳಿಸಲಾದ ಸಂಸ್ಥೆಗೆ ಮೇ 2023ರಲ್ಲಿ ₹ 3.55 ಕೋಟಿ ಮೊತ್ತವನ್ನು ಪಾವತಿಸಲಾಗಿದ್ದಿತು, ಡಿಸಿ/ ಡಿಆರ್‌ಸಿ ಅಪೂರ್ಣವಾಗಿದ್ದುದರಿಂದ ಮೆ. ಸೈಬರ್‌ಸ್ವಿಫ್ಟ್, ಇವರು ಹೊರತೆಗೆದಿದ್ದ ಜಿಐಎಸ್ ಮಾಹಿತಿಯನ್ನು ಉಪಯೋಗಕ್ಕೆ ಬಿಡಲು ಸಾಧ್ಯವಾಗಿರಲಿಲ್ಲ (ಸೆಪ್ಟಂಬರ್ 2024).

ಜಿಐಎಸ್ ಒಳಗೊಂಡಂತೆ ಅನ್ವಯಗಳನ್ನು ಶೀಘ್ರದಲ್ಲಿಯೇ ಬಿಡುಗಡೆಗೊಳಿಸಲಾಗುವುದು ಎಂಬುದಾಗಿ ಬೆಸ್ಕಾಂ ಉತ್ತರಿಸಿತು (ಅಕ್ಟೋಬರ್ 2024).

[82] ಕೋಷ್ಟಕ 3.9ರ ಕ್ರಮ ಸಂಖ್ಯೆ 1ರಿಂದ ಕಾಣಬಹುದಾದಂತೆ ಹನ್ನೊಂದು ತಿಂಗಳುಗಳಿಗೆ ₹ 19.76 ಕೋಟಿ.

### 3.11.7 ಮೀಟರುಗಳಿಗೆ ಮೋಡೆಮ್‌ಗಳನ್ನು ಅಳವಡಿಸುವಿಕೆ

ಮಾಹಿತಿ ತಂತ್ರಜ್ಞಾನ ಹಂತ – IIರ ಭಾಗಗಳಲ್ಲಿ ಒಂದು ಎಚ್‌ಟಿ ಬಳಕೆದಾರರುಗಳಿಗೆ, ಡಿಟಿಸಿಗಳಿಗೆ[83] ಮತ್ತು ಸೀಮಾ ಮೀಟರುಗಳಿಗೆ ಮೋಡೆಮ್ಮುಗಳನ್ನು ಅಳವಡಿಸುವುದಾಗಿದ್ದಿತು. ಬೆಸ್ಕಾಂ ಮಾಹಿತಿ ತಂತ್ರಜ್ಞಾನ ಹಂತ – IIರ ಎಲ್ಲಾ ಕಾಮಗಾರಿಗಳಿಗಾಗಿ ಇತರೆ ನಾಲ್ಕು ವಿಸಕಂಗಳ[84] ಪರವಾಗಿ ಅಲ್ಪಾವಧಿ ಟೆಂಡರುಗಳನ್ನು ಆಹ್ವಾನಿಸಿತು (ಜೂನ್ 2018). ಇದಕ್ಕೆ ಯಾವುದೇ ಪ್ರತಿಕ್ರಿಯೆ ಬರಲಿಲ್ಲವಾದ್ದರಿಂದ, ರಾಜ್ಯದಲ್ಲಿನ ಐಪಿಡಿಎಸ್ ಅಡಿಯಲ್ಲಿನ ಪಟ್ಟಣಗಳಲ್ಲಿ ಬೆಸ್ಕಾಂ ಹೊರತುಪಡಿಸಿ 104 ಪಟ್ಟಣಗಳು) ಎಚ್‌ಟಿ/ಸೀಮಾ ಮೀಟಾರುಗಳು/ಡಿಟಿಸಿಗಳು/ಫೀಡರು ಸ್ಥಾಪಕಗಳಿಗೆ ಮೋಡೆಮ್‌ಗಳ ಸರಬರಾಜು, ಸ್ಥಾಪನೆ, ಸಲ್ಯುಷನ್ಸ್ ಇಂಜಿನಿಯರಿಂಗ್ ಕಾರ್ಯೋದ್ಯುಕ್ತ ಗೊಳಿಸುವಿಕೆ ಮತ್ತು ನಿರ್ವಹಣೆಗಾಗಿ ಪರಿಷ್ಕೃತ (ಫೆಬ್ರವರಿ 2020) ಟೆಂಡರನ್ನು ₹ 6.05 ಕೋಟಿ ಮೊತ್ತಕ್ಕೆ ಆಹ್ವಾನಿಸಿತು. ಕಾಮಗಾರಿಯನ್ನು ಏಕೈಕ ಬಿಡ್ಡರು ಮೆ. ಅನಲೊಜಿಕ್ಸ್ ಟೆಕ್ ಇಂಡಿಯಾ ಲಿಮಿಟೆಡ್, ಹೈದರಾಬಾದ್, ಇವರಿಗೆ 6,406[85] ಮೋಡೆಮ್‌ಗಳ ಒಟ್ಟಾರೆ ಪರಿಮಾಣಕ್ಕೆ ₹ 5.96 ಮೊತ್ತಕ್ಕೆ ನೀಡಲಾಗಿದ್ದಿತು (ಮಾರ್ಚ್ 2020). ಡಿಡಬ್ಲ್ಯುಎ ಕಾಮಗಾರಿಯನ್ನು ಒಂಬತ್ತು ತಿಂಗಳುಗಳ ಒಳಗೆ ಪೂರ್ಣಗೊಳಿಸತಕ್ಕದ್ದು ಹಾಗೂ ನಿರ್ವಹಣಾ ಅವಧಿಯು ಬೆಸ್ಕಾಂ ಕಾರ್ಯೋದ್ಯುಕ್ತಗೊಂಡಿರುವಿಕೆಯ ದಿನಾಂಕವನ್ನು (ಗೋಲೈವ್) ಘೋಷಿಸಿದ ದಿನಾಂಕದಿಂದ 5 ವರ್ಷಗಳು ಆಗಿದ್ದಿತು.

ಡಿಸೆಂಬರ್ 2021ರಲ್ಲಿದ್ದಂತೆ (ಪೂರ್ಣಗೊಳಿಸಲು ಕಾಲಾವಧಿ ವಿಸ್ತರಿಸಲಾಗಿದ್ದ ದಿನಾಂಕ), ಮೆ. ಅನಲೊಜಿಕ್ಸ್ ಟೆಕ್ ಇಂಡಿಯಾ ಲಿಮಿಟೆಡ್, ಹೈದರಾಬಾದ್, ಇವರು ವಿಸಕಂಗಳಿಗೆ ಕೇವಲ 654[86] ಮೋಡೆಮ್‌ಗಳನ್ನು ಸರಬರಾಜು ಮಾಡಿದ್ದರು.

ಮೆಸ್ಕಾಂ (ಡಿಸೆಂಬರ್ 2025) ಮತ್ತು ಸೆಸ್ಕ್ (ಜನವರಿ 2022) ಮುಂಬರುತ್ತಿರುವಂತಹ ನವೀನ ಮತ್ತು ಸುಧಾರಿತ ವಿತರಣಾ ವಲಯ ಯೋಜನೆ (ಆರ್‌ಡಿಎಸ್‌ಎಸ್) ಅಡಿಯಲ್ಲಿ ಸ್ಮಾರ್ಟ್ ಮೀಟರುಗಳ ಅಳವಡಿಸುವಿಕೆಯನ್ನು ತಿಳಿಸಿ, ಐಪಿಡಿಎಸ್ ಹಂತ IIನ್ನು ಅಲ್ಪಾವಧಿಯಲ್ಲಿ ಮುಕ್ತಾಯಗೊಳಿಸುವಂತೆ ಕೋರಿದ್ದವು. ಅದರಂತೆಯೇ ರಾಜ್ಯ ಮಟ್ಟದ ವಿತರಣಾ ಸುಧಾರಣಾ ಸಮಿತಿಯು (ಎಸ್‌ಎಲ್‌ಡಿಆರ್‌ಸಿ) ಅದನ್ನು ಒಪ್ಪಿಕೊಂಡಿತು (ಮಾರ್ಚ್ 2022). ಈಗಾಗಲೇ ಸರಬರಾಜು ಮಾಡಲಾಗಿದ್ದ 654 ಮೋಡೆಮ್‌ಗಳಿಗೆ ಕಾಮಗಾರಿಯ ವ್ಯಾಪ್ತಿಯನ್ನು ಸೀಮಿತಗೊಳಿಸಿ ಒಂದು ಪರಿಷ್ಕೃತ ಡಿಡಬ್ಲ್ಯುಎಯನ್ನು ನೀಡಲಾಗಿದ್ದಿತು (ಮಾರ್ಚ್ 2022).

ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- ಯೋಜನೆಯನ್ನು ಕಾರ್ಯಗತಗೊಳಿಸಬೇಕಾದ ಅವಧಿಯು ಬೆಸ್ಕಾಂ ತಿಳಿಸಿದ ದಿನಾಂಕದಿಂದ 9 ತಿಂಗಳುಗಳು ಹಾಗೂ ನಿರ್ವಹಣಾ ಅವಧಿಯು ಬೆಸ್ಕಾಂನ ಕಾರ್ಯೋದ್ಯುಕ್ತಗೊಂಡಿರುವುದಾಗಿ ತಿಳಿಸುವ ದಿನಾಂಕದಿಂದ (ಗೋಲೈವ್) 5 ವರ್ಷಗಳು ಎಂಬುದಾಗಿ ಡಿಡಬ್ಲ್ಯುಎ ಷರತ್ತು 6 ನಿರ್ದಿಷ್ಟಪಡಿಸಿದ್ದಿತು. ಬೆಸ್ಕಾಂ ಡಿಡಬ್ಲ್ಯುಎಯನ್ನು ಮಾರ್ಚ್ 2020ರಲ್ಲಿ ನೀಡಿದ್ದಿತಾದರೂ, ಕಾಮಗಾರಿಯನ್ನು ಪ್ರಾರಂಭಿಸಲು ಜನವರಿ 2021ರಲ್ಲಿಯಷ್ಟೇ ತಿಳಿಸಿದ್ದಿತು, ಇದು ಕಾಮಗಾರಿಯನ್ನು ಪ್ರಾರಂಭಿಸಲು ಒಂಬತ್ತು ತಿಂಗಳುಗಳ ವಿಳಂಬವಾಗುವಲ್ಲಿ ಪರಿಣಮಿಸಿದ್ದಿತು, ಇದು ಕಾಮಗಾರಿಯನ್ನು ಕಾರ್ಯಗತಗೊಳಿಸುವಲ್ಲಿ ಸಮರ್ಪಕವಾದಂತಹ ಪೂರ್ವಭಾವಿ ಯೋಜನೆಯ ಕೊರತೆಯನ್ನು ಸೂಚಿಸುತ್ತಿದ್ದಿತು.

- ಸವಿವರ ಯೋಜನಾ ವರದಿಯನ್ನು ಜುಲೈ 2017ರಲ್ಲಿ ಅನುಮೋದಿಸಲಾಗಿದ್ದಿತಾದರೂ, ಕಂಪನಿಯು ಮೊದಲ ಟೆಂಡರನ್ನು ಆಹ್ವಾನಿಸುವ ಮೊದಲು ವಾಸ್ತವಿಕ ಅಗತ್ಯತೆಗಳನ್ನು ಸುಸ್ಪಷ್ಟಗೊಳಿಸಿಕೊಳ್ಳಲು ಅದಕ್ಕೆ ಸಾಧ್ಯವಾಗಲಿಲ್ಲವಾದ್ದರಿಂದ, ಬೆಸ್ಕಾಂ ಕಾಮಗಾರಿಯನ್ನು ಗುತ್ತಿಗೆದಾರರಿಗೆ ನೀಡಲು 31 ತಿಂಗಳುಗಳ ಗಮನಾರ್ಹವಾದಂತಹ ಸಮಯವನ್ನು

[83] ಪಿಎಫ್‌ಸಿಯಿಂದ ಸೇರ್ಪಡೆಗೊಂಡಿರುವುದು ಮತ್ತು ಅನುಮೋದಿತಗೊಂಡಿರುವುದು (ಜುಲೈ 2017)..

[84] ಸೆಸ್ಕ್, ಜೆಸ್ಕಾಂ, ಹೆಸ್ಕಾಂ ಮತ್ತು ಮೆಸ್ಕಾಂ.

[85] ಸೆಸ್ಕ್‌ಗೆ 1,882, ಜೆಸ್ಕಾಂಗೆ 1,397, ಹೆಸ್ಕಾಂಗೆ 1,310 ಹಾಗೂ ಮೆಸ್ಕಾಂಗೆ 1,817.

[86] ಸೆಸ್ಕ್‌ಗೆ 229, ಜೆಸ್ಕಾಂಗೆ ಶೂನ್ಯ, ಹೆಸ್ಕಾಂಗೆ 114 ಹಾಗೂ ಮೆಸ್ಕಾಂಗೆ 311.

ತೆಗೆದುಕೊಂಡಿದ್ದಿತು, ಇದರಿಂದ ಬಿಡ್ ದಾಖಲೆಗಳಲ್ಲಿ ಬದಲಾವಣೆಯುಂಟಾಗಿ ಮರುಟೆಂಡರ್ ಮಾಡಬೇಕಾಯಿತು. ಇದು ನಿಗದಿತ ಪೂರ್ಣಗೊಳಿಸುವಿಕೆಯ ದಿನಾಂಕದ ಒಳಗೆ ಯೋಜನೆಯನ್ನು ಕೇವಲ ಭಾಗಶ:ವಾಗಿ ಪೂರ್ಣಗೊಳಿಸುವಲ್ಲಿ ಪರಿಣಮಿಸಿದ್ದಿತು.

ವಿಳಂಬದ ಹೊರತಾಗಿಯೂ, ಕಾಮಗಾರಿಯು ಪ್ರಗತಿಯಲ್ಲಿದ್ದಿತು ಹಾಗೂ ಡಿಸೆಂಬರ್ 2021ರವರೆವಿಗೆ 654 ಮೋಡೆಮ್ಮುಗಳನ್ನು ಕಾರ್ಯೋದ್ಯುಕ್ತಗೊಳಿಸಲಾಗಿದ್ದಿತು ಎಂಬುದಾಗಿ ಬೆಸ್ಕಾಂ ತಿಳಿಸಿತು (ಅಕ್ಟೋಬರ್ 2024).

ಈ ರೀತಿಯಾಗಿ, ಅಲ್ಪಾವಧಿಯಲ್ಲಿ ಯೋಜನೆಯನ್ನು ಮುಕ್ತಾಯಗೊಳಿಸಿದ್ದುದು ₹ 3.21 ಕೋಟಿ[87] ಮೊತ್ತದಷ್ಟು ಅನುದಾನವನ್ನು ಬಿಟ್ಟುಕೊಡುವಲ್ಲಿ ಪರಿಣಮಿಸಿದ್ದಿತು ಹಾಗೂ ನಾಲ್ಕು ವಿಸಕಂಗಳು 654 ಮೋಡೆಮ್‌ಗಳ ಅಳವಡಿಸುವಿಕೆಯ ಮೇಲೆ ದಂಡವನ್ನು ವಿಧಿಸಿದನಂತರ ₹ 0.16 ಕೋಟಿ ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸಿದವು, ಇದು ಕೂಡ ನಿಷ್ಫಲ ವೆಚ್ಚವಾಯಿತು. ಮುಂದುವರೆದು, ಅಲ್ಪಾವಧಿಯಲ್ಲಿ ಮುಕ್ತಾಯಗೊಳಿಸುವ ವೇಳೆಯಲ್ಲಿ, ಎಸ್‌ಎಲ್‌ಡಿಆರ್‌ಸಿ ಮುಂಬರುತ್ತಿರುವಂತಹ ನವೀನ ಮತ್ತು ಸುಧಾರಿತ ವಿತರಣಾ ವಲಯ ಯೋಜನೆ (ಆರ್‌ಡಿಎಸ್‌ಎಸ್) ಅಡಿಯಲ್ಲಿ ಸ್ಮಾರ್ಟ್ ಮೀಟರುಗಳ ಅಳವಡಿಸುವಿಕೆಯನ್ನು ಪರಿಗಣಿಸಿತು, ಅದರಂತೆ ಎಲ್ಲಾ ಡಿಟಿಸಿ ಫೀಡರುಗಳು ಮತ್ತು ಗ್ರಾಹಕ ಮೀಟರುಗಳನ್ನು ಸ್ಮಾರ್ಟ್ ಮೀಟರುಗಳಿಂದ ಬದಲಾಯಿಸತಕ್ಕದ್ದು, ಅದು ಮೋಡೆಮ್‌ನೊಂದಿಗೆ ರಿಮೋಟ್ ಮೀಟರು ಓದುವಿಕೆಯನ್ನು ಅನಗತ್ಯತೆಯನ್ನುಂಟು ಮಾಡುವುದು. ಆದಾಗ್ಯೂ, ರಾಜ್ಯವು ಈ ಯೋಜನೆಯನ್ನು ಕಾರ್ಯಗತಗೊಳಿಸುವ ಸಲುವಾಗಿ ಇನ್ನೂ ತೀರ್ಮಾನವನ್ನು ತೆಗೆದುಕೊಂಡಿರುವುದಿಲ್ಲ.

### *3.12 ಗುಣಮಟ್ಟ ಭರವಸೆ ವ್ಯವಸ್ಥೆಯಲ್ಲಿನ ಕುಂದುಕೊರತೆಗಳು / ಲೋಪದೋಷಗಳು*

ಯೋಜನೆಯ ಮಾರ್ಗಸೂಚಿಗಳ ಅನುಸಾರ ವಿಸಕಂಗಳು ಐಪಿಡಿಎಸ್ ಅಡಿಯಲ್ಲಿನ ಕಾಮಗಾರಿಗಳ ಗುಣಮಟ್ಟ ಭರವಸೆಗಾಗಿ ಜವಾಬ್ದಾರಿಯುತವಾಗಿದ್ದವು ಮತ್ತು ಉತ್ತರದಾಯಿತ್ವವನ್ನು ಹೊಂದಿದ್ದವು ಹಾಗೂ ಒಂದು ಸಮಗ್ರ ಗುಣಮಟ್ಟ ಭರವಸೆ (ಕ್ಯೂಎ) ಪೂರ್ವಭಾವಿ ಹಾಗೂ ಪರಿವೀಕ್ಷಣಾ ಯೋಜನೆಯನ್ನು ರೂಪಿಸಬೇಕಿದ್ದಿತು ಮತ್ತು ಅದನ್ನು ಟರ್ನ್‌ಕೀ ಗುತ್ತಿಗೆದಾರರುಗಳೊಂದಿಗೆ ಗುತ್ತಿಗೆ ಒಡಂಬಡಿಕೆಯ ಒಂದು ಅಂತರ್ಗತ ಭಾಗವನ್ನಾಗಿ ಮಾಡಬೇಕಿದ್ದಿತು. ವಿಸಕಂಗಳು ಕಾಮಗಾರಿ ನಿವೇಶನಗಳಿಗೆ ಮತ್ತು ಕ್ಷೇತ್ರಗಳಿಗೆ ಸರಬರಾಜು ಮಾಡಲಾದ ಸಾಮಗ್ರಿಗಳು/ಸಾಧನಗಳು ಗುಣಮಟ್ಟ ಭರವಸೆ ಮತ್ತು ಪರೀಕ್ಷಣಾ ಪೂರ್ವಭಾವಿ ಯೋಜನೆಯ ಅನುಸಾರ ಆಗಿರುವುದನ್ನು ಖಚಿತಪಡಿಸಿಕೊಳಬೇಕಿದ್ದಿತು. ಮುಂದುವರೆದು, ಐಪಿಡಿಎಸ್ ಪ್ರಮಾಣಕ ಬಿಡ್ಡು ದಾಖಲೆಗಳ[88] ಅನುಸಾರ ಹಾಗೂ ಡಿಡಬ್ಲ್ಯುಎ ಅನುವುಗಳ ಅನುಸಾರ, ವಿಸಕಂಗಳು ಮತ್ತು ಟರ್ನ್‌ಕೀ ಗುತ್ತಿಗೆದಾರರುಗಳು ಗುಣಮಟ್ಟ ಭರವಸೆ ಪರೀಕ್ಷಣೆಗಳನ್ನು ಖಚಿತಪಡಿಸಿಕೊಳ್ಳಬೇಕಿದ್ದಿತು ಹಾಗೂ ಅನುಮೋದಿತ ನಕಾಶೆಗಳು/ತಾಂತ್ರಿಕ ನಿರ್ದಿಷ್ಟನಿರೂಪಣೆಗಳು/ ಮಾಹಿತಿ ಹಾಳೆ/ ಖಾತರಿಯಿಂದ ಕೂಡಿದ ತಾಂತ್ರಿಕ ಪರಿಮಿತಿಗಳು/ ಅನ್ವಯಗೊಳ್ಳುವಂತಹ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪ್ರಮಾಣಕಗಳ ಅನುಸಾರ ಎಲ್ಲಾ ಸಾಮಗ್ರಿಗಳ ಶೇಕಡಾ 100ರಷ್ಟು ರವಾನೆ ಪೂರ್ವ ಪರೀಕ್ಷಣೆಗಳನ್ನು ಖಚಿತಪಡಿಸಿಕೊಳ್ಳಬೇಕಿದ್ದಿತು.

ವಿಸಕಂಗಳು ಯೋಜನೆಯ ಮಾರ್ಗಸೂಚಿಗಳ ಅಡಿಯಲ್ಲಿ ಅಗತ್ಯತೆಯಿರುವಂತೆ ಸಮಗ್ರ ಗುಣಮಟ್ಟ ಭರವಸೆ ಪೂರ್ವಭಾವಿ ಯೋಜನೆಯನ್ನು ತಯಾರಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮುಂದುವರೆದು, ನೀಡಲಾಗಿದ್ದಂತಹ ಡಿಡಬ್ಲ್ಯುಎ ಒಂದು ಸಮೀಕ್ಷೆಯನ್ನು ಮಾಡಲಾಗಿ, ಗುಣಮಟ್ಟ ಭರವಸೆ ವ್ಯವಸ್ಥೆಯಲ್ಲಿನ ಈ ಕೆಳಗಿನ ಲೋಪದೋಷಗಳನ್ನು ಗಮನಿಸಿತು:

- ಸೆಸ್ಕ್ ಮೆ. ನವಿಯ ಟೆಕ್ನಾಲಜೀಸ್, ಮುಂಬೈ (ಸರಬರಾಜುದಾರರು) ಸರಬರಾಜು ಮಾಡಿದ್ದಂಥ ₹ 1.29 ಕೋಟಿ[89] (₹ 15.14 ಕೋಟಿ ಮೌಲ್ಯದ ಡಿಡಬ್ಲ್ಯುಎ ಪೈಕಿ) (ಸಾಮಗ್ರಿಗಳ

[87] ₹ 5.96 ಕೋಟಿಯಿಂದ ಮೋಡೆಮ್ಮುಗಳ ವೆಚ್ಚವಾದ ₹ 0.61 ಕೋಟಿ ಕಳೆದಿರುವುದು × ಶೇಕಡಾ 60.

[88] *ಕಂಡಿಕೆ 2* ಗುಣಮಟ್ಟ ಭರವಸೆ ಮತ್ತು ಮೌಲ್ಯಮಾಪನ ವ್ಯವಸ್ಥೆ (ಸಂಪುಟ II ಭಾಗ I).

[89] 5 kW ಗಳ ಪ್ಯಾನೆಲ್ಲುಗಳ ಒಂದು ಸೆಟ್ಟಿಗೆ ₹ 2.15 ಲಕ್ಷ ದರದಲ್ಲಿ 60 ಸೆಟ್ಟುಗಳಿಗೆ ಲೆಕ್ಕಹಾಕಲಾಗಿರುವುದು.

ಮೌಲ್ಯದ ಶೇಕಡ 48.70) ಮೌಲ್ಯದ ಸೌರ ಫೋಟೋವೋಲ್ಟಾಯಿಕ್ ಮಾಡ್ಯೂಲುಗಳಿಗಾಗಿ ರವಾನೆ ಪೂರ್ವ ಪರೀಕ್ಷಣೆಗಳನ್ನು ಮನ್ನಾ ಮಾಡಿದ್ದಿತು (ಜೂನ್ 2017).

- ಹೆಸ್ಕಾಂ ಮೆ. ಪ್ರಥಮ್ ಇಂಟೆಗ್ರೇಟೆಡ್ ಇಂಜಿನಿಯರಿಂಗ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, ಇವರು ಡಿಡಬ್ಲ್ಯುಎ ನಿರ್ದಿಷ್ಟಪಡಿಸಲಾಗಿದ್ದಂತಹ 280 Wp ಗೆ ಪ್ರತಿಯಾಗಿ ಸರಬರಾಜು ಮಾಡಿದ್ದಂತಹ 250 Wp ಮಾಡ್ಯೂಲುಗಳ 3,364 ಸಂಖ್ಯೆಗಳನ್ನು ಒಪ್ಪಿಕೊಂಡಿದ್ದಿತು (4,044 ಸಂಖ್ಯೆಗಳ ಪೈಕಿ). ಮುಂದುವರೆದು, ಕಂಪನಿಯು ಈ 250 Wp ಮಾಡ್ಯೂಲುಗಳ 2,200 ಸಂಖ್ಯೆಗಳಿಗೆ ಸಂಬಂಧಿಸಿದಂತೆ (ಫೆಬ್ರವರಿ 2018) ಹಾಗೂ ಐಸಿ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, ಇವರು ಸರಬರಾಜು ಮಾಡಿದ 320 Wp ಮಾಡ್ಯೂಲುಗಳ 1,300 ಸಂಖ್ಯೆಗಳಿಗೆ (ಜುಲೈ 2018) ಸಂಬಂಧಿಸಿದಂತೆ ಪರೀಕ್ಷಣೆಯನ್ನು ಮನ್ನಾ ಮಾಡಿದ್ದಿತು. ಮನ್ನಾ ಮಾಡಲು ಕೋರಿಕೆಯನ್ನು ಒಪ್ಪಿಕೊಳ್ಳುವ ವೇಳೆಯಲ್ಲಿ ಹೆಸ್ಕಾಂ ಈ ಸಾಮಗ್ರಿಗಳನ್ನು ಎಲ್ಲಾ ವಾರಂಟಿಗಳು/ಖಾತರಿಗಳ ದಾಖಲೆಗಳನ್ನು ತಕ್ಕುದಾದ ರೀತಿಯಲ್ಲಿ ಸಂಗ್ರಹಿಸುವ ಮೂಲಕ ಸ್ಥಳದಲ್ಲಿ ಪರೀಕ್ಷಿಸಲಾಗಿದ್ದಿತು ಎಂಬುದಾಗಿ ತಿಳಿಸಿದ್ದಿತು.

ನಿರ್ದಿಷ್ಟಪಡಿಸಲಾಗಿದ್ದಂತಹ ಸಾಮರ್ಥ್ಯಕ್ಕಿಂತ ಕಡಿಮೆ ಪ್ರಮಾಣದ ಸೌರ ಮಾಡ್ಯೂಲುಗಳನ್ನು ಒಪ್ಪಿಕೊಂಡು ಹಾಗೂ ಆದಷ್ಟು ಬೇಗನೆ ಕಾಮಗಾರಿಯನ್ನು ಪೂರ್ಣಗೊಳಿಸುವ ಉದ್ದೇಶದಿಂದ ರವಾನೆ–ಪೂರ್ವ ಪರೀಕ್ಷಣೆಯನ್ನು ಮನ್ನಾ ಮಾಡಿದ್ದುದು ಸಾಮಗ್ರಿಗಳ ಗುಣಮಟ್ಟದೊಂದಿಗೆ ರಾಜಿ ಮಾಡಿಕೊಳ್ಳುವಲ್ಲಿ ಪರಿಣಮಿಸಿದ್ದಿತು.

ತಾನು ಸರಬರಾಜುದಾರರ ಕಾರ್ಖಾನೆ ಸ್ಥಳದಲ್ಲಿ ಜೂನ್ 2017ರಲ್ಲಿ ಪರೀಕ್ಷಣೆ ನಡೆಸಿದ್ದುದಾಗಿ ಹಾಗೂ ಅದರಿಂದ ಅತ್ಯುತ್ತಮ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಗಾಗಿ ಫಲಿತಾಂಶಗಳು ತೃಪ್ತಿದಾಯಕವಾಗಿ ಕಂಡುಬಂದಿತ್ತಾಗಿ ಸೆಸ್ಕ್ ಉತ್ತರಿಸಿದ್ದಿತು (ಅಕ್ಟೋಬರ್ 2024). ಸೆಸ್ಕ್ ದಿನ ಒಂದಕ್ಕೆ 3–4 ಯೂನಿಟ್ಟು/ kW ಪ್ರಮಾಣಕ ನಿರ್ದಿಷ್ಟನಿರೂಪಣೆಗೆ ಹೋಲಿಸಿದಂತೆ ಅತ್ಯಂತ ನಿಕೃಷ್ಟಮಟ್ಟದ ವಿದ್ಯುತ್ ಉತ್ಪಾದನೆಯ ಬಗ್ಗೆ ಸರಬರಾಜುದಾರರಿಗೆ ಪತ್ರ ಬರೆದಿದ್ದಿತಾದ್ದರಿಂದ (ಜೂನ್ 2019) ಉತ್ತರವು ಒಪ್ಪುವಂತಿಲ್ಲ. ಮುಂದುವರೆದು, ಸೆಸ್ಕ್ ಆನ್‌ಲೈನ್ ಮೇಲ್ವಿಚಾರಣಾ ವ್ಯವಸ್ಥೆಯು ಕೂಡ ಕಾರ್ಯನಿರ್ವಹಿಸುತ್ತಿರುವುದಿಲ್ಲ ಎಂಬುದಾಗಿ ವರದಿ ಮಾಡಿದ್ದಿತು.

ಪಿವಿ ಮಾಡ್ಯೂಲುಗಳ ನಿರ್ದಿಷ್ಟನಿರೂಪಣೆಗಳು/ಕಾರ್ಯನಿರ್ವಹಣೆಯು ಐಇಸಿ[90] ಪ್ರಮಾಣಕಗಳ ಅನುಸಾರ ಆಗಿದ್ದವಾದ್ದರಿಂದ ಹಾಗೂ ಸೌರ ಪ್ಯಾನೆಲ್ಲುಗಳ ವಿದ್ಯುತ್ ಉತ್ಪಾದನೆಯು ಪಡೆಯಲಾಗುವ ಸೂರ್ಯಕಿರಣಗಳ ಪ್ರಮಾಣವನ್ನು ಅವಲಂಬಿತವಾಗುವುದರಿಂದ ಹಾಗೂ ಅದು ಅಧಿಕ ಪ್ರಮಾಣದ ದಕ್ಷತೆಯನ್ನು ಹೊಂದಿದ್ದಲ್ಲಿ ಒಂದು ಕಡಿಮೆ ಪ್ರಮಾಣದ ವಿದ್ಯುತ್ ಮಾಡ್ಯೂಲು ಇನ್ನೂ ಉತ್ತಮವಾಗಿ ಕಾರ್ಯನಿರ್ವಹಿಸುವುದರಿಂದ ಹಾಗೂ ಸೂರ್ಯಕಿರಣಗಳನ್ನು ವಿದ್ಯುತ್ತಿಗೆ ಪರಿಣಾಮಕಾರಿತ್ವದಿಂದ ಪರಿವರ್ತಿಸುವುದರಿಂದ ಸಾಮಗ್ರಿಗಳನ್ನು ಹೆಸ್ಕಾಂ ಗುಣಮಟ್ಟ ವಿಭಾಗವು ಪರೀಕ್ಷಿಸಿದ್ದಿತು ಹಾಗೂ ಒಪ್ಪಿಕೊಂಡಿದ್ದಿತು ಎಂಬುದಾಗಿ ಹೆಸ್ಕಾಂ ಉತ್ತರಿಸಿತು. ನಿರ್ದಿಷ್ಟಪಡಿಸಲಾಗಿರುವ ಸಾಮರ್ಥ್ಯಕ್ಕಿಂತ ಕಡಿಮೆ ಪ್ರಮಾಣದ ಸೌರ ಮಾಡ್ಯೂಲುಗಳನ್ನು ಒಪ್ಪಿಕೊಳ್ಳುವುದು ಕಡಿಮೆ ಪ್ರಮಾಣದ ವಿದ್ಯುತ್ ಉತ್ಪಾದನೆಯಲ್ಲಿ ಪರಿಣಮಿಸುವುದಿಲ್ಲ ಹಾಗೂ ನಿಕೃಷ್ಟಮಟ್ಟದ ವಿದ್ಯುತ್ ಉತ್ಪಾದನೆಯು /ವಿದ್ಯುತ್ ಉತ್ಪಾದನೆಯಾಗದಿರುವುದು ಲೋಪದೋಷದಿಂದ ಕೂಡಿದ ಉಪಕರಣದ ಕಾರಣ, ನಿಕೃಷ್ಟಮಟ್ಟದ ನಿರ್ವಹಣೆ ಮತ್ತು ಇತರೆ ತಾಂತ್ರಿಕ ಕಾರಣಗಳಿಂದ ಆಗಿದ್ದಿತು, ಅವುಗಳನ್ನು ನಿಯತವಾಗಿ ಬಗೆಹರಿಸಲಾಗಿದ್ದಿತು ಎಂಬುದಾಗಿಯೂ ಅದು ತಿಳಿಸಿತು.

[90] ಅಂತರರಾಷ್ಟ್ರೀಯ ವಿದ್ಯುನ್ಮಾನ ಆಯೋಗ (ಐಇಸಿ) – ಎಲ್ಲಾ ವಿದ್ಯುಚ್ಛಕ್ತಿ, ವಿದ್ಯುನ್ಮಾನ ಮತ್ತು ಸಂಬಂಧಿತ ತಂತ್ರಜ್ಞಾನಗಳಿಗೆ ಅಂತರಾಷ್ಟ್ರೀಯ ಪ್ರಮಾಣಕಗಳನ್ನು ತಯಾರಿಸುವ ಮತ್ತು ಪ್ರಕಟಿಸುವ ಒಂದು ಅಂತರರಾಷ್ಟ್ರೀಯ ಸಂಸ್ಥೆ.

# ಅಧ್ಯಾಯ – IV

# ಮೇಲ್ವಿಚಾರಣೆ

## ಅಧ್ಯಾಯ IV

## ಮೇಲ್ವಿಚಾರಣೆ

*ವಿವಿಧ ಅಡಚಣೆಗಳ ಕಾರಣ ಕಾಮಗಾರಿಗಳಲ್ಲಿನ ವಿಳಂಬಗಳನ್ನು ರಾಜ್ಯ ಮಟ್ಟದ ವಿತರಣಾ ಸುಧಾರಣೆಗಳ ಸಮಿತಿಗೆ (ಎಸ್‌ಎಲ್‌ಡಿಆರ್‌ಸಿ) ಅವರಿಂದ–ಸಮಯೋಚಿತ ಪರಿಹಾರಕ್ಕಾಗಿ ಗಮನಕ್ಕೆ ತಂದಿರಲಿಲ್ಲ. ರಾಜ್ಯ ಮಟ್ಟದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಮೇಲ್ವಿಚಾರಣಾ ಸಮಿತಿ (ದಿಶಾ) ಸಂಬಂಧಿತ ಮಾರ್ಗಸೂಚಿಗಳನ್ನು ಜೂನ್ 2018ರಲ್ಲಿ ನೀಡಲಾಗಿದ್ದಿತಾದರೂ, ದಿಶಾ ಅನ್ನು ಜನವರಿ 2020ರಲ್ಲಿಯಷ್ಟೇ ರಚಿಸಲಾಯಿತು ಹಾಗೂ ಅದರ ಮೊದಲ ಸಭೆಯನ್ನು ಆಗಸ್ಟ್ 2022ರಲ್ಲಿ ಅಂದರೆ ಐಪಿಡಿಎಸ್ ಮುಕ್ತಾಯಗೊಂಡನಂತರವಷ್ಟೇ ನಡೆಸಲಾಗಿದ್ದಿತು.*

***4.1*** ಭಾರತ ಸರ್ಕಾರವು ನಗರ ಪ್ರದೇಶಗಳಲ್ಲಿ ವಿದ್ಯುತ್ ಉಪ–ಪ್ರಸರಣ ಮತ್ತು ವಿತರಣಾ ವ್ಯವಸ್ಥೆಯನ್ನು ಬಲಪಡಿಸುವ ಸಲುವಾಗಿ ಐಪಿಡಿಎಸ್ ಅನ್ನು ರೂಪಿಸಿದ್ದಿತು. ಯೋಜನೆಗಾಗಿ ಒಂದು ಮೇಲ್ವಿಚಾರಣಾ ಸಮಿತಿಯನ್ನು ಭಾರತ ಸರ್ಕಾರದ ಇಂಧನ ಮಂತ್ರಾಲಯವು ರಚಿಸಿದ್ದಿತು. ಕಾಮಗಾರಿಯ ವ್ಯಾಪ್ತಿಗೆ ಕಾರ್ಯಾಚರಣೆಗಳ ಮಾರ್ಗಸೂಚಿಗಳನ್ನು ಅನುಮೋದಿಸಲು, ಯೋಜನೆಯ ವಿವಿಧ ಭಾಗಗಳ ಕಾರ್ಯಾಚರಣೆಗೊಳಿಸುವ ಸಲುವಾಗಿ ಅಗತ್ಯ ಕಾರ್ಯನೀತಿ ನಿರ್ಣಯಗಳನ್ನು ತೆಗೆದುಕೊಳ್ಳಲು ಹಾಗೂ ಅವುಗಳಿಗೆ ತಿದ್ದುಪಡಿಗಳನ್ನು ತರಲು, ಸವಿವರ ಯೋಜನಾ ವರದಿಗಳಿಗೆ/ಯೋಜನೆಗಳಿಗೆ ಅನುಮೋದನೆ ನೀಡುವುದು ಹಾಗೂ ಯೋಜನೆಯನ್ನು ಕಾರ್ಯಗತಗೊಳಿಸುತ್ತಿರುವುದನ್ನು ಮೇಲ್ವಿಚಾರಣೆ ಮತ್ತು ಸಮೀಕ್ಷೆ ಮಾಡುವುದು, ಯೋಜನೆಯ ಕಾರ್ಯಗತಗೊಳಿಸುವಿಕೆಗಾಗಿ ಕಾಲಾವಧಿ ವಿಸ್ತರಣೆ ಅನುಮೋದಿಸುವುದು, ಇತ್ಯಾದಿಗಳಿಗಾಗಿ ಅಧಿಕಾರವನ್ನು ಹೊಂದಿದ್ದಿತು. ಪಿಎಫ್‌ಸಿಯು ಯೋಜನೆಯ ಕಾರ್ಯಗತಗೊಳಿಸುವಿಕೆಗಾಗಿ ಯೋಜನೆಗಳನ್ನು ಭೌತಿಕ ಹಾಗೂ ಆರ್ಥಿಕ ಪ್ರಗತಿಗಳನ್ನು ಒಳಗೊಂಡಂತೆ ಮೇಲ್ವಿಚಾರಣೆ ಮಾಡುವುದಕ್ಕಾಗಿ, ಸಂಪರ್ಕ–ಸೇತು ಸಂಸ್ಥೆಯಾಗಿದ್ದಿತು (ನೋಡಲ್ ಏಜನ್ಸಿ).

### *4.2 ರಾಜ್ಯ ಮಟ್ಟದಲ್ಲಿ ಮೇಲ್ವಿಚಾರಣಾ ಸಮಿತಿಗಳು*

ಯೋಜನೆಯ ಮಾರ್ಗಸೂಚಿಗಳ ಅನುಸಾರ ಕರ್ನಾಟಕ ಸರ್ಕಾರ/ವಿಸಕಂಗಳು ಈ ಕೆಳಕಂಡಂತೆ ವಿವಿಧ ಹಂತಗಳಲ್ಲಿ ಅಗತ್ಯವಿದ್ದಂತಹ ಮೇಲ್ವಿಚಾರಣಾ ವ್ಯವಸ್ಥೆಯನ್ನು ಸ್ಥಾಪಿಸಿದ್ದವು:

**ರೇಖಾಚಿತ್ರ ಸಂಖ್ಯೆ 4.1: ಐಪಿಡಿಎಸ್ ಅಡಿಯಲ್ಲಿ ಮೇಲ್ವಿಚಾರಣಾ ವ್ಯವಸ್ಥೆ**




ಅಲ್ಲದೆಯೇ, ವಿಸಕಂಗಳು ಯೋಜನೆಗಳ ನಿರ್ವಹಣೆಯಲ್ಲಿ ಸಹಾಯ ಮಾಡುವುದಕ್ಕಾಗಿ ಹಾಗೂ ಯೋಜನೆಯನ್ನು ಸಮಯೋಚಿತವಾಗಿ ಕಾರ್ಯಗತಗೊಳಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಯೋಜನೆಗಳನ್ನು ನಿರ್ವಹಿಸುವ ಸಂಸ್ಥೆಯನ್ನು (ಪಿಎಂಎ) ನೇಮಕ ಮಾಡಿಕೊಳ್ಳಬೇಕಿದ್ದಿತು.

ಆದಾಗ್ಯೂ, ಲೆಕ್ಕಪರಿಶೋಧನೆಯು ಎಸ್‌ಎಲ್‌ಡಿಆರ್‌ಸಿ ಮತ್ತು ದಿಶಾ (ಡಿಐಎಸ್‌ಎಚ್‌ಎ), ಇವುಗಳ ಸಭಾ ನಡಾವಳಿಗಳನ್ನು ಪರೀಕ್ಷಾ–ಪರಿಶೀಲನೆ ಮಾಡಲಾಗಿ ವಿವಿಧ ಮಟ್ಟಗಳಲ್ಲಿ ಮೇಲ್ವಿಚಾರಣೆಯು ಅಸಮರ್ಪಕವಾಗಿದ್ದುದನ್ನು ತೋರಿಸಿಕೊಟ್ಟಿತು. ಗಮನಿಸಲಾದ ಅಂಶಗಳನ್ನು ಈ ಕೆಳಗೆ ಚರ್ಚಿಸಲಾಗಿದೆ:

### *4.3 ರಾಜ್ಯ ಮಟ್ಟದ ವಿತರಣಾ ಸುಧಾರಣಾ ಸಮಿತಿ (ಎಸ್‌ಎಲ್‌ಡಿಆರ್‌ಸಿ) ಯ ಕಾರ್ಯವೈಖರಿ*

ಕರ್ನಾಟಕ ಸರ್ಕಾರವು ಐಪಿಡಿಎಸ್ ಕಾರ್ಯಕ್ರಮಗಳನ್ನು ಶಿಫಾರಸು ಮಾಡುವ ಸಲುವಾಗಿ ಹಾಗೂ ಮೇಲ್ವಿಚಾರಣೆ ಮಾಡುವ ಸಲುವಾಗಿ ಆರ್‌ಎಪಿಡಿಆರ್‌ಪಿಗಾಗಿ ರಚಿಸಲಾಗಿದ್ದಂತಹ ರಾಜ್ಯ ಮಟ್ಟದ ವಿತರಣಾ ಸುಧಾರಣೆಗಳ ಸಮಿತಿಯನ್ನು (ಎಸ್‌ಎಲ್‌ಡಿಆರ್‌ಸಿ) ಮುಂದುವರೆಸಿಕೊಂಡು ಹೋಗಲು ಅನುಮೋದನೆ ನೀಡಿತು. (ಫೆಬ್ರವರಿ 2015) ಎಸ್‌ಎಲ್‌ಡಿಆರ್‌ಸಿ ಐಪಿಡಿಎಸ್ ಪ್ರಸ್ತಾವನೆಗಳನ್ನು ಅನುಮೋದಿಸುವ ಸಲುವಾಗಿ, ಸಮೀಕ್ಷಿಸುವುದು/ಮುಕ್ತಾಯಗೊಳಿಸುವ ಸಲುವಾಗಿ ಜೂನ್ 2015 ಮತ್ತು ಮಾರ್ಚ್ 2022ರ ನಡುವೆ ಒಂಬತ್ತು ಸಲ ಸಭೆ ಸೇರಿದ್ದಿತು. ಒಂಬತ್ತು ಸಭೆಗಳ ಪೈಕಿ, ಏಳು ಸಭೆಗಳಲ್ಲಿ ಯೋಜನೆಗಳನ್ನು ಅನುಮೋದಿಸಲಾಗಿದ್ದಿತು, ಎಲ್ಲಾ ವಿಸಕಂಗಳಿಗೆ ಸಂಬಂಧಿತ ಯೋಜನೆಗಳ ಮುಕ್ತಾಯಗೊಳಿಸುವಿಕೆಯನ್ನು ಎರಡು ಸಭೆಗಳಲ್ಲಿ ಅನುಮೋದಿಸಲಾಗಿದ್ದಿತು. ನಾಲ್ಕು ಸಭೆಗಳಲ್ಲಿ, ಐಪಿಡಿಎಸ್ ಅಡಿಯಲ್ಲಿನ ಕಾರ್ಯಕ್ರಮಗಳ ಪ್ರಗತಿಯನ್ನು ಸಮೀಕ್ಷಿಸಲಾಗಿದ್ದಿತು ಹಾಗೂ ಸಮಯೋಚಿತ ಪೂರ್ಣಗೊಳಿಸುವಿಕೆಗಾಗಿ ವಿಸಕಂಗಳಿಗೆ ಸೂಚನೆಗಳನ್ನು/ ನಿರ್ದೇಶನಗಳನ್ನು ನೀಡಲಾಗಿದ್ದಿತು.

ಆದಗ್ಯೂ, ಸಮಿತಿಯು ಯೋಜನೆಯನ್ನು ಸಮರ್ಪಕವಾಗಿ ಮೇಲ್ವಿಚಾರಣೆ ಮಾಡಲಿಲ್ಲ, ವಿವಿಧ ಭಾಗಗಳ ಪ್ರಗತಿಯನ್ನು ಸಮೀಕ್ಷಿಸಿರಲಿಲ್ಲ, ಅವುಗಳನ್ನು ಬಗೆಹರಿಸುವ ಸಲುವಾಗಿ ಹಾಗೂ ತ್ವರಿತ ತೀರ್ಮಾನಗಳನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ವಿಳಂಬಗಳು, ಇತ್ಯಾದಿಗಳಿಗೆ ದಾರಿಮಾಡಿಕೊಟ್ಟಿದ್ದಂತಹ ಸಮಸ್ಯೆಗಳನ್ನು ಗುರುತಿಸಿರಲಿಲ್ಲ, ಅವುಗಳ ಪೈಕಿ ಕೆಲವು ದೃಷ್ಟಾಂತಗಳನ್ನು ಈ ಕೆಳಗೆ ನೀಡಲಾಗಿರುವುದು:

- ಬೆಸ್ಕಾಂನಿಂದ ಎಲ್ಲಾ ವಿಸಕಂಗಳ ಪರವಾಗಿ ಕಾರ್ಯಗತಗೊಳಿಸಲಾದ ಮಾಹಿತಿ ತಂತ್ರಜ್ಞಾನ ಹಂತ IIರ ಕಾಮಗಾರಿಗಳನ್ನು ನೀಡುವಲ್ಲಿನ ವಿಳಂಬ. ಎಸ್‌ಎಲ್‌ಡಿಆರ್‌ಸಿ, ಪರಿಹಾರಕ ಕ್ರಮಗಳ ಬಗ್ಗೆ ಸಲಹೆ ನೀಡುವ ಸಲುವಾಗಿ ಈ ಸಮಸ್ಯೆಯನ್ನು ಪರಿಶೀಲಿಸಿರಲಿಲ್ಲ (***ಕಂಡಿಕೆ 3.11.1ರಲ್ಲಿ ಚರ್ಚಿಸಲಾಗಿರುವುದು***).
- ಮಾಹಿತಿ ತಂತ್ರಜ್ಞಾನ ಹಂತ IIರ ಅಡಿಯಲ್ಲಿ ಡಿಟಿಸಿಗಳಿಗೆ, ಎಚ್‌ಟಿ ಗ್ರಾಹಕರುಗಳಿಗೆ ಮತ್ತು ಸೀಮಾ ಮೀಟರುಗಳಿಗೆ ಮೋಡೆಮ್‌ಗಳನ್ನು ಅಳವಡಿಸುವಿಕೆಗೆ, ಎಸ್‌ಎಲ್‌ಡಿಆರ್‌ಸಿಯು ಅನುಮೋದನೆ ನೀಡಿದ್ದಿತಾದರೂ (07 ಮಾರ್ಚ್ 2022) ನಿಕೃಷ್ಟಮಟ್ಟದ ಪ್ರಗತಿಯ ಕಾರಣ ಅಲ್ಪಾವಧಿಯಲ್ಲಿ ಮುಕ್ತಾಯಗೊಳಿಸಬೇಕಾಯಿತು (***ಕಂಡಿಕೆ 3.11.7ರಲ್ಲಿ ವಿವರಿಸಲಾಗಿರುವುದು***) ಹಾಗೂ ಎಸ್‌ಎಲ್‌ಡಿಆರ್‌ಸಿ ಎಲ್ಲಾ ಡಿಟಿಸಿಗಳು, ಫೀಡರುಗಳು ಮತ್ತು ಗ್ರಾಹಕರುಗಳ ಮೀಟರುಗಳನ್ನು ಸ್ಮಾರ್ಟ್ ಮೀಟರುಗಳಿಂದ ಬದಲಾಯಿಸುವ ಪ್ರಸ್ತಾವನೆಯನ್ನು ಹೊಂದಿರುವಂತಹ ಹಾಗೂ ರಿಮೋಟ್ ಮೀಟರು ಓದುವಿಕೆ ಮತ್ತು ಮೋಡೆಮ್‌ಗಳನ್ನು ನಿರುಪಯುಕ್ತ/ನಿಷ್ಕ್ರಿಯಗೊಳಿಸುವ ಯೋಜನೆಯನ್ನು ಹೊಂದಿರುವಂತಹ ಮುಂಬರುತ್ತಿರುವ ಸುಧಾರಿತ ವಿತರಣಾ ವಲಯ ಯೋಜನೆಯ (RDSS) ಅಡಿಯಲ್ಲಿ ಸ್ಮಾರ್ಟ್ ಮೀಟರುಗಳ ಕಾರ್ಯಗತಗೊಳಿಸುವಿಕೆಯನ್ನು ಪರಿಗಣಿಸಿತು. ಆದಾಗ್ಯೂ, ರಾಜ್ಯವು ಈ ಯೋಜನೆಯನ್ನು ಕಾರ್ಯಗತಗೊಳಿಸುವ ತೀರ್ಮಾನವನ್ನು ಈವರೆಗೂ ಮಾಡಿಲ್ಲ ಅಲ್ಪಾವಧಿಯಲ್ಲಿ ಮುಕ್ತಾಯಗೊಳಿಸಿದ್ದುದು ₹ 3.21 ಕೋಟಿ[91] ಮೊತ್ತದಷ್ಟು ಅನುದಾನವನ್ನು ಬಿಟ್ಟುಕೊಡುವಲ್ಲಿ ಪರಿಣಮಿಸಿದ್ದಿತು.

  ಎಸ್‌ಎಲ್‌ಡಿಆರ್‌ಸಿ ಮಾಹಿತಿ ತಂತ್ರಜ್ಞಾನ ಟೆಂಡರುಗಳಲ್ಲಿ ಪಿಕ್ಯುಆರ್ ಮಾನದಂಡಕ್ಕೆ ಮಾರ್ಪಾಡುಗಳನ್ನು ಅನುಮೋದಿಸಿದ್ದಿತು ಹಾಗೂ ಟೆಂಡರು ಕಾರ್ಯಚಟುವಟಿಕೆಗಳನ್ನು ಸಮಿತಿಯ ಗಮನಕ್ಕೆ ತರಲಾಗಿದ್ದಿತು ಎಂಬುದಾಗಿ ಬೆಸ್ಕಾಂ ಉತ್ತರಿಸಿತು (ಅಕ್ಟೋಬರ್ 2024). ಯೋಜನೆಯ ಸಮಯೋಚಿತ ಪ್ರಗತಿಯನ್ನು ಖಚಿತಪಡಿಸಿಕೊಳ್ಳುವಲ್ಲಿ ಎಸ್‌ಎಲ್‌ಡಿಆರ್‌ಸಿಯ ಹಸ್ತಕ್ಷೇಪ ಇರಲಿಲ್ಲವಾದ್ದರಿಂದ ಉತ್ತರವು ಒಪ್ಪುವಂತಿಲ್ಲ.
- ಜನತೆಯಿಂದ ಪ್ರತಿಭಟನೆಯ ಕಾರಣ, ಹೆಸ್ಕಾಂ ಜಿಐಎಸ್ ಉಪ–ಸ್ಟೇಷನನ್ನು ಅನ್ನು ಹೊಸೂರಿನಿಂದ ರಾಯಪುರ ಕೈಗಾರಿಕಾ ಪ್ರದೇಶಕ್ಕೆ ಸ್ಥಳಾಂತರಿಸಬೇಕಾಯಿತು, ಇದರಿಂದ ಕಾಮಗಾರಿಗಳನ್ನು ನಿಗದಿತ ಸಮಯದ ಒಳಗೆ ಪೂರ್ಣಗೊಳಿಸಲಾಗಿರಲಿಲ್ಲ ಹಾಗೂ ತತ್ಪರಿಣಾಮವಾಗಿ ಕಂಪನಿಯು ₹ 19.20 ಕೋಟಿ ಮೊತ್ತದಷ್ಟು ತನ್ನ ಸ್ವಂತ ಹಣಕಾಸನ್ನು ಉಪಯೋಗಿಸಿಕೊಳ್ಳಬೇಕಾಯಿತು (***ಕಂಡಿಕೆ 3.6ರಲ್ಲಿ ವಿವರಿಸಲಾಗಿರುವುದು***). ಹೆಸ್ಕಾಂ ಇದನ್ನು

[91] ಸೆಸ್ಕ್ (₹ 1.75 ಕೋಟಿ), ಮೆಸ್ಕಾಂ (₹ 1.69 ಕೋಟಿ), ಜೆಸ್ಕಾಂ (₹ 1.30 ಕೋಟಿ) ಹಾಗೂ ಹೆಸ್ಕಾಂ (₹ 1.22 ಕೋಟಿ) ಇದರಿಂದ ₹ 0.61 ಕೋಟಿ ಮೊತ್ತವನ್ನು ಕಳೆದಿರುವುದು.

ಎಸ್‌ಎಲ್‌ಡಿಆರ್‌ಸಿ ಗಮನಕ್ಕೆ ತಂದಿರಲಿಲ್ಲ ಅಥವಾ ಸಮಿತಿಯು ವಿಳಂಬದ ಬಗ್ಗೆ ತನ್ನ ಗಮನಕ್ಕೆ ತಂದುಕೊಂಡಿರಲಿಲ್ಲ.

- ಹುಬ್ಬಳ್ಳಿಯ ಕಿಮ್ಸ್‌ಗೆ ವಿದ್ಯುತ್ತಿನ ಬದಲಿ ಮೂಲವನ್ನು ಒದಗಿಸುವ ಸಲುವಾಗಿ ಕಾಮಗಾರಿಯನ್ನು ಹೆಸ್ಕಾಂ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಸ್ಥಳವನ್ನು ಗುರುತಿಸುವುದರ ಮೇಲೆ ತೀರ್ಮಾನವನ್ನು ತೆಗೆದುಕೊಳ್ಳುವಲ್ಲಿನ ವಿಳಂಬದ ಕಾರಣ 24 ತಿಂಗಳುಗಳ ವಿಳಂಬದನಂತರ ಕಾರ್ಯೋದ್ಯುಕ್ತಗೊಳಿಸಿದ್ದಿತು. ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ, ಈ ವಿಷಯವನ್ನು ಎಸ್‌ಎಲ್‌ಡಿಆರ್‌ಸಿ ಗಮನಕ್ಕೆ ತಂದಿರಲಿಲ್ಲ (***ಅನುಬಂಧ–3*** ರಲ್ಲಿ ವಿವರಿಸಲಾಗಿರುವುದು).
- ಕಾಮಗಾರಿ ಸ್ಥಳಕ್ಕೆ ಪ್ರವೇಶದ ಹಕ್ಕು ಸಮಸ್ಯೆಗಳು, ಸ್ಥಳೀಯ ಅಡಚಣೆಗಳು, ಇತ್ಯಾದಿಗಳ ಕಾರಣ ₹ 24.59 ಕೋಟಿ[92] ಮೌಲ್ಯದ ಪೂರ್ವಭಾವಿಯಾಗಿ ಯೋಜಿತ ಕಾಮಗಾರಿಗಳನ್ನು ಕೈಬಿಡಲಾಗಿದ್ದಿತು. ಐಪಿಡಿಎಸ್ ಅಡಿಯಲ್ಲಿನ ನಿಗದಿತ ಕಾಮಗಾರಿಗಳನ್ನು ಕೈಬಿಟ್ಟಿದ್ದರ ಬಗ್ಗೆ ಎಸ್‌ಎಲ್‌ಡಿಆರ್‌ಸಿ ಯಾವುದೇ ಸಭೆಗಳಲ್ಲಿ ಚರ್ಚಿಸಿರಲಿಲ್ಲ (***ಕಂಡಿಕೆ 3.4.2 ಮತ್ತು ಅನುಬಂಧ–7 ರಲ್ಲಿ ವಿವರಿಸಲಾಗಿರುವುದು***).

ಈ ರೀತಿಯಾಗಿ ವಿವಿಧ ಅಡಚಣೆಗಳ ಕಾರಣ ವಿಳಂಬಗೊಳಿಸಲಾದ ಕಾಮಗಾರಿಗಳ ಬಗ್ಗೆ ಎಸ್‌ಎಲ್‌ಡಿಆರ್‌ಸಿ ಗಮನಕ್ಕೆ ತಂದಿರಲಿಲ್ಲ ಅಥವಾ ಮೇಲೆ ತಿಳಿಸಲಾದ ಸಮಿತಿಯು ಇವುಗಳ ಶೀಘ್ರ ಪರಿಹಾರಕ್ಕಾಗಿ ಮೇಲೆ ತಿಳಿಸಲಾಗಿರುವ ವಿಳಂಬಗಳನ್ನು ಸ್ವಪ್ರೇರಣೆಯಿಂದ ತೆಗೆದುಕೊಂಡಿರಲಿಲ್ಲ.

### *4.4 ಡಿಐಎಸ್‌ಎಚ್‌ಎ (ದಿಶಾ) ಕಾರ್ಯವೈಖರಿ*

ಕರ್ನಾಟಕ ಸರ್ಕಾರವು ಎಲ್ಲಾ ಐದು ವಿಸಕಂಗಳ ಅಡಿಯಲ್ಲಿ ಜಿಲ್ಲಾ ಮಟ್ಟದ ವಿದ್ಯುತ್ ಸಮಿತಿಗಳನ್ನು (ಡಿಎಲ್‌ಇಸಿ) ರಚಿಸಿತು (ಜೂನ್ ಮತ್ತು ಜುಲೈ 2015ರ ನಡುವೆ). ವೆಚ್ಚಗಳ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳುವುದು, ಭಾರತ ಸರ್ಕಾರದ ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ ಸಾರ್ವಜನಿಕ ಹಣಕಾಸನ್ನು ಅತ್ಯುತ್ತಮ ರೀತಿಯಲ್ಲಿ ಭರಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಮೇಲ್ವಿಚಾರಣಾ ಸಮಿತಿಗಳನ್ನು (ದಿಶಾ) ಆಗಸ್ಟ್ 2016ರಲ್ಲಿ ಡಿಎಲ್‌ಇಸಿಯನ್ನು ಒಳಸೇರ್ಪಡೆಗೊಳಿಸಿಕೊಂಡು, ಜಿಲ್ಲೆಗಳಿಂದ ಲೋಕಸಭಾ ಸದಸ್ಯರುಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದಿತು. ರಾಜ್ಯದಲ್ಲಿ ಉನ್ನತ ಮಟ್ಟದಲ್ಲಿ ಅನುಸರಿಸುವ ಅಗತ್ಯತೆಯಿರುವ ಸಮಸ್ಯೆಗಳನ್ನು ಚರ್ಚಿಸುವ ಸಲುವಾಗಿ ಮುಖ್ಯ ಮಂತ್ರಿಯವರ ನೇತೃತ್ವದಲ್ಲಿರುವ ರಾಜ್ಯ ಮಟ್ಟದ ಒಂದು ದಿಶಾ ಸಮಿತಿಯನ್ನು[93] ಜನವರಿ 2020ರಲ್ಲಿ ರಚಿಸಲಾಗಿದ್ದಿತು, ಮಾರ್ಗಸೂಚಿಗಳ ಅನುಸಾರ, ದಿಶಾ ಸಮಿತಿಯು ಜಿಲ್ಲಾ ಮಟ್ಟದಲ್ಲಿ ಪ್ರತೀ ತ್ರೈಮಾಸಿಕದಲ್ಲಿ ಒಂದು ಸಲ ಹಾಗೂ ರಾಜ್ಯ ಮಟ್ಟದಲ್ಲಿ ಆರು ತಿಂಗಳುಗಳಿಗೆ ಒಂದು ಸಲ ಸಭೆ ಸೇರಬೇಕಿದ್ದಿತು ಹಾಗೂ ಐಪಿಡಿಎಸ್ ರಾಜ್ಯ ಮಟ್ಟದ ಹಾಗೂ ಅಲ್ಲದೆಯೇ ಜಿಲ್ಲಾ ಮಟ್ಟದ ದಿಶಾ ಸಮಿತಿಯ ಸಭೆಗಳಲ್ಲಿ ಚರ್ಚಿಸಬೇಕಾದ ಯೋಜನೆಗಳಲ್ಲಿ ಒಂದಾಗಿದ್ದಿತು.

ರಾಜ್ಯ ಮಟ್ಟದ ದಿಶಾಗೆ ಮಾರ್ಗಸೂಚಿಗಳನ್ನು ಜೂನ್ 2018ರಲ್ಲಿ ನೀಡಲಾಗಿದ್ದಿತಾದರೂ, ಸಮಿತಿಯನ್ನು ಜನವರಿ 2020ರಲ್ಲಿಯಷ್ಟೇ ರಚಿಸಲಾಗಿದ್ದಿತು ಹಾಗೂ ಕೇವಲ ಆಗಸ್ಟ್ 2022ರಲ್ಲಿ ಅಂದರೆ ಐಪಿಡಿಎಸ್ ಮುಕ್ತಾಯಗೊಂಡನಂತರ ನಡೆಸಲಾಗಿದ್ದಿತು. ಅದರಿಂದಾಗಿ ರಾಜ್ಯ ಮಟ್ಟದ ದಿಶಾ ರಚನೆಯು ಐಪಿಡಿಎಸ್ ಕಾರ್ಯಗತಗೊಳಿಸುವುದರ ಮೇಲೆ ಯಾವುದೇ ಜವಾಬ್ದಾರಿಯನ್ನೂ/ಪ್ರಭಾವವನ್ನೂ ಹೊಂದಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಜಿಲ್ಲಾ ಮಟ್ಟದ ದಿಶಾ ಸಮಿತಿಗಳಿಗೆ ಸಂಬಂಧಿಸಿದಂತೆ ನಡೆಸಬೇಕಿದ್ದಂತಹ 642 ಸಭೆಗಳಿಗೆ ಪ್ರತಿಯಾಗಿ ಕೇವಲ 278 (ಶೇಕಡಾ 43.3) ಸಭೆಗಳನ್ನು ಆಗಸ್ಟ್ 2015ರಿಂದ[94] ಮಾರ್ಚ್ 2021ರ[95], ಅವಧಿಯಲ್ಲಿ ಈ ಕೆಳಗೆ ವಿವರಿಸಿರುವಂತೆ ನಡೆಸಲಾಗಿದ್ದಿತು:

---

[92] ಬೆಸ್ಕಾಂ – ₹ 13.90 ಕೋಟಿ, ಮೆಸ್ಕಾಂ ₹ 10.69 ಕೋಟಿ.

[93] ಸದಸ್ಯರುಗಳು ಲೋಕಸಭಾ ಸದಸ್ಯರು, ವಿಧಾನಸಭೆ ಸದಸ್ಯರುಗಳು, ರಾಜ್ಯ ಸರ್ಕಾರದ ಇಲಾಖೆಗಳ ಮುಖ್ಯಸ್ಥರುಗಳು, ವೃತ್ತಗಳ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್, ಸಾಂಖ್ಯಿಕ ಹಣಕಾಸು ನಿರ್ವಹಣಾ ನಿರ್ದೇಶಕರು, ಪಜಾ/ಪಪಂ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು / ಮುಖ್ಯಸ್ಥರುಗಳು, ಮುಂತಾದವರುಗಳು.

[94] ಡಿಎಲ್‌ಇಸಿ ಸಭೆಗಳು ಆಗಸ್ಟ್ 2016ರವರೆಗೆ, ಆನಂತರದಲ್ಲಿ ಡಿಐಎಸ್‌ಎಚ್‌ಎ ಸಭೆ.

[95] ಐಪಿಡಿಎಸ್ ಮುಕ್ತಾಯದ ಕಾರಣ ಮಾರ್ಚ್ 2021ರವರೆಗಿನ ಸಭೆಗಳನ್ನು ಪರಿಗಣಿಸಲಾಗಿದ್ದಿತು.

**ಕೋಷ್ಟಕ ಸಂಖ್ಯೆ 4.1: ಆಗಸ್ಟ್ 2015ರಿಂದ ಮಾರ್ಚ್ 2021ರ ನಡುವೆ ನಡೆಸಲಾಗಿದ್ದಂತಹ ದಿಶಾ ಸಮಿತಿ ಸಭೆಗಳ ವಿವರಗಳು**

| ಕ್ರಮ ಸಂಖ್ಯೆ | ವಿಸಕಂ ಹೆಸರು | ನಡೆಸಬೇಕಾಗಿದ್ದ ಸಭೆಗಳ ಸಂಖ್ಯೆ | ನಡೆಸಲಾಗಿದ್ದ ಸಭೆಗಳ ಸಂಖ್ಯೆ | ಐಪಿಡಿಎಸ್ ಬಗ್ಗೆ ಚರ್ಚಿಸಲಾಗಿದ್ದ ಸಭೆಗಳ ಸಂಖ್ಯೆ | ನಡೆಸಲಾಗಿದ್ದ ಸಭೆಗಳ ಶೇಕಡಾವಾರು |
|---|---|---|---|---|---|
| 1 | ಬೆಸ್ಕಾಂ | 184 | 75 | 6 | 40.76 |
| 2 | ಸೆಸ್ಕ್ | 115 | 65 | 16 | 56.52 |
| 3 | ಜೆಸ್ಕಾಂ | 138 | 42 | 6 | 30.43 |
| 4 | ಹೆಸ್ಕಾಂ | 161 | 68 | 14 | 42.24 |
| 5 | ಮೆಸ್ಕಾಂ | 44 | 28 | 20 | 63.64 |
| | **ಒಟ್ಟು** | **642** | **278** | **62** | |

*ಮೂಲ: ವಿಸಕಂಗಳು ಒದಗಿಸಿದ ಮಾಹಿತಿಯಿಂದ ಲೆಕ್ಕಪರಿಶೋಧನೆಯು ಸಂಕಲಿಸಿರುವುದು*

ನಡೆಸಲಾಗಿದ್ದ 278 ಸಭೆಗಳ ಪೈಕಿ, ಐಪಿಡಿಎಸ್ ಅಡಿಯಲ್ಲಿನ ಕಾಮಗಾರಿಗಳ ಬಗ್ಗೆ ಪ್ರಗತಿಯನ್ನು ಕೇವಲ 62 ಸಭೆಗಳಲ್ಲಿ (ಶೇಕಡಾ 22.3) ಚರ್ಚಿಸಲಾಗಿದ್ದಿತು, ಇದು ಯೋಜನೆಯ ಕಾರ್ಯಗತಗೊಳಿಸುವಿಕೆಯ ಮೇಲ್ವಿಚಾರಣೆಗೆ ನೀಡಲಾಗಿದ್ದಂತಹ ಪ್ರಾಮುಖ್ಯತೆಯನ್ನು ತೋರಿಸುತ್ತಿರುವುದು.

ದಿಶಾ ಸಮಿತಿಯ ನಿಯತ ಸಭೆಗಳನ್ನು ಐಪಿಡಿಎಸ್ ಕಾರ್ಯಗತಗೊಳಿಸುವ ವೇಳೆಯಲ್ಲಿ ಸಂಬಂಧಿತ ಜಿಲ್ಲೆಗಳ ಲೋಕಸಭಾ ಸದಸ್ಯರುಗಳು ಮತ್ತು ಇತರೆ ಸದಸ್ಯರುಗಳು ಲಭ್ಯವಿರದ ಕಾರಣ ಜಿಲ್ಲಾಡಳಿತವು ವ್ಯವಸ್ಥೆ ಮಾಡಲಾಗಲಿಲ್ಲ ಎಂದು ವಿಸಕಂಗಳು ಉತ್ತರಿನಿದವು (ಅಕ್ಟೋಬರ್ 2024). ಜಿಲ್ಲಾ ಉಸ್ತುವಾರಿ ಮಂತ್ರಿಯವರು ಮತ್ತು ವಿಧಾನ ಸಭಾ ಸದಸ್ಯರುಗಳು ನಡೆಸಿದ್ದಂತಹ ಜಿಲ್ಲಾ ಮಟ್ಟದ ಸಭೆಗಳಲ್ಲಿ ಯೋಜನೆಯನ್ನು ನಿಯತವಾಗಿ ಸಮೀಕ್ಷಿಸಲಾಗುತ್ತಿದ್ದಿತು ಎಂಬುದಾಗಿ ವಿಸಕಂಗಳು ಉತ್ತರಿಸಿದವು. ಆದಾಗ್ಯೂ, ಯೋಜನೆಯ ಬಗ್ಗೆ ನಿಯತವಾದ ಸಮೀಕ್ಷೆಯನ್ನು ಖಚಿತಪಡಿಸುವ ಸಲುವಾಗಿ ಅಂತಹ ಜಿಲ್ಲಾ ಮಟ್ಟದ ಸಭೆಗಳ ನಡೆವಳಿಗಳನ್ನು ವಿಸಕಂಗಳು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ.

### *4.5 ಯೋಜನಾ ನಿರ್ವಹಣಾ ಸಂಸ್ಥೆಯ (ಪಿಎಂಎ) ಕಾರ್ಯವೈಖರಿ*

ಯೋಜನಾ ನಿರ್ವಹಣಾ ಸಂಸ್ಥೆಯ (ಪಿಎಂಎ) ಗುತ್ತಿಗೆಯ ವ್ಯಾಪ್ತಿಯು ಯೋಜನೆಯನ್ನು ಪೂರ್ವಭಾವಿಯಾಗಿ ಯೋಜಿಸುವುದು, ಸಂಯೋಜನೆ, ಬಿಡ್ಡು ಪ್ರಕ್ರಿಯೆಗಳನ್ನು ಸಮನ್ವಯಗೊಳಿಸುವುದು, ಕಾರ್ಯಗತಗೊಳಿಸುವಿಕೆ, ಗುಣಮಟ್ಟ ನಿಯಂತ್ರಣಗಳು, ಎಂಐಎಸ್ ನಿರ್ವಹಣೆ ಹಾಗೂ ವೆಬ್ ಪೋರ್ಟಲುಗಳನ್ನು ಇಂದಿನದಿನದನ್ನಾಗಿ ಮಾಡುವಿಕೆ ಹಾಗೂ ಸಂಪರ್ಕ–ಸೇತು ಸಂಸ್ಥೆಯೊಂದಿಗೆ ಹಾಗೂ ಇಂಧನ ಮಂತ್ರಾಲಯದೊಂದಿಗೆ (ಎಂಒಪಿ) ಸಮನ್ವಯಗೊಳಿಸುವಿಕೆ ಇವುಗಳನ್ನು ಒಳಗೊಂಡಂತೆ ಮೇಲ್ವಿಚಾರಣೆ, ಇವುಗಳನ್ನು ಒಳಗೊಂಡಿದ್ದಿತು. ವಿಸಕಂಗಳು ಆರ್‌ಇಸಿಪಿಡಿಸಿಎಲ್, ಇವರಿಗೆ 31 ಮಾರ್ಚ್ 2021ರಲ್ಲಿದ್ದಂತೆ ಐಪಿಡಿಎಸ್ ಅಡಿಯಲ್ಲಿ ಪಿಎಂಎ ಶುಲ್ಕಗಳ ಕಡೆಗೆ ₹ 22.99 ಕೋಟಿ[96] ಮೊತ್ತವನ್ನು ಪಾವತಿಸಿದ್ದವು.

ಬೆಸ್ಕಾಂ, ಸೆಸ್ಕ್ ಮತ್ತು ಮೆಸ್ಕಾಂಗಳಲ್ಲಿ ದಾಖಲೆಗಳನ್ನು ಲೆಕ್ಕಪರಿಶೋಧನೆಯು ಮಾಡಿದ ಪರಿಶೀಲನೆಯು ಆರ್‌ಇಸಿಪಿಡಿಸಿಎಲ್ ಐಪಿಡಿಎಸ್ ಅಡಿಯಲ್ಲಿ ಕಡ್ಡಾಯಗೊಳಿಸಿದ್ದಂತಹ ಕಾರ್ಯಚಟುವಟಿಕೆಗಳನ್ನು ಸಂಪೂರ್ಣವಾಗಿ ಕಾರ್ಯನಿರ್ವಹಿಸಿರಲಿಲ್ಲ ಎಂಬುದನ್ನು ತೋರಿಸಿಕೊಟ್ಟಿತು. ವಿವರಗಳನ್ನು ***ಅನುಬಂಧ–11*** ರಲ್ಲಿ ನೀಡಲಾಗಿರುವುದು. ಒಡಂಬಡಿಕೆಯ ಅನುಸಾರ ಪಿಎಮ್‌ಎ ಕಾರ್ಯನಿರ್ವಹಿಸಬೇಕಿದ್ದಂತಹ ಈ ಕೆಳಗಿನ ಕಾರ್ಯಚಟುವಟಿಕೆಗಳಲ್ಲಿ ಸಮರ್ಪಕವಾಗಿ ತೊಡಗಿಸಿಕೊಂಡಿರಲಿಲ್ಲ / ಅದು ವಿಸಕಂಗಳಿಗೆ ಸಹಾಯ ಮಾಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು :

- ಬಿಡ್ಡು ಪ್ರಕ್ರಿಯೆ ಮತ್ತು ಟರ್ನ್‌ಕೀ ಗುತ್ತಿಗೆದಾರರುಗಳ ಆಯ್ಕೆ ಹಾಗೂ ಸವಿವರ ಯೋಜನಾ ವರದಿಗಳ ಸಂಯೋಜನೆ;
- ಪ್ರತಿಯೊಂದು ಯೋಜನೆಯ ಮಾಸಿಕ ವರದಿಗಳ ಸಲ್ಲಿಕೆ – ಯೋಜನೆಯ ಭೌತಿಕ ಮತ್ತು ಹಣಕಾಸು ಪ್ರಗತಿ;
- ಸಮೀಕ್ಷೆಗಳನ್ನು ಮಾಡುವಲ್ಲಿನ ವಿಳಂಬಗಳು, ಕಾಮಗಾರಿ ಪ್ರದೇಶಕ್ಕೆ ಪ್ರವೇಶದ ಹಕ್ಕು ಸಂಬಂಧಿತ ಸಮಸ್ಯೆಗಳು ಹಾಗೂ ಅರಣ್ಯ ಮತ್ತು ಇತರೆ ಶಾಸನಬದ್ಧ ಪ್ರಾಧಿಕಾರಗಳಿಂದ

[96] ಬೆಸ್ಕಾಂ ₹ 9.14 ಕೋಟಿ, ಸೆಸ್ಕ್ ₹ 3.19 ಕೋಟಿ, ಮೆಸ್ಕಾಂ ₹ 2.90 ಕೋಟಿ, ಜೆಸ್ಕಾಂ ₹ 3.52 ಕೋಟಿ ಮತ್ತು ಹೆಸ್ಕಾಂ ₹ 4.24 ಕೋಟಿ ಪಾವತಿಗಳನ್ನು ಸೆಪ್ಟೆಂಬರ್ 2015 ಮತ್ತು ಮಾರ್ಚ್ 2021ರ ನಡುವೆ ಮಾಡಲಾಗಿದ್ದಿತು.

ಅನುಮತಿಯಲ್ಲಿ ವಿಳಂಬ, ಇತ್ಯಾದಿಗಳಿಂದ ಉಂಟಾಗುವ ಅಡಚಣೆಗಳನ್ನು ಗುರುತಿಸುವುದು ಮತ್ತು ವರದಿ ಸಲ್ಲಿಸುವುದು ಹಾಗೂ

- ಟ್ರಾನ್ಸ್‌ಫಾರ್ಮರು, ಭೂಗತ ಕೇಬಲ್ಲುಗಳು, ಎಸಿಎಸ್‌ಆರ್ ಕಂಡಕ್ಟರ್, ಇತ್ಯಾದಿ ಪ್ರಧಾನ ಐಟಂಗಳಿಗೆ ಕ್ಷೇತ್ರ ಗುಣಮಟ್ಟ ಯೋಜನೆಯ ಸಲ್ಲಿಕೆ.
- ಉಪಯುಕ್ತತೆ ಸಂಸ್ಥೆಯ ಮಟ್ಟದಲ್ಲಿ ಒಟ್ಟಾರೆ ತಾಂತ್ರಿಕ ಮತ್ತು ವಾಣಿಜ್ಯ (ಎಟಿ ಅಂಡ್ ಸಿ) ನಷ್ಟಗಳ ಮಾಹಿತಿಯನ್ನು ತ್ರೈಮಾಸಿಕ ಆಧಾರದ ಮೇರೆಗೆ ಸಂಕಲಿಸುವುದು ಮತ್ತು ವಿಶ್ಲೇಷಿಸುವುದು ಮಾರ್ಗಸೂಚಿಗಳ ಅನುಸಾರ ಕಡ್ಡಾಯವಾಗಿದ್ದಿತಾದರೂ, ಯಾವುದೇ ಒಂದು ವಿಸಕಂ ಅದನ್ನು ಆರ್‌ಇಸಿಪಿಡಿಸಿಎಲ್‌ನೊಂದಿಗೆ ಮಾಡಿಕೊಳ್ಳಲಾಗಿದ್ದ ಒಡಂಬಡಿಕೆಯಲ್ಲಿ ಸೇರಿಸಿರಲಿಲ್ಲ.

ಪಿಎಂಎ ಟೆಂಡರು ಪ್ರಕ್ರಿಯೆ, ಬಿಡ್ಡುಗಳ ಮೌಲ್ಯಮಾಪನ ಮತ್ತು ಮಾಸಿಕ ಪ್ರಗತಿಯ ವರದಿಗಳ ತಯಾರಿಕೆ, ಇವುಗಳಲ್ಲಿ ತೊಡಗಿಸಿಕೊಳ್ಳಲಾಗಿದ್ದಿತು/ಎಂಬುದಾಗಿ ವಿಸಕಂಗಳು ಪ್ರತಿಕ್ರಿಯೆ ನೀಡಿದವು (ಅಕ್ಟೋಬರ್ 2024). ಆದಾಗ್ಯೂ, ಪಿಎಂಎಯನ್ನು ಟೆಂಡರು ಪ್ರಕ್ರಿಯೆ, ಬಿಡ್ಡುಗಳ ಮೌಲ್ಯಮಾಪನ ಹಾಗೂ ಮಾಸಿಕ ಪ್ರಗತಿಯ ವರದಿಗಳನ್ನು ತಯಾರಿಸುವುದರಲ್ಲಿ ತೊಡಗಿಸಿಕೊಂಡಿದ್ದುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಲೆಕ್ಕಪರಿಶೋಧನೆಯು ಗಮನಿಸಲಿಲ್ಲ. ಬೆಸ್ಕಾಂ ಪಿಎಂಎ ಬಗ್ಗೆ ಯಥಾರ್ಥತೆಯಿಂದ ಕೂಡಿರದ ವರದಿಗಳ ಸಲ್ಲಿಕೆ, ಯೋಜನೆಯನ್ನು ಕಾರ್ಯಗತಗೊಳಿಸುವ ಸಂಸ್ಥೆಗಳೊಂದಿಗೆ ಸಹಕಾರದ ಕೊರತೆ, ಇ–ಗೇಜ್ ಪೋರ್ಟಲ್‌ನಲ್ಲಿ ದತ್ತಾಂಶದ ಅನಿಯಮಿತ ನವೀಕರಣ, ಇತ್ಯಾದಿ ಅನೇಕ ದೂರುಗಳನ್ನು ನೀಡಿದ್ದಿತು (ಜನವರಿ 2018) ಎಂಬುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು, ಇದು ಪಿಎಂಎಯಿಂದ ತೃಪ್ತಿದಾಯಕವಲ್ಲದ ಕಾರ್ಯನಿರ್ವಹಣೆಯನ್ನು ಸೂಚಿಸುತ್ತಿದ್ದಿತು.

**ಬೆಂಗಳೂರು**
**ದಿನಾಂಕ 08 DEC 2025**

**(ಅಶೋಕ್ ಸಿನ್ಹಾ )**
**ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II)**
**ಕರ್ನಾಟಕ**

**ಮೇಲುಸಹಿ ಮಾಡಲಾಗಿದೆ**

**ನವ ದೆಹಲಿ**
**ದಿನಾಂಕ 10 DEC 2025**

**(ಕೆ. ಸಂಜಯ್ ಮೂರ್ತಿ)**
**ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**

# ಅನುಬಂಧಗಳು

## *ಅನುಬಂಧ – 1*

*(ಕಂಡಿಕೆ 1.6ರಲ್ಲಿ ಉಲ್ಲೇಖಿಸಲಾಗಿದೆ)*

**ಐಪಿಡಿಎಸ್ ಸ್ವತ್ತುಗಳ ವಿವರವಾದ ಲೆಕ್ಕಪರಿಶೋಧನೆ ಮತ್ತು ಭೌತಿಕ ಪರಿಶೀಲನೆಗಾಗಿ ಆಯ್ಕೆ ಮಾಡಲಾದ ವಿಭಾಗಗಳ ಪಟ್ಟಿ**

*(₹ ಲಕ್ಷದಲ್ಲಿ)*

| ಕ್ರಮ ಸಂಖ್ಯೆ | ವಿಸಕಂ | ವೃತ್ತ | ವಿಭಾಗ | ಒಟ್ಟು ವೆಚ್ಚ |
|---|---|---|---|---|
| 1 | ಬೆಸ್ಕಾಂ | ದಾವಣಗೆರೆ | ಚಿತ್ರದುರ್ಗ | 268.44 |
| 2 | ಬೆಸ್ಕಾಂ | ದಾವಣಗೆರೆ | ದಾವಣಗೆರೆ | 11648.52 |
| 3 | ಬೆಸ್ಕಾಂ | ಪೂರ್ವ ವೃತ್ತ | ಇಂದಿರಾನಗರ | 1644.78 |
| 4 | ಬೆಸ್ಕಾಂ | ದಕ್ಷಿಣ ವೃತ್ತ | ಎಚ್‌ಎಸ್‌ಆರ್ ಲೇಔಟ್ | 8594.10 |
| 5 | ಬೆಸ್ಕಾಂ | ದಕ್ಷಿಣ ವೃತ್ತ | ಕೋರಮಂಗಲ | 450.37 |
| 6 | ಬೆಸ್ಕಾಂ | ತುಮಕೂರು | ತುಮಕೂರು | 2848.39 |
| 7 | ಬೆಸ್ಕಾಂ | ಪಶ್ಚಿಮ ವೃತ್ತ | ಕೆಂಗೇರಿ | 1575.06 |
| 8 | ಬೆಸ್ಕಾಂ | ಪಶ್ಚಿಮ ವೃತ್ತ | ರಾಜಾಜಿನಗರ | 876.96 |
| 9 | ಸೆಸ್ಕ್ | ಕಾರ್ಯ ಮತ್ತು ಪಾಲನಾ ವೃತ್ತ ಹಾಸನ | ಎಚ್.ಎನ್.ಪುರ | 1771.32 |
| 10 | ಸೆಸ್ಕ್ | ಕಾರ್ಯ ಮತ್ತು ಪಾಲನಾ ವೃತ್ತ ಮಂಡ್ಯ | ಪಾಂಡವಪುರ | 1365.26 |
| 11 | ಸೆಸ್ಕ್ | ಕಾರ್ಯ ಮತ್ತು ಪಾಲನಾ ವೃತ್ತ ಮೈಸೂರು (ಗ್ರಾಮೀಣ) | ಕೊಳ್ಳೇಗಾಲ | 1041.91 |
| 12 | ಸೆಸ್ಕ್ | ವರ್ಕ್ಸ್ ಸರ್ಕಲ್ ಮೈಸೂರು | ಹುಣಸೂರು | 1578.85 |
| 13 | ಸೆಸ್ಕ್ | ವರ್ಕ್ಸ್ ಸರ್ಕಲ್ ಮೈಸೂರು | ನಂಜನಗೂಡು | 1467.49 |
| 14 | ಜೆಸ್ಕಾಂ | ಬೀದರ್ | ಹುಮ್ನಾಬಾದ್ | 931.00 |
| 15 | ಜೆಸ್ಕಾಂ | ಕಲಬುರಗಿ | ಕಲಬುರಗಿ ಸಿ.ಎಸ್.ಸಿ | 1349.00 |
| 16 | ಜೆಸ್ಕಾಂ | ರಾಯಚೂರು | ರಾಯಚೂರು ಗ್ರಾಮಾಂತರ | 714.00 |
| 17 | ಜೆಸ್ಕಾಂ | ರಾಯಚೂರು | ಸಿಂಧನೂರು | 1289.00 |
| 18 | ಹೆಸ್ಕಾಂ | ಬಾಗಲಕೋಟೆ | ಮುಧೋಳ | 271.00 |
| 19 | ಹೆಸ್ಕಾಂ | ಬೆಳಗಾವಿ | ಬೆಳಗಾವಿ ನಗರ | 5227.24 |
| 20 | ಹೆಸ್ಕಾಂ | ಹಾವೇರಿ | ರಾಣಿಬೆನ್ನೂರು | 809.23 |
| 21 | ಹೆಸ್ಕಾಂ | ಹುಬ್ಬಳ್ಳಿ | ಧಾರವಾಡ ನಗರ | 2243.24 |
| 22 | ಹೆಸ್ಕಾಂ | ಹುಬ್ಬಳ್ಳಿ | ರೋಣ | 313.71 |
| 23 | ಹೆಸ್ಕಾಂ | ಸಿರ್ಸಿ | ಸಿರ್ಸಿ | 440.59 |
| 24 | ಹೆಸ್ಕಾಂ | ವಿಜಯಪುರ | ಬಸವನ ಬಾಗೇವಾಡಿ | 1900.76 |
| 25 | ಮೆಸ್ಕಾಂ | ಚಿಕ್ಕಮಗಳೂರು | ಚಿಕ್ಕಮಗಳೂರು | 2043.53 |
| 26 | ಮೆಸ್ಕಾಂ | ಮಂಗಳೂರು | ಮಂಗಳೂರು | 2948.11 |
| 27 | ಮೆಸ್ಕಾಂ | ಶಿವಮೊಗ್ಗ | ಶಿವಮೊಗ್ಗ | 4672.19 |

## *ಅನುಬಂಧ – 2*

***(ಕಂಡಿಕೆ 2.4.1ರಲ್ಲಿ ಉಲ್ಲೇಖಿಸಲಾಗಿದೆ)***

***ಬಿಡುಗಡೆಯಾದ ಸಾಲದ ವಿವರಗಳು, ಬಡ್ಡಿದರ ಮತ್ತು ಆರ್ ಇ ಸಿಯಿಂದ ಮರುಹೊಂದಿಸಲಾದ ಬಡ್ಡಿ***

***(₹ ಕೋಟಿಗಳಲ್ಲಿ)***

| ಕ್ರಮ ಸಂಖ್ಯೆ | ಸಾಲ ವಿತರಣೆ ದಿನಾಂಕ | ಸಾಲದ ಮೊತ್ತ (₹ ಕೋಟಿಗಳಲ್ಲಿ) | ಬಿಡುಗಡೆ ದಿನಾಂಕದಿಂದ ಮೊದಲ ಮೂರು ವರ್ಷಗಳ ಬಡ್ಡಿದರ | ಬಿಡುಗಡೆ ದಿನಾಂಕದಿಂದ 3 ವರ್ಷಗಳ ನಂತರ *ಮರುಹೊಂದಿಸಲಾದ ಬಡ್ಡಿದರ* |
|---|---|---|---|---|
| 1 | ಮಾರ್ಚ್ 2019 | 36.77 | 10.11 | 9.25 |
| 2 | ಜೂನ್ 2019 | 15.00 | 9.75 | 9.71 |
| 3 | ಜುಲೈ 2019 | 5.00 | 9.55 | 9.63 |
| 4 | ಜುಲೈ 2019 | 5.00 | 9.59 | 9.63 |
| 5 | ಆಗಸ್ಟ್ 2019 | 10.00 | 9.57 | 9.45 |
| 6 | ಆಗಸ್ಟ್ 2019 | 19.00 | 9.52 | 9.40 |
| 7 | ಸೆಪ್ಟೆಂಬರ್ 2019 | 12.00 | 9.44 | 10.09 |
| 8 | ಅಕ್ಟೋಬರ್ 2019 | 15.00 | 9.59 | 10.35 |
| 9 | ನವೆಂಬರ್ 2019 | 10.00 | 9.25 | 9.42 |
| 10 | ಡಿಸೆಂಬರ್ 2019 | 9.63 | 9.54 | 10.31 |
| | **ಒಟ್ಟು** | **137.39** | | |

*ಮೂಲ: ಬೆಸ್ಕಾಂ ಒದಗಿಸಿದ ದತ್ತಾಂಶ*

## ಅನುಬಂಧ – 3

*(ಕಂಡಿಕೆ 3.3.2 ಮತ್ತು 4.3ರಲ್ಲಿ ಉಲ್ಲೇಖಿಸಲಾಗಿದೆ)*

**ಎಸ್ಕಾಮ್‌ವಾರು, ಘಟಕವಾರು ಅನುಷ್ಠಾನ ವಿಳಂಬದ ವಿವರಗಳು**

| ಕ್ರಮ ಸಂಖ್ಯೆ | ಘಟಕ | ನಿಗದಿತ ಪೂರ್ಣಗೊಳಿಸುವ ದಿನಾಂಕ | ಪೂರ್ಣಗೊಂಡ ನಿಜವಾದ ದಿನಾಂಕ | ದಾಖಲೆಗಳ ಆಡಿಟ್ ಪರಿಶೀಲನೆಯ ಆಧಾರದ ಮೇಲೆ ಟಿಪ್ಪಣಿಗಳು ಮತ್ತು ವಿಳಂಬ ತಿಂಗಳುಗಳಲಿ | ಕಂಪನಿಯ ಉತ್ತರ ಮತ್ತು ಟಿಪ್ಪಣಿಗಳು |
|---|---|---|---|---|---|
| | **ಬೆಸ್ಕಾಂ** | | | | |
| 1 | ವ್ಯವಸ್ಥೆ ಬಲಪಡಿಸುವಿಕೆ | 31.03.2019 | 31.03.2019 | ಯಾವುದೇ ವಿಳಂಬವಿಲ್ಲ. ಆದಾಗ್ಯೂ, ವ್ಯವಸ್ಥೆಯನ್ನು ಬಲಪಡಿಸಲು ನೀಡಲಾದ ಎಲ್ಲಾ ಆರು ಕಾಮಗಾರಿಗಳನ್ನು 31.03.2019 ರಂದು/ಅದಕ್ಕೂ ಮೊದಲು ಅವುಗಳ ಪ್ರಮಾಣವನ್ನು ಇರುವಂತೆಯೇ ಮಿತಿಗೊಳಿಸಿ 'ಪೂರ್ಣಗೊಂಡಿದೆ' ಘೋಷಿಸಲಾಯಿತು, | - |
| 2 | ಮೀಟರಿಂಗ್ | 31.03.2019 | 31.03.2019 | ಮೀಟರಿಂಗ್ ಕೆಲಸಗಳಿಗಾಗಿ ನೀಡಲಾದ ಎಲ್ಲಾ ಮೂರು ಡಿಡಬ್ಲ್ಯೂಎಗಳನ್ನು ಮಾರ್ಚ್ 31, 2019ರಂದು 'ಪೂರ್ಣಗೊಂಡಿದೆ' ಎಂದು ಘೋಷಿಸಲಾಗಿದ್ದರೂ, ಡಿಡಬ್ಲ್ಯೂಎಯಲ್ಲಿ ಉಲ್ಲೇಖಿಸಲಾದ ಕೆಲಸದ ವ್ಯಾಪ್ತಿಯ ಪ್ರಕಾರ ಮೋಡೆಮ್‌ಗಳ ಪೂರೈಕೆ ಮತ್ತು ಸ್ಥಾಪನೆಗೆ ಸಂಬಂಧಿಸಿದ ಒಂದು ಕೆಲಸ ಇನ್ನೂ ಪೂರ್ಣಗೊಂಡಿರಲಿಲ್ಲ (ಅಕ್ಟೋಬರ್ 2024). | ಸಂವಹನ ಮತ್ತು ಇತರ ಸಮಸ್ಯೆಗಳಿಂದಾಗಿ ಮೀಟರ್ಡ್ ಡೇಟಾ ಮ್ಯಾನೇಜ್‌ಮೆಂಟ್ ಸಿಸ್ಟಮ್‌ನೊಂದಿಗೆ ಮೋಡೆಮ್‌ಗಳ ಏಕೀಕರಣವನ್ನು ಮಾಡಲಾಗಿಲ್ಲ ಎಂದು ಬೆಸ್ಕಾಂ (ಅಕ್ಟೋಬರ್ 2024) ತಿಳಿಸಿದೆ. ಮೋಡೆಮ್ ಅನ್ನು ಎಂಡಿಎಂ ಸಿಸ್ಟಮ್‌ನೊಂದಿಗೆ ಏಕೀಕರಣಗೊಳಿಸದಿರುವುದು ಬೆಸ್ಕಾಂ ಊಹಿಸಿದಂತೆ ಪ್ರಯೋಜನಗಳನ್ನು ಪಡೆಯುತ್ತಿಲ್ಲ ಎಂದು ಸೂಚಿಸುತ್ತದೆ. |
| 3 | ಸೌರ | 31.03.2019 | 31.03.2019/ ಪೂರ್ಣಗೊಂಡಿಲ್ಲ | ಸೌರಶಕ್ತಿ ಕಾಮಗಾರಿಗಳಿಗಾಗಿ ನೀಡಲಾದ ಎರಡು ಡಿಡಬ್ಲ್ಯೂಎಗಳಲ್ಲಿ, ಒಂದನ್ನು ಮಾರ್ಚ್ 31, 2019ರ ಮೊದಲು 'ಪೂರ್ಣಗೊಂಡಿದೆ' ಎಂದು ಘೋಷಿಸಲಾಯಿತು ಮತ್ತು ಒಂದು ಕೆಲಸ ಇನ್ನೂ ಪೂರ್ಣಗೊಂಡಿರಲಿಲ್ಲ (ಜೂನ್ 2023). | ಬೆಸ್ಕಾಂ (ಅಕ್ಟೋಬರ್ 2024) ಡಿಡಬ್ಲ್ಯೂಎ ಮತ್ತು ಬಿಜಿ ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಲಾಗಿದ್ದು, ಭಾಗಶಃ ಕೆಲಸ ಪೂರ್ಣಗೊಳಿಸಿದ್ದಕ್ಕಾಗಿ ₹ 40 ಲಕ್ಷ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ತಿಳಿಸಿದೆ. ಕೆಲಸ ಪೂರ್ಣಗೊಳ್ಳದಿರುವುದು ಉದ್ದೇಶಿತ ಉದ್ದೇಶವನ್ನು ಸಾಧಿಸಲು ವಿಫಲವಾಗಲು ಕಾರಣವಾಗುತ್ತದೆ. |
| 5 | ಇಆರ್‌ಪಿ | ಡಿಸೆಂಬರ್ 2021 | ಪೂರ್ಣಗೊಂಡಿಲ್ಲ | ಮಾಡ್ಯೂಲ್‌ಗಳನ್ನು ಹೊರತರದೆಯೇ 'ಸಂಪೂರ್ಣ' ಎಂದು (ಮೇ 2022) ಘೋಷಿಸಲಾಗಿತ್ತು. | ಬೆಸ್ಕಾಂ (ಅಕ್ಟೋಬರ್ 2024) ಎಲ್ಲಾ ಮಾಡ್ಯೂಲ್‌ಗಳು ಸ್ವತಂತ್ರವಾಗಿ ಸಿದ್ಧವಾಗಿವೆ ಮತ್ತು ಅವುಗಳನ್ನು ಅಂತ್ಯದಿಂದ ಅಂತ್ಯದ ಏಕೀಕರಣದೊಂದಿಗೆ ಹೊರತರಲಾಗುವುದು ಎಂದು ತಿಳಿಸಿದೆ. ಮಾಡ್ಯೂಲ್‌ಗಳನ್ನು ಹೊರತರುವಲ್ಲಿನ ವಿಳಂಬವು ಯೋಜನೆಯಡಿಯಲ್ಲಿ ನಿರೀಕ್ಷಿಸಲಾದ ಪ್ರಯೋಜನಗಳನ್ನು ಕಳೆದುಕೊಳ್ಳಲು ಕಾರಣವಾಯಿತು. |
| 4 | ಐಟಿ ಹಂತ II | ಮಾರ್ಚ್ 2022/ ಜುಲೈ-22 | 31.12.2021 | ಡಿಸಿ/ಡಿಆರ್‌ಸಿಗೆ ಸಂಬಂಧಿಸಿದ ಡಿಡಬ್ಲ್ಯೂಎ ವ್ಯಾಪ್ತಿಯ ಪ್ರಕಾರ ಎಲ್ಲಾ ಕೆಲಸಗಳನ್ನು ಪೂರ್ಣಗೊಳಿಸದೆ ಡಿಸೆಂಬರ್ 2021 ರಲ್ಲಿ 'ಪೂರ್ಣಗೊಂಡಿದೆ' ಎಂದು ಘೋಷಿಸಲಾಯಿತು. | - |

## ಅನುಬಂಧ – 3 (ಮುಂದುವರಿದಿದೆ)

| ಕ್ರಮ ಸಂಖ್ಯೆ | ಘಟಕ | ನಿಗದಿತ ಪೂರ್ಣಗೊಳಿಸುವ ದಿನಾಂಕ | ಪೂರ್ಣಗೊಂಡ ನಿಜವಾದ ದಿನಾಂಕ | ದಾಖಲೆಗಳ ಆಡಿಟ್ ಪರಿಶೀಲನೆಯ ಆಧಾರದ ಮೇಲೆ ಟಿಪ್ಪಣಿಗಳು ಮತ್ತು ವಿಳಂಬ ತಿಂಗಳುಗಳಲಿ | ಕಂಪನಿಯ ಉತ್ತರ ಮತ್ತು ಟಿಪ್ಪಣಿಗಳು |
|---|---|---|---|---|---|
| | **ಸೆಸ್ಕ್** | | | | |
